# ಇತರೆ ಕಾರ್ಯಕ್ರಮಗಳು

**೧. ಡಾ. ಬಿ. ಆರ್. ಅಂಬೇಡ್ಕರ ಅವರ ೧೩೨ನೇ ಜಯಂತಿ:**

ಡಾ. ಬಿ.ಆರ್. ಅಂಬೇಡ್ಕರ ಅವರು ಜಾಗತಿಕ ಮಟ್ಟದಲ್ಲಿ ಒಬ್ಬ ಸರ್ವ ಶ್ರೇಷ್ಠ ಚಿಂತಕರಾಗಿದ್ದರು. ಅವರಲ್ಲಿದ್ದ ವಿದ್ವತ್, ಅಧ್ಯಯನಶೀಲತೆ ಅಗಾಧವಾಗಿತ್ತು ಎಂದು ಕ.ವಿ.ವಿ. ವಿಶ್ರಾಂತ ಮನೋವಿಜ್ಞಾನ ಪ್ರಾಧ್ಯಾಪಕ ಡಾ. ಪಿ.ಎಸ್. ಹಲ್ಯಾಳ ಹೇಳಿದರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ದಿನಾಂಕ: ೧೪-೪-೨೦೨೩ ರಂದು ಆಯೋಜಿಸಿದ್ದ ಸಂವಿಧಾನ ಶಿಲ್ಪಿ, ಮಹಾಮಾನವತಾವಾದಿ ಡಾ. ಬಿ. ಆರ್. ಅಂಬೇಡ್ಕರ ಅವರ ೧೩೨ನೇ ಜನ್ಮದಿನದ ಪ್ರಯುಕ್ತ ಅಂಬೇಡ್ಕರ ಅವರ ಚಿಂತನೆಗಳು ವಿಷಯ ಕುರಿತು ಉಪನ್ಯಾಸ ನೀಡುತ್ತಾ ಮಾತನಾಡಿದರು.

ಡಾ. ಬಿ.ಆರ್. ಅಂಬೇಡ್ಕರ ಅವರು ತಮ್ಮ ಜೀವನದಲ್ಲಿ ಎಷ್ಟೇ ಅವಮಾನವಾದರೂ ದೃತಿಗೆಡದೆ ದೇಶದ ಬಗ್ಗೆ ದೀನ ದಲಿತರ ಬಗ್ಗೆ ಕಿಂಚಿತ್ತು ಗೌರವ ಭಾವನೆ ಕಡಿಮೆ ಮಾಡಿಕೊಳ್ಳಲಿಲ್ಲ. ಅವರಲ್ಲಿದ್ದ ಬೌದ್ಧಿಕ ಸಾಮರ್ಥ್ಯ ಅಗಾಧವಾಗಿತ್ತು. ಇಡೀ ಜಗತ್ತಿನ ಮೇಲೆ ಪ್ರಭಾವ ಬೀರಿದ ಅಸಾಧಾರಣ ವ್ಯಕ್ತಿಗಳಾಗಿದ್ದರು. ಇಂದು ೧೯೨ ದೇಶಗಳಲ್ಲಿ ಅವರ ಜನ್ಮದಿನ ಆಚರಿಸಲಾಗುತ್ತಿದ್ದು ಅವರ ಮೇರು ವ್ಯಕ್ತಿತ್ವವೇ ಕಾರಣ.

ಶ್ರೇಷ್ಠ ಶಿಕ್ಷಣ ತಜ್ಞರಾದ ಡಾ. ಬಿ.ಆರ್. ಅಂಬೇಡ್ಕರ್ ಅವರು, ನಾವು ಪಡೆದ ಶಿಕ್ಷಣ ನಮ್ಮ ಅಂತರಂಗದ ಸಂಸ್ಕೃತಿ ಅರಳಿಸಬೇಕು. ನಮ್ಮಲ್ಲಿ ಸನ್ನಡತೆ, ಆತ್ಮಗೌರವ ಉಂಟು ಮಾಡುವಂತಹದಾಗಿರಬೇಕೆಂಬ ಉದಾತ್ತ ಭಾವನೆ ಹೊಂದಿದ್ದರು. ಪ್ರಜಾಪ್ರಭುತ್ವ ವ್ಯವಸ್ಥೆ ಕೇವಲ ರಾಜಕೀಯ ವ್ಯವಸ್ಥೆ ಅಲ್ಲ. ಪ್ರತಿಯೊಬ್ಬರ ಹೃದಯದಲ್ಲಿ ಆ ಭಾವನೆ ಉದಯಿಸಬೇಕು. ನಮ್ಮ ಸಂವಿಧಾನ ಚನ್ನಾಗಿರಬಹುದು. ಆದರೆ ಅದಕ್ಕೆ ಕಾರ್ಯರೂಪ ಕೊಡುವವರು ಕೆಟ್ಟವರಾಗಿದ್ದರೆ ಸಂವಿಧಾನವು ಅರ್ಥವಿಲ್ಲದಂತಾಗುತ್ತದೆ ಎಂಬ ಅಂಬೇಡ್ಕರ ಅವರ ಚಿಂತನೆಗಳು ಸರ್ವಕಾಲಿಕ ಸತ್ಯ ಎಂದು ಹೇಳಿದರು.

ಕ.ವಿ.ವ. ಸಂಘದ ಕಾರ್ಯಾಧ್ಯಕ್ಷರಾದ ಬಸವಪ್ರಭು ಹೊಸಕೇರಿ ಪ್ರಾಸ್ತಾವಿಕವಾಗಿ ಮಾತನಾಡಿ, ಸ್ವತಂತ್ರ ಭಾರತಕ್ಕೊಂದು ಸಂವಿಧಾನ ರಚನೆ ಮಾಡುವ ಪ್ರಶ್ನೆ ಬಂದಾಗ, ಪಂಡಿತ ನೆಹರು ಅವರು ಅಂತಾರಾಷ್ಟ್ರೀಯ ಖ್ಯಾತ ಸಂವಿಧಾನ ತಜ್ಞರಾದ ಸರ್. ಐನರ್ ಜಿನಿಂಗ ಅವರನ್ನು ಭಾರತಕ್ಕೆ ಆಹ್ವಾನಿಸಬೇಕೆಂಬ ವಿಚಾರದಲ್ಲಿದ್ದಾಗ, ಗಾಂಧೀಜಿಯವರು ನಮ್ಮ ದೇಶದ ಸಂಸ್ಕೃತಿ ವಿಚಾರಬಲ್ಲ ಭಾರತೀಯರೇ ನಮ್ಮ ಸಂವಿಧಾನ ರಚಿಸಬೇಕೇ ವಿನಹ ವಿದೇಶಿ ತಜ್ಞರಲ್ಲ. ನಮ್ಮವರೇ ಆದ ಡಾ. ಬಿ.ಆರ್. ಅಂಬೇಡ್ಕರ ಅವರು ಸೂಕ್ತ ವ್ಯಕ್ತಿ ಎಂದು ತಿಳಿಸಿದರು. ಒಪ್ಪಿದ ನೆಹರು ಅವರು ಡಾ. ಅಂಬೇಡ್ಕರ ಅವರನ್ನು ಇದಕ್ಕೆ ಸಂವಿಧಾನ ಕರಡು ಸಮಿತಿಯ ಅಧ್ಯಕ್ಷರನ್ನಾಗಿ ನೇಮಕ ಮಾಡಿದರು. ಅಂಬೇಡ್ಕರ ಜಯಂತಿ ಒಂದು ದಿನಕ್ಕೆ ಸೀಮಿತವಾಗದೇ ಅವರನ್ನು ನಿತ್ಯ ಸ್ಮರಿಸುವ ಕಾರ್ಯವಾಗಬೇಕು ಎಂದು ಹೇಳಿದರು.

ಸಂಘದ ಅಧ್ಯಕ್ಷರಾದ ಚಂದ್ರಕಾಂತ ಬೆಲ್ಲದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಬಾಲಬಳಗ ಶಾಲೆಯ ಶಿಕ್ಷಕಿಯರು ಪ್ರಾರ್ಥಿಸಿದರು. ಡಾ. ಅಂಬೇಡ್ಕರ ಭಾವಚಿತ್ರಕ್ಕೆ ಗಣ್ಯರು ಪುಷ್ಪನಮನ ಸಲ್ಲಿಸಿದರು.

ಪ್ರಧಾನ ಕಾರ್ಯದರ್ಶಿ ಶಂಕರ ಹಲಗತ್ತಿ ಸ್ವಾಗತಿಸಿದರು. ಶಂಕರ ಕುಂಬಿ ನಿರೂಪಿಸಿದರು. ವೀರಣ್ಣ ಒಡ್ಡೀನ ವಂದಿಸಿದರು. ಕಾರ್ಯಕ್ರಮದಲ್ಲಿ ಶಿವಾನಂದ ಭಾವಿಕಟ್ಟಿ, ಡಾ. ಜಿನದತ್ತ ಹಡಗಲಿ, ಗುರು ಹಿರೇಮಠ, ಡಾ. ಶ್ರೀಶೈಲ ಹುದ್ದಾರ, ಬಿ.ಎಲ್. ಪಾಟೀಲ. ಎಂ. ಎಂ. ಚಿಕ್ಕಮಠ ಸೇರಿದಂತೆ ಮುಂತಾದವರಿದ್ದರು.

**೨. ಚಿತ್ರ-ಕಾವ್ಯ ಪ್ರದರ್ಶನ**

ಕಲೆ ಮನುಷ್ಯನಲ್ಲಿ ಸೌಂದರ್ಯ ಪ್ರಜ್ಞೆಯನ್ನುಂಟು ಮಾಡಿ, ಮನಸ್ಸಿಗೆ ಮುದ ನೀಡುವ ಪ್ರಭಲ ಮಾಧ್ಯಮವಾಗಿದೆ. ಅದು ನಮ್ಮ ಶ್ರೀಮಂತ ಸಂಸ್ಕೃತಿಯ ಬುನಾದಿಯೂ ಹೌದು ಎಂದು ಹಿರಿಯ ಕಲಾವಿದ ಬಿ. ಮಾರುತಿ ಹೇಳಿದರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು **'ವಿಶ್ವ ಕಲಾ ದಿನಾಚರಣೆ'** ಅಂಗವಾಗಿ ದಿನಾಂಕ: ೧೫-೪-೨೦೨೩ ರಂದು ಆಯೋಜಿಸಲ್ಪಟ್ಟ ಹುಬ್ಬಳ್ಳಿಯ **ಕಿರಣ ಜತ್ತಿ ಅವರ ಚಿತ್ರ-ಕಾವ್ಯ ಪ್ರದರ್ಶನಕ್ಕೆ** ಚಾಲನೆ ನೀಡಿ ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ಅವರು, ಭಾಷೆ ಹಾಗೂ ಅಕ್ಷರಕ್ಕಿಂತ ಮೊದಲು ಮನುಷ್ಯ ತನ್ನ ಭಾವನೆಗಳನ್ನು ಚಿತ್ರದ ಮೂಲಕ ಅಭಿವ್ಯಕ್ತಗೊಳಿಸುತ್ತಿದ್ದನು. ಮಾನವನ ಉಗಮದೊಂದಿಗೆ ಚಿತ್ರಕಲೆ ಬೆಳೆದು ಬಂದಿದೆ. ಜನಸಮುದಾಯದಲ್ಲಿ ಕಲಾಭಿರುಚಿಯನ್ನು ಪ್ರೇರೇಪಿಸುವ ಕಲೆ ಹಾಗೂ ಕಲಾವಿದರನ್ನು ಪ್ರೋತ್ಸಾಹಿಸುವ ದೆಸೆಯಿಂದ ಈ ದಿನಾಚರಣೆ ಆಚರಿಸಲಾಗುತ್ತದೆ. ಜಗತ್ಪ್ರಸಿದ್ಧ ಚಿತ್ರಕಾರ ಲಿಯೋನಾರ್ಡ ಡ. ವಿಂಚಿಯ ಜನ್ಮದಿನವಾದ ಏಪ್ರೀಲ್ ೧೫ರ ಗೌರವಾರ್ಥ ಈ ದಿನಾಚರಣೆಯೂ ಆಗಿದೆ.

೨೦೧೨ ರಲ್ಲಿ **'ಇಂಟರ್‌ನ್ಯಾಶನಲ್ ಅಸೋಸಿಯೇಶನ್ ಆಫ್ ಆರ್ಟ"** ಪ್ರಥಮ ಬಾರಿಗೆ ಈ ದಿನಾಚರಣೆಗೆ ಮುನ್ನಡಿ ಹಾಕಿತು. ದುರ್ದೈವವೆಂದರೆ ಜಾಗತೀಕರಣದ ಪ್ರಭಾವದಿಂದ ಹಿಂದೆ ಸಿಗುವಷ್ಟು ಉತ್ತೇಜನ, ಪ್ರೋತ್ಸಾಹ ಕಲಾ ಪ್ರಕಾರಗಳಿಗೆ ಸಿಗುತ್ತಿಲ್ಲ. ಕಲಾವಿದರ ಬದುಕು ಇಂದು ತ್ರಿಶಂಕು ಸ್ಥಿತಿಯಲ್ಲಿದೆ. ಸಮಾಜ ಹಾಗೂ ಸರ್ಕಾರ ಕಲಾವಿದರನ್ನು ಅವರ ಕಲೆಯನ್ನು ಪ್ರೋತ್ಸಾಹಿಸಬೇಕು. ಆ ದೆಸೆಯಲ್ಲಿ ಕಲಾವಿದರ ಚಿತ್ರ ಪ್ರದರ್ಶನಕ್ಕೆ ಧಾರವಾಡ ನಗರದಲ್ಲಿ ಒಂದು ಸುಸಜ್ಜಿತವಾದ ಆರ್ಟ್ ಗ್ಯಾಲರಿ ಅಗತ್ಯತೆ ಇದೆ. ಕರ್ನಾಟಕ ವಿದ್ಯಾವರ್ಧಕ ಸಂಘದ ಮೂಲಕ ಆ ಕೆಲಸ ಆಗಬೇಕೆಂದು ತಿಳಿಸಿ, ಶಾಲೆಗಳಲ್ಲೂ ಚಿತ್ರ ಕಲಾ ವಿಷಯ ಶಿಕ್ಷಕರ ಕೊರತೆಯಿಂದ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನಕ್ಕೆ ತೊಂದರೆಯಾಗಿದೆ ಎಂದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಶಿಗ್ಗಾಂವಿ ಕಾಲೇಜಿನ ಪ್ರಾಚಾರ್ಯರಾದ ನಾಗರಾಜ ದ್ಯಾಮನಕೊಪ್ಪ ಹಾಗೂ ಚಿತ್ರ-ಕಾವ್ಯ ಪ್ರದರ್ಶಕರಾದ ಕಿರಣ ಜತ್ತಿ ಉಪಸ್ಥಿತರಿದ್ದು ಮಾತನಾಡಿದರು.

ಅಧ್ಯಕ್ಷತೆ ವಹಿಸಿದ್ದ ಹಾವೇರಿಯ ಹಿರಿಯ ಸಾಹಿತಿ ಸತೀಶ ಕುಲಕರ್ಣಿ ಮಾತನಾಡಿ, ಚಿತ್ರ ಕಲಾವಿದರಾದ ಕಿರಣ ಜತ್ತಿ ಅವರು ಶ್ರಮವಹಿಸಿ ಚಿತ್ರ-ಕಾವ್ಯ ರಚಿಸಿದ್ದಾರೆ. ಅವರ ಶ್ರಮ ಸಾರ್ಥಕ. ಈ ವೈವಿಧ್ಯಮಯ ಚಿತ್ರಗಳು ಮನಮೋಹಕವಾಗಿದ್ದು ಒಂದೊಂದು  ಸಂದೇಶ ಸಾರುತ್ತಿವೆ. ಈ ಪ್ರದರ್ಶನ ಸೀಮಿತ ಸ್ಥಳಕ್ಕೆ ಮೀಸಲಾಗದೆ ನಾಡಿನಲ್ಲೆಲ್ಲಾ ಪ್ರದರ್ಶನವಾಗಬೇಕೆಂದು ಹಾರೈಸಿದರು.

ವೇದಿಕೆಯಲ್ಲಿ ಕ.ವಿ.ವ. ಸಂಘದ ಅಧ್ಯಕ್ಷ ಚಂದ್ರಕಾಂತ ಬೆಲ್ಲದ ಇದ್ದರು. ಕಾರ್ಯಕಾರಿ ಸಮಿತಿ ಸದಸ್ಯ ವೀರಣ್ಣ ಒಡ್ಡೀನ ಸ್ವಾಗತಿಸಿದರು. ಪ್ರಧಾನ ಕಾರ್ಯದರ್ಶಿ ಶಂಕರ ಹಲಗತ್ತಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಹ ಕಾರ್ಯದರ್ಶಿ ಶಂಕರ ಕುಂಬಿ ನಿರೂಪಿಸಿದರು. ಎಂ. ಎಂ. ಚಿಕ್ಕಮಠ ವಂದಿಸಿದರು.

**೩. ಬಸವೇಶ್ವರ ಜಯಂತಿ**

ಬಸವಣ್ಣನವರು  ಪ್ರಜಾಪ್ರಭುತ್ವ ಹಾಗೂ ಮಾನವ ಹಕ್ಕುಗಳನ್ನು ಈ ನೆಲದಲ್ಲಿ ಮೊಳಕೆಯೊಡೆಯುವಂತೆ ಮಾಡಿದ ಪ್ರಪಂಚದ ಮೊದಲ ವ್ಯಕ್ತಿ ಎಂದು ಕ.ವಿ.ವ.ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ವೀರಣ್ಣ ಒಡ್ಡೀನ ಅಭಿಪ್ರಾಯಪಟ್ಟರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ದಿನಾಂಕ: ೨೩-೪-೨೦೨೩ ರಂದು **ಮಹಾಮಾನವತಾವಾದಿ, ಬಸವೇಶ್ವರರ ೮೯೦ ನೇ ಜಯಂತಿ** ಅಂಗವಾಗಿ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಅವರ ಭಾವಚಿತ್ರಕ್ಕೆ ಗೌರವ ಸಲ್ಲಿಸಿ ಮಾತನಾಡಿ, ಬಸವಣ್ಣನವರು ಏಸುಕ್ರಿಸ್ತನಂತೆ ದಯಾಗುಣ ಹಾಗೂ ಬುದ್ಧನಂತೆ ಮಹಾಮಾನವತಾವಾದಿ ಗುಣಗಳನ್ನು ಹೊಂದಿದವರಾಗಿದ್ದರು.  ಕಾಯಕ ನಿಷ್ಠೆ ಮನುಷ್ಯ  ಧರ್ಮದ ಬುನಾದಿಯಾಗಬೇಕೆಂದು ಪ್ರತಿಪಾದಿಸಿ ಅದರಂತೆ ಬದುಕಿದ ಬಸವಣ್ಣನವರು ಸತ್ಯಶುದ್ಧ ಕಾಯಕ, ವಿನಯ ಭಾವದ ದಾಸೋಹ ಗುಣಗಳನ್ನು ಪ್ರತಿಯೊಬ್ಬರಲ್ಲಿ ಬೆಳೆಸಿಕೊಳ್ಳುವಂತೆ ಮಾಡಿದ ಮಹಾ ಮಾನವತಾವಾದಿ ಎಂದು ಹೇಳಿದರು.

ಸಂಘದ ಕಾರ್ಯಾಧ್ಯಕ್ಷ ಬಸವಪ್ರಭು ಹೊಸಕೇರಿ ಮಾತನಾಡಿ, ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸಿದ ಬಸವಣ್ಣನವರು ಆ ಕಾಲದ ಜಾತೀಯ ಸಂಕೋಲೆಯನ್ನು ತೊಡೆದು ಹಾಕಿ, ಮಾನವೀಯತೆಯನ್ನು ಎತ್ತಿಹಿಡಿದರು. ಜಗತ್ತಿನಲ್ಲಿ ಸಮತಾವಾದವನ್ನು ಸಾರಿದ ಬಸವಣ್ಣನವರು. ಮನುಷ್ಯರಾದ ನಾವು ಇತರರನ್ನು ಪ್ರತ್ಯೇಕ ಭಾವನೆಯಿಂದ

ಕಾಣುವುದು ಸರಿಯಲ್ಲ. ನಾವು ಕೇವಲ ಬಸವಣ್ಣನವರ ವಚನಗಳನ್ನು ಕಂಠಪಾಠ ಮಾಡಿದರೆ ಸಾಲದು, ಅವರ ತತ್ವಸಿದ್ಧಾಂತಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ನಡೆದರೆ ಅದೇ ನಿಜವಾಗಿ ನಾವು ಬಸವಣ್ಣನವರಿಗೆ ತೋರುವ ಗೌರವ ಎಂದರು.

ಅಧ್ಯಕ್ಷತೆ ವಹಿಸಿದ ಸಂಘದ ಅಧ್ಯಕ್ಷರಾದ ಚಂದ್ರಕಾಂತ ಬೆಲ್ಲದ ಮಾತನಾಡಿ, ಬಸವಣ್ಣನವರು ೧೨ ನೇ ಶತಮಾನದಲ್ಲಿಯೇ ಇಂದಿನ ಸಂವಿಧಾನದ ಆಶಯವನ್ನು ಜಾರಿಗೆ ತರುವಲ್ಲಿ ಸಾಮಾಜಿಕ ಕ್ರಾಂತಿಯನ್ನೇ ಮಾಡಿದರು. ಅವರ ತತ್ವಸಿದ್ಧಾಂತಗಳು ಇಂದು ಪ್ರಪಂಚದಾದ್ಯಂತ ಪ್ರತಿಯೊಬ್ಬರಿಂದಲೂ ಗೌರವಿಸಲ್ಪಡುತ್ತಿವೆ ಎಂದರು.

ಸಂಘದ ಕೋಶಾಧ್ಯಕ್ಷ ಶಿವಾನಂದ ಭಾವಿಕಟ್ಟಿ ಕಾರ್ಯಕ್ರಮ ನಿರ್ವಹಿಸಿದರು. ಕಾರ್ಯಕಾರಿ ಸಮಿತಿ ಸದಸ್ಯ ಡಾ. ಜಿನದತ್ತ ಹಡಗಲಿ, ಡಾ. ಶ್ರೀಶೈಲ ಹುದ್ದಾರ ಹಾಗೂ ಬಿ.ಎಚ್. ಹಿರೇಮಠ, ಎಸ್.ಕೆ. ಘಡೆಣ್ಣವರ, ಶ್ರೀ ವನಗುಡಿ ಮತ್ತು ಎಸ್.ಎಂ. ರಾಚಯ್ಯನವರ, ಎನ್.ಎಸ್. ಕಾಶಪ್ಪನವರ ಸೇರಿದಂತೆ ಸಂಘದ ಸಿಬ್ಬಂದಿಗಳು ಮತ್ತಿತರರು ಭಾಗವಹಿಸಿದ್ದರು.

**೪. ಶ್ರೀ ಎಸ್.ಜಿ. ಬಾಳೇಕುಂದ್ರಿ ಜನ್ಮ ಶತಮಾನೋತ್ಸವ ಆಚರಣೆ**

ಮೌಲ್ಯಗಳನ್ನು ಹೊಂದಿಸಿಕೊಂಡು ಜೀವನ ಸಾಧನೆ ಮಾಡುವವರು ಕಡಿಮೆ. ಅಂಥವರಲ್ಲಿ ಪರಿಪೂರ್ಣ ತೃಪ್ತಿ ಜೀವನ ಮತ್ತು ಇಂಜನೀಯರಿಂಗ್ ಕ್ಷೇತ್ರದಲ್ಲಿ ಇತಿಹಾಸ ಸೃಷ್ಟಿಸಿದ ಪ್ರಮುಖರಲ್ಲಿ ಎಸ್.ಜಿ. ಬಾಳೇಕುಂದ್ರಿ ಒಬ್ಬರಾಗಿದ್ದಾರೆ ಎಂದು ನಿವೃತ್ತ ಮುಖ್ಯ ಅಭಿಯಂತರರಾದ ಎಂ.ಬಿ. ಪರಪ್ಪಗೌಡರ ಹೇಳಿದರು.

ಕರ್ನಾಟಕ ವಿದ್ಯಾವರ್ಧಕ ಸಂಘವು ದಿನಾಂಕ: ೪-೫-೨೦೨೩ ರಂದು ಶತಮಾನೋತ್ತರ ಬೆಳ್ಳಿಹಬ್ಬದ ಸವಿನೆನಪಿನಲ್ಲಿ ಶ್ರೀ ಎಸ್.ಜಿ. ಬಾಳೇಕುಂದ್ರಿ ಜನ್ಮ ಶತಮಾನೋತ್ಸವ ಆಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ಅವರು, ಸಮಗ್ರ ಉತ್ತರ ಕರ್ನಾಟಕದಲ್ಲಿ ಕುಡಿಯುವ ನೀರಿನ ಸಮಸ್ಯೆ ನಿವಾರಿಸಲು ಮತ್ತು ನೀರಾವರಿ ಆಣೆಕಟ್ಟು ಯೋಜನೆಗಳ ನೀಲನಕ್ಷೆಯ ರೂವಾರಿ ಆಗಿದ್ದಲ್ಲದೇ, ಗುವಾಹಟಿ ಕಮೀಟಿ ವಿಶೇಷ ನೀರಾವರಿ ತಜ್ಞರಾಗಿ ಸೇವೆ ಸಲ್ಲಿಸಿರುವುದು ಶ್ಲಾಘನೀಯ ಎಂದರು.

೧೯೫೬ರಲ್ಲಿ ರಾಜ್ಯ ವಿಂಗಡಣೆ ಆದ ನಂತರ ಕರ್ನಾಟಕಕ್ಕೆ ನದಿಯ ನೀರಿನ ಬಹುಪಾಲು ಎಷ್ಟೆಂದು ಕರಾರುವಕ್ಕಾಗಿ ಸರಕಾರಕ್ಕೆ ಸಲಹೆ ನೀಡುತ್ತಿದ್ದರು. ನದಿ ಮೂಲಗಳ ನೀರಾವರಿ ತಜ್ಞರಾಗಿದ್ದರಲ್ಲದೇ ಜ್ಯೂನಿಯರ ಇಂಜನೀಯರಗಳಿಗೆ ದಿಕ್ಸೂಚಿಯಾಗಿದ್ದರು ಎಂದು ಸ್ಮರಿಸಿದ ಎಂ.ಬಿ. ಪರಪ್ಪಗೌಡರ ಎಸ್.ಜಿ. ಬಾಳೇಕುಂದ್ರಿಯವರ ಜೊತೆಗಿನ ಒಡನಾಟವನು ಹಂಚಿಕೊಂಡರು.

ಮುಖ್ಯ ಅತಿಥಿಯಾಗಿ ಬೆಂಗಳೂರಿನ ಹಿರಿಯ ವೈದ್ಯೆ ಡಾ. ವಿಜಯಲಕ್ಷ್ಮೀ ಬಾಳೇಕುಂದ್ರಿ ಮಾತನಾಡಿ, ಪ್ರಸ್ತುತ ಹೊಸ ತಲೆಮಾರಿನ ಯುವಕರಿಗೆ ಎಸ್. ಜಿ. ಬಾಳೇಕುಂದ್ರಿ ಅವರ ಜೀವನ ಸಾಧನೆ ನಿರಂತರ ತಿಳಿಸುವಂತಾಗಬೇಕೆಂದರು. ನಮ್ಮವರು ನಮ್ಮವರ ಮೇಲಿನ ಅಭಿಮಾನದ ಕೊರತೆ ಬಗ್ಗೆ ವಿಷಾಧಿಸಿದರು.

ಸಾಹಿತಿ ನರಸಿಂಹ ಪರಾಂಜಪೆ ಮಾತನಾಡಿ, ಕರ್ನಾಟಕದ ಎಲ್ಲಾ ಆಣೆಕಟ್ಟುಗಳ ಶ್ರೇಷ್ಠ ನೀರಾವರಿ ತಜ್ಞರಾಗಿದ್ದರಲ್ಲದೇ ಇಚ್ಛಾಶಕ್ತಿ, ಜ್ಞಾನಶಕ್ತಿ, ಕ್ರೀಯಾಶಕ್ತಿಯಲ್ಲಿ ಶಿಸ್ತು ಬದ್ಧವಾಗಿ ಸೇವೆ ಸಲ್ಲಿಸಿದ್ದಾರೆ ಎಂದರು.

ಹಿರೇಮಲ್ಲೂರ ಈಶ್ವರನ್ ಪ.ಪೂ. ಕಾಲೇಜಿನ ಪ್ರಾಚಾರ್ಯ ಶಶಿಧರ ತೋಡಕರ ಅವರು ಎಸ್.ಜಿ. ಬಾಳೇಕುಂದ್ರಿಯವರ ಬದುಕು ಮತ್ತು ಬದುಕಿನ ಮೌಲ್ಯಗಳ ಕುರಿತು ತಮ್ಮ ಮುನ್ನುಡಿಯಲ್ಲಿ ಸುಧೀರ್ಘವಾಗಿ ಮಾತನಾಡಿದರು.

ಅಧ್ಯಕ್ಷತೆ ವಹಿಸಿ ಹಿರಿಯ ಶಿಕ್ಷಣ ತಜ್ಞ ಶಿವಶಂಕರ ಹಿರೇಮಠ ಮಾತನಾಡಿ, ನೀರಾವರಿ ಕ್ಷೇತ್ರಕ್ಕೆ ಶ್ರೇಷ್ಠ ನೀರಾವರಿ ತಜ್ಞರಾದ ಬಾಳೇಕುಂದ್ರಿಯವರು ನಿರಂತರ ಕಾಯಕಯೋಗಿ ಆಗಿದ್ದರು. ಇಂಥ ಇತಿಹಾಸ ಸೃಷ್ಟಿಸಿದ ಮಹನೀಯರನ್ನು ನಾವು ಸ್ಮರಿಸುತ್ತಾ ಇರಬೇಕೆಂದರು.

ವೇದಿಕೆ ಮೇಲೆ ಸಂಘದ ಅಧ್ಯಕ್ಷ ಚಂದ್ರಕಾಂತ ಬೆಲ್ಲದ ಇದ್ದರು. ಶ್ರೀಮತಿ ವಿಶ್ವೇಶ್ವರಿ ಹಿರೇಮಠ ಸ್ವಾಗತಿಸಿದರು. ಶಂಕರ ಹಲಗತ್ತಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಗುರು ಹಿರೇಮಠ ನಿರೂಪಿಸಿ, ವಂದಿಸಿದರು.

**೫. ಶ್ರೀ ನಿಂ. ಶಿ. ಕಾಶಪ್ಪನವರ ಬೀಳ್ಕೊಡುಗೆಯ ಅಭಿನಂದನಾ ಸಮಾರಂಭ**

ಕರ್ನಾಟಕ ವಿದ್ಯಾವರ್ಧಕ ಸಂಘಕ್ಕೆ ೧೩೩ ವರ್ಷಗಳ ಐತಿಹಾಸಿಕ ಪರಂಪರೆಯಿದ್ದು, ಕನ್ನಡ ನಾಡು, ನುಡಿಯ ಶ್ರೇಯಸ್ಸಿಗಾಗಿ ಸಲ್ಲಿಸಿದ ಸೇವೆ ಅನುಪಮವಾದದ್ದು. ಇಂತಹ ಸಂಘದಲ್ಲಿ ಟೈಪಿಸ್ಟ್ ಅಗಿ ಸೇವೆಗೆ ಸೇರಿದ ಎನ್.ಎಸ್. ಕಾಶಪ್ಪನವರ ಸಂಘದ ಅಧೀಕ್ಷಕರಾಗಿ ನಿವೃತ್ತರಾದರು. ಇವರ ಸೇವಾ ನಿಷ್ಠೆ ಹಾಗೂ ಪ್ರಾಮಾಣಿಕ ಕಾರ್ಯವನ್ನು ಗುರುತಿಸಿದ ಕರ್ನಾಟಕ ವಿದ್ಯಾವರ್ಧಕ ಸಂಘ ವಯೋನಿವೃತ್ತಿ ಹೊಂದಿದ ಅವರಿಗೆ ದಿನಾಂಕ: ೩೧-೫-೨೦೨೩ ರಂದು ಸಂಘದ ನಾಡೋಜ ಡಾ. ಪಾಟೀಲ ಪುಟ್ಟಪ್ಪ ಸಭಾಭವನದಲ್ಲಿ **ಬೀಳ್ಕೋಡುಗೆ ಹಾಗೂ ಅಭಿನಂದನಾ ಸಮಾರಂಭ** ಆಯೋಜಿಸಿತ್ತು.

ಈ ಸಂದರ್ಭದಲ್ಲಿ ಎನ್.ಎಸ್. ಕಾಶಪ್ಪನವರ ಅವರಿಗೂ ನಾಡೋಜ ಡಾ. ಪಾಟೀಲ ಪುಟ್ಟಪ್ಪನವರಿಗೂ ಇದ್ದ ಒಡನಾಟ ಹಾಗೂ ಪಾಪುರವರ ಸಾಹಿತ್ಯದ ತಿರುಳನ್ನು ಕಾಶಪ್ಪನವರ ಟೈಪ ಮಾಡುತ್ತಿದ್ದ ವೈಖರಿಯನ್ನು ಅನೇಕ ಜನ ಮಹನೀಯರು ಹಂಚಿಕೊಂಡರು. ಜೊತೆಗೆ ಕಾಶಪ್ಪನವರ ರಾಜ್ಯದ ಹಾಗೂ ಹೊರರಾಜ್ಯದ ಕನ್ನಡಿಗರೊಂದಿಗಿನ ಒಡನಾಟ, ನಿಷ್ಪ್ರಹ ಸೇವಾ ನಿಷ್ಠೆ, ಸಂಘಕ್ಕೆ ಆಗಮಿಸುವ ಅತಿಥಿಗಳಿಗೆ ನೀಡುತ್ತಿದ್ದ ಅತಿಥಿ ಸತ್ಕಾರ, ಅವರೊಂದಿಗೆ ತೋರುತ್ತಿದ್ದ ಗೌರವ ಭಾವನೆ, ನಿಯಮಿತವಾಗಿ ಹಾಗೂ ಅಚ್ಚುಕಟ್ಟಾಗಿ ಕಾರ್ಯಕ್ರಮದ ವ್ಯವಸ್ಥೆ ಮಾಡುತ್ತಿದ್ದ ರೀತಿ, ಬಂದ ಸಮಸ್ಯೆಗಳಿಗೆ ಪ್ರೀತಿಯಿಂದ ಪರಿಹರಿಸುತ್ತಿದ್ದ ಅವರ ನಿಷ್ಕಪಟ ಮನಸ್ಥಿತಿ ಮುಂತಾದ ಗುಣಗಳ ಕುರಿತು ಕ.ವಿ.ವ.ಸಂಘದ ಉಪಾಧ್ಯಕ್ಷರಾದ ಪ್ರೊ.ಮಾಲತಿ ಪಟ್ಟಣಶೆಟ್ಟಿ, ಹಿರಿಯ ಮಕ್ಕಳ ಸಾಹಿತಿ ನಿಂಗಣ್ಣ ಕುಂಟಿ, ಅಥಣಿ ವಿಮೋಚನಾ ಸಂಸ್ಥೆಯ ಬಿ. ಎಲ್. ಪಾಟೀಲ, ನಿವೃತ್ತ ಗ್ರಂಥಾಲಯಾಧಿಕಾರಿ ಜಿ. ಬಿ. ಹೊಂಬಳ, ಎಸ್. ಬಿ. ಗುತ್ತಲ, ಕ.ವಿ.ವ.ಸಂಘದ ಗೌರವ ವ್ಯವಸ್ಥಾಪಕ ಶಿ. ಮ. ರಾಚಯ್ಯನವರ ಶುಭಾಂಸನೆಯ ನುಡಿಗಳನ್ನಾಡಿ ಶುಭ ಕೋರಿದರು. ಯುವಕವಿ ಚನಬಸಪ್ಪ ಚೌಗಲಾ ಕಾಶಪ್ಪನವರ ಕುರಿತು ಸ್ವರಚಿತ ಕವನ ವಾಚಿಸಿದರು.

ಸಮಾರಂಭದಲ್ಲಿ ಶ್ರೀ ಎನ್. ಎಸ್. ಕಾಶಪ್ಪನವರ ಮತ್ತು ಶ್ರೀಮತಿ ಮಹಾದೇವಿ ಕಾಶಪ್ಪನವರ ದಂಪತಿಗಳನ್ನು ಸನ್ಮಾನಿಸಲಾಯಿತು. ನಂತರ ಅನೇಕ ಸಂಘ, ಸಂಸ್ಥೆಗಳು ಹಾಗೂ ಸಾರ್ವಜನಿಕರು ಕಾಶಪ್ಪನವರನ್ನು ಸನ್ಮಾನಿಸಿ ಶುಭ ಕೋರಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಕಾಶಪ್ಪನವರ, ಸಂಘದ ಎಲ್ಲ ಪದಾಧಿಕಾರಿಗಳು ಯಾವುದೇ ರೀತಿಯ ಲಾಭಾಂಶ ಪಡೆಯದೆ ಉಚಿತವಾಗಿ ಕನ್ನಡಾಂಬೆಯ ಸೇವೆ ಮಾಡುತ್ತಿರುವಾಗ, ಸಂಬಳ ತೆಗೆದುಕೊಳ್ಳುತ್ತಿರುವ ನಾವೇಕೆ ಕಾರ್ಯ ತತ್ಪರರಾಗಬಾರದು ಎಂಬ ಆಲೋಚನೆಯ ಹಿನ್ನೆಲೆಯಲ್ಲಿ ಸಂಘದ ಪ್ರತಿಯೊಂದು ಕೆಲಸವನ್ನು ದೇವರ ಕೆಲಸ ಎಂದು ಭಾವಿಸಿ ಕಾರ್ಯ ಮಾಡುತ್ತಿದ್ದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿ ಸನ್ಮಾನಕ್ಕೆ ಕೃತಜ್ಞತೆ ಸಲ್ಲಿಸಿದರು.

ಆರಂಭದಲ್ಲಿ ಶಿವಾನಂದ ಹೂಗಾರ ಹಾಗೂ ಸಂಗಡಿಗರಿಂದ ಸಂಗೀತ ಕಾರ್ಯಕ್ರಮ ಜರುಗಿತು. ಶಿವಾನಂದ ಭಾವಿಕಟ್ಟಿ ಸ್ವಾಗತಿಸಿದರು. ಬಸವಪ್ರಭು ಹೊಸಕೇರಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಡಾ. ಜಿನದತ್ತ ಹಡಗಲಿ ಅಭಿನಂದನಾ ಪತ್ರ ವಾಚಿಸಿದರು. ಶಂಕರ ಹಲಗತ್ತಿ ಕಾರ್ಯಕ್ರಮ ನಿರೂಪಿಸಿದರು. ಶಂಕರ ಕುಂಬಿ ವಂದಿಸಿದರು.

**೬. ಡಾ. ಜಯದೇವಿ ತಾಯಿ ಲಿಗಾಡೆ ಅವರ ೧೧೨ ನೇ ಜನ್ಮದಿನಾಚರಣೆ**

ಕರ್ನಾಟಕ ವಿದ್ಯಾವರ್ಧಕ ಸಂಘದ ಗೌರವ ಉಪಾಧ್ಯಕ್ಷರಾಗಿದ್ದ ಡಾ. ಜಯದೇವಿತಾಯಿ ಲಿಗಾಡೆ ಕನ್ನಡ ನಾಡು, ನುಡಿಗಾಗಿ ಶ್ರಮಿಸಿದ ಕನ್ನಡಿಗರ ಕಣ್ಮಣಿ ಎಂದು ಕ.ವಿ.ವ.ಸಂಘದ ಉಪಾಧ್ಯಕ್ಷೆ ಪ್ರೊ. ಮಾಲತಿ ಪಟ್ಟಣಶೆಟ್ಟಿ ಅಭಿಪ್ರಾಯಪಟ್ಟರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು ದಿನಾಂಕ: ೨೩-೬-೨೦೨೩ ರಂದು ಆಯೋಜಿಸಿದ್ದ ಡಾ. ಜಯದೇವಿ ತಾಯಿ ಲಿಗಾಡೆ ಅವರ ೧೧೨ ನೇ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿ, ಜಯದೇವಿತಾಯಿ ಲಿಗಾಡೆಯವರು ಭಾರತದ ಸ್ವಾತಂತ್ರ್ಯ ಹೋರಾಟ ಹಾಗೂ ಕರ್ನಾಟಕ ಏಕೀಕರಣಕ್ಕಾಗಿ ಹೋರಾಡಿದ ಧೀಮಂತ ಮಹಿಳೆ. ಕರ್ನಾಟಕದ ಗಡಿ ಭಾಗದಲ್ಲಿ ಕನ್ನಡದ ಗುಡಿಯನ್ನು ಕಟ್ಟಿದವರು. ಕನ್ನಡಿಗರಾದ ನಮಗೆ ಅವರ ಜೀವನಾದರ್ಶಗಳು ಚೇತೋಹಾರಿಯಾಗಿವೆ. ಅವರ ಸಾಮಾಜಿಕ ಕಾರ್ಯಗಳು ಅವಿಸ್ಮರಣೀಯ ಎಂದರು.

ಕಾರ್ಯಕಾರಿ ಸಮಿತಿ ಸದಸ್ಯ ವೀರಣ್ಣ ಒಡ್ಡೀನ ಮಾತನಾಡಿ, ಡಾ. ಜಯದೇವಿತಾಯಿ ಲಿಗಾಡೆಯವರು ಆಗರ್ಭ ಶ್ರೀಮಂತ ಕುಟುಂಬದಲ್ಲಿ ಹುಟ್ಟಿದ್ದರೂ ವೈಭವದ ಜೀವನವನ್ನು ನಡೆಸಲಿಲ್ಲ. ಗಾಂಧೀಜಿಯವರಿಂದ ಪ್ರಭಾವಿತರಾದ ಇವರು ತಮ್ಮ ಜೀವನದ ಕೊನೆಯವರೆಗೂ ನಿರಾಡಂಬರ ಜೀವನ ಸಾಗಿಸಿದರು.

ಹೈದ್ರಾಬಾದ ರಜಾಕಾರರ ಹಾವಳಿಯಿಂದ ಸಹಸ್ರಾರು ಜನರು ನಿರಾಶ್ರಿತರಾದಾಗ ಆಶ್ರಯ ಕೊಟ್ಟು ರಕ್ಷಿಸಿದ ಮಹಾ ತಾಯಿ ಜಯದೇವಿ ತಾಯಿಯವರು. ಮಹಿಳೆಯರನ್ನು ಸಾಕ್ಷರರನ್ನಾಗಿ ಮಾಡಲು ೨೦೦ ವಯಸ್ಕರ ಶಿಕ್ಷಣ ಕೇಂದ್ರಗಳನ್ನು ಸ್ಥಾಪಿಸಿ ಅಕ್ಷರದ ಅರಿವು ಮಾಡಿಕೊಟ್ಟರು. ಆ ಕಾಲದ ಅನೇಕ ಸಾಮಾಜಿಕ ಅನಿಷ್ಟಗಳ ವಿರುದ್ಧ ಹೋರಾಡಿದ ಧೀಮಂತರ ಮಹಿಳೆ. ಅವರು ಕನ್ನಡ ಮಾತನಾಡುವ ಪ್ರದೇಶಗಳಾದ ಸೊಲ್ಲಾಪುರ, ಜತ್ತ, ಅಕ್ಕಲಕೋಟಗಳು ಕರ್ನಾಟಕಕ್ಕೆ ಸೇರಬೇಕೆಂದು ಬಲವಾದ ಪ್ರತಿಪಾದನೆ ಮಾಡಿದ್ದರು.

ಸಂಘದ ಅಧ್ಯಕ್ಷ ಚಂದ್ರಕಾಂತ ಬೆಲ್ಲದ ಅಧ್ಯಕ್ಷತೆ ವಹಿಸಿ ಮಾತನಾಡಿ, ಡಾ. ಜಯದೇವಿ ತಾಯಿ ಲಿಗಾಡೆಯವರು ನಮಗೆಲ್ಲ ಪ್ರಾತಃಸ್ಮರಣೀಯರು. ಲಿಗಾಡೆಯವರಲ್ಲಿ ನಾಡು, ನುಡಿಯ ಅಭಿಮಾನ ಅಗಾಧವಾಗಿತ್ತು. ಕನ್ನಡದ ಏಳ್ಗೆಗಾಗಿ ಅವಿಶ್ರಾಂತವಾಗಿ ದುಡಿದ ಆದರ್ಶ ಮಹಿಳೆ ಎಂದರು. ಕಾರ್ಯಕಾರಿ ಸಮಿತಿ ಸದಸ್ಯರಾದ ಗುರು ಹಿರೇಮಠ, ವಿಶ್ವೇಶ್ವರಿ ಹಿರೇಮಠ ಮಾತನಾಡಿದರು.

ಕಾರ್ಯಕ್ರಮದಲ್ಲಿ ಡಾ. ಜಯದೇವಿತಾಯಿ ಲಿಗಾಡೆಯವರ ಭಾವಚಿತ್ರಕ್ಕೆ ಪುಷ್ಪನಮನ ಮಾಡಿ ಗೌರವ ಸಲ್ಲಿಸಲಾಯಿತು. ಸಹಕಾರ್ಯದರ್ಶಿ ಶಂಕರ ಕುಂಬಿ ಸ್ವಾಗತಿಸಿ, ನಿರೂಪಿಸಿದರು. ಕೋಶಾಧ್ಯಕ್ಷ ಶಿವಾನಂದ ಭಾವಿಕಟ್ಟಿ ವಂದಿಸಿದರು.

## ೭. 'ಹಾವಳಿ' ಕಾದಂಬರಿ ವಿಚಾರ ಸಂಕಿರಣ

ಕರ್ನಾಟಕ ವಿದ್ಯಾವರ್ಧಕ ಸಂಘವು ದಿನಾಂಕ: ೯-೭-೨೦೨೩ ರಂದು ಸಂಘದ ಶ್ರೀ ರಾ. ಹ. ದೇಶಪಾಂಡೆ ಸಭಾಭವನದಲ್ಲಿ ಮಲ್ಲಿಕಾರ್ಜುನ ಹಿರೇಮಠರ **'ಹಾವಳಿ' ಕಾದಂಬರಿ ವಿಚಾರ ಸಂಕಿರಣ** ಕಾರ್ಯಕ್ರಮ ಏರ್ಪಡಿಸಿತ್ತು.

ಉದ್ಘಾಟಕರಾಗಿ ಹಿರಿಯ ಕವಿಗಳಾದ ಧಾರವಾಡದ ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ ಆಗಮಿಸಿದ್ದರು. ಹಿರಿಯ ವಿಮರ್ಶಕ ಶಿವಮೊಗ್ಗದ ಡಾ. ರಾಜೇಂದ್ರ ಚೆನ್ನಿ ಆಶಯ ನುಡಿಗಳನ್ನಾಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರ್ನಾಟಕ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾದ ಶ್ರೀ ಚಂದ್ರಕಾಂತ ಬೆಲ್ಲದ ವಹಿಸಿದ್ದರು.

## ೮. ಕ್ವಿಟ್ ಇಂಡಿಯಾ ಚಳುವಳಿ ಸ್ಮರಣೆ

ರಾಜಕೀಯ, ಆಧ್ಯಾತ್ಮ, ಆರೋಗ್ಯ, ಸಾಹಿತ್ಯ ಹೀಗೆ ಹಲವು ಕ್ಷೇತ್ರಗಳಲ್ಲಿ ಜೀವಿತುದ್ದಕ್ಕೂ ಸಕ್ರೀಯರಾಗಿದ್ದ ಗಾಂಧೀಜಿ ಅವರ ಸರಳ ಜೀವನ ಇಂದಿಗೂ ಪ್ರಸ್ತುತ ಎಂದು ಚಿಂತಕ ಡಾ. ಸಂಜೀವ ಕುಲಕರ್ಣಿ ಹೇಳಿದರು.

ಅವರು ಹುತಾತ್ಮ ಮೈಲಾರ ಮಹಾದೇವಪ್ಪನವರ ಟ್ರಸ್ಟ್, ಹಾವೇರಿ, ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಹಾವೇರಿ ಹಾಗೂ ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಬೆಂಗಳೂರು ಸಹಯೋಗದಲ್ಲಿ ದಿನಾಂಕ: ೮-೮-೨೦೨೩ ರಂದು ಏರ್ಪಡಿಸಿದ **'ಕ್ವಿಟ್ ಇಂಡಿಯಾ ಚಳವಳಿ ಸ್ಮರಣೆ'** ಕಾರ್ಯಕ್ರಮದಲ್ಲಿ ಉಪನ್ಯಾಸಕರಾಗಿ ಮಾತನಾಡುತ್ತಿದ್ದರು.

ಮುಂಬಯಿಯ ಅಗಸ್ಟ್ ಕ್ರಾಂತಿ ಮೈದಾನದಲ್ಲಿ 'ಮಾಡು ಇಲ್ಲವೆ ಮಡಿ' ಎಂಬ ಘೋಷಣೆ ಮೊಳಗಿಸಿದ ಐದೂವರೆ ಗಂಟೆಯ ಭಾಷಣ ಇಂದಿಗೂ ಅವಿಸ್ಮರಣೀಯ ಎಂದು ಡಾ. ಸಂಜೀವ ಕುಲಕರ್ಣಿ ಹೇಳಿದರು.

ಅಧ್ಯಕ್ಷತೆಯನ್ನು ಹಿರಿಯ ಲೇಖಕಿ, ಕ.ವಿ.ವ. ಸಂಘದ ಉಪಾಧ್ಯಕ್ಷೆ ಪ್ರೊ. ಮಾಲತಿ ಪಟ್ಟಣಶೆಟ್ಟಿ ಅವರು 'ಗಾಂಧಿ ಚಿಂತನೆಗಳ ಕಮ್ಮಟವನ್ನು ಯುವ ಜನಾಂಗಕ್ಕಾಗಿ ಏರ್ಪಡಿಸಬೇಕು. ಗಾಂಧಿ ಒಂದು ಜೀವನ ಕ್ರಿಯೆ ಎಂದರು.

ಮೈಲಾರ ಮಹದೇವ ಟ್ರಸ್ಟಿನ ಹಿರಿಯ ಸದಸ್ಯ ವ್ಹಿ. ಎನ್. ತಿಪ್ಪನಗೌಡರ ಪ್ರಾಸ್ತಾವಿಕ ನುಡಿಗಳನ್ನಾಡಿ **'ಮೈಲಾರರು ಗಾಂಧೀಜಿಯವರ ಅಹಿಂಸಾ ತತ್ವದಲ್ಲಿ ಸದಾ ದುಡಿದವರು'** ಎಂದರು. ಸಭೆಯನ್ನುದ್ದೇಶಿಸಿ ಶ್ರೀ ನಿಂಗಣ್ಣ ಕುಂಟಿ, ಡಾ. ಪ್ರಕಾಶ ಭಟ್ ಮಾತನಾಡಿದರು.

ಹಾವೇರಿಯ ಕಲಾಬಳಗದವರಾದ ಸರ್ವಶ್ರೀ ಬಸವರಾಜ ಶಿಗ್ಗಾಂವಿ, ಬಸವರಾಜ ಕರಡಿ, ಈರಣ್ಣ ಬೆಳವಡಿ, ಶಂಕರ ತುಮ್ಮಣ್ಣವರ, ಶಂಕರ ಬಡಿಗೇರ, ದೇಶಭಕ್ತಿ ಗೀತೆಗಳ ಹಾಡಿದರು.

ಆರಂಭದಲ್ಲಿ ಸೌಮ್ಯ ಬಡಿಗೇರ ಪ್ರಾರ್ಥಿಸಿದರು. ಎಸ್.ಆರ್. ಹಿರೇಮಠ ನಿರೂಪಿಸಿದರು. ಪೃಥ್ವಿರಾಜ ಬೆಟಗೇರಿ ಪರಿಚಯಿಸಿದರು. ಕೊನೆಯಲ್ಲಿ ಹಾವೇರಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಸಿದ್ಧಲಿಂಗೇಶ ರಂಗಣ್ಣವರ ವಂದಿಸಿದರು.

### ೯. ಮಕ್ಕಳ ನಡಿಗೆ ಹಸಿರಿನ ಕಡೆಗೆ

ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ, ಇಕೋ ವಾಚ್ ಸಂಘಟನೆ, ಬೆಂಗಳೂರು ಹಾಗೂ ಬಾಲ ಬಳಗ ಸೃಜನಶೀಲ ಶಿಕ್ಷಣ ಪ್ರತಿಷ್ಠಾನ, ಧಾರವಾಡ ಸಂಯುಕ್ತ ಆಶ್ರಯದಲ್ಲಿ ದಿನಾಂಕ: ೨೮–೮–೨೦೨೩ ರಂದು ಸಂಘದ ನಾಡೋಜ ಡಾ. ಪಾಟೀಲ ಪುಟ್ಟಪ್ಪ ಸಭಾಭವನದಲ್ಲಿ **'ಮಕ್ಕಳ ನಡಿಗೆ ಹಸಿರಿನ ಕಡೆಗೆ'** ಒಂದು ದಿನದ **ವಿಶೇಷ ಜಾಗೃತಿ ಕಾರ್ಯಾಗಾರ** ಕಾರ್ಯಕ್ರಮ ಏರ್ಪಡಿಸಿತ್ತು.

ಕರ್ನಾಟಕ ಸರಕಾರದ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಮತ್ತು ಸಕಾಲ ಸಚಿವರಾದ ಮಾನ್ಯಶ್ರೀ ಮಧು ಬಂಗಾರಪ್ಪ ಉದ್ಘಾಟಕರಾಗಿ ಆಗಮಿಸಿದ್ದರು.

ಮುಖ್ಯ ಅತಿಥಿಗಳಾಗಿ ಕರ್ನಾಟಕ ಸರಕಾರದ ಕಾರ್ಮಿಕ ಹಾಗೂ ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವರಾದ ಮಾನ್ಯಶ್ರೀ ಸಂತೋಷ ಲಾಡ್ ಆಗಮಿಸಿದ್ದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬೆಂಗಳೂರಿನ ಇಕೋ ವಾಚ್ ಸಂಸ್ಥೆಯ ಮಾನ್ಯಶ್ರೀ ಸುರೇಶ ಹೆಬ್ಳಿಕರ್ ವಹಿಸಿದ್ದರು.



## ೧೦. ಕೃತಿ ಬಿಡುಗಡೆ ಸಮಾರಂಭ

ಕರ್ನಾಟಕ ವಿದ್ಯಾವರ್ಧಕ ಸಂಘವು ದಿನಾಂಕ: ೧–೧೦–೨೦೨೩ ರಂದು ಸಂಘದ ಶ್ರೀರಾ.ಹ. ದೇಶಪಾಂಡೆ ಸಭಾಭವನದಲ್ಲಿ ರೂಪ ಹಾಸನ ರಚಿಸಿದ **'ಮಹಾಸಂಗ್ರಾಮಿ'** : ಎಸ್.ಆರ್. ಹಿರೇಮಠ ಅವರ ರಚನಾತ್ಮಕ ಪ್ರಯೋಗಗಳ ಬಾಳ್ಕಥನ ಕೃತಿ ಬಿಡುಗಡೆ ಸಮಾರಂಭ ಏರ್ಪಡಿಸಿತ್ತು.

ಹೊಸತು ಪತ್ರಿಕೆ, ಬೆಂಗಳೂರು ಸಂಪಾದಕ ಡಾ. ಸಿದ್ದನಗೌಡ ಪಾಟೀಲ ಕೃತಿ ಬಿಡುಗಡೆಗೊಳಿಸಿದರು. ಸಾಮಾಜಿಕ ಹೋರಾಟಗಾರ್ತಿ ಧಾರವಾಡದ ಶ್ರೀಮತಿ ಶಾರದಾ ದಾಬಡೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಕರ್ನಾಟಕ ವಿದ್ಯಾವರ್ಧಕ ಸಂಘದ ಉಪಾಧ್ಯಕ್ಷರಾದ ಪ್ರೊ. ಮಾಲತಿ ಪಟ್ಟಣಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಎಸ್. ಆರ್. ಹಿರೇಮಠ ಮತ್ತು ಲೇಖಕಿ ರೂಪ ಹಾಸನ ಗೌರವ ಉಪಸ್ಥಿತರಿದ್ದರು.

## ೧೧. ಮಹಾತ್ಮಾ ಗಾಂಧೀಜಿ ಮತ್ತು ಲಾಲ ಬಹದ್ದೂರ ಶಾಸ್ತ್ರಿ ಜಯಂತಿ

ಗಾಂಧೀಜೀ ಹಾಗೂ ಶಾಸ್ತ್ರೀಜಿಯವರು ಈ ದೇಶ ಕಂಡ ಮಹಾನ್ ವ್ಯಕ್ತಿಗಳು. ಇರ್ವರೂ ಸರಳತೆಯ ಪ್ರತಿಪಾದಕರಾಗಿದ್ದರು. ಗಾಂಧೀಜಿ ಹಾಗೂ ಶಾಸ್ತ್ರೀಜಿ ವ್ಯಕ್ತಿಗಳು ಮಾತ್ರವಲ್ಲ ಈ ದೇಶದ ದೊಡ್ಡ ಶಕ್ತಿಯಾಗಿದ್ದರು ಎಂದು ಮಕ್ಕಳ ಸಾಹಿತಿ ನಿಂಗಣ್ಣ ಕುಂಟಿ ಹೇಳಿದರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿ ಹಾಗೂ ಲಾಲ ಬಹದ್ದೂರ ಶಾಸ್ತ್ರಿಯವರ ಜಯಂತಿ ಅಂಗವಾಗಿ ಅಕ್ಟೋಬರ ೨ ರಂದು ಅವರ ಭಾವಚಿತ್ರಗಳಿಗೆ ಪುಷ್ಪಾರ್ಪಣೆ ಮಾಡಿ ಮಾತನಾಡುತ್ತಿದ್ದರು.

ಇವರಲ್ಲಿದ್ದ ದೇಶ ಪ್ರೇಮ, ಸ್ವಾತಂತ್ರ್ಯ ಪ್ರೀಯತೆ, ಉನ್ನತವಾದ ವಿಚಾರಗಳು ಸಮಸ್ತ ಭಾರತೀಯರಿಗೆ ಆದರಣೀಯವಾಗಿವೆ. ಇರ್ವರೂ ಸಾಮಾನ್ಯ ವ್ಯಕ್ತಿಗಳಾಗಿ ಜನಿಸಿ, ಅಸಮಾನ್ಯ ನಾಯಕರಾಗಿ ಬೆಳೆದವರಾಗಿದ್ದಾರೆ. ಅವರ ಚಿಂತನೆಗಳು ಈಗಿನವರಿಗೆ ಹಾಗೂ ಮುಂದಿನ ಜನಾಂಗಕ್ಕೆ ಪ್ರೇರಣೆಯಾಗಿವೆ. ಅವರ ಸಿದ್ಧಾಂತ ಮತ್ತು ತತ್ವಗಳನ್ನು ಪ್ರತಿಯೊಬ್ಬರು ಪಾಲಿಸುವಂತಾಗಬೇಕು ಎಂದು ಹೇಳಿದರು.

ಕಾರ್ಯಕಾರಿ ಸಮಿತಿ ಸದಸ್ಯ ವೀರಣ್ಣ ಒಡ್ಡೀನ ಮಾತನಾಡಿ, ರಾಷ್ಟ್ರೀಯ ಚಳುವಳಿಯ ಅದ್ವಿತೀಯ ನಾಯಕರಾದ ಮಹಾತ್ಮಾ ಗಾಂಧೀಜಿ ಹಾಗೂ ಲಾಲ್ ಬಹದ್ದೂರ ಶಾಸ್ತ್ರೀ ಸರಳತೆ, ಸತ್ಯಸಂಧತೆ ಹಾಗೂ ಪ್ರಾಮಾಣಿಕತೆಯ ಪ್ರತೀಕವಾಗಿದ್ದಾರೆ. ಇರ್ವರೂ ಈ ದೇಶ ಕಂಡ ಮಹಾನ್ ಮುತ್ಸದ್ದಿಗಳು. ಗಾಂಧೀಜಿಯವರು ಉದಾತ್ತ ತತ್ವಗಳ ಆದರ್ಶ ನಾಯಕರು ಮಾತ್ರವಲ್ಲ ಒಬ್ಬ ಶ್ರೇಷ್ಠ ಮಾನವತಾವಾದಿಗಳು. ಶ್ರೇಷ್ಠ ಸಮಾಜ ಸುಧಾರಕರಾದ ಅವರು ಒಬ್ಬ ಶಿಕ್ಷಣ ತಜ್ಞರು ಹಾಗೂ ಆರ್ಥಿಕ ತಜ್ಞರು ಹೌದು. ಸಮಾನತೆ ಹಾಗೂ ಕಾಯಕ ತತ್ವದ ಆಧಾರದ ಮೇಲೆ ನವಸಮಾಜ ನಿರ್ಮಾಣ ಮಾಡಲು ಶ್ರಮಿಸಿದ ಮಹಾನ್ ನಾಯಕರು. ಹಾಗೆಯೇ ಲಾಲ್‌ಬಹದ್ದೂರ ಶಾಸ್ತ್ರೀಯವರು ದಕ್ಷ ಮತ್ತು ಪ್ರಾಮಾಣಿಕ ಪ್ರಧಾನಿಯಾಗಿದ್ದರು. ಅವರ ಸ್ವಾಭಿಮಾನವನ್ನು ಕಂಡು ಇಡೀ ದೇಶವೇ ತಲೆದೂಗುತ್ತಿದೆ. ಇರ್ವರು ನಾಯಕರ ಚಿಂತನೆಗಳು ನಮಗೆ ಸದಾವಕಾಲ ಸ್ಮರಣೀಯವಾಗಿವೆ ಎಂದು ಹೇಳಿದರು.

ಸಂಘದ ಕೋಶಾಧ್ಯಕ್ಷ ಸತೀಶ ತುರಮರಿ ಮಾತನಾಡಿ, ಗಾಂಧೀಜಿಯವರು ಅಸ್ಪೃಶ್ಯತೆ ನಿವಾರಣೆಗಾಗಿ, ಸಾಮಾಜಿಕ ಅನಿಷ್ಟವಾದ ಮದ್ಯಪಾನ ನಿರ್ಮೂಲನೆಗಾಗಿ ತಮ್ಮ ಪ್ರಾಮಾಣಿಕ ಪ್ರಯತ್ನವನ್ನು ಮಾಡಿದರು. ಸತ್ಯ, ಶಾಂತಿ, ಅಹಿಂಸೆ ಆಧಾರದ ಮೇಲೆ ನಮ್ಮ ದೇಶಕ್ಕೆ ಸ್ವಾತಂತ್ರ್ಯ ತಂದು ಕೊಟ್ಟ ಧೀಮಂತ ನಾಯಕರು. ಅವರ ಚಿಂತನೆಗಳು, ಮೌಲ್ಯಗಳು ನಮಗೆಲ್ಲಾ ಚೇತೋಹಾರಿ ಎಂದರು.

ಸಂಘದ ಅಧ್ಯಕ್ಷರಾದ ಚಂದ್ರಕಾಂತ ಬೆಲ್ಲದ ಮಾತನಾಡಿ, ಅಕ್ಟೋಬರ ೨ ಗಾಂಧೀ ಜಯಂತಿಯನ್ನು ವಿಶ್ವದಾದ್ಯಂತ ಆಚರಿಸಲಾಗುತ್ತಿದೆ. ಗಾಂಧೀಜಿ ಮತ್ತು ಶಾಸ್ತ್ರೀಜಿ ಭಾರತ ಮಾತ್ರವಲ್ಲ ಅವರು ಜಾಗತೀಕ ನಾಯಕರು. ಅವರ ಜೀವನ ಮೌಲ್ಯಗಳನ್ನು ನಾವು ಜೀವನದಲ್ಲಿ ಅಳವಡಿಸಿಕೊಂಡು ಅವರು ಸಾಗಿದ ಮಾರ್ಗದಲ್ಲಿ ನಾವು ನಡೆದಾಗ ನಿಜವಾಗಿಯೂ ಆ ಮಹಾತ್ಮರಿಗೆ ಸಲ್ಲಿಸುವ ನಿಜವಾದ ಗೌರವವಾಗಿದೆ ಎಂದರು.

## ೧೨. ಕನಕದಾಸ ಜಯಂತಿ

ಕನಕದಾಸರು ದಾಸ ಸಾಹಿತ್ಯ ಸುವರ್ಣ ಯುಗದ ಪ್ರತಿಪಾದಕರಾಗಿದ್ದರು. ಅವರ ಸಂದೇಶಗಳು ಸರ್ವಕಾಲಿಕ ಸತ್ಯವಾಗಿದ್ದು ಮನುಕುಲಕ್ಕೆ ಸಂಜೀವಿನಿಯಾಗಿವೆ ಎಂದು ಕ.ವಿ.ವ. ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ವೀರಣ್ಣ ಒಡ್ಡೀನ ಹೇಳಿದರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು, ಕನಕದಾಸರ ಜಯಂತಿ ನಿಮಿತ್ಯ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿ, ಕನಕದಾಸರು ಜಾತಿ, ಮತ, ಭಾಷೆ, ಪ್ರದೇಶಕ್ಕೆ ಸಿಮಿತವಾಗದೇ ವಿಶ್ವಮಾನವ ಪರಿಕಲ್ಪನೆಯನ್ನು ಹೊಂದಿದ್ದರು. ಗುಣಕ್ಕಿಂತ ಕುಲವೇ ಶ್ರೇಷ್ಠ ಎನ್ನುವ ಕಾಲಘಟ್ಟದಲ್ಲಿ ತಮ್ಮ ಕೀರ್ತನೆಗಳ ಮೂಲಕ ಸಮಾಜದ ಅಂಕು-ಡೊಂಕುಗಳನ್ನು, ಕಂದಾಚಾರಗಳನ್ನು ತಿದ್ದಿ, ಸರ್ವಸಮಾನತೆ, ಸೌಹಾರ್ದತೆ ಬೆಳೆಸಿದ ದಾಸ ಶ್ರೇಷ್ಠರಾಗಿದ್ದರು. ನೈತಿಕತೆಯೇ ಮನುಷ್ಯನ ಬದುಕಿನ ಜೀವಾಳ ಎಂದು ಸಾರಿದ ಕನಕದಾಸರು ನೀತಿಯಿಲ್ಲದ ನಾಯಕರಿಗೆ ತಮ್ಮ ಕೀರ್ತನೆಗಳ ಮೂಲಕ ನೈತಿಕ ಪ್ರಜ್ಞೆಯನ್ನು ಮೂಡಿಸಿದರು. ಕನಕದಾಸರು ಹಾಗೂ ಪುರಂದರದಾಸರು ಕೀರ್ತನಾ ಸಂಗೀತ ಅಶ್ವಿನಿ ದೇವತೆಗಳೆಂದು ಕರೆಯಲ್ಪಟ್ಟಿದ್ದಾರೆ ಎಂದು ಹೇಳಿದರು.

ಕ.ವಿ.ವ. ಸಂಘದ ಕಾರ್ಯಾಧ್ಯಕ್ಷರಾದ ಬಸವಪ್ರಭು ಹೊಸಕೇರಿ ಅಧ್ಯಕ್ಷತೆ ವಹಿಸಿದ್ದರು.

ಸಂಘದ ಪ್ರಧಾನ ಕಾರ್ಯದರ್ಶಿ ಶಂಕರ ಹಲಗತ್ತಿ, ಸ್ವಾಗತಿಸಿ, ನಿರೂಪಿಸಿದರು. ಕೋಶಾಧ್ಯಕ್ಷ ಸತೀಶ ತುರಮರಿ, ಕಾರ್ಯಕಾರಿ ಸಮಿತಿ ಸದಸ್ಯರಾದ ಗುರು ಹಿರೇಮಠ, ಡಾ. ಧನವಂತ ಹಾಜವಗೋಳ, ಡಾ. ಜಿನದತ್ತಿ ಹಡಗಲಿ, ವಿಶ್ವೇಶ್ವರಿ ಹಿರೇಮಠ, ಡಾ. ಶ್ರೀಶೈಲ ಹುದ್ದಾರ ಮತ್ತು ಸಂಘದ ಸದಸ್ಯರಾದ ಅಭಿಷೇಕ ದೇಸಾಯಿ, ಸಂಘದ ಸಿಬ್ಬಂದಿಗಳು ಇದ್ದರು.

## ೧೩. 'ಪುಸ್ತಕ ಪಂಚಮಿ' ದುಂಡು ಬರಹ ಸ್ಪರ್ಧೆ

ಬಿಳಿಹಾಳಿಯಲ್ಲಿ ಮುತ್ತು ಪೋಣಿಸಿದಂತೆ ಅಕ್ಷರ ಬರೀಬೇಕು. ಎಳೆಯ ಯವಸ್ಸಿನಲ್ಲಿ ಯಾವ ಮಗು ಸುಂದರ ಬರಹ ಬರೆಯುವುದನ್ನು ರೂಢಿಸಿಕೊಳ್ಳುವನೋ ಅವನು ಅಥವಾ ಅವಳು ಜೀವನದುದ್ದಕ್ಕೂ ಶಿಸ್ತನ್ನು ಅಳವಡಿಸಿಕೊಂಡು ವ್ಯಕ್ತಿತ್ವ ರೂಪಿಸಿಕೊಳ್ಳುವರು ಎಂದು ಕರ್ನಾಟಕ ರಾಜ್ಯ ಲೋಕೋಪಯೋಗಿ ಇಲಾಖೆಯ ನಿವೃತ್ತ ಕಾರ್ಯದರ್ಶಿ ಜಿ. ಸಿ. ತಲ್ಲೂರ ನುಡಿದರು.

ಅವರು ಕ.ವಿ.ವ. ಸಂಘದ ಡಾ. ಪಾಪು ಸಭಾಭವನದಲ್ಲಿ ಡಾ. ಎಚ್. ಎಫ್. ಕಟ್ಟಿಮನಿ ಪ್ರೌಢ ಶಿಕ್ಷಣ ಪ್ರತಿಷ್ಠಾನ ಹಾಗೂ ಕರ್ನಾಟಕ ವಿದ್ಯಾವರ್ಧಕ ಸಂಘದ ಸಂಯುಕ್ತಾಶ್ರಯದಲ್ಲಿ ಧಾರವಾಡ ಶಹರದ ಪ್ರೌಢಶಾಲಾ ೯ನೇ ವರ್ಗದ ವಿದ್ಯಾರ್ಥಿಗಳಿಗಾಗಿ ಎಚ್. ಎಫ್. ಕಟ್ಟಿಮನಿ ಜನ್ಮದಿನದ ಅಂಗವಾಗಿ ಆಯೋಜಿಸಲ್ಪಟ್ಟ 'ಪುಸ್ತಕ ಪಂಚಮಿ' ದುಂಡು ಬರಹ ಸ್ಪರ್ಧೆ ವಿಜೇತ ಮಕ್ಕಳಿಗೆ ಬಹುಮಾನ ವಿತರಿಸಿ, ಕಾರ್ಯಕ್ರಮ ಉದ್ಘಾಟಿಸಿ ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡುತ್ತಾ ಬ್ರಿಟಿಷರ್ ಕಾಲಕ್ಕೆ ಬ್ರಿಟೀಷರು ಕೆಲಸಕ್ಕೆ ತೆಗೆದುಕೊಳ್ಳುವಾಗ ಸುಂದರ ಬರಹ ಇದ್ದವರಿಗೆ ಆಧ್ಯತೆ ನೀಡುತ್ತಿದ್ದರು. ಒಂದು ಬಿಳಿಹಾಳಿಯಲ್ಲಿ ಬರೆದಾಗ ನೋಡುಗರು ಬಿಳಿಹಾಳಿಯನ್ನು ಯಾಕೆ ಹೊಲಸು ಮಾಡಿದರು ಎನ್ನುವಂತೆ ಆಗದೇ ಆ ಬಿಳಿ ಹಾಳೆ ಬರವಣಿಗೆಯಿಂದ ಎಷ್ಟೊಂದು ಸುಂದರವಾಗಿ ಕಾಣುತ್ತದೆ ಎನ್ನುವಂತಾಗಬೇಕು. ಭಾಷೆ ಬಹಳ ದೊಡ್ಡ ವಸ್ತು ಇದನ್ನು ಮಕ್ಕಳು ಈಗಲೇ ತಿಳಿದುಕೊಳ್ಳಬೇಕು, ಭಾಷೆಗೆ ನಾಲ್ಕು ಆಯಾಮಗಳಿವೆ. ಮೊದಲನೇ ಆಯಾಮ ಓದುವುದು. ಎರಡನೇ ಆಯಾಮ ಬರೆಯುವುದು. ಮೂರನೆಯದು ಮಾತನಾಡುವುದು. ಕೊನೆಯದು ಬಹು ಮುಖ್ಯವಾದದ್ದು ಮಾತನಾಡಿದ್ದು ತಿಳಿಯುವಂತಿರಬೇಕು. ಒಂದು ಭಾಷೆ ನನಗೆ ಬರುತ್ತದೆ ಎಂದರೆ ಭಾಷಾ ವಿಜ್ಞಾನಿ ಪ್ರಕಾರ ಈ ನಾಲ್ಕು ಆಯಾಮಗಳು ಇದ್ದಾಗಲೇ ಒಂದು ಭಾಷೆಯಲ್ಲಿ ಪರಿಪೂರ್ಣತೆ ಹೊಂದಲು ಸಾಧ್ಯವಾಗುತ್ತದೆ. ಅದಕ್ಕಾಗಿ ಮಕ್ಕಳು ಒಂದು ಭಾಷೆಯನ್ನು ಕಲಿಯುವಾಗ ಕೇಳುತ್ತಾ ಬರೆಯುವುದನ್ನು ರೂಢಿಸಿಕೊಳ್ಳಬೇಕು. ಭಾಷೆ ಬಗ್ಗೆ ಅಪಾರ ಗೌರವ ಬೆಳೆಸಿಕೊಳ್ಳಬೇಕು. ಮುಂದೆ ಆ ಭಾಷೆ ನಿಮಗೆ ಗೌರವ ತಂದುಕೊಡುತ್ತದೆ ಎಂದರು.

ಕ.ವಿ.ವ. ಸಂಘದ ಪ್ರಧಾನ ಕಾರ್ಯದರ್ಶಿ ಶಂಕರ ಹಲಗತ್ತಿ ಮಾತನಾಡಿ, ದುಂಡಾಗಿ ತಪ್ಪಿಲ್ಲದಂತೆ ಬರೆಯುವುದೂ  ಒಂದು ಕಲೆ. ಬರವಣಿಗೆ ಬಗ್ಗೆ ವಿದ್ಯಾರ್ಥಿಗಳಿಗೆ ಆತ್ಮವಿಶ್ವಾಸ, ಶ್ರದ್ಧೆ ಮುಖ್ಯ. ಬರೆಯುವವನ ಮನಸ್ಥಿತಿಯನ್ನು ನಾವು ಬರವಣಿಗೆಯಿಂದಲೇ ಕಾಣಬಹುದು ಎಂದು ಹೇಳಿದರು.

ಕ.ವಿ.ವ. ಸಂಘದ ಅಧ್ಯಕ್ಷರಾದ ಚಂದ್ರಕಾಂತ ಬೆಲ್ಲದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಕ.ವಿ.ವ.ಸಂಘದ ಶಿಕ್ಷಣ ಮಂಟಪದ ಸಂಚಾಲಕ ವೀರಣ್ಣ ಒಡ್ಡೀನ ಸ್ವಾಗತಿಸಿದರು. ಸಹಾಯಕ ನಿರ್ದೇಶಕರಾದ ವ್ಹಿ.ಎನ್. ಕೀರ್ತಿವತಿ ಪ್ರಾಸ್ತಾವಿಸಿ, ನಿರೂಪಿಸಿದರು. ಜಯಶ್ರೀ ವಂದಿಸಿದರು. ಎಚ್. ಎಫ್. ಸಮುದ್ರಿ, ಆಲಕನೂರ್ ಕಟ್ಟಿಮನಿ, ನಾಗಯ್ಯ ಹಿರೇಮಠ ಸೇರಿದಂತೆ ಅನೇಕರು ಭಾಗವಹಿಸಿದ್ದರು.

ದುಂಡು ಬರಹ ಸ್ಪರ್ಧೆಯಲ್ಲಿ ವಿಜೇತ ವಿದ್ಯಾರ್ಥಿಗಳಿಗೆ ನಗದು ಹಾಗೂ ಪ್ರಶಸ್ತಿ ಪತ್ರ ನೀಡಿ ಗೌರವಿಸಲಾಯಿತು.

## ೧೪. ಗ್ರಂಥ ಲೋಕಾರ್ಪಣೆ

ಅನುವಾದ ಮಾಡುವ ಪ್ರಕ್ರಿಯೆ ಅಷ್ಟೊಂದು ಸುಲಭ ಹಾಗೂ ಸರಳವಾದದ್ದಲ್ಲ. ಮೂಲ ಲೇಖಕರ ಭಾವನೆಗಳಿಗೆ ಚ್ಯುತಿ ಬರದಂತೆ ಅನುವಾದಿಸುವುದು ಬಹಳ ಮುಖ್ಯವಾಗಿರುತ್ತದೆ ಎಂದು ಬೆಂಗಳೂರಿನ ಕರ್ನಾಟಕ ಉಚ್ಛನ್ಯಾಯಾಲಯ ಗೌರವಾನ್ವಿತ ವಿಶ್ರಾಂತ ನ್ಯಾಯಮೂರ್ತಿ ಪಿ.ಜಿ.ಎಂ. ಪಾಟೀಲ ಹೇಳಿದರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು ದಿನಾಂಕ: ೫–೧೨–೨೦೨೩ ರಂದು ಆಯೋಜಿಸಿದ್ದ ಡಾ. ಜೆ.ಪಿ. ದೊಡಮನಿ ಅವರ ಅನುವಾದ ಗ್ರಂಥ (ಮರಾಠಿ–ಶ್ರೀಧನಂಜಯ ಕೀರ) **ಡಾ. ಬಾಬಾಸಾಹೇಬ ಅಂಬೇಡ್ಕರ ಜೀವನ ಚರಿತ್ರೆ ಗ್ರಂಥ ಲೋಕಾರ್ಪಣೆ** ಸಮಾರಂಭದಲ್ಲಿ ಗ್ರಂಥ ಬಿಡುಗಡೆಗೊಳಿಸಿ ಮಾತನಾಡುತ್ತಿದ್ದರು.

ಮೂಲ ಲೇಖಕರ ಶ್ರಮಕ್ಕಿಂತ ಅನುವಾದಕರ ಶ್ರಮ ಅಧಿಕವಾಗಿರುತ್ತದೆ. ಜನಸಾಮಾನ್ಯರಿಗೆ ಅರ್ಥವಾಗುವ ರೀತಿಯಲ್ಲಿ ಓದುಗರ ಮನವನ್ನು ಗೆಲ್ಲುವಲ್ಲಿ ಬರವಣಿಗೆ ಇರಬೇಕಾದದ್ದು ಅಗತ್ಯವಾಗಿದೆ. ಎಲ್ಲ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲೂ ಅನುವಾದಕ್ಕೆ ಸಂಬಂಧಪಟ್ಟ ಪ್ರಶ್ನೆಗಳು ಇದ್ದೇ ಇರುತ್ತವೆ. ಇದಕ್ಕೆ ನ್ಯಾಯಾಂಗವೂ ಹೊರತಾಗಿಲ್ಲ ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು.

ಕೃತಿ ಕುರಿತು ಧಾರವಾಡದ ಜೆ.ಎಸ್.ಎಸ್ ಪದವಿ ಕಾಲೇಜಿನ ರಾಜ್ಯಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕ ಬಸಲಿಂಗಪ್ಪ ಅರವಳದ ಮಾತನಾಡಿ, ಡಾ. ಬಿ.ಆರ್. ಅಂಬೇಡ್ಕರ ಒಬ್ಬ ಮಹಾಪುರುಷ. ಅವರ ಜೀವನ ಹಾಗೂ ನಡೆದು ಬಂದ ದಾರಿ, ಕುರಿತು ಹೇಳುವ ಸಂದರ್ಭದಲ್ಲಿ ಯುಗಯುಗಗಳ ಅಪಾರವಾದ ದುಃಖ, ಒಡಲೊಳಗಿನ ನೋವು, ಅಮಾನುಷ ಹಿಂಸೆ, ಮೊದಲಾದ ಅನೇಕ ಸಮಸ್ಯೆಗಳನ್ನು ಈ ಕೃತಿಯಲ್ಲಿ ಕಟ್ಟಿಕೊಡಲಾಗಿದೆ. ಜೊತೆಗೆ ದಲಿತ ಭಾರತ, ಬಹಿಷ್ಕೃತ ಭಾರತದ ಸಮಸ್ಯೆಗಳ ದರ್ಶನವಾಗುತ್ತದೆ. ಆ ಸಮುದಾಯದ ವಸ್ತುನಿಷ್ಠ ಸ್ಥಿತಿಗತಿಗಳನ್ನು ಕಟ್ಟಿಕೊಟ್ಟಿದ್ದಾರೆ. ಕೃತಿಯ ಉದ್ದಕ್ಕೂ ಅನುವಾದದಲ್ಲಿ ಯಾವುದೇ ದೋಷಗಳಿಲ್ಲದ್ದು ಗಮನಾರ್ಹ. ಏಕೆಂದರೆ ಕೆಲ ದೋಷಪೂರಿತ ಅನುವಾದಗಳು ಸಮಾಜ ಕಂಟಕವಾಗಿರುವುದನ್ನು ಕಾಣುತ್ತೇವೆ. ಧ್ವನಿ ಇಲ್ಲದವರಿಗೆ ಧ್ವನಿಯನ್ನು ನೀಡಿದ ಅಂಬೇಡ್ಕರ ಅವರ ಹೋರಾಟದ ಬದುಕನ್ನು ಕಟ್ಟಿಕೊಡುವಲ್ಲಿ ಈ ಅನುವಾದ ಕೃತಿ ಸಮರ್ಥವಾಗಿದೆ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿ ಕ.ವಿ.ವ. ಸಂಘದ ಅಧ್ಯಕ್ಷ ಚಂದ್ರಕಾಂತ ಬೆಲ್ಲದ ಮಾತನಾಡಿ, ಡಾ. ಜೆ.ಪಿ. ದೊಡಮನಿಯವರ ಶ್ರಮ ಹಾಗೂ ಈ ಕೃತಿಯ ಕುರಿತು ಮಾತನಾಡಿದ ಬಸಲಿಂಗಪ್ಪ ಅವರ ಶ್ರಮವನ್ನು ನೆನಪಿಸಿಕೊಂಡು, ಕೃತಿಯ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿದರು.

ಡಾ. ಜಿನದತ್ತ ಹಡಗಲಿ ನಿರೂಪಿಸಿದರು. ಶಂಕರ ಕುಂಬಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಡಾ. ಮಹೇಶ ಹೊರಕೇರಿ ಸ್ವಾಗತಿಸಿ, ವಂದಿಸಿದರು.

## ೧೫. ಚಿತ್ರಕಲಾ ಪ್ರದರ್ಶನ ಮತ್ತು ಬಹುಮಾನ ವಿತರಣೆ ಸಮಾರಂಭ

ಚಿತ್ರಕಲಾವಿದ ಯಾವಾಗಲೂ ವಿಶಾಲ ಗುಣವನ್ನು ಹೊಂದಿರುತ್ತಾನೆ, ಅವನ ಆಲೋಚನೆಗಳು ಸಮಾಜಮುಖಿಯಾಗಿರುತ್ತವೆ ಎಂದು ಹುಬ್ಬಳ್ಳಿಯ ಹಿರಿಯ ಕಲಾವಿದ ಆರ್. ಬಿ. ಗರಗ ನುಡಿದರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು, ಕರ್ನಾಟಕ–೫೦ ಸಂಭ್ರಮದ ಅಂಗವಾಗಿ, ಸರಕಾರಿ ಚಿತ್ರಕಲಾ ಮಹಾವಿದ್ಯಾಲಯದ ಆರ್ಟ್ ಗ್ಯಾಲರಿಯಲ್ಲಿ ದಿನಾಂಕ: ೨೧–೧೨–೨೦೨೩ ರಂದು ಆಯೋಜಿಸಿದ್ದ ಬೆಳಗಾವಿ, ಗದಗ, ಹುಬ್ಬಳ್ಳಿ, ಧಾರವಾಡ ಚಿತ್ರಕಲಾ ವಿದ್ಯಾರ್ಥಿಗಳ ಚಿತ್ರಕಲಾ ಪ್ರದರ್ಶನ ಮತ್ತು ಬಹುಮಾನಕ್ಕೆ ಆಯ್ಕೆಯಾದ ಚಿತ್ರಕಲೆಗಳ ಕಲಾವಿದರಿಗೆ ಬಹುಮಾನ ವಿತರಣಾ ಸಮಾರಂಭದ ಉದ್ಘಾಟನೆ ಮಾಡಿ ಮಾತನಾಡುತ್ತಿದ್ದರು.

ವಿದ್ಯಾರ್ಥಿಗಳಾದವರು ಮನುಷ್ಯನ ದೇಹದ ಬಗ್ಗೆ ಸ್ಪಷ್ಟ ಪರಿಕಲ್ಪನೆ ಹೊಂದಿರಬೇಕು. ಅಂದಾಗ ಮಾತ್ರ ಶ್ರೇಷ್ಠ ಚಿತ್ರಕಲೆಯನ್ನು ರೂಪಿಸಲು ಸಾಧ್ಯವಾಗುವುದು. ಹಾಗೆಯೇ ನಿಸರ್ಗವನ್ನು ಮತ್ತು ಸುತ್ತಮುತ್ತಲಿನ ದೃಶ್ಯವನ್ನು ಒಳಗಣ್ಣಿನಿಂದ ನೋಡುವಂತಾದಾಗ ಮಾತ್ರ ನೈಜ ಬಣ್ಣವನ್ನು ಕಂಡುಕೊಳ್ಳಲು ಸಾಧ್ಯ ಎಂದರು.

ಅತಿಥಿಯಾಗಿ ಭಾಗವಹಿಸಿದ ಧಾರವಾಡದ ಹಿರಿಯ ಕಲಾವಿದ ಎಫ್.ವಿ. ಚಿಕ್ಕಮಠ ಮಾತಾಡುತ್ತಾ, ಕಲಾ ವಿದ್ಯಾರ್ಥಿಗಳು ಸೃಜನಶೀಲವಾಗಿರಬೇಕು. ಚಿತ್ರಕಲೆಯ ಕಲಿಸುವ ಗುರುಗಳಲ್ಲಿಯ ಜ್ಞಾನವನ್ನು ಹಟಕ್ಕೆ ಬಿದ್ದು ಪಡೆದುಕೊಳ್ಳುವಂತಾಗಬೇಕು. ಇಂದು ಚಿತ್ರಕಲಿಕೆಯಲ್ಲಿ ಪ್ರಾಕ್ಟಿಕಲ್ ಹೆಚ್ಚು ಇರದೇ ಪಠ್ಯಕ್ಕೆ ಒತ್ತು ಕೊಡುತ್ತಿದ್ದಾರೆ. ಪ್ರಯೋಗಶೀಲತೆ ಇದ್ದಾಗ ಮಾತ್ರ ಒಬ್ಬ ಕಲಾವಿದ ಶ್ರೇಷ್ಠ ಕಲಾಕೃತಿ ನೀಡಲು ಸಾಧ್ಯವಾಗುವುದು ಎಂದರು.

ಅಧ್ಯಕ್ಷತೆ ವಹಿಸಿಕೊಂಡು ಮಾತನಾಡಿದ ಕ.ವಿ.ವ. ಸಂಘದ ಪ್ರಧಾನ ಕಾರ್ಯದರ್ಶಿ ಶಂಕರ ಹಲಗತ್ತಿ, ಕಲಾವಿದ ಯಾವಾಗಲೂ ಸಮಾಜಮುಖಿಯಾಗಿ ಯೋಚಿಸುತ್ತಿರುತ್ತಾನೆ. ಸಮಾಜದ ಸ್ವಾಸ್ಥ್ಯಕ್ಕಾಗಿ ಸದ್ದಿಲ್ಲದೇ ಸದಾ ಕಲೆಯ ಮೂಲಕ ಕಾರ್ಯಮಾಡುತ್ತಿರುತ್ತಾನೆ. ಲಲಿತ ಕಲೆಗಳಲ್ಲಿ ನೃತ್ಯ ಮತ್ತು ಸಂಗೀತಗಾರರು ತಮ್ಮ ಗುರುವಿಗೆ ನೀಡುವ ಗೌರವ ಮತ್ತು ತೋರುವ ಭಕ್ತಿ ಚಿತ್ರಕಲೆಯ ಕಲಾವಿದರಲ್ಲಿ ಕಾಣುವುದಿಲ್ಲ. ತಮಗೆ ವಿದ್ಯೆಯನ್ನು ಧಾರೆ ಎರೆದ ಗುರುಗಳನ್ನು ಸ್ಮರಿಸಿಕೊಳ್ಳುವುದೆಂದರೆ ಆ ಕ್ಷಣ ಸ್ಫೂರ್ತಿ ಪಡೆದುಕೊಳ್ಳುವುದು ಎಂದರ್ಥ. ಹಿಂದೆ ಚಿತ್ರಕಲೆಗೆ ಅಷ್ಟೊಂದು ಬೇಡಿಕೆಯಾಗಲಿ, ಮಾರುಕಟ್ಟೆಯಾಗಲಿ ಇದ್ದಿಲ್ಲ. ಆದರೆ ಇಂದು ಜಗತ್ತಿನ ಯಾವ ದೇಶದ ಚಿತ್ರಕಲಾಕಾರರೊಂದಿಗೂ ಸಂವಹನ ಮಾಡುವ ಮತ್ತು ಕೊಡುಕೊಳ್ಳುವಂತೆ ಜಾಗತೀಕ ಮಾರುಕಟ್ಟೆಯ ಅವಕಾಶ ತೆರೆದುಕೊಂಡಿವೆ. ಚಿತ್ರಕಲೆ ಪ್ರದರ್ಶನಕ್ಕೆ ಸರಿಯಾದ ವ್ಯವಸ್ಥೆ ಅಂದು ಇದ್ದಿಲ್ಲ, ಇಂದು ಕಲಿಯುವಾಗಲೇ ವಿದ್ಯಾರ್ಥಿಗೆ ತಮ್ಮ ಕಲೆಯ ಪ್ರದರ್ಶನಕ್ಕೆ ಅವಕಾಶಗಳು ಹೇರಳವಾಗಿ ಸಿಗುತ್ತಿವೆ. ಈ ಸದಾವಕಾಶವನ್ನು ವಿದ್ಯಾರ್ಥಿಗಳು ಉಪಯೋಗ ಮಾಡಿಕೊಂಡು ಶ್ರೇಷ್ಠ ಕಲಾವಿದರಾಗಿ ರೂಪಗೊಳ್ಳುವಂತಾಗಲಿ ಎಂದ ಹಲಗತ್ತಿ ಇಷ್ಟರಲ್ಲಿಯೇ ಸಂಘವು ಕಲಾ ಪ್ರದರ್ಶನಕ್ಕೆ ಸುಸಜ್ಜಿತ ಆರ್ಟ ಗ್ಯಾಲರಿ ನಿರ್ಮಿಸಲಾಗುವುದು ಎಂದರು.

ಬಹುಮಾನ ಪಡೆದ ಗದಗದ ವಿಜಯ ಲಲಿತಕಲಾ ಮಹಾವಿದ್ಯಾಲಯದ ವಿದ್ಯಾರ್ಥಿ ವೀರೇಶ ವಡ್ಡಟ್ಟಿಮಠದ ಹಾಗೂ ರಂಗನಾಥ ಅಮರದ ಹುಬ್ಬಳ್ಳಿಯ ವಿಜಯ ಮಹಾಂತೇಶ ಲಲಿತಕಲಾ ಮಹಾವಿದ್ಯಾಲಯದ ವಿಶ್ವರಾಧ್ಯ ಎಂ. ಹೊಸಹಟ್ಟಿಮಠ, ಧಾರವಾಡದ ಸರಕಾರಿ ಚಿತ್ರಕಲಾ ಮಹಾವಿದ್ಯಾಲಯದ ಅಭಿಷೇಕ ಪಾಟೀಲ, ಲೋಹಿತ ಹಿರೇಮಠ ಇವರಿಗೆ ಬಹುಮಾನ, ಫಲಕ, ಪ್ರಶಸ್ತಿ ಪತ್ರನೀಡಿ ಗೌರವಿಸಲಾಯಿತು.

ಬಿ. ಮಾರುತಿ ಸ್ವಾಗತಿಸಿದರು, ಡಾ. ಬಸವರಾಜ ಕುರಿಯವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಎಸ್. ಕೆ. ಪತ್ತಾರ ಕಾರ್ಯಕ್ರಮ ನಿರೂಪಿಸಿ. ವಂದಿಸಿದರು.

## ೧೬. ಗ್ರಂಥ ಬಿಡುಗಡೆ ಸಮಾರಂಭ

ಭಾರತ ಸ್ವಾತಂತ್ರ್ಯದ ಮೊದಲ ಹೋರಾಟಗಾರ್ತಿ ಕಿತ್ತೂರು ರಾಣಿ ಚನ್ನಮ್ಮಳ ಬದುಕನ್ನು ಕುರಿತು ಬರೆದ ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಕನ್ನಡ ಹೋರಾಟಕ್ಕೆ ಬುನಾದಿಯನ್ನು ಹಾಕಿದ ಕನ್ನಡದ ಗುಡಿ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ಲೋಕಾರ್ಪಣೆ ಮಾಡುವುದು ನನಗೆ ಸಿಕ್ಕ ಬಹುದೊಡ್ಡ ಸಂತೋಷದ

ಕ್ಷಣವಾಗಿದೆ. ಕರ್ನಾಟಕದ ಏಕೀಕರಣಕ್ಕಾಗಿ ಹೋರಾಡಿದ ಕನ್ನಡ ಸಾಹಿತ್ಯ ಪರಿಷತ್ತು ಸ್ಥಾಪನೆಗೊಳ್ಳುವುದಕ್ಕೆ ಬುನಾದಿಯಾಗಿರುವ ಕರ್ನಾಟಕ ವಿದ್ಯಾವರ್ಧಕ ಸಂಘ ಕನ್ನಡ ನಾಡು ನುಡಿಯನ್ನು ಕಟ್ಟುವಲ್ಲಿ ನಿರಂತರವಾಗಿ ಶ್ರಮಿಸುತ್ತಾ ಬಂದಿದೆ ಎಂದು ಬೆಂಗಳೂರಿನ ಹಿರಿಯ ಸಂಸ್ಕೃತಿ ಚಿಂತಕ ರಾ. ನಂ. ಚಂದ್ರಶೇಖರ ಹೇಳಿದರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು ದಿನಾಂಕ : ೩೧-೧೨-೨೦೨೩ ರಂದು ಆಯೋಜಿಸಿದ್ದ ಡಾ. ಸಂತೋಷ ಹಾನಗಲ್ಲ ಅವರ **'ವೀರ ಸೌದಾಮಿನಿ' ಚಿತ್ರಸಂಪುಟ ಕಿತ್ತೂರು ರಾಣಿ ಚನ್ನಮ್ಮ ಪುಸ್ತಕ ಲೋಕಾರ್ಪಣೆ** ಸಮಾರಂಭದಲ್ಲಿ ಪುಸ್ತಕ ಲೋಕಾರ್ಪಣೆ ಮಾಡಿ ಮಾತನಾಡುತ್ತಿದ್ದರು.

ಪುಸ್ತಕದ ಪ್ರಕಟಣೆ ತುಂಬಾ ಕಷ್ಟದಾಯಕವಾಗಿರುವ ಈ ಕಾಲದಲ್ಲಿ ಕನ್ನಡದ ರಾಣಿಯನ್ನು ನಾಡಿಗೆ ಪರಿಚಯಿಸಿದ ಕೀರ್ತಿ ಈ ಕೃತಿಯನ್ನು ಪ್ರಕಟಿಸಿದ ಕಿತ್ತೂರಿನ ಕಲ್ಮಠದ ಪೂಜ್ಯರಿಗೆ ಸಲ್ಲುತ್ತದೆ. ಈ ನಾಡಿನ ಬೆಳವಡಿ ಮಲ್ಲಮ್ಮ ಮಹಿಳಾ ಸೈನಿಕರನ್ನು ಕಟ್ಟಿಕೊಟ್ಟ ಪ್ರಥಮ ಮಹಿಳೆಯಾಗಿದ್ದಾಳೆ. ಕೆಳದಿ ಚನ್ನಮ್ಮ, ಬೆಳವಡಿ ಮಲ್ಲಮ್ಮ, ಕಿತ್ತೂರು ಚನ್ನಮ್ಮ ಇವತ್ತಿನ ಪ್ರಚಾರದ ಯುಗದಲ್ಲಿ ಹಿಂದುಳಿದಿರುವುದು ಖೇದದ ಸಂಗತಿಯಾಗಿದೆ. ಸಂಗೊಳ್ಳಿ ರಾಯಣ್ಣನಿಗೆ ಸ್ಫೂರ್ತಿ ನೀಡಿದ ರಾಣಿ ಚನ್ನಮ್ಮಳ ಕಾರ್ಯತತ್ಪರತೆ ಅಪಾರವಾದದ್ದು ಎಂದು ಹೇಳಿದರು.

ಕೃತಿ ಕುರಿತು ಮಾತನಾಡಿದ ದಾಂಡೇಲಿಯ ಸರಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯದ ಇತಿಹಾಸ ಪ್ರಾಧ್ಯಾಪಕ ಡಾ. ಬಸವರಾಜ ಅಕ್ಕಿ, ಹಲಗಲಿಯ ಬೇಡರಂಥ ಬುಡಕಟ್ಟು ಜನಾಂಗದವರು ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಮುಖ ಸ್ಥಾನವನ್ನು ವಹಿಸಿದವರು. ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟದಲ್ಲಿ ಅತ್ಯುತ್ತಮ ಹೋರಾಟ ಮಾಡಿದ ಶ್ರೇಯಸ್ಸು ಬುಡಕಟ್ಟು ಜನಾಂಗಕ್ಕೆ ಸಲ್ಲುತ್ತದೆ. ಚನ್ನಮ್ಮಳನ್ನು ಕುರಿತು ಈ ಕೃತಿ ದ್ವಿಭಾಷೆಯಲ್ಲಿ (ಕನ್ನಡ ಮತ್ತು ಇಂಗ್ಲೀಷ) ರಚಿತಗೊಂಡಿದ್ದು, ಕಿತ್ತೂರ ಕೋಟೆಯ ಕಲಾಶೈಲಿ, ವಸ್ತುಸಂಗ್ರಹಾಲಯ, ನೀಲನಕ್ಷೆ, ಆಯುಧಗಳ ಉಗ್ರಾಣ, ಇವುಗಳ ಮಾಹಿತಿಯನ್ನು ಈ ಕೃತಿ ಒಳಗೊಂಡಿದ್ದು, ಕಿತ್ತೂರಿನ ಇತಿಹಾಸ ಮೋಡಿ ಲಿಪಿಯಲ್ಲಿ ಇರುವುದರಿಂದ ಅದನ್ನು ಅಧ್ಯಯನ ಮಾಡಿ ಕಿತ್ತೂರಿನ ಇತಿಹಾಸ ತಿಳಿಯುವುದು ಅವಶ್ಯವಾಗಿದೆ. ಲಂಡನ್‌ನಲ್ಲಿಯೂ ಕೂಡಾ ಕಿತ್ತೂರಿನ ಇತಿಹಾಸಕ್ಕೆ ಸಂಬಂಧಿಸಿದ ಅನೇಕ ದಾಖಲೆಗಳು ಸಿಗುತ್ತವೆ. ಆಸಕ್ತ ಸಂಶೋಧಕರು ಸತ್ಯವಾದ ಸಂಶೋಧನೆಯನ್ನು ಸಿಕ್ಕ ಆಧಾರದ ಹಿನ್ನೆಲೆಯಲ್ಲಿ ಬೆಳಕಿಗೆ ತರುವುದು ಇವತ್ತಿನ ಅಗತ್ಯವಾಗಿದೆ. ಪ್ರಸ್ತುತ ಕೃತಿ ಆಕರ್ಷಕ ಭಾವಚಿತ್ರಗಳ ಬಳಕೆಯಿಂದ ಆಧಾರ ಸಹಿತವಾಗಿ ಕೃತಿ ರಚಿತಗೊಂಡಿರುವುದರಿಂದ ಈ ಕೃತಿ ತನ್ನ ಮೌಲ್ಯವನ್ನು ಹೆಚ್ಚಿಸಿಕೊಂಡಿದೆ ಎಂದರು.

ಸಾನ್ನಿಧ್ಯ ವಹಿಸಿ ಮಾತನಾಡಿದ ಚನ್ನಮ್ಮನ ಕಿತ್ತೂರಿನ ರಾಜಗುರು ಸಂಸ್ಥಾನ ಕಲ್ಮಠದ ಶ್ರೀ ಮಡಿವಾಳ ರಾಜಯೋಗೀಂದ್ರ ಸ್ವಾಮಿಗಳು ಮಾತನಾಡಿ, ಮಗುವನ್ನು ಹೆತ್ತ ಕೂಡಲೇ ಯಾವ ರೀತಿಯ ಆನಂದವಾಗುತ್ತದೆಯೋ ಅದೇ ರೀತಿಯ ಸಂತೋಷ ಈ ಕೃತಿ ಪ್ರಕಟಗೊಂಡು ಬಿಡುಗಡೆಯಾಗುತ್ತಿರುವ ಈ ಸಂದರ್ಭದಲ್ಲಿ ಪ್ರಕಾಶಕರಾದ ನಮಗೂ ಸಂಶೋಧಕರಾದ ಡಾ. ಸಂತೋಷ ಹಾನಗಲ್ಲ ಅವರಿಗೂ ಆಗಿದೆ. ಇದೊಂದು ಆಕರಗ್ರಂಥವಾಗಿ ಬರಬೇಕೆಂದು ನಮ್ಮ ಆಶಯವಾಗಿತ್ತು. ಆ ನಿಟ್ಟಿನಲ್ಲಿ ಕೃತಿ ಹೊರಬಂದಿದೆ. ಇತ್ತಿಚೆಗೆ ಸಂಶೋಧಕರ ಕೊರತೆ ಇರುವುದನ್ನು ಕಾಣುತ್ತೇವೆ. ರಾಣಿಚೆನ್ನಮ್ಮ ಕಟ್ಟಿದ ಅರಮನೆ ಹಾಳಾಗಿರಬಹುದು. ಆದರೆ ಗುರು ಮನೆ ಜೀವಂತವಾಗಿ ಉಳಿದಿದೆ. ಈ ಗುರುಮನೆಯು ಚನ್ನಮ್ಮಳ ಇತಿಹಾಸ ಜೀವಂತವಾಗಿ ಉಳಿಸುವಲ್ಲಿ ಶ್ರಮಿಸುತ್ತಿದೆ ಎಂದರು.

ಚಿತ್ರಸಂಪುಟ ಲೇಖಕ ಡಾ. ಸಂತೋಷ ಹಾನಗಲ್ಲ ಸಂಶೋಧನಾ ಸಂದರ್ಭದಲ್ಲಿ ಸವೆಸಿದ ಕಠಿಣ ದಾರಿಯನ್ನು ನೆನಪಿಸಿಕೊಂಡರು. ಧಾರವಾಡ ಮಹಾಂತ ವಿದ್ಯಾಲಯದ ಸಹಾಯಕ ಪ್ರಾಧ್ಯಾಪಕಿ ಡಾ.ಸುಜಾತ ಕೊಂಬಳಿ ಮುಖ್ಯಅತಿಥಿಯಾಗಿ ಹಾಗೂ ಕ.ವಿ.ವ. ಸಂಘದ ಅಧ್ಯಕ್ಷ ಚಂದ್ರಕಾಂತ ಬೆಲ್ಲದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಡಾ. ಧನವಂತ ಹಾಜವಗೋಳ ಸ್ವಾಗತಿಸಿದರು, ಶಂಕರ ಹಲಗತ್ತಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಡಾ. ಜಿನದತ್ತ ಹಡಗಲಿ ನಿರೂಪಿಸಿದರು. ಗುರು ಹಿರೇಮಠ ವಂದಿಸಿದರು.

## ೧೭. ಡಾ. ಡಿ. ಎ. ಬಾಗಲಕೋಟ ಅವರ ಸಮಗ್ರ ಸಾಹಿತ್ಯ ಅವಲೋಕನ

ಕಾವ್ಯದ ಓದುಗನನ್ನು ಸಹೃದಯ ಎಂದು ಕರೆದಿದ್ದಾರೆ. ಇದನ್ನು ಇಂಗ್ಲೀಷನಲ್ಲಿ ಕರೆಯಲು ಸಾಧ್ಯವಿಲ್ಲ. ಆದಿಕವಿ ಪಂಪನಿಂದ ಹಿಡಿದು ಸಹಸ್ರಮಾನದ ಸಾಹಿತ್ಯವಿದೆ. ೨೧ನೇ ಶತಮಾನದಲ್ಲೂ ವಚನ ಸಾಹಿತ್ಯದ ಪ್ರವೇಶಿಕೆ ಮುಖ್ಯವಾಗಿದೆ ಎಂದು ಹೊಸಕೋಟೆಯ ಖ್ಯಾತ ವಿಮರ್ಶಕ, ಸಾಹಿತಿ ಡಾ. ಚಂದ್ರಶೇಖರ ನಂಗಲಿ ಹೇಳಿದರು.

ಕರ್ನಾಟಕ ವಿದ್ಯಾವರ್ಧಕ ಸಂಘವು ನಾಡೋಜ ಡಾ. ಪಾಟೀಲ ಪುಟ್ಟಪ್ಪ ಸಭಾಭವನದಲ್ಲಿ ದಿನಾಂಕ : ೭–೧–೨೦೨೪ ರಂದು ಆಯೋಜಿಸಿದ್ದ ಡಾ॥ ಡಿ. ಎ. ಬಾಗಲಕೋಟ, ಬನಹಟ್ಟಿ (ಬಾಗಲಕೋಟ ಜಿಲ್ಲೆ) ಅವರ ಸಮಗ್ರ ಸಾಹಿತ್ಯ ಅವಲೋಕನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ಅವರು, ಕವಿ ಮತ್ತು ಸಹೃದಯ ಇಬ್ಬರೂ ಮುಖ್ಯ. ಒಂದಕ್ಷರವೂ ಬರೆಯದೆ ಸಹೃದಯ ಆಗೋದು ಬಹಳ ದೊಡ್ಡದು. ಓರ್ವ ಸಹೃದಯ ಆಗಲು ಜೀವಮಾನವಿಡೀ ಪ್ರಯತ್ನಿಸಬೇಕಾಗುತ್ತದೆ. ಡಾ. ಬಾಗಲಕೋಟರ ಪ್ರಭುಲಿಂಗಲೀಲೆ ಒಂದು ದಾರ್ಶನಿಕ ಅಧ್ಯಯನವಾಗಿದೆ. ಅವರ ಈ ಗ್ರಂಥದ ಮೊದಲ ಅಧ್ಯಾಯ ಅದ್ಭುತವಾದದ್ದು.. ಒಂದು ರೀತಿಯ ಸರ್ವವ್ಯಾಪಿ ಆದ ವಿಷಯ ಪ್ರವೇಶ ಅದು. ಕಾವ್ಯಾಂತರ್ಗತ ತತ್ವದ ಅನ್ವೇಷಣೆ ಇಲ್ಲಿ ನಡೆದಿದೆ. ಸಾಹಿತ್ಯದ ವಿದ್ಯಾರ್ಥಿಗಳಿಂದ ಕೂಡ ನಿರೀಕ್ಷಿಸದ ಆಳವಾದ ಅಧ್ಯಯನವನ್ನು ಬಾಗಲಕೋಟರಲ್ಲಿ ಕಾಣಬಹುದಾಗಿದೆ ಎಂದು ಸಾಹಿತಿ ಚಂದ್ರಶೇಖರ ನಂಗಲಿ ಅಭಿಪ್ರಾಯಪಟ್ಟರು.

ಚನ್ನಪ್ಪ ಅಂಗಡಿ ಅಭಿನಂದನಾ ನುಡಿಗಳನ್ನಾಡುತ್ತಾ, ಅತ್ತಲಿತ್ತ ಹೋಗದಂತೆ ಹೆಳವನ ಮಾಡಯ್ಯ ತಂದೆ ಅನ್ನೊ ಬಸವಣ್ಣನವರ ವಚನದ ರೀತಿಯಲ್ಲಿ ಬದುಕುವುದು ಬಹಳ ಕಷ್ಟ. ಆದರೆ ಹಾಗೆ ಬದುಕುತ್ತಿರುವವರು ಬಾಗಲಕೋಟರು. ಬಾಗಲಕೋಟರು ನೂಲಿನಂತೆ ಸವೆದವರು.. ಬೆಣ್ಣೆಯಂತೆ ಮೃದುವಾದವರು. ಸರಳತೆಯ ಸಾಕಾರ ಮೂರ್ತಿಯಾಗಿದ್ದಾರೆ. ಇವತ್ತು ಇಡೀ ದಿನ ಬಾಗಲಕೋಟರ ಕೃತಿಗಳ ಚರ್ಚೆ ಸಂವಾದ ನಡೆಯಲಿದೆ. ಬರೀ ಹೊಗಳುವುದಲ್ಲ.. ಕೃತಿಯ ವಿವಿಧ ಆಯಾಮಗಳ ಚರ್ಚೆ ನಡೆಯಬೇಕು ಎನ್ನುವದೇ ಇಂದಿನ ಸಾಹಿತ್ಯಾವಲೋಕನ ಕಾರ್ಯಕ್ರಮದ ನಿಜವಾದ ಉದ್ದೇಶ ಎಂದರು.

ಜಿಲ್ಲಾ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಲಿಂಗರಾಜ ಅಂಗಡಿ ಅವರು ಕಾರ್ಯಕ್ರಮ ಕುರಿತು ಮಾತನಾಡಿದರು. ವೇದಿಕೆ ಮೇಲೆ ಹಾರೂಗೇರಿ ಆಯ್. ಆರ್. ಮಠಪತಿ, ಸುನೀತಾ ಮೂರಶಿಳ್ಳಿ ಉಪಸ್ಥಿತರಿದ್ದರು.

ಶರಣ ಸಾಹಿತಿ ಡಾ. ರಂಜಾನ್ ದರ್ಗಾ ಅಧ್ಯಕ್ಷೀಯ ನುಡಿಗಳನ್ನಾಡುತ್ತಾ, ನನ್ನ ಅರಿವಿನ ಪ್ರಕಾರ ಬಾಗಲಕೋಟರು ಸ್ಥಿತಪ್ರಜ್ಞರಲ್ಲ.. ಸ್ಥಿತಿ ಪ್ರಜ್ಞರು. ಅನುಭಾವದಲ್ಲಿ ಮೊದಲು ಸ್ಥಿತಿ ಪ್ರಜ್ಞತೆ ಬೇಕು. ಅಂತಹ ಸ್ಥಿತಿ ಪ್ರಜ್ಞರು ಬಾಗಲಕೋಟರು. ಅನುಭವ ಇಲ್ಲದೆ ಅನುಭಾವ ಇಲ್ಲ. ಅದನ್ನೇ ಬಾಗಲಕೋಟರು ತಮ್ಮ ಕೃತಿಗಳಲ್ಲಿ ನಿರೂಪಿಸಿದ್ದಾರೆ ಎಂದು ಅರ್ಥಪೂರ್ಣವಾಗಿ ತಿಳಿಸಿದರು.

ವೈಚಾರಿಕ ನೆಲೆಯಲ್ಲಿ ವಚನಗಳನ್ನು ನೋಡಿದಾಗ ಮಾತ್ರ ಅದರ ಮೂಲ ನೆಲೆ ಅರ್ಥ ಆಗುತ್ತದೆ. ಶೂನ್ಯ ಧ್ಯಾನ ಪರಂಪರೆ ಜೈನ, ಬೌದ್ಧದಲ್ಲಿ ಕಾಣುವಂತೆ ಶರಣ ಪರಂಪರೆಯಲ್ಲಿ ಕೂಡ ಕಾಣುತ್ತೇವೆ. ೨೬೦೦ ವರ್ಷಗಳ ಹಿಂದೆಯೇ ಈ ಕುರಿತು ಚಿಂತನೆಗಳು ನಡೆದಿವೆ. ಲೋಕಾಯತದಿಂದ ಹಿಡಿದು ಪ್ರಸ್ತುತ ದಿನಮಾನದವರೆಗೆ ಬಹಳ ವ್ಯತ್ಯಾಸ ಇದೆ ಎಂದು ಹಿರಿಯ ಸಾಹಿತಿ ರಂಜಾನ ದರ್ಗಾ ಹೇಳಿದರು.

ವಿದುಷಿ ರಾಧಾ ದೇಸಾಯಿ ಅವರಿಂದ ಸಂಗೀತ ಕಾರ್ಯಕ್ರಮ ಜರುಗಿತು. ಇದೇ ಸಂದರ್ಭದಲ್ಲಿ ಅತಿಥಿ, ಅಭ್ಯಾಗತರನ್ನು ಸನ್ಮಾನಿಸಿ, ಗೌರವಿಸಲಾಯಿತು. ನಂತರ ಗೋಷ್ಠಿಗಳು ಜರುಗಿದವು.

ಕರ್ನಾಟಕ ವಿದ್ಯಾವರ್ಧಕ ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಗುರು ಹಿರೇಮಠ ಸ್ವಾಗತಿಸಿದರು. ಜಾನಪದ ವಿಶ್ವವಿದ್ಯಾಲಯದ ಪ್ರಾಧ್ಯಾಪಕಿ ಡಾ. ವಿಜಯಲಕ್ಷ್ಮಿ ಗೇಟಿ ನಿರೂಪಿಸಿದರು. ರಂಜಾನ ಕಿಲ್ಲೇದಾರ ವಂದಿಸಿದರು.

## ೧೮. ನಾಡೋಜ ಡಾ. ಪಾಟೀಲ ಪುಟ್ಟಪ್ಪ ಅವರ ೧೦೪ನೇ ಜನ್ಮದಿನಾಚರಣೆ

ಕರ್ನಾಟಕದ ಪ್ರತಿಷ್ಠಿತ ಸಂಸ್ಥೆಯಾದ ಕರ್ನಾಟಕ ಶಕ್ತಿ ಕೇಂದ್ರವಾದ ಕರ್ನಾಟಕ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾಗಿ ೫೨ ವರ್ಷಗಳಿಗಿಂತ ಹೆಚ್ಚುಕಾಲ ಅಧ್ಯಕ್ಷರಾಗಿ ಸಂಘವನ್ನು ಬೆಳೆಸುತ್ತಾ ಮುನ್ನಡೆಸುವುದರ ಜೊತೆಗೆ ಅಖಂಡ ಕರ್ನಾಟಕದ ಕನಸನ್ನು ಕಂಡು ಕರ್ನಾಟಕದ ಏಕೀಕರಣಕ್ಕಾಗಿ ಶ್ರಮಿಸಿ, ಸಂಘದ ಮುಖಾಂತರ ಕನ್ನಡ, ಕರ್ನಾಟಕದ ಸಮಗ್ರ ಏಳ್ಗೆಗಾಗಿ ಕೆಲಸ ಮಾಡಿದ ಪುಟ್ಟಪ್ಪನವರು ಇವತ್ತು ನಮ್ಮೊಂದಿಗೆ ಇಲ್ಲವಾದರೂ ಅವರು ಮಾಡಿದ ಕೆಲಸ ಕಾರ್ಯಗಳು ನಮಗೆ ದಾರಿದೀಪವಾಗಿವೆ ಎಂದು ಸಾಹಿತಿ ಶ್ರೀನಿವಾಸ ವಾಡಪ್ಪಿ ಹೇಳಿದರು.

ಕರ್ನಾಟಕ ವಿದ್ಯಾವರ್ಧಕ ಸಂಘವು ರಾ. ಹ.ದೇಶಪಾಂಡೆ ಸಭಾಭವನದಲ್ಲಿ ದಿನಾಂಕ: ೧೪-೧-೨೦೨೪ ಆಯೋಜಿಸಿದ್ದ ನಾಡೋಜ ಡಾ. ಪಾಟೀಲ ಪುಟ್ಟಪ್ಪ ಅವರ ೧೦೪ನೇ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ಅವರು, ವಿದ್ಯಾರ್ಥಿ ದೆಸೆಯಿಂದಲೆ ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಡಾ॥ ಪಾಟೀಲ ಪುಟ್ಟಪ್ಪ ಅವರು ಗಾಂಧೀಜಿ ಅವರಿಂದ ಪ್ರೇರೆಪಿತರಾಗಿ ನಿಜಲಿಂಗಪ್ಪನವರ ಒಡನಾಡಿಯಾಗಿ ಸಾಕಷ್ಟು ಕನ್ನಡದ ಕೆಲಸ ಮಾಡಿದ್ದಾರೆ. ಕನ್ನಡ ಕಾವಲು ಮತ್ತು ಗಡಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ಇಡೀ ಕರ್ನಾಟಕವನ್ನು ಸುತ್ತಿದ್ದಾರೆ. ಕನ್ನಡ, ಕರ್ನಾಟಕ ಏನು ಮಾಡಬೇಕು ಎಂಬುದರ ಬಗ್ಗೆ ಸರ್ಕಾರಕ್ಕೆ ಸೂಚಿಸಿದ ವ್ಯಕ್ತಿ ಡಾ॥ ಪಾಟೀಲ ಪುಟ್ಟಪ್ಪನವರು. ಇಂಥವರ ಜೊತೆಗೆ ನಾವು ನೀವೆಲ್ಲ ಕೆಲಸ ಮಾಡಿದ್ದೆವೆ ಎಂಬುದು ನಮ್ಮ ಭಾಗ್ಯವೆಂದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಸಂಘದ ಕಾರ್ಯಾಧ್ಯಕ್ಷರಾದ ಬಸವಪ್ರಭು ಹೊಸಕೇರಿ ನಾಡೋಜ ಡಾ. ಪಾಟೀಲ ಪುಟ್ಟಪ್ಪ ಅವರು ನಮಗೆ ಎಷ್ಟು ಪ್ರಸ್ತುತ ಎಂಬುದು ಅವರು ಇಲ್ಲದ ಈ ದಿನಗಳಲ್ಲಿ ನಮಗೆ ಅಷ್ಟೆ ಅಲ್ಲ ಇಡೀ ಕರ್ನಾಟಕಕ್ಕೆ ಗೊತ್ತಾಗಿದೆ. ಅವರ ನೇರ ಮತ್ತು ದಿಟ್ಟ ಸ್ಪಷ್ಟ ಮಾತುಗಳು ಎಲ್ಲರನ್ನು ಎಚ್ಚರಿಸುತ್ತಿದ್ದವು. ಸತ್ಯಕ್ಕಾಗಿ ಹೋರಾಡುತ್ತಾ, ಕನ್ನಡ ಮತ್ತು ಕರ್ನಾಟಕದ ಕೆಲಸಕ್ಕಾಗಿ ಯಾವ ಮುಲಾಜಿಲ್ಲದೇ ಯಾರ ಭೀತಿಯೂ ಇಲ್ಲದೇ ಮಾತನಾಡುವ ಧೀಮಂತ ವ್ಯಕ್ತಿಯಾಗಿದ್ದರು. ಸರಕಾರಕ್ಕೆ ಮಾರ್ಗದರ್ಶನ ಮಾಡುವ ಶಕ್ತಿ ಅವರಲ್ಲಿತ್ತು.



ನೆಹರು ಅವರು ಪ್ರಧಾನ ಮಂತ್ರಿಗಳಾಗಿದ್ದಾಗ ಡಾ ಪಾಪು ಅವರು ರಾಜ್ಯಸಭಾ ಸದಸ್ಯರಾಗಿ ಎರಡು ಅವಧಿಯಲ್ಲಿ ದೇಶದ ಕೆಲಸ ಕಾರ್ಯಗಳಿಗೆ ತೊಡಗಿಸಿಕೊಂಡು 'ಪ್ರಪಂಚ' ವಾರ ಪತ್ರಿಕೆ ಮೂಲಕ ಬದುಕಿನುದ್ದಕ್ಕೂ ಸಮಾಜದ ಓರೆ ಕೋರೆಗಳನ್ನು ತಿದ್ದುವ ಕೆಲಸ ಮಾಡಿದರು ಎಂಬುದು ಪತ್ರಿಕಾ ರಂಗದಲ್ಲಿ, ಸರಕಾರದಲ್ಲಿ, ನಾಡಿನ ಇತಿಹಾಸದಲ್ಲಿ ದಾಖಲೆಯಾಗಿದೆ ಎಂಬುದು ಹೆಮ್ಮೆಯ ಸಂಗತಿ ಎಂದರು.

ಆರಂಭದಲ್ಲಿ ಸಂಘದ ಸಂಸ್ಥಾಪಕರಾದ ಶ್ರೀ ರಾ.ಹ.ದೇಶಪಾಂಡೆ ಅವರ ಪುತ್ಥಳಿಗೆ ಮತ್ತು ನಾಡೋಜ ಡಾ. ಪಾಟೀಲ ಪುಟ್ಟಪ್ಪ ಅವರ ಪುತ್ಥಳಿಗೆ ಮಾಲಾರ್ಪಣೆ ಮಾಡಿ ಭಾವಚಿತ್ರಕ್ಕೆ ಪುಷ್ಪ ಸಮರ್ಪಿಸಲಾಯಿತು.

ಶಂಕರ ಹಲಗತ್ತಿ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಕೊನೆಯಲ್ಲಿ ಶಿ.ಮ. ರಾಚಯ್ಯನವರ ನಾಡೋಜ ಡಾ. ಪಾಟೀಲ ಪುಟ್ಟಪ್ಪ ಅವರನ್ನು ಕುರಿತು ರಚಿಸಿದ 'ನೂರು ವರ್ಷದ ಕನ್ನಡ ಪುರುಷ' ಕವನ ಓದಿದರು.

## ೧೯. ಕನ್ನಡ ಅಂಕಿಗಳುಳ್ಳ ದಿನದರ್ಶಿಕೆ–೨೦೨೪ ಬಿಡುಗಡೆ ಸಮಾರಂಭ

ಕನ್ನಡ ನಾಡು, ನುಡಿಗೆ ಅಪಾರವಾದ ಕೊಡುಗೆಯನ್ನು ನೀಡಿದ ಕರ್ನಾಟಕ ವಿದ್ಯಾವರ್ಧಕ ಸಂಘ ಕರ್ನಾಟಕ ಏಕೀಕರಣಕ್ಕಾಗಿ ಹೋರಾಟದ ಮೂಲ ಬುನಾದಿಯನ್ನು ಹಾಕಿಕೊಟ್ಟಿದೆ. ಇಡೀ ಕರ್ನಾಟಕಕ್ಕೆ ಇದೊಂದು ಮಾದರಿಯ ಸಂಘವಾಗಿದ್ದು, ಇದಕ್ಕೆ ಇದರದೇ ಆದ ಮೌಲಿಕ ಪರಂಪರೆ ಇರುವುದನ್ನು ಕಾಣುತ್ತೇವೆ. ಈಗ ಮತ್ತೊಂದು ದಾಖಲೆ ಅನ್ನುವ ರೀತಿಯಲ್ಲಿ ಕನ್ನಡ ದಿನದರ್ಶಿಕೆಯನ್ನು ಪ್ರಕಟಿಸುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ ಮಾಜಿ ಮುಖ್ಯಮಂತ್ರಿ ಜಗದೀಶ ಶೆಟ್ಟರ ಹೇಳಿದರು.

ಕರ್ನಾಟಕ ವಿದ್ಯಾವರ್ಧಕ ಸಂಘವು ದಿನಾಂಕ: ೨೦–೧–೨೦೨೪ ರಂದು ಆಯೋಜಿಸಿದ್ದ ಕನ್ನಡ ಗುಡಿಯ ಕನ್ನಡದ ಅಂಕಿಗಳುಳ್ಳ ದಿನದರ್ಶಿಕೆ–೨೦೨೪ರ ಲೋಕಾರ್ಪಣೆ ಸಮಾರಂಭದಲ್ಲಿ ದಿನದರ್ಶಿಕೆ ಲೋಕಾರ್ಪಣೆ ಮಾಡಿ ಮಾತನಾಡುತ್ತಿದ್ದರು.

ದಿನದರ್ಶಿಕೆಯಲ್ಲಿರುವ ಕನ್ನಡ ಅಂಕಿಗಳನ್ನು ಕಂಡ ಕೂಡಲೇ ನನಗೆ ಬಾಲ್ಯದ ನೆನಪು ಮರುಕಳಿಸಿತು. ಕನ್ನಡ ಮಾಧ್ಯಮದಲ್ಲಿಯೇ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ಮುಗಿಸಿದ ನಾನು ಈ ರಾಜ್ಯದ ಮುಖ್ಯಮಂತ್ರಿಯಾಗಿದ್ದೆ ಎಂದು ಹೇಳಿಕೊಳ್ಳಲು ನನಗೆ ಹೆಮ್ಮೆ ಎನಿಸುತ್ತದೆ. ಕನ್ನಡ ಭಾಷೆ ಉಳಿಯಬೇಕು, ಕನ್ನಡ ಅಂಕಿಗಳು ಮತ್ತೆ ತಮ್ಮ ಗತವೈಭವವನ್ನು ಮರಳಿ ಪಡೆಯುವಂತಾಗಬೇಕು ಎಂದ ಜಗದೀಶ ಶೆಟ್ಟರ ಕರ್ನಾಟಕ ವಿದ್ಯಾವರ್ಧಕ ಸಂಘಕ್ಕೆ ನನ್ನಿಂದ ಸಹಾಯ–ಸಹಕಾರ ಸರಕಾರದ ಮಟ್ಟದಲ್ಲಿ ದೊರಕುವ ಹಾಗೆ ಪ್ರಯತ್ನವನ್ನು ಮಾಡುತ್ತೇನೆ ಎಂದರು.



ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಸಂಘದ ಉಪಾಧ್ಯಕ್ಷೆ ಪ್ರೊ.ಮಾಲತಿ ಪಟ್ಟಣಶೆಟ್ಟಿಯವರು ಮಾತನಾಡಿ, ಮಾಜಿ ಮುಖ್ಯಮಂತ್ರಿಗಳಾದ ಜಗದೀಶ ಶೆಟ್ಟರ ಅವರು ಸಂಘಕ್ಕೆ ಆಗಮಿಸಿ ದಿನದರ್ಶಿಕೆಯನ್ನು ಬಿಡುಗಡೆಗೊಳಿಸಿದ್ದು ಸಂತೋಷವನ್ನುಂಟು ಮಾಡಿದೆ. ತಾವು ಸಂಘದ ಕಾರ್ಯಕ್ರಮಗಳಿಗೆ ಮಾರ್ಗದರ್ಶಿಸಬೇಕು. ತಮ್ಮಂತವರು ಸಂಘಕ್ಕೆ ಮೇಲಿಂದ ಮೇಲೆ ಬರುವ ಮೂಲಕ ಆಡಳಿತ ಮಂಡಳಿಗೆ ಕನ್ನಡದ ಕಾರ್ಯ ಮಾಡಲು ಪ್ರೋತ್ಸಾಹ ಸಿಗುವುದು ತಾವು ಸಂಘಕ್ಕೆ ಸರಕಾರದಿಂದ ಸಿಗಬಹುದಾದ ಸೌಲಭ್ಯಗಳನ್ನು ನಮಗೆ ಒದಗಿಸಿಕೊಡಬೇಕು ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು.

ಶಂಕರ ಹಲಗತ್ತಿ ಸ್ವಾಗತಿಸಿದರು. ಬಸವಪ್ರಭು ಹೊಸಕೇರಿ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಶಂಕರ ಕುಂಬಿ ನಿರೂಪಿಸಿದರು. ಡಾ.ಮಹೇಶ ಹೊರಕೇರಿ ವಂದಿಸಿದರು. ದಿನದರ್ಶಿಕೆಯನ್ನು ವಿನ್ಯಾಸಗೊಳಿಸಿದ ಬಿ. ಮಾರುತಿ ಹಾಗೂ ದೀಪಕ ಅವರಿಗೆ ಪುಷ್ಪ ನೀಡಿ ಗೌರವಿಸಲಾಯಿತು.

## ೨೦. ಗ್ರಂಥ ಬಿಡುಗಡೆ ಸಮಾರಂಭ

ಅಂಧರ ಶಿಕ್ಷಣಕ್ಕೆ ಬಹುದೊಡ್ಡ ಸೇವೆ ಸಲ್ಲಿಸಿದವರು ರಾಮಚಂದ್ರ ಧೋಂಗಡೆ ತೊಂಭತ್ತೈದರ ಇಳಿವಯಸ್ಸಿನಲ್ಲೂ ಬತ್ತದ ಉತ್ಸಾಹದೊಂದಿಗೆ ಸಾಹಿತ್ಯಿಕ, ಸಾಂಸ್ಕೃತಿಕವಾಗಿ ತೊಡಗಿಸಿಕೊಂಡು ಧಾರವಾಡದ ಜನತೆಗೆ ಮಾದರೀಯವಾಗಿ ನಿಂತಿದ್ದಾರೆ ಎಂದು ಧಾರವಾಡ ಹಿರೇಮಲ್ಲೂರ ಈಶ್ವರನ್ ಪ.ಪೂ. ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯದ ಪ್ರಾಚಾರ್ಯ ಪ್ರಿ. ಶಶಿಧರ ತೋಡಕರ ಹೇಳಿದರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು, ರಾ.ಹ. ದೇಶಪಾಂಡೆ ಸಭಾಭವನದಲ್ಲಿ ಆಯೋಜಿಸಿದ್ದ ಶ್ರೀ ರಾಮಚಂದ್ರ ಧೋಂಗಡೆ ಅವರ **'ಚಿಂತನ ಚಿಲುಮೆ'** ಗ್ರಂಥ ಬಿಡುಗಡೆ ಸಮಾರಂಭದಲ್ಲಿ ಗ್ರಂಥ ಬಿಡುಗಡೆ ಮಾಡಿ ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ಅವರು, ಸಾಹಿತ್ಯ ಕ್ಷೇತ್ರಕ್ಕೆ ವಿಶೇಷ ಕೊಡುಗೆ ನೀಡಿದ್ದಾರೆ. ಆಕಾಶವಾಣಿಯಲ್ಲಿ ನೂರಾ ಐವತ್ತಕ್ಕೂ ಹೆಚ್ಚು ಚಿಂತನಗಳನ್ನು ಹಂಚಿಕೊಂಡಿದ್ದಾರೆ. ಕಡು ಬಡತನವನ್ನು ಡಿ.ವಿ.ಜಿ., ಫ.ಗು. ಹಳಕಟ್ಟಿ, ಬೇಂದ್ರೆಯವರಂತವರು ಉಣ್ಣುತ್ತಾ ಶ್ರೀಮಂತ ಸಂಸ್ಕೃತಿ ನೀಡಿದ ಹಾಗೆ ಧೋಂಗಡೆಯವರು ಆರ್ಥಿಕವಾಗಿ ಯಾವ ಶ್ರೀಮಂತಿಕೆಯನ್ನು ಹೊಂದಿದವರಲ್ಲ. ಸಾರಿಗೆ ಇಲಾಖೆಯಲ್ಲಿ ಮುವತ್ತೈದು ವರ್ಷಗಳ ಸೇವೆ ಸಲ್ಲಿಸಿ, ಸಾವಿರಾರು ಜನರಿಗೆ ನೌಕರಿ ನೀಡಿ ಅವರ ಜೀವನ ಬೆಳಗಿಸಿದವರು. ಅಂಧರಿಗೆ ಬಸವಣ್ಣನ ವಚನಗಳನ್ನು, ಅಲ್ಲಮನ ವಚನಗಳನ್ನು ಬ್ರೇಲ್ ಲಿಪಿಯಲ್ಲಿ ರಚಿಸಿ ನೀಡಿದ್ದಲ್ಲದೇ ಅವರಿಗಾಗಿ ಗ್ರಂಥಾಲಯ ಪ್ರಾರಂಭಿಸಿದರು. ಅಂಧರಿಗಾಗಿಯೇ ಸಾಹಿತ್ಯಿಕ ಪತ್ರಿಕೆಯನ್ನೂ ಹಲವು ವರ್ಷಗಳ ಕಾಲ ನಡೆಸಿ ಇಡೀ ನಾಡಿಗೆ ಮಾದರಿಯಾಗಿದ್ದಾರೆ ಎಂದರು.

ಕೃತಿ ಪರಿಚಯ ಮಾಡಿ ಧಾರವಾಡ ಕ.ವಿ.ವಿ.ಯ ಪ್ರಸಾರಾಂಗ ನಿರ್ದೇಶಕ ಡಾ. ಚಂದ್ರಶೇಖರ ರೊಟ್ಟಿಗವಾಡ ಮಾತನಾಡುತ್ತಾ, ಮಾದರಿ ವ್ಯಕ್ತಿತ್ವ ಹೊಂದಿದ ರಾಮಚಂದ್ರ ಧೋಂಗಡೆ ಅವರು ಜೀವನದಲ್ಲಿ ಅನುಭವಿಸಿದ ಸಂಕಷ್ಟಗಳ ಮಧ್ಯದಲ್ಲೂ ಜೀವನವನ್ನು ರೂಪಿಸಿಕೊಂಡವರು. ಶರಣರ ಹಾಗೂ ಲೌಕಿಕ ಅನುಭವಗಳೇ ಅವರ ಬರವಣಿಗೆಯ ಮೂಲ ಬೇರುಗಳಾಗಿವೆ. ಆಶಾವಾದಿಯಾಗಿರುವ ಅವರ ಬರವಣಿಗೆಯಲ್ಲಿ ನಿರಾಶೆಯ ಮನಸ್ಥಿತಿಯನ್ನು ತೋರ್ಪಡಿಸಿದವರಲ್ಲ. ಕೃತಿ ರಚನೆಯ ಹಿಂದಿರುವ ಅವರ ಶ್ರಮ ಅಧಿಕವಾಗಿದೆ. ಯಾರಿಗೂ ಕೆಟ್ಟದನ್ನು ಬಯಸದೆ ಮನಸ್ಸು ಪವಿತ್ರವಾಗಿದ್ದಾಗ ಮಾತ್ರ ಸಾಧನೆ ಮಾಡಲು ಸಾಧ್ಯ. ಆ ನಿಟ್ಟಿನಲ್ಲಿ ಧೋಂಗಡೆ ಅವರು ವ್ಯಕ್ತಿತ್ವವನ್ನು ರೂಪಿಸಿಕೊಂಡವರು. ಅವರ ಬರವಣಿಗೆಯಲ್ಲಿ ಅರ್ಥವಂತಿಕೆ ಇದೆ. ಮೌಲ್ಯಯುತ ಮಾತುಗಳಿವೆ. ಪ್ರತಿಯೊಂದು ಬರವಣಿಗೆಯು ಸಹೃದಯರ ಮನಸ್ಸನ್ನು ಗೆದ್ದು ಓದಿಸಿಕೊಂಡು ಹೋಗುತ್ತವೆ. ವೈಚಾರಿಕ ವ್ಯಕ್ತಿಚಿತ್ರ ಲೇಖನಗಳಲ್ಲಿ ಬಿಸ್ಮಿಲ್ಲಾಖಾನ್, ನೌಶಾದ ಅಲಿ, ಹಿಂದಿ ಚಿತ್ರ ಜಗತ್ತಿಗೆ ಹೊಳಪು ನೀಡಿದ ಉರ್ದು ಕವಿ ಸಾಹಿರ್ ಲೂಧಿಯಾನ್ವಿ, ಜಗಜ್ಯೋತಿ ಬಸವೇಶ್ವರರು, ಭಾರತ ರತ್ನ ಲಾಲ ಬಹದ್ದೂರ ಶಾಸ್ತ್ರಿ ಮುಂತಾದ ಮಹನೀಯರನ್ನು ಕುರಿತ ಲೇಖನಗಳು ಕೃತಿಗೆ ಬೆಳಕನ್ನು ನೀಡಿವೆ. ಪರಿಸರ ಸ್ನೇಹಿ ಗಣಪತಿ ಹಬ್ಬ ಹೇಗಿರಬೇಕು ಎಂಬುದನ್ನು ಸೊಗಸಾಗಿ ಕೃತಿಯಲ್ಲಿ ಕಟ್ಟಿಕೊಟ್ಟಿದ್ದಾರೆ. ಈ ಹಿನ್ನೆಲೆಯಲ್ಲಿ ಅವರ ಬರವಣಿಗೆಯಲ್ಲಿ ಪ್ರಗತಿಪರ ಚಿಂತನೆಗಳನ್ನು ಕಾಣುತ್ತೇವೆ ಎಂಬ ಅಭಿಪ್ರಾಯವ್ಯಕ್ತಪಡಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಹಿರಿಯ ಸಾಹಿತಿ ಆರ್. ಬಿ. ಚಿಲುಮಿ ಮಾತನಾಡಿ, ಅಂಧ ಮಕ್ಕಳಿಗಾಗಿ ಬ್ರೈಲ್ ಲಿಪಿಯ ಮೂಲಕ ಶಿಕ್ಷಣವನ್ನು ನೀಡುವಲ್ಲಿ ಶ್ರಮಿಸಿದ ಪ್ರಮುಖ ವ್ಯಕ್ತಿಗಳಲ್ಲಿ ಈ ಭಾಗದಲ್ಲಿ ಧೋಂಗಡೆ ಮುಂಚೂಣಿಯಲ್ಲಿ ನಿಲ್ಲುತ್ತಾರೆ. ಅಂಧರಿಗಾಗಿ 'ಬೆಳಕು' ಸಾಹಿತ್ಯ ಪತ್ರಿಕೆ, ವಚನ ವರ್ಷ, ಪ್ರಭುಲಿಂಗ ಲೀಲೆ ಮುಂತಾದ ಕೃತಿಗಳು ಬ್ರೈಲ ಲಿಪಿಯಲ್ಲಿ ಬರಲು ಕಾರಣರಾಗಿದ್ದಾರೆ. ಅವರ ಕನಸ್ಸು ಇನ್ನೂ ಸಾಕಾರಗೊಳ್ಳಬೇಕಾದದ್ದು ಇನ್ನೂ ಬಹಳಷ್ಟು ಇದೆ. ಸಹನಾ ಸಂಸ್ಥೆಯನ್ನು ಧಾರವಾಡದಿಂದ ಬೆಂಗಳೂರಿಗೆ ವರ್ಗೀಕರಿಸಿಕೊಂಡಿದ್ದು ಖೇದದ ಸಂಗತಿಯಾಗಿದೆ ಎಂದರು.

ಕೃತಿಯ ಕರ್ತೃ ರಾಮಚಂದ್ರ ಧೋಂಗಡೆ ಮಾತನಾಡಿ, ೩೫ ವರ್ಷಗಳವರೆಗೆ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಸೇವೆ ಸಲ್ಲಿಸಿ, ಅವತ್ತಿನ ತಮ್ಮ ಅನುಭವಗಳನ್ನು ಹಂಚಿಕೊಂಡರು. ಎಲ್ಲ ಸರಕಾರಗಳಿಗೂ ಬ್ರೈಲ ಲಿಪಿಯ ಮೂಲಕ ಅಂಧರ ಬಾಳಿಗೆ ಬೆಳಕು ನೀಡಬೇಕೆನ್ನುವ ಮನವಿ ಮಾಡಿಕೊಂಡಾಗಲೂ ಕೂಡ ಯಾವ ಸರ್ಕಾರಗಳು ಈ ಬಗ್ಗೆ ಕಾಳಜಿ ವಹಿಸದೇ ಇರುವುದು ತುಂಬಾ ದುಃಖದ ಸಂಗತಿಯಾಗಿದೆ. ಈಗಲಾದರೂ ಸರಕಾರಗಳು ಕಣ್ಣು ತೆರೆದು ಕಣ್ಣಿಲ್ಲದವರ ಬಾಳಿಗೆ ಬೆಳಕು ನೀಡುವಂತಾಗಬೇಕು ಎಂದು ಹೇಳಿದರು.

ಪ್ರಭು ಮಾಯಕೊಂಡ ರಾಮಚಂದ್ರ ಧೋಂಗಡೆ ಅವರ ಕುರಿತು ರಚಿಸಿದ ಕವನ ವಾಚಿಸಿದರು. ಡಾ. ಧನವಂತ ಹಾಜವಗೋಳ ಸ್ವಾಗತಿಸಿದರು. ಶಿವಾನಂದ ಭಾವಿಕಟ್ಟಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಡಾ. ಜಿನದತ್ತ ಹಡಗಲಿ ನಿರೂಪಿಸಿದರು. ಡಾ. ಮಹೇಶ ಹೊರಕೇರಿ ವಂದಿಸಿದರು.

### ೨೧. ಶಾಂತಕವಿಗಳ ಸ್ಮರಣೆ

ಶಾಂತ ಕವಿಗಳನ್ನು 'ಆಧುನಿಕ ಕರ್ನಾಟಕ ನಾಟಕ ಪಿತಾಮಹ' ಎಂದು ಕರೆಯಲಾಗಿದೆ. ಆಧುನಿಕ ರಂಗಭೂಮಿಗೆ ಇವರ ಕೊಡುಗೆ ಅನನ್ಯ ಎಂದು ನಿವೃತ್ತ ಪ್ರಾಧ್ಯಾಪಕ ಡಾ. ವಿನಾಯಕ ನಾಯಕ ಹೇಳಿದರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು ದಿ: ೧೫-೩-೨೦೨೪ ರಂದು ಆಯೋಜಿಸಿದ್ದ ಸಕ್ಕರಿ ಬಾಳಾಚಾರ್ಯ **'ಶಾಂತಕವಿ'ಗಳ ಸ್ಮರಣೆ** ಕಾರ್ಯಕ್ರಮದಲ್ಲಿ ಅತಿಥಿ ಉಪನ್ಯಾಸ ನೀಡುತ್ತಾ, ೧೯ ನೇ ಶತಮಾನದ ಆದಿಭಾಗದಲ್ಲಿ ಉತ್ತರ ಕರ್ನಾಟಕದ ಧಾರವಾಡ ಹಾಗೂ ಬೆಳಗಾವಿ ಪ್ರದೇಶದಲ್ಲಿ ಮರಾಠಿ ಪ್ರಾಭಲ್ಯದಿಂದ ಕನ್ನಡಿಗರು ಅನಾಥ ಪ್ರಜ್ಞೆಯಿಂದ ಬಳಲುತ್ತಿದ್ದಾಗ, ಸಕ್ಕರಿ ಬಾಳಾಚಾರ್ಯರು ಕನ್ನಡಿಗರಲ್ಲಿ ಕನ್ನಡ ಭಾಷೆ, ಸಂಸ್ಕೃತಿ, ಸಾಹಿತ್ಯದ ಬಗ್ಗೆ ಜಾಗೃತಿಅಭಿಮಾನ ಮೂಡಿಸಿದರು. ಶಾಂತಕವಿಗಳು ಸುಮಾರು ೩೦ ಕ್ಕೂ ಹೆಚ್ಚು ಕನ್ನಡ ನಾಟಕಗಳನ್ನು ಬರೆದು ಕಲಿಸಿ ರಂಗದ ಮೇಲೆ ಪ್ರಯೋಗಿಸಿದರು. ಕನ್ನಡದಲ್ಲಿ ಕೀರ್ತನೆಗಳೇ ಇಲ್ಲ ಎನ್ನುವ ಕಾಲದಲ್ಲಿ ಕನ್ನಡದಲ್ಲಿ ಕೀರ್ತನೆಗಳನ್ನು ರಚಿಸಿದರು.

ಶಾಂತ ಕವಿಗಳು ಒಂದು ದೃಷ್ಟಿಯಿಂದ ಕನ್ನಡ ರಂಗ ಭೂಮಿಗೆ ಮರುಜೀವ ನೀಡಿದವರಾಗಿದ್ದಾರೆ. ಕನ್ನಡದಲ್ಲಿ ಏನಿದೆ? ಎನ್ನುವವರಿಗೆ ಕನ್ನಡದಲ್ಲಿ ಎಲ್ಲವೂ ಇದೆ ಎಂದು ತೋರಿಸಿಕೊಟ್ಟು ಕನ್ನಡದ ಅಸ್ಮಿತೆಯನ್ನು ಕಾಪಾಡಿದರು. ಆದರೆ ಅವರ ಬದುಕು, ಬರಹ ಕುರಿತು ಆಗಬೇಕಾದಷ್ಟು ಸಂಶೋಧನೆ ನಡೆಯದಿರುವುದು ವಿಷಾದನೀಯಎಂದರು.

ಅಧ್ಯಕ್ಷತೆ ವಹಿಸಿದ್ದ ಹಿರಿಯ ವಿಮರ್ಶಕ, ಸಾಹಿತಿ ಡಾ. ಶಾಮಸುಂದರ ಬಿದರಕುಂದಿ ಮಾತನಾಡಿ, ಕನ್ನಡ ಭಾಷೆ ಹಾಗೂ ಸಂಸ್ಕೃತಿ ಬಗ್ಗೆ ಅಭಿಮಾನ ಮೂಡಿಸುವಲ್ಲಿ ಡೆಪ್ಯೂಟಿ ಚೆನ್ನಬಸಪ್ಪ ಹಾಗೂ ಶಾಂತಕವಿಗಳ ಪಾತ್ರ ಅಪಾರವಾದದ್ದು. ಶಾಂತ ಕವಿಗಳು ರಚಿಸಿದ ಮೊದಲ ನಾಟಕ 'ಉಷಾಹರಣ' ಹಾಗೂ 'ಸೀತಾ ಅರಣ್ಯ ಪ್ರವೇಶ'ಗಳು ಅವರಿಗೆ ಹೆಚ್ಚಿನ ಜನಮನ್ನಣೆಯನ್ನು ತಂದುಕೊಟ್ಟವು. ಕನ್ನಡ ಸಾಹಿತ್ಯ ಉಳಿಯಬೇಕಾದರೆ ಓದುಗರ ಸಂಖ್ಯೆ ಹೆಚ್ಚಾಗಬೇಕು. ಸ್ವಕೀಯತೆ ಉಳಿಸಿಕೊಂಡು, ಪರಕೀಯತೆಯನ್ನು ನಾವು ತ್ಯಜಿಸಬೇಕೆಂದರು.

ಸಕ್ಕರಿ ಬಾಳಾಚಾರ್ಯರ ೧೦೪ ನೇ ಪುಣ್ಯತಿಥಿಯ ನಿಮಿತ್ತ ಅವರ ಭಾವಚಿತ್ರಕ್ಕೆ ಪುಷ್ಪನಮನದೊಂದಿಗೆ ಗೌರವ ಸಲ್ಲಿಸಲಾಯಿತು.

ಇದೇ ಸಂದರ್ಭದಲ್ಲಿ ಸಂಘವು ಶಾಂತಕವಿಗಳ ಹೆಸರಿನಲ್ಲಿ ನಡೆಸುತ್ತಿರುವ 'ಶಾಂತೇಶ ವಾಚನಾಲಯಕ್ಕೆ' ಸಕ್ಕರಿ ಬಾಳಾಚಾರ್ಯ 'ಶಾಂತಕವಿ' ಟ್ರಸ್ಟ್ (ರಿ) ವತಿಯಿಂದ ೯೫ ಸಾವಿರ ರೂಗಳ ಕಬ್ಬಿಣದ ೫ ಹೊಸ ಕಪಾಟುಗಳನ್ನು ದೇಣಿಗೆಯಾಗಿ ನೀಡಿದರು. ಸಂಘವು ಕೃತಜ್ಞತಾಭಾವದಿಂದ ಸ್ವೀಕರಿಸಿತು.


ಪ್ರಾರಂಭದಲ್ಲಿ ಪ್ರಸಾದ, ಸುಧಾಕರ, ಪ್ರಭು ಹಾಗೂ ಸಂಗಡಿರು ಸಕ್ಕರಿ ಬಾಳಾಚಾರ್ಯರ ರಂಗ–ಗೀತೆಗಳನ್ನು ಪ್ರಸ್ತುತಪಡಿಸಿದರು. ವೇದಿಕೆಯಲ್ಲಿ ಕ.ವಿ.ವ. ಸಂಘದ ಅಧ್ಯಕ್ಷ ಚಂದ್ರಕಾಂತ ಬೆಲ್ಲದ ಹಾಗೂ ಬಾಬುರಾವ ಸಕ್ರಿ ಇದ್ದರು. ಸಂಘದ ಕೋಶಾಧ್ಯಕ್ಷ ಸತೀಶ ತುರಮರಿ ಸ್ವಾಗತಿಸಿದರು. ಸಹಕಾರ್ಯದರ್ಶಿ ಶಂಕರ ಕುಂಬಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕಾರಿ ಸಮಿತಿ ಸದಸ್ಯ ವೀರಣ್ಣ ಒಡ್ಡೀನ ನಿರೂಪಿಸಿದರು. ಎಸ್. ಎಂ. ರಾಚಯ್ಯನವರ ವಂದಿಸಿದರು.

**೨೨. ಸಂಘದ ಸಂಸ್ಥಾಪಕ ರಾ. ಹ. ದೇಶಪಾಂಡೆ ಜನ್ಮದಿನ ಆಚರಣೆ.**

ವೈದ್ಯಕೀಯ ಶಿಕ್ಷಣ ಇರುವುದು ಇಂಗ್ಲೀಷನಲ್ಲಿ. ಔಷದೋಪಚಾರ ಮಾಡುವುದು ಕನ್ನಡದಲ್ಲಿ. ರೋಗಿ ಮತ್ತು ವೈದ್ಯರ ನಡುವೆ ಸರಿಯಾದ ಸಂವಹನ ಪ್ರಕ್ರಿಯೆ ಆಗದೆ ಇರುವುದರಿಂದ ಹೆಚ್ಚು ಸಮಸ್ಯೆಗಳು ಉದ್ಭವಿಸುತ್ತವೆ. ಸೂಕ್ತ ಸಮಯದ ಒಳ್ಳೆಯ ಮಾತುಗಳು ರೋಗಿ ಮತ್ತು ವೈದ್ಯರ ನಡುವಿನ ಸಮರವನ್ನು ನಿಷ್ಕ್ರೀಯಗೊಳಿಸುತ್ತವೆ ಎಂದು ಹುಬ್ಬಳ್ಳಿಯ ಅರಿವಳಿಕೆ ತಜ್ಞ ಡಾ. ಗೋವಿಂದ ಹೆಗಡೆ ಹೇಳಿದರು.

ಕರ್ನಾಟಕ ವಿದ್ಯಾವರ್ಧಕ ಸಂಘವು, ಸಂಘದ ಸಂಸ್ಥಾಪಕರು ಹಾಗೂ ಸಂಸ್ಥಾಪನಾ ಕಾರ್ಯದರ್ಶಿ ಶ್ರೀ ರಾ.ಹ. ದೇಶಪಾಂಡೆ ಅವರ ೧೬೫ನೇ ಜನ್ಮದಿನದ ಸ್ಮರಣೆ ನಿಮಿತ್ತ ಆಯೋಜಿಸಿದ್ದ 'ವೈದ್ಯಕೀಯ ವೃತ್ತಿ–ಕನ್ನಡ ಭಾಷೆ' ವಿಷಯ ಕುರಿತು ಉಪನ್ಯಾಸ ನೀಡುತ್ತಾ ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ಅವರು, ವಿದೇಶಗಳಲ್ಲಿ ವೈದ್ಯಕೀಯ ಶಿಕ್ಷಣ ಪಡೆದು ಬಂದ ವೈದ್ಯ ಕನ್ನಡ ಶಬ್ದಗಳನ್ನು ಎಷ್ಟರಮಟ್ಟಿಗೆ ಬಳಸಬಲ್ಲ?. ಅಷ್ಟೇ ಅಲ್ಲ ಕನ್ನಡ ಮನೆಯಲ್ಲಿಯೇ ಕನ್ನಡ ಕಲಿತು ವೈದ್ಯರಾದ ನಂತರ ಕನ್ನಡ ಸಂವಹನವನ್ನೇ ಮರೆತಿದ್ದಾರೆ. ಹೀಗಾಗಿ ರೋಗಿ ಮತ್ತು ವೈದ್ಯರ ನಡುವೆ ಕಂದಕ ಏರ್ಪಟ್ಟಿದೆ. ಇದು ಹೋಗಬೇಕಾದರೆ ಕನ್ನಡದ ಆಡು ಭಾಷೆಯಲ್ಲಿ ರೋಗಿಯೊಂದಿಗೆ ಸಂವಹನ ನಡೆಯಬೇಕು. ಹಲವಾರು ವೈದ್ಯಕೀಯ ಪದಗಳಿಗೆ ಕನ್ನಡದ ಅರ್ಥ ಹುಡುಕದೇ ಇಂಗ್ಲೀಷ ಪದವನ್ನೇ ಕನ್ನಡ ಭಾಷೆಯಾಗಿ ಸ್ವೀಕರಿಸಬೇಕು. ಉದಾಹರಣೆಯಾಗಿ ಅಲರ್ಜಿ ಎನ್ನುವ ಪದಕ್ಕೆ ಬೇರೆ ಬೇರೆ ಭಾಷೆಯಲ್ಲಿ ಶಬ್ದಗಳಿದ್ದಾಗಲೂ ಅದನ್ನು ಅಲರ್ಜಿ ಅಂತಲೇ ಬಳಸಬೇಕು ವಿನಃ ಬೇರೆ ಭಾಷೆಯಿಂದ ಬಳಸಿದರೆ ರೋಗಿಗೆ ಅರ್ಥವಾಗಲಾರದು. ಬೇರೆ ಬೇರೆ ಚಟುವಟಿಕೆಗಳ ಮೂಲಕ ಕನ್ನಡ ಭಾಷೆಯನ್ನು ಬಳಸಿ ವೈದ್ಯರು ಮತ್ತು ರೋಗಿಗಳಲ್ಲಿ ಕನ್ನಡ ಭಾಷೆಯ ಅರಿವನ್ನು ಮೂಡಿಸುವುದು ಅಗತ್ಯವಾಗಿದೆ. ಕನ್ನಡದಲ್ಲಿ ವೈದ್ಯಕೀಯ ವಿದ್ಯಾರ್ಥಿಗಳಿಗೆ ತರಬೇತಿಗಳನ್ನು ನೀಡುವುದರಿಂದ



ಸಮುದಾಯದ ಆರೋಗ್ಯ ವರ್ಧನೆಯಾಗುತ್ತದೆ. ಕೆಲವೊಂದು ಇಂಗ್ಲೀಷಿನ ವೈದ್ಯಕೀಯ ಶಬ್ದಗಳನ್ನು ಇಂಗ್ಲೀಷನಲ್ಲಿಯೇ ಬಳಸಬೇಕಾದ ಅಗತ್ಯವಿದೆ. ಅದನ್ನು ಕನ್ನಡಿಕರಿಸುವುದರಿಂದ ಅರ್ಥವಾಗಲಾರದ ಸಂದರ್ಭ, ಸನ್ನಿವೇಶ ನಿರ್ಮಾಣವಾಗುತ್ತವೆ ಎಂದರು.

ಹೆರಿಗೆ ಮತ್ತು ಸ್ತ್ರೀ ಆರೋಗ್ಯ ತಜ್ಞ ಡಾ. ಸಂಜೀವ ಕುಲಕರ್ಣಿ ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ, ವೈದ್ಯರು ಆಡುವ ವಿವೇಕದ ನುಡಿಗಳು ರೋಗಿಯ ಮೇಲೆ ಆತ್ಮಸ್ಥೈರ್ಯವನ್ನು ಹೆಚ್ಚಿಸುವುದು. ಅಲ್ಲದೆ ಇಂದು ನಡೆಯುತ್ತಿರುವ ವೈದ್ಯರ, ಆಸ್ಪತ್ರೆಗಳ ಮೇಲಿನ ಹಲ್ಲೆಗಳನ್ನು ಹಲ್ಲೆಯಾಗುವುದನ್ನು ತಪ್ಪಿಸಬಹುದು. ಭಾಷಾ ಸಂಪತ್ತು, ಭಾಷೆಯ ಕೌಶಲ್ಯ ವೈದ್ಯರಿಗೆ ಇರಬೇಕಾದದ್ದು ತುಂಬಾ ಅಗತ್ಯವಾಗಿದೆ. ಇಂದು ವಿಜ್ಞಾನ, ತಂತ್ರಜ್ಞಾನ ಒಂದು ಕಡೆ ಬೆಳೆಯುತ್ತ ಹೊರಟಿದೆ.ಇನ್ನೊಂದು ಕಡೆ ಕನ್ನಡ ಕುಸಿಯುತ್ತ ಸಾಗಿದೆ. ವೈದ್ಯಕೀಯ ವೃತ್ತಿ ಹಾಗೂ ಕಾನೂನು ವೃತ್ತಿಗಳಲ್ಲಿ ಕನ್ನಡ ಬಳಕೆ ಅಧಿಕವಾಗಿ ಎರಡೂ ಕ್ಷೇತ್ರಗಳ ಜನಸಾಮಾನ್ಯರಿಗೆ ಅರ್ಥವಾಗುವಂತಿರಬೇಕು. ಎಂದಿಗಿಂತ ಇಂದು ಕನ್ನಡವನ್ನು ಉಳಿಸಿ–ಬೆಳೆಸುವ ಕಾರ್ಯ ನಡೆಯಬೇಕಾಗಿದೆ. ಇಂದು ವೈದ್ಯಕೀಯ ವೃತ್ತಿ ಕಲಿಯುತ್ತಿರುವ ವಿದ್ಯಾರ್ಥಿಗಳಿಗೆ, ಯುವ ವೈದ್ಯರಿಗೆ ಕನ್ನಡದಲ್ಲಿ ಕಾವ್ಯ, ಕಥೆ, ಬರವಣಿಗೆ ಸ್ಪರ್ಧೆ, ಚರ್ಚೆಗಳನ್ನು ಇಟ್ಟುಕೊಳ್ಳುವುದರ ಮೂಲಕ ಅವರಲ್ಲಿ ಕನ್ನಡ ಭಾಷೆಯ ಬಳಕೆ ಹೆಚ್ಚು ಮಾಡುವಂತೆ ಮಾಡಬೇಕು. ಈ ನಿಟ್ಟಿನಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘ ಮುಂದಿನ ದಿನಗಳಲ್ಲಿ ಕಾರ್ಯಕ್ರಮವನ್ನು ರೂಪಿಸುವುದು ಎಂದು ಹೇಳಿದರು.

ನಾಡಿಗೆ 'ಸಿರಿಗನ್ನಡಂ ಗೆಲ್ಗೆ' ಮಂತ್ರವನ್ನು ನೀಡಿದ ರಾ.ಹ. ದೇಶಪಾಂಡೆಯವರು ಕರ್ನಾಟಕ ವಿದ್ಯಾವರ್ಧಕ ಸಂಘವನ್ನು ಸ್ಥಾಪಿಸದೇ ಹೋಗಿದ್ದರೆ ಕರ್ನಾಟಕ ಏಕೀಕರಣ, ಗೋಕಾಕ ಚಳುವಳಿ ಇಂಥ ಹಲವು ಹೋರಾಟಗಳಿಗೆ ದಿಕ್ಕೆ ಇಲ್ಲದಂತಾಗುತ್ತಿತ್ತು. ಇಂಥ ಮಹಾನ್ ವ್ಯಕ್ತಿಯನ್ನು ಧಾರವಾಡದ ಜನತೆ ನಗರದ ಪ್ರಮುಖ ರಸ್ತೆಗೆ ಇಲ್ಲವೆ ವರ್ತುಲಕ್ಕೆ ಹೆಸರಿಟ್ಟು ಗೌರವ ಸಲ್ಲಿಸಬೇಕಾದದ್ದು ಕರ್ತವ್ಯ. ಮಹಾನಗರ ಪಾಲಿಕೆಗೆ ಸಂಘವು ಮನವಿ ನೀಡಿದಾಗ್ಯೂ ಇದುವರೆಗೆ ಕ್ರಮಕೈಕೊಳ್ಳದಿರುವುದು ನೋವಿನ ಸಂಗತಿ. ಇನ್ನಾದರೂ ಮುಂದಿನ ೧೬೪ನೇ ರಾ.ಹ.ದೇ ಜನ್ಮದಿನಾಚರಣೆ ಒಳಗಾಗಿ ಅವರ ಹೆಸರನ್ನು ಸೂಕ್ತವಾದ ಸ್ಥಳಕ್ಕೆ ಇಡಲು ಒತ್ತಾಯಿಸಲಾಯಿತು.

ವೇದಿಕೆ ಮೇಲೆ ಸಂಘದ ಅಧ್ಯಕ್ಷ ಚಂದ್ರಕಾಂತ ಬೆಲ್ಲದ ಉಪಸ್ಥಿತರಿದ್ದರು. ಡಾ. ಜಿನದತ್ತ ಹಡಗಲಿ ಸ್ವಾಗತಿಸಿದರು. ಶಂಕರ ಹಲಗತ್ತಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಂಕರ ಕುಂಬಿ ನಿರೂಪಿಸಿದರು. ಡಾ. ಧನವಂತ ಹಾಜವಗೋಳ ವಂದಿಸಿದರು.

* = * = * = *

# ‘ಹಳಗನ್ನಡ ಕಾವ್ಯಗಳ ರಸಾಸ್ವಾದನೆ’

## ಸರಣಿ ಉಪನ್ಯಾಸ ಮಾಲಿಕೆ

೧. ಕರ್ನಾಟಕ ವಿದ್ಯಾವರ್ಧಕ ಸಂಘವು ದಿನಾಂಕ: ೮–೪–೨೦೨೩ ರಂದು ಶತಮಾನೋತ್ತರ ಬೆಳ್ಳಿಹಬ್ಬದ ಸವಿನೆನಪಿನಲ್ಲಿ **‘ಹಳಗನ್ನಡ–ನಡುಗನ್ನಡ ಕಾವ್ಯಗಳ ರಸಾಸ್ವಾದನೆ’** ಉಪನ್ಯಾಸ ಮಾಲಿಕೆ–೬. **ಲಕ್ಷ್ಮೀಶನ ‘ಜೈಮಿನಿ ಭಾರತ’ ಕಾವ್ಯದ ರಸಾಸ್ವಾದನೆ ಕಾರ್ಯಕ್ರಮ ಆಯೋಜಿಸಿತ್ತು.**

ಅತಿಥಿ ಉಪನ್ಯಾಸಕರಾಗಿ ಸಾಹಿತಿಗಳು ಹುಬ್ಬಳ್ಳಿ ನವನಗರದ ಡಾ. ಶಾಮಸುಂದರ ಬಿದರಕುಂದಿ ಅವರು ಆಗಮಿಸಿದ್ದರು. ಸಂಯೋಜನೆ, ಸಾಹಿತಿಗಳಾದ ಶ್ರೀ ವೆಂಕಟೇಶ ಮಾಚಕನೂರ, ಧಾರವಾಡ ಅವರದು.

### ೨. ‘ಹರಿಶ್ಚಂದ್ರ ಕಾವ್ಯ’ದ ರಸಾಸ್ವಾದನೆ ವಿಶೇಷ ಉಪನ್ಯಾಸ

ಕರ್ನಾಟಕ ವಿದ್ಯಾವರ್ಧಕ ಸಂಘವು ದಿನಾಂಕ: ೧೮–೪–೨೦೨೩ ರಂದು ಶತಮಾನೋತ್ತರ ಬೆಳ್ಳಿಹಬ್ಬದ ಸವಿನೆನಪಿನಲ್ಲಿ **‘ಹಳಗನ್ನಡ–ನಡುಗನ್ನಡ ಕಾವ್ಯಗಳ ರಸಾಸ್ವಾದನೆ’** ಉಪನ್ಯಾಸ ಮಾಲಿಕೆ–೭. **ರಾಘವಾಂಕನ ‘ಹರಿಶ್ಚಂದ್ರ ಕಾವ್ಯ’ದ ರಸಾಸ್ವಾದನೆ ಕಾರ್ಯಕ್ರಮ ಆಯೋಜಿಸಿತ್ತು.**

ಅತಿಥಿ ಉಪನ್ಯಾಸಕರಾಗಿ ಸಾಹಿತಿಗಳು ಬೆಳಗಾವಿ ಜಿಲ್ಲೆಯ ಹಾರೂಗೇರಿಯ ಡಾ. ವ್ಹಿ. ಎಸ್. ಮಾಳಿ ಅವರು ಆಗಮಿಸಿದ್ದರು. ಸಂಯೋಜನೆ, ಸಾಹಿತಿಗಳಾದ ಶ್ರೀ ವೆಂಕಟೇಶ ಮಾಚಕನೂರ, ಧಾರವಾಡ ಅವರದು.

### ೩. ‘ಶೂನ್ಯ ಸಂಪಾದನೆಗಳು’ ವಿಶೇಷ ಉಪನ್ಯಾಸ

ಕರ್ನಾಟಕ ವಿದ್ಯಾವರ್ಧಕ ಸಂಘವು ದಿನಾಂಕ: ೩–೫–೨೦೨೩ ರಂದು ಶತಮಾನೋತ್ತರ ಬೆಳ್ಳಿಹಬ್ಬದ ಸವಿನೆನಪಿನಲ್ಲಿ **‘ಹಳಗನ್ನಡ–ನಡುಗನ್ನಡ ಕಾವ್ಯಗಳ ರಸಾಸ್ವಾದನೆ’** ಉಪನ್ಯಾಸ ಮಾಲಿಕೆ–೮. **‘ಶೂನ್ಯ ಸಂಪಾದನೆಗಳು’ ವಿಶೇಷ ಉಪನ್ಯಾಸ ಕಾರ್ಯಕ್ರಮ ಆಯೋಜಿಸಿತ್ತು.**

ಅತಿಥಿ ಉಪನ್ಯಾಸಕರಾಗಿ ಸಾಹಿತಿಗಳು ಧಾರವಾಡದ ಡಾ. ವೀರಣ್ಣ ರಾಜೂರ ಅವರು ಆಗಮಿಸಿದ್ದರು. ಸಂಯೋಜನೆ, ಸಾಹಿತಿಗಳಾದ ಶ್ರೀ ವೆಂಕಟೇಶ ಮಾಚಕನೂರ, ಧಾರವಾಡ ಅವರದು.

### ೪. ‘ಶಬರಶಂಕರ ವಿಲಾಸ’ ವಿಶೇಷ ಉಪನ್ಯಾಸ

ಕರ್ನಾಟಕ ವಿದ್ಯಾವರ್ಧಕ ಸಂಘವು ದಿನಾಂಕ: ೨೩–೫–೨೦೨೩ ರಂದು ಶತಮಾನೋತ್ತರ ಬೆಳ್ಳಿಹಬ್ಬದ ಸವಿನೆನಪಿನಲ್ಲಿ **‘ಹಳಗನ್ನಡ–ನಡುಗನ್ನಡ ಕಾವ್ಯಗಳ ರಸಾಸ್ವಾದನೆ’** ಉಪನ್ಯಾಸ ಮಾಲಿಕೆ–೯. **ಷಡಕ್ಷರದೇವ ಕವಿಯ ‘ಶಬರಶಂಕರ ವಿಲಾಸ’ ವಿಶೇಷ ಉಪನ್ಯಾಸ ಕಾರ್ಯಕ್ರಮ ಆಯೋಜಿಸಿತ್ತು.**

ಅತಿಥಿ ಉಪನ್ಯಾಸಕರಾಗಿ ಸಾಹಿತಿಗಳು ಸವದತ್ತಿಯ ಡಾ. ವೈ. ಎಂ. ಯಾಕೊಳ್ಳಿ ಅವರು ಆಗಮಿಸಿದ್ದರು. ಸಂಯೋಜನೆ, ಸಾಹಿತಿಗಳಾದ ಶ್ರೀ ವೆಂಕಟೇಶ ಮಾಚಕನೂರ, ಧಾರವಾಡ ಅವರದು.

### ೫. ‘ಶಾಂತಿಪುರಾಣ’ ವಿಶೇಷ ಉಪನ್ಯಾಸ

ಕರ್ನಾಟಕ ವಿದ್ಯಾವರ್ಧಕ ಸಂಘವು ದಿನಾಂಕ: ೩೦–೫–೨೦೨೩ ರಂದು ಶತಮಾನೋತ್ತರ ಬೆಳ್ಳಿಹಬ್ಬದ ಸವಿನೆನಪಿನಲ್ಲಿ **‘ಹಳಗನ್ನಡ–ನಡುಗನ್ನಡ ಕಾವ್ಯಗಳ ರಸಾಸ್ವಾದನೆ’** ಉಪನ್ಯಾಸ ಮಾಲಿಕೆ–೧೦. **ಪೊನ್ನ ಕವಿಯ ‘ಶಾಂತಿಪುರಾಣ’ ವಿಶೇಷ ಉಪನ್ಯಾಸ ಕಾರ್ಯಕ್ರಮ ಆಯೋಜಿಸಿತ್ತು.**

ಅತಿಥಿ ಉಪನ್ಯಾಸಕರಾಗಿ ಸಾಹಿತಿಗಳು ಬೆಳಗಾವಿಯ ಡಾ. ಪಿ. ಜಿ. ಕೆಂಪಣ್ಣವರ ಆಗಮಿಸಿದ್ದರು. ಸಂಯೋಜನೆ, ಸಾಹಿತಿಗಳಾದ ಶ್ರೀ ವೆಂಕಟೇಶ ಮಾಚಕನೂರ, ಧಾರವಾಡ ಅವರದು.

**೬. 'ರಾಮಾಶ್ವಮೇಧಂ' ಕಾವ್ಯದ ರಸಾಸ್ವಾದನೆ**

ಕರ್ನಾಟಕ ವಿದ್ಯಾವರ್ಧಕ ಸಂಘವು ದಿನಾಂಕ: ೯–೬–೨೦೨೩ ರಂದು ಶತಮಾನೋತ್ತರ ಬೆಳ್ಳಿಹಬ್ಬದ ಸವಿನೆನಪಿನಲ್ಲಿ **'ಹಳಗನ್ನಡ–ನಡುಗನ್ನಡ ಕಾವ್ಯಗಳ ರಸಾಸ್ವಾದನೆ'** ಉಪನ್ಯಾಸ ಮಾಲಿಕೆ–೧೧. **ಮುದ್ದಣ್ಣ ಕವಿಯ 'ರಾಮಾಶ್ವಮೇಧಂ' ಕಾವ್ಯದ ರಸಾಸ್ವಾದನೆ ಕಾರ್ಯಕ್ರಮ ಆಯೋಜಿಸಿತ್ತು.**

ಅತಿಥಿ ಉಪನ್ಯಾಸಕರಾಗಿ ಯುವ ಸಾಹಿತಿಗಳು ಧಾರವಾಡದ ಡಾ. ಚಿದಾನಂದ ಮಾಸನಕಟ್ಟಿ ಆಗಮಿಸಿದ್ದರು. ಸಂಯೋಜನೆ, ಸಾಹಿತಿಗಳಾದ ಶ್ರೀ ವೆಂಕಟೇಶ ಮಾಚಕನೂರ, ಧಾರವಾಡ ಅವರದು.

**೭. 'ಆದಿಪುರಾಣ' ವಿಶೇಷ ಉಪನ್ಯಾಸ**

ಕರ್ನಾಟಕ ವಿದ್ಯಾವರ್ಧಕ ಸಂಘವು ದಿನಾಂಕ: ೧೯–೬–೨೦೨೩ ರಂದು ಶತಮಾನೋತ್ತರ ಬೆಳ್ಳಿಹಬ್ಬದ ಸವಿನೆನಪಿನಲ್ಲಿ **'ಹಳಗನ್ನಡ–ನಡುಗನ್ನಡ ಕಾವ್ಯಗಳ ರಸಾಸ್ವಾದನೆ'** ಉಪನ್ಯಾಸ ಮಾಲಿಕೆ–೧೨. **ಪಂಪ ಮಹಾಕವಿಯ 'ಆದಿಪುರಾಣ' ವಿಶೇಷ ಉಪನ್ಯಾಸ ಕಾರ್ಯಕ್ರಮ ಆಯೋಜಿಸಿತ್ತು.**

ಅತಿಥಿ ಉಪನ್ಯಾಸಕರಾಗಿ ವಿಶ್ರಾಂತ ಪ್ರಾಧ್ಯಾಪಕರಾದ ಹೊಸಪೇಟೆಯ ಡಾ. ಎಸ್. ಶಿವಾನಂದ ಆಗಮಿಸಿದ್ದರು. ಮುಖ್ಯ ಅತಿಥಿಗಳಾಗಿ ಬೆಂಗಳೂರಿನ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ವಿಶ್ವನಾಥ ಪಿ. ಹಿರೇಮಠ ಆಗಮಿಸಿದ್ದರು. ಕರ್ನಾಟಕ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾದ ಶ್ರೀ ಚಂದ್ರಕಾಂತ ಬೆಲ್ಲದ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಸಂಯೋಜನೆ, ಸಾಹಿತಿಗಳಾದ ಶ್ರೀ ವೆಂಕಟೇಶ ಮಾಚಕನೂರ, ಧಾರವಾಡ ಅವರದು.

**೮. 'ಧರ್ಮಾಮೃತ' ವಿಶೇಷ ಉಪನ್ಯಾಸ**

ಕರ್ನಾಟಕ ವಿದ್ಯಾವರ್ಧಕ ಸಂಘವು ದಿನಾಂಕ: ೨೬–೬–೨೦೨೩ ರಂದು ಶತಮಾನೋತ್ತರ ಬೆಳ್ಳಿಹಬ್ಬದ ಸವಿನೆನಪಿನಲ್ಲಿ **'ಹಳಗನ್ನಡ–ನಡುಗನ್ನಡ ಕಾವ್ಯಗಳ ರಸಾಸ್ವಾದನೆ'** ಉಪನ್ಯಾಸ ಮಾಲಿಕೆ–೧೩. **ನಯಸೇನನ 'ಧರ್ಮಾಮೃತ' ವಿಶೇಷ ಉಪನ್ಯಾಸ ಕಾರ್ಯಕ್ರಮ ಆಯೋಜಿಸಿತ್ತು.**

ಅತಿಥಿ ಉಪನ್ಯಾಸಕರಾಗಿ ಸಾಹಿತಿಗಳು ಮೈಸೂರಿನ ಡಾ. ರಾಜಶೇಖರ ಜಮದಂಡಿ ಆಗಮಿಸಿದ್ದರು. ಸಂಯೋಜನೆ, ಸಾಹಿತಿಗಳಾದ ಶ್ರೀ ವೆಂಕಟೇಶ ಮಾಚಕನೂರ, ಧಾರವಾಡ ಅವರದು.

**೯. 'ರಾಮಚಂದ್ರಚರಿತ ಪುರಾಣ' ವಿಶೇಷ ಉಪನ್ಯಾಸ**

ಕರ್ನಾಟಕ ವಿದ್ಯಾವರ್ಧಕ ಸಂಘವು ದಿನಾಂಕ: ೧೨–೭–೨೦೨೩ ರಂದು ಶತಮಾನೋತ್ತರ ಬೆಳ್ಳಿಹಬ್ಬದ ಸವಿನೆನಪಿನಲ್ಲಿ **'ಹಳಗನ್ನಡ–ನಡುಗನ್ನಡ ಕಾವ್ಯಗಳ ರಸಾಸ್ವಾದನೆ'** ಉಪನ್ಯಾಸ ಮಾಲಿಕೆ–೧೪. **ನಾಗಚಂದ್ರ ಕವಿಯ 'ರಾಮಚಂದ್ರಚರಿತ ಪುರಾಣ' ವಿಶೇಷ ಉಪನ್ಯಾಸ ಕಾರ್ಯಕ್ರಮ ಆಯೋಜಿಸಿತ್ತು.**

ಅತಿಥಿ ಉಪನ್ಯಾಸಕರಾಗಿ ಸಾಹಿತಿಗಳು ಧಾರವಾಡದ ಡಾ. ವಿನಯಾ ಒಕ್ಕುಂದ ಆಗಮಿಸಿದ್ದರು. ಸಂಯೋಜನೆ, ಸಾಹಿತಿಗಳಾದ ಶ್ರೀ ವೆಂಕಟೇಶ ಮಾಚಕನೂರ, ಧಾರವಾಡ ಅವರದು.

**೧೦. 'ವಡ್ಡಾರಾಧನೆ' ಕೃತಿ ಕುರಿತು ಉಪನ್ಯಾಸ**

ಕರ್ನಾಟಕ ವಿದ್ಯಾವರ್ಧಕ ಸಂಘವು ದಿನಾಂಕ: ೧೮–೭–೨೦೨೩ ರಂದು ಶತಮಾನೋತ್ತರ ಬೆಳ್ಳಿಹಬ್ಬದ ಸವಿನೆನಪಿನಲ್ಲಿ **'ಹಳಗನ್ನಡ–ನಡುಗನ್ನಡ ಕಾವ್ಯಗಳ ರಸಾಸ್ವಾದನೆ'** ಉಪನ್ಯಾಸ ಮಾಲಿಕೆ–೧೫. **ಶಿವಕೋಟ್ಯಾಚಾರ್ಯ ರಚಿತ 'ವಡ್ಡಾರಾಧನೆ'** ಕೃತಿ ಕುರಿತು **ಉಪನ್ಯಾಸ ಕಾರ್ಯಕ್ರಮ ಆಯೋಜಿಸಿತ್ತು.**

ಅತಿಥಿ ಉಪನ್ಯಾಸಕರಾಗಿ ನಿವೃತ್ತ ಪ್ರಾಧ್ಯಾಪಕ ಡಾ. ಕೆ. ಆರ್. ದುರ್ಗಾದಾಸ ಆಗಮಿಸಿದ್ದರು. ಸಂಯೋಜನೆ, ಸಾಹಿತಿಗಳಾದ ಶ್ರೀ ವೆಂಕಟೇಶ ಮಾಚಕನೂರ, ಧಾರವಾಡ ಅವರದು.

## ೧೧. **'ತೊರವೆ ರಾಮಾಯಣ' ಕುರಿತು ಉಪನ್ಯಾಸ**

ಕರ್ನಾಟಕ ವಿದ್ಯಾವರ್ಧಕ ಸಂಘವು ದಿನಾಂಕ: ೩೦–೭–೨೦೨೩ ರಂದು ಶತಮಾನೋತ್ತರ ಬೆಳ್ಳಿಹಬ್ಬದ ಸವಿನೆನಪಿನಲ್ಲಿ **'ಹಳಗನ್ನಡ–ನಡುಗನ್ನಡ ಕಾವ್ಯಗಳ ರಸಾಸ್ವಾದನೆ'** ಉಪನ್ಯಾಸ ಮಾಲಿಕೆ–೧೬. **'ತೊರವೆ ರಾಮಾಯಣ'** ಕುರಿತು **ಉಪನ್ಯಾಸ** ಕಾರ್ಯಕ್ರಮ ಆಯೋಜಿಸಿತ್ತು.

ಅತಿಥಿ ಉಪನ್ಯಾಸಕರಾಗಿ ನಿಗದಿಯ ಸರಕಾರಿ ಪದವಿಪೂರ್ವ ಕಾಲೇಜಿನ ಉಪನ್ಯಾಸಕರಾದ ಡಾ. ಶ್ರೀಧರ ಹೆಗಡೆ ಭದ್ರನ್ ಆಗಮಿಸಿದ್ದರು. ಸಂಯೋಜನೆ, ಸಾಹಿತಿಗಳಾದ ಶ್ರೀ ವೆಂಕಟೇಶ ಮಾಚಕನೂರ, ಧಾರವಾಡ ಅವರದು.

## ೧೨. **'ಭರತೇಶ ವೈಭವ' ಕುರಿತು ಉಪನ್ಯಾಸ**

ಕರ್ನಾಟಕ ವಿದ್ಯಾವರ್ಧಕ ಸಂಘವು ದಿನಾಂಕ: ೭–೮–೨೦೨೩ ರಂದು ಶತಮಾನೋತ್ತರ ಬೆಳ್ಳಿಹಬ್ಬದ ಸವಿನೆನಪಿನಲ್ಲಿ **'ಹಳಗನ್ನಡ–ನಡುಗನ್ನಡ ಕಾವ್ಯಗಳ ರಸಾಸ್ವಾದನೆ'** ಉಪನ್ಯಾಸ ಮಾಲಿಕೆ–೧೭. **ರತ್ನಾಕರವರ್ಣಿ ಕವಿಯ 'ಭರತೇಶ ವೈಭವ'** ಕುರಿತು **ಉಪನ್ಯಾಸ** ಕಾರ್ಯಕ್ರಮ ಆಯೋಜಿಸಿತ್ತು.

ಅತಿಥಿ ಉಪನ್ಯಾಸಕರಾಗಿ ಪ್ರಾಧ್ಯಾಪಕರು ಹಾಗೂ ಸಾಹಿತಿಗಳಾದ ಮಹಾಲಿಂಗಪೂರದ ಡಾ. ಅಶೋಕ ನರೋಡೆ ಆಗಮಿಸಿದ್ದರು. ಸಂಯೋಜನೆ, ಸಾಹಿತಿಗಳಾದ ಶ್ರೀ ವೆಂಕಟೇಶ ಮಾಚಕನೂರ, ಧಾರವಾಡ ಅವರದು.

## ೧೩. **'ಗಿರಿಜಾ ಕಲ್ಯಾಣ' ಕುರಿತು ಉಪನ್ಯಾಸ**

ಕರ್ನಾಟಕ ವಿದ್ಯಾವರ್ಧಕ ಸಂಘವು ದಿನಾಂಕ: ೧೬–೮–೨೦೨೩ ರಂದು ಶತಮಾನೋತ್ತರ ಬೆಳ್ಳಿಹಬ್ಬದ ಸವಿನೆನಪಿನಲ್ಲಿ **'ಹಳಗನ್ನಡ–ನಡುಗನ್ನಡ ಕಾವ್ಯಗಳ ರಸಾಸ್ವಾದನೆ'** ಉಪನ್ಯಾಸ ಮಾಲಿಕೆ–೧೮. **ಹರಿಹರನ 'ಗಿರಿಜಾ ಕಲ್ಯಾಣ'** ಕುರಿತು **ಉಪನ್ಯಾಸ** ಕಾರ್ಯಕ್ರಮ ಆಯೋಜಿಸಿತ್ತು.

ಅತಿಥಿ ಉಪನ್ಯಾಸಕರಾಗಿ ವಿಶ್ರಾಂತ ಪ್ರಾಧ್ಯಾಪಕರು ಮತ್ತು ಸಾಹಿತಿಗಳಾದ ಧಾರವಾಡದ ಡಾ. ಶಾಂತಾ ಇಮ್ರಾಪೂರ ಅವರು ಆಗಮಿಸಿದ್ದರು. ಸಂಯೋಜನೆ, ಸಾಹಿತಿಗಳಾದ ಶ್ರೀ ವೆಂಕಟೇಶ ಮಾಚಕನೂರ, ಧಾರವಾಡ ಅವರದು.

## ೧೪. **'ಮುದ್ರಾಮಂಜೂಷ' ಕುರಿತು ಉಪನ್ಯಾಸ**

ಕರ್ನಾಟಕ ವಿದ್ಯಾವರ್ಧಕ ಸಂಘವು ದಿನಾಂಕ: ೨೫–೮–೨೦೨೩ ರಂದು ಶತಮಾನೋತ್ತರ ಬೆಳ್ಳಿಹಬ್ಬದ ಸವಿನೆನಪಿನಲ್ಲಿ **'ಹಳಗನ್ನಡ–ನಡುಗನ್ನಡ ಕಾವ್ಯಗಳ ರಸಾಸ್ವಾದನೆ'** ಉಪನ್ಯಾಸ ಮಾಲಿಕೆ–೧೯. **ಕೆಂಪು ನಾರಾಯಣನ 'ಮುದ್ರಾಮಂಜೂಷ'** ಕುರಿತು **ಉಪನ್ಯಾಸ** ಕಾರ್ಯಕ್ರಮ ಆಯೋಜಿಸಿತ್ತು.

ಅತಿಥಿ ಉಪನ್ಯಾಸಕರಾಗಿ ಸಾಹಿತಿಗಳು ಹೊಸಪೇಟೆಯ ಡಾ. ರಹಮತ್ ತರೀಕೆರೆ ಅವರು ಆಗಮಿಸಿದ್ದರು. ಸಂಯೋಜನೆ, ಸಾಹಿತಿಗಳಾದ ಶ್ರೀ ವೆಂಕಟೇಶ ಮಾಚಕನೂರ, ಧಾರವಾಡ ಅವರದು.

## ೧೫. **'ಯಶೋಧರ ಚರಿತೆ' ಕುರಿತು ಉಪನ್ಯಾಸ**

ಕರ್ನಾಟಕ ವಿದ್ಯಾವರ್ಧಕ ಸಂಘವು ದಿನಾಂಕ: ೩೦–೮–೨೦೨೩ ರಂದು ಶತಮಾನೋತ್ತರ ಬೆಳ್ಳಿಹಬ್ಬದ ಸವಿನೆನಪಿನಲ್ಲಿ **'ಹಳಗನ್ನಡ–ನಡುಗನ್ನಡ ಕಾವ್ಯಗಳ ರಸಾಸ್ವಾದನೆ'** ಉಪನ್ಯಾಸ ಮಾಲಿಕೆ–೨೦. **ಜನ್ನ ಕವಿಯ 'ಯಶೋಧರ ಚರಿತೆ'** ಕುರಿತು **ಉಪನ್ಯಾಸ** ಕಾರ್ಯಕ್ರಮ ಆಯೋಜಿಸಿತ್ತು.

ಅತಿಥಿ ಉಪನ್ಯಾಸಕರಾಗಿ ಸಾಹಿತಿಗಳು ಬೆಳಗಾವಿಯ ಡಾ. ರಾಮಕೃಷ್ಣ ಮರಾಠೆ ಅವರು ಆಗಮಿಸಿದ್ದರು. ಸಂಯೋಜನೆ, ಸಾಹಿತಿಗಳಾದ ಶ್ರೀ ವೆಂಕಟೇಶ ಮಾಚಕನೂರ, ಧಾರವಾಡ ಅವರದು.

## ೧೬. **'ಕಬ್ಬಿಗರ ಕಾವಂ' ಕುರಿತು ಉಪನ್ಯಾಸ**

ಕರ್ನಾಟಕ ವಿದ್ಯಾವರ್ಧಕ ಸಂಘವು ದಿನಾಂಕ: ೭-೯-೨೦೨೩ ರಂದು ಶತಮಾನೋತ್ತರ ಬೆಳ್ಳಿಹಬ್ಬದ ಸವಿನೆನಪಿನಲ್ಲಿ **'ಹಳಗನ್ನಡ-ನಡುಗನ್ನಡ ಕಾವ್ಯಗಳ ರಸಾಸ್ವಾದನೆ'** ಉಪನ್ಯಾಸ ಮಾಲಿಕೆ-೨೧. **ಆಂಡಯ್ಯ ಕವಿಯ 'ಕಬ್ಬಿಗರ ಕಾವಂ'** ಕುರಿತು **ಉಪನ್ಯಾಸ** ಕಾರ್ಯಕ್ರಮ ಆಯೋಜಿಸಿತ್ತು.

ಅತಿಥಿ ಉಪನ್ಯಾಸಕರಾಗಿ ಪ್ರಾಧ್ಯಾಪಕರು ಮತ್ತು ಸಾಹಿತಿಗಳಾದ ಹುಬ್ಬಳ್ಳಿಯ ಡಾ. ರಂಗನಾಥ ಕಂಟನಕುಂಟೆ ಅವರು ಆಗಮಿಸಿದ್ದರು. ಸಂಯೋಜನೆ, ಸಾಹಿತಿಗಳಾದ ಶ್ರೀ ವೆಂಕಟೇಶ ಮಾಚಕನೂರ, ಧಾರವಾಡ ಅವರದು.

## ೧೭. **'ಕವಿರಾಜಮಾರ್ಗ' ಕುರಿತು ಉಪನ್ಯಾಸ**

ಕರ್ನಾಟಕ ವಿದ್ಯಾವರ್ಧಕ ಸಂಘವು ದಿನಾಂಕ: ೧೬-೯-೨೦೨೩ ರಂದು ಶತಮಾನೋತ್ತರ ಬೆಳ್ಳಿಹಬ್ಬದ ಸವಿನೆನಪಿನಲ್ಲಿ **'ಹಳಗನ್ನಡ-ನಡುಗನ್ನಡ ಕಾವ್ಯಗಳ ರಸಾಸ್ವಾದನೆ'** ಉಪನ್ಯಾಸ ಮಾಲಿಕೆ-೨೨. **'ಕವಿರಾಜಮಾರ್ಗ'** ಕುರಿತು **ಉಪನ್ಯಾಸ** ಕಾರ್ಯಕ್ರಮ ಆಯೋಜಿಸಿತ್ತು.

ಅತಿಥಿ ಉಪನ್ಯಾಸಕರಾಗಿ ವಿಶ್ರಾಂತ ಪ್ರಾಧ್ಯಾಪಕರಾದ ಧಾರವಾಡದ ಡಾ. ಡಿ. ಎಂ. ಹಿರೇಮಠ ಅವರು ಆಗಮಿಸಿದ್ದರು. ಸಂಯೋಜನೆ, ಸಾಹಿತಿಗಳಾದ ಶ್ರೀ ವೆಂಕಟೇಶ ಮಾಚಕನೂರ, ಧಾರವಾಡ ಅವರದು.

## ೧೮. **'ರಾಜಶೇಖರ ವಿಳಾಸಂ' ವಿಶೇಷ ಉಪನ್ಯಾಸ**

ಕರ್ನಾಟಕ ವಿದ್ಯಾವರ್ಧಕ ಸಂಘವು ದಿನಾಂಕ: ೧೭-೧೦-೨೦೨೩ ರಂದು ಶತಮಾನೋತ್ತರ ಬೆಳ್ಳಿಹಬ್ಬದ ಸವಿನೆನಪಿನಲ್ಲಿ **'ಹಳಗನ್ನಡ-ನಡುಗನ್ನಡ ಕಾವ್ಯಗಳ ರಸಾಸ್ವಾದನೆ'** ಉಪನ್ಯಾಸ ಮಾಲಿಕೆ-೨೩. **ಷಡಕ್ಷರದೇವ ಕವಿಯ 'ರಾಜಶೇಖರ ವಿಳಾಸಂ'** ಕುರಿತು **ಉಪನ್ಯಾಸ** ಕಾರ್ಯಕ್ರಮ ಆಯೋಜಿಸಿತ್ತು.

ಅತಿಥಿ ಉಪನ್ಯಾಸಕರಾಗಿ ವಿಶ್ರಾಂತ ಪ್ರಾಧ್ಯಾಪಕರಾದ ಕಾಗವಾಡದ ಡಾ. ಎಮ್. ಬಿ. ಹೂಗಾರ ಅವರು ಆಗಮಿಸಿದ್ದರು. ಸಂಯೋಜನೆ, ಸಾಹಿತಿಗಳಾದ ಶ್ರೀ ವೆಂಕಟೇಶ ಮಾಚಕನೂರ, ಧಾರವಾಡ ಅವರದು.

## ೧೯. **'ಅನುಭವಾಮೃತ' ಕಾವ್ಯದ ರಸಾಸ್ವಾದನೆ**

ಕರ್ನಾಟಕ ವಿದ್ಯಾವರ್ಧಕ ಸಂಘವು ದಿನಾಂಕ: ೨೫-೧೦-೨೦೨೩ ರಂದು ಶತಮಾನೋತ್ತರ ಬೆಳ್ಳಿಹಬ್ಬದ ಸವಿನೆನಪಿನಲ್ಲಿ **'ಹಳಗನ್ನಡ-ನಡುಗನ್ನಡ ಕಾವ್ಯಗಳ ರಸಾಸ್ವಾದನೆ'** ಉಪನ್ಯಾಸ ಮಾಲಿಕೆ-೨೪. **ಮಹಾಲಿಂಗರಂಗನ 'ಅನುಭವಾಮೃತ'** ಕಾವ್ಯದ ರಸಾಸ್ವಾದನೆ ಕಾರ್ಯಕ್ರಮ ಆಯೋಜಿಸಿತ್ತು.

ಅತಿಥಿ ಉಪನ್ಯಾಸಕರಾಗಿ ವಿಶ್ರಾಂತ ಪ್ರಾಧ್ಯಾಪಕರಾದ ತಾಳಿಕೋಟೆಯ ಡಾ. ಗುರುಪಾದ ಘಿವಾರಿ ಅವರು ಆಗಮಿಸಿದ್ದರು. ಸಂಯೋಜನೆ, ಸಾಹಿತಿಗಳಾದ ಶ್ರೀ ವೆಂಕಟೇಶ ಮಾಚಕನೂರ, ಧಾರವಾಡ ಅವರದು.

## ೨೦. **'ಲಕ್ಷ್ಮೀಶನ ಜೈಮಿನಿ ಭಾರತ' ಆಯ್ದ ರಸ ಪ್ರಸಂಗಗಳು**

ಕರ್ನಾಟಕ ವಿದ್ಯಾವರ್ಧಕ ಸಂಘವು ದಿನಾಂಕ: ೩೧-೧೦-೨೦೨೩ ರಂದು ಶತಮಾನೋತ್ತರ ಬೆಳ್ಳಿಹಬ್ಬದ ಸವಿನೆನಪಿನಲ್ಲಿ **'ಹಳಗನ್ನಡ-ನಡುಗನ್ನಡ ಕಾವ್ಯಗಳ ರಸಾಸ್ವಾದನೆ'** ಉಪನ್ಯಾಸ ಮಾಲಿಕೆ-೨೫. **'ಲಕ್ಷ್ಮೀಶನ ಜೈಮಿನಿ ಭಾರತ' ಆಯ್ದ ರಸ ಪ್ರಸಂಗಗಳು** ಉಪನ್ಯಾಸ ಕಾರ್ಯಕ್ರಮ ಆಯೋಜಿಸಿತ್ತು.

ಅತಿಥಿ ಉಪನ್ಯಾಸಕರಾಗಿ ಹಿರೇಮಲ್ಲೂರ ಈಶ್ವರನ್ ಪ.ಪೂ. ಕಾಲೇಜಿನ್ ಅಧ್ಯಾಪಕರಾದ ಡಾ. ಈರಣ್ಣ ಇಂಜಗನೇರಿ ಅವರು ಆಗಮಿಸಿದ್ದರು. ಸಂಯೋಜನೆ, ಸಾಹಿತಿಗಳಾದ ಶ್ರೀ ವೆಂಕಟೇಶ ಮಾಚಕನೂರ, ಧಾರವಾಡ ಅವರದು.

## ೨೧. 'ಕುಮಾರವ್ಯಾಸ ಭಾರತದ' ಆಯ್ದ ರಸ ಪ್ರಸಂಗಗಳು

ಕರ್ನಾಟಕ ವಿದ್ಯಾವರ್ಧಕ ಸಂಘವು ದಿನಾಂಕ: ೧೮–೧೧–೨೦೨೩ ರಂದು ಶತಮಾನೋತ್ತರ ಬೆಳ್ಳಿಹಬ್ಬದ ಸವಿನೆನಪಿನಲ್ಲಿ **'ಹಳಗನ್ನಡ–ನಡುಗನ್ನಡ ಕಾವ್ಯಗಳ ರಸಾಸ್ವಾದನೆ'** ಉಪನ್ಯಾಸ ಮಾಲಿಕೆ–೨೬. **'ಕುಮಾರವ್ಯಾಸ ಭಾರತದ'ಆಯ್ದ ರಸ ಪ್ರಸಂಗಗಳು** ಉಪನ್ಯಾಸ ಕಾರ್ಯಕ್ರಮ ಆಯೋಜಿಸಿತ್ತು.

ಅತಿಥಿ ಉಪನ್ಯಾಸಕರಾಗಿ ವಿಶ್ರಾಂತ ಪ್ರಾಧ್ಯಾಪಕರಾದ ಇಳಕಲ್‌ದ ಡಾ. ಶಂಭು ಬಳಿಗಾರ ಅವರು ಆಗಮಿಸಿದ್ದರು. ಸಂಯೋಜನೆ, ಸಾಹಿತಿಗಳಾದ ಶ್ರೀ ವೆಂಕಟೇಶ ಮಾಚಕನೂರ, ಧಾರವಾಡ ಅವರದು.

## ೨೨. 'ಕುಮಾರರಾಮ ಸಾಂಗತ್ಯ' ಕಾವ್ಯದ ರಸಾಸ್ವಾದನೆ

ಕರ್ನಾಟಕ ವಿದ್ಯಾವರ್ಧಕ ಸಂಘವು ದಿನಾಂಕ: ೨೩–೧೧–೨೦೨೩ ರಂದು **ಶತಮಾನೋತ್ತರ ಬೆಳ್ಳಿಹಬ್ಬದ ಸವಿನೆನಪಿನಲ್ಲಿ 'ಹಳಗನ್ನಡ–ನಡುಗನ್ನಡ ಕಾವ್ಯಗಳ ರಸಾಸ್ವಾದನೆ'** ಉಪನ್ಯಾಸ ಮಾಲಿಕೆ–೨೭. ಹಾಗೂ **ಸರಣಿ ಉಪನ್ಯಾಸ ಮಾಲಿಕೆಯ ವಿರಾಮ ಕಾರ್ಯಕ್ರಮ** ಆಯೋಜಿಸಿತ್ತು.

ಅತಿಥಿ ಉಪನ್ಯಾಸಕರಾಗಿ ಸಾಹಿತಿಗಳಾದ ಸವದತ್ತಿಯ ಡಾ. ವೈ. ಎಂ. ಯಾಕೊಳ್ಳಿ ಅವರು ಆಗಮಿಸಿದ್ದರು. ಮೇಜರ್ ಸಿದ್ದಲಿಂಗಯ್ಯ ಹಿರೇಮಠ, ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ನಗರ ಮತ್ತು ಮೂಲ ಸೌಕರ್ಯ ಅಭಿವೃದ್ಧಿ ಹಾಗೂ ಹಣಕಾಸು ನಿಗಮ, ಪ್ರಾದೇಶಿಕ ಕಛೇರಿ, ಹುಬ್ಬಳ್ಳಿ ಅವರು ಸಮಾರೋಪ ನುಡಿಗಳನ್ನಾಡಲು ಆಗಮಿಸಿದ್ದರು. ಸಾಹಿತಿಗಳಾದ ಶ್ರೀ ವೆಂಕಟೇಶ ಮಾಚಕನೂರ, ಧಾರವಾಡ ಅವರು ಅಧ್ಯಕ್ಷತೆ ವಹಿಸಿದ್ದರು.

ಹುಬ್ಬಳ್ಳಿಯ ಶ್ರೀಮತಿ ಪಲ್ಲವಿ ಖಾನಪೇಟ ಹಾಗೂ ತಂಡದವರಿಂದ 'ಸುಗಮ ಸಂಗೀತ' ಕಾರ್ಯಕ್ರಮ ಜರುಗಿತು.

* = * = * = *

ಇಂದಿನ ಯುವ ಪೀಳಿಗೆಯಲ್ಲಿ ಮತ್ತು ಶಿಕ್ಷಕ ವಲಯದಲ್ಲಿ ಹಳಗನ್ನಡ ಸಾಹಿತ್ಯದ ಓದಿನ ಅಭಿರುಚಿಯನ್ನು ಹೆಚ್ಚಿಸುವ ಕಾಳಜಿಯಿಂದ ಸಂಘವು **'ಹಳಗನ್ನಡ ಕಾವ್ಯಗಳ ರಸಾಸ್ವಾದನೆ'** ಶಿರ್ಷಿಕೆಯಡಿ **ಹಳಗನ್ನಡದ ಮರು ಓದಿನ ಸರಣಿ ಕಾರ್ಯಕ್ರಮಗಳನ್ನು** ರೂಪಿಸಿ, ನಾಡಿನ ಬೇರೆ ಬೇರೆ ವಿದ್ವಾಂಸರಿಂದ ೨೦೨೩ ರ ಫೆಬ್ರುವರಿಯಿಂದ ನವ್ಹಂಬರವರೆಗೆ **ಒಟ್ಟು ೨೭** ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಆಯೋಜಿಸಿದೆ. ಈ ಎಲ್ಲ ಉಪನ್ಯಾಸಗಳ ಸಾರವನ್ನು ಕ್ರೂಢೀಕರಿಸಿ ಸಂಘವು **'ಸುಲಿದ ಬಾಳೆಯ ಹಣ್ಣಿನಂದದಿ': ಪ್ರಾಚೀನ ಕನ್ನಡ ಕಾವ್ಯಗಳ ರಸಾಸ್ವಾದನೆ** ಎಂಬ ೩೬೬ ಪುಟಗಳ ಕೃತಿಯನ್ನು ಪ್ರಕಟಿಸಿದೆ.

* = * = * = *

# ಗಡಿನಾಡಿನಲ್ಲಿ ಕನ್ನಡ ಜಾಗೃತಿ ಮತ್ತು ಸಾಂಸ್ಕೃತಿಕ ಸಂಭ್ರಮ

## ವಿಚಾರ ಸಂಕಿರಣ ಹಾಗೂ ಕವಿಗೋಷ್ಠಿ

### ಶ್ರೀ ಸುಕ್ಷೇತ್ರ ಗಚ್ಚಿನಮಠ, ಅಥಣಿ
### ದಿನಾಂಕ: ೨೪, ೨೫ ಫೆಬ್ರವರಿ ೨೦೨೪ ಶನಿವಾರ ಮತ್ತು ರವಿವಾರ

ಕನ್ನಡ ನಾಡಿನಲ್ಲಿ ಕನ್ನಡದ ಜಾಗೃತಿ ಮಾಡುವ ಅನಿವಾರ್ಯತೆ ಒದಗಿ ಬರುತ್ತಿರುವದು ವಿಷಾದನೀಯವೆಂದು ಅಥಣಿಯ ವಿಶ್ರಾಂತ ಉಪನ್ಯಾಸಕ ಹಾಗೂ ಸಾಹಿತಿ ಡಾ. ಬಾಳಾಸಾಹೇಬ ಲೋಕಾಪೂರ ಹೇಳಿದರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು ಸುಕ್ಷೇತ್ರ ಗಚ್ಚಿನಮಠ, ಮೋಟಗಿಮಠ, ವಿಮೋಚನಾ ಸಂಸ್ಥೆ, ಕಸಾಪ ಹಾಗೂ ಸಾಹಿತ್ಯ ಸಂಸ್ಕೃತಿಕ ಸಂಘ ಅಥಣಿ ಇವರ ಸಹಯೋಗದಲ್ಲಿ **ಬೆಳಗಾವಿ ಜಿಲ್ಲೆಯ ಅಥಣಿಯ ಸುಕ್ಷೇತ್ರ ಗಚ್ಚಿನ ಮಠದಲ್ಲಿ** ಆಯೋಜಿಸಿದ್ದ **ಗಡಿನಾಡಿನಲ್ಲಿ ಕನ್ನಡ ಜಾಗೃತಿ ಮತ್ತು ಸಾಂಸ್ಕೃತಿಕ ಸಂಭ್ರಮ** ಎರಡು ದಿನದ ಸಮಾರಂಭವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ಅವರು ಜನ ಸಾಮಾನ್ಯರಿಗೆ ಬೇಡವಾಗಿರುವ ಗಡಿ ಮತ್ತು ಭಾಷಾ ವಿವಾದ ರಾಜಕೀಯ ಹಿತಾಸಕ್ತಿಯಾಗಿ ಕೆಲವರ ಚಿತಾವಣೆಯಿಂದ ಜೀವಂತವಾಗಿಡಲು ಪ್ರಯತ್ನಿಸಲಾಗುತ್ತಿದ್ದು ಇದಕ್ಕೊಂದು ಅಂತ್ಯ ಹಾಡಬೇಕಾದರೆ ಪ್ರತಿಯೊಬ್ಬರಲ್ಲಿ ಅಖಂಡ ಕರ್ನಾಟಕದ ಪರಿಕಲ್ಪನೆ ಮೂಡಬೇಕಾಗಿದೆ.

ಕರ್ನಾಟಕದ ಗಡಿ ಭಾಗದ ಹದಿನೇಳು ಜಿಲ್ಲೆಗಳ ಜನರು ಗಡಿ ವಿವಾದ, ಭಾಷಾ ವಿವಾದಗಳಂತಹ ಅನೇಕ ಸಮಸ್ಯೆಗಳನ್ನು ಎದುರಿಸುತ್ತಾ ಕಾಲ ಕಳೆಯುವಂತಾಗಿದೆ , ರಾಜ್ಯದ ಅನೇಕ ಗ್ರಾಮಗಳು ಈಗಾಗಲೇ ಪಕ್ಕದ ರಾಜ್ಯಗಳನ್ನು ಸೇರಿವೆ ಆದರೂ ಸಮಸ್ಯೆ ಬಗೆಹರಿಯುತ್ತಿಲ್ಲವೆಂದು ಹೇಳಿದ ಲೋಕಾಪೂರ ಅವರು ಮಹಾರಾಷ್ಟ್ರ, ಆಂಧ್ರ, ಕೇರಳ, ಗೋವಾದಲ್ಲಿ ದೊರೆತಿರುವ ಬಹುತೇಕ ಶಾಸನಗಳು ಕನ್ನಡದಲ್ಲಿವೆ. ಇವುಗಳನ್ನು ಗಮನಿಸಿದಾಗ ಅಂತಹ ಸ್ಥಳಗಳು ಮೂಲತ ಕರ್ನಾಟಕದ್ದಾಗಿದ್ದವು ಎಂದು ಅರಿತುಕೊಳ್ಳಬಹುದಾಗಿದೆ, ಗಡಿ ನಾಡಿನಲ್ಲಿ ಮುಚ್ಚುತ್ತಿರುವ ಕನ್ನಡ ಶಾಲೆಗಳನ್ನು ಮತ್ತು ಕನ್ನಡ ಕಲೆ ಸಾಹಿತ್ಯ, ಸಂಸ್ಕೃತಿಯನ್ನು ಉಳಿಸಿ ಬೆಳೆಸಿಕೊಂಡು ಹೋಗಲು ಅವಿರತ ಪರಿಶ್ರಮ ಅವಶ್ಯವಿದ್ದು ಕನ್ನಡ ಅಭಿವೃದ್ದಿ ಮತ್ತು ಗಡಿ ಅಭಿವೃದ್ದಿ ಪ್ರಾಧಿಕಾರಗಳು ಶ್ರಮಿಸಬೇಕಾಗಿದೆ, ಜೊತೆಗೆ ಗಡಿ ನಾಡಿನಲ್ಲಿ ಗಡಿನಾಡು ಸಾಂಸ್ಕೃತಿಕ ಪ್ರಾಧಿಕಾರ ರಚನೆ, ಕೈಗಾರಿಕೆಗಳ ಸ್ಥಾಪನೆ ಮಾಡುವ ಮೂಲಕ ಗಡಿ ಕನ್ನಡಿಗರ ಆರ್ಥಿಕ ಸಭಲತೆಗೆ ಸಹಕರಿಸಬೇಕು ಹಾಗೂ ಪ್ರತಿಯೊಬ್ಬ ಸರಕಾರಿ ನೌಕರರು ಕನಿಷ್ಠ ಮೂರು ವರ್ಷ ಗಡಿ ನಾಡಿನಲ್ಲಿ ಸೇವೆ ಸಲ್ಲಿಸುವದನ್ನು ಸರ್ಕಾರ ಕಡ್ಡಾಯ ಮಾಡಬೇಕು ಎಂದು ಸಾಹಿತಿ ಲೋಕಾಪೂರ ಅವರು ಸರಕಾರವನ್ನು ಆಗ್ರಹಿಸಿದರು.

ಸಮಾರಂಭದ ಅತಿಥಿಗಳಾಗಿದ್ದ ಹಿರಿಯ ವೈದ್ಯ ಡಾ. ಮಲ್ಲಿಕಾರ್ಜುನ ಹಂಜಿ ಮಾತನಾಡಿ ಅಥಣಿ ನಾಡಿಗೆ ಸಾಹಿತ್ಯಿಕ, ಸಂಸ್ಕೃತಿಕ, ಧಾರ್ಮಿಕವಾಗಿ ಬಹುದೊಡ್ಡ ಕೊಡುಗೆಯನ್ನು ನೀಡಿದ ಇತಿಹಾಸವಿದೆ ಎಂದರು. ಸಮಾಜದ ಗಣ್ಯರಾದ ಅರವಿಂದರಾವ ದೇಶಪಾಂಡೆ ಅತಿಥಿಗಳಾಗಿ ಮಾತನಾಡುತ್ತಾ ಧಾರವಾಡಕ್ಕೆ ಮತ್ತು ಅಥಿಣಿಗೆ ಅವಿನಾಭಾವ ಸಂಬಂಧ ಇದೆ. ಅಥಣಿ ಶಿವಯೋಗಿಗಳು ಧಾರವಾಡದ ಮುರಘಾಮಠ ಸ್ಥಾಪನೆಗೆ ಪ್ರೇರಣಾ ಶಕ್ತಿಯಾಗಿ ನಿಂತವರು, ಅಥಣಿಗೆ ಬರದೇ ಇರುವ ಯಾವ ಸಾಹಿತಿಗಳೂ ಇಲ್ಲ. ದ.ರಾ ಬೇಂದ್ರೆಯವರು ಅಥಣಿ ಸಾಹಿತ್ಯ ಸಂಸ್ಕೃತಿಕ ಸಂಘವನ್ನು ಉದ್ಘಾಟನೆ ಮಾಡಿದರು. ಅದು ಎಪ್ಪತ್ತೈದು ವರ್ಷಗಳಿಂದ ಕಾರ್ಯಮಾಡುತ್ತಿದೆ ಎಂದು ಧಾರವಾಡ ಅಥಣಿ ಸಂಬಂಧಗಳನ್ನು ನೆನಪಿಸಿದರು. ಸಮಾಜದ ಮುಖಂಡ ಗಜಾನನ ಮಂಗಸೂಳಿ ಮಾತನಾಡಿ ಕರ್ನಾಟಕ ವಿದ್ಯಾವರ್ಧಕ ಸಂಘವು ಅಥಣಿಯಲ್ಲಿ ಘಟಕವನ್ನು ಸ್ಥಾಪಿಸುವಂತಾಗಬೇಕು. ಅದಕ್ಕೆ ಎಲ್ಲ ರೀತಿಯ ಸಹಾಯವನ್ನು ಅಥಣಿ ಜನ ಮಾಡುವರು ಎಂದರು.

ಅಥಣಿ ತಾಲೂಕ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಲ್ಲಿಕಾರ್ಜುನ ಕನಶೆಟ್ಟಿ ಮತ್ತು ಸಾಹಿತ್ಯ ಸಾಂಸ್ಕೃತಿಕ ಸಂಘದ ಅಧ್ಯಕ್ಷೆ ಡಾ. ಪ್ರಿಯಂವದಾ ಆಣೆಪ್ಪನವರ ಮಾತಾಡಿದರು.

ಸಮಾರಂಭದ ಸಾನ್ನಿಧ್ಯವನ್ನು ಅಥಣಿಯ ಸುಕ್ಷೇತ್ರ ಗಚ್ಚಿನಮಠ ಮನಿಪ್ರ ಶಿವಬಸವ ಮಹಾಸ್ವಾಮಿಗಳು ವಹಿಸಿದ್ದರು. ಅಧ್ಯಕ್ಷತೆ ವಹಿಸಿದ್ದ ಕವಿವ ಸಂಘದ ಅಧ್ಯಕ್ಷ ಚಂದ್ರಕಾಂತ ಬೆಲ್ಲದ ಮಾತನಾಡಿ, ಗಡಿ ಭಾಗದಲ್ಲಿ ಕನ್ನಡ ಉಳಿಸಿ ಬೆಳೆಸಲು ಸಂಘ ಹಮ್ಮಿಕೊಳ್ಳುತ್ತಿರುವ ಕಾರ್ಯಕ್ರಮಗಳಿಗೆ ಗಡಿನಾಡಿನ ಜನರ ಸಹಕಾರ ಶ್ಲಾಘನೀಯವಾಗಿದೆ ಎಂದರು.

ಕವಿವ ಸಂಘದ ಪ್ರಧಾನ ಕಾರ್ಯದರ್ಶಿ ಶಂಕರ ಹಲಗತ್ತಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಡಾ. ಧನವಂತ ಹಾಜವಗೋಳ ಸ್ವಾಗತಿಸಿದರು. ಶಿವಾನಂದ ಟವಳಿ ಕಾರ್ಯಕ್ರಮ ನಿರೂಪಿಸಿದರು, ವೀರಣ್ಣ ವಡ್ಡಿನ ವಂದಿಸಿದರು. ಸಮಾರಂಭದಲ್ಲಿ ಕ.ವಿ.ವ. ಸಂಘದ ಉಪಾಧ್ಯಕ್ಷೆ ಮಾಲತಿ ಪಟ್ಟಣಶೆಟ್ಟಿ, ವಿಮೋಚನಾ ಸಂಸ್ಥೆಯ ಅಧ್ಯಕ್ಷ ಬಿ. ಎಲ್. ಪಾಟೀಲ, ಶಿವಾನಂದ ಭಾವಿಕಟ್ಟಿ, ಡಾ. ಸಂಜೀವ ಕುಲಕರ್ಣಿ ಇದ್ದರು.

## ಗೋಷ್ಠಿ–೧
## ಸಾಹಿತ್ಯ ಮತ್ತು ಸಂಸ್ಕೃತಿ ಸೃಜನಶೀಲತೆಯ ಸವಾಲುಗಳು

ಈ ಹಿಂದೆ ಕರ್ನಾಟಕ ಕೇವಲ ಗಡಿಭಾಗದ ನಾಡುಗಳನಷ್ಟೇ ಕಳೆದುಕೊಂಡಿಲ್ಲ. ಬದಲಾಗಿ ಅಲ್ಲಿನ ಪ್ರಾದೇಶಿಕ ಸಾಹಿತ್ಯವನ್ನು ಕಳೆದುಕೊಂಡಿದೆ ಎಂದು ಡಾ. ಗುರುಪಾದ ಮರೆಗುದ್ದಿ ಹೇಳಿದರು.

ಅವರು ಕರ್ನಾಟಕ ವಿದ್ಯಾವರ್ಧ ಸಂಘವು ಅಥಣಿಯಲ್ಲಿ ಆಯೋಜಿಸಿದ್ದ **ಗಡಿನಾಡಿನಲ್ಲಿ ಕನ್ನಡ ಜಾಗೃತಿ ಮತ್ತು ಸಾಂಸ್ಕೃತಿಕ ಸಂಭ್ರಮ** ಕಾರ್ಯಕ್ರಮದಲ್ಲಿ **'ಸಾಹಿತ್ಯ ಮತ್ತು ಸಂಸ್ಕೃತಿ ಮೊದಲ ಗೋಷ್ಠಿ'** ಯಲ್ಲಿ ಮಾತನಾಡಿದ ಅವರು ಕನ್ನಡದ ಉಪಭಾಷೆಯ ಸಮುದಾಯಗಳ ಜನರ ಭಾಷಾ ಪ್ರಯೋಗವನ್ನು ಬಳಸಿಕೊಂಡ ಸಾಹಿತ್ಯಗಳು ರಚನೆಯಾಗಬೇಕು. ಅದರಲ್ಲಿ ಸೃಜನಶೀಲತೆಯ ಕಾವ್ಯಗಳು ಅಡಗಿವೆ, ಆಧುನಿಕತೆಯಲ್ಲಿ ಮಾಧ್ಯಮಗಳ ಶಿಷ್ಟಭಾಷ ಪ್ರಯೋಗದಿಂದ ಪ್ರಭಾವಿತರಾಗುತ್ತಿದ್ದೇವೆ. ಆದರೆ ನಮ್ಮ ಮೂಲ ಸಂಸ್ಕೃತಿಯ ಮರೆಯುತ್ತಿದ್ದೇವೆ, ಸೃಜನಶೀಲ ಸಾಹಿತಿ, ಕಲಾವಿದ ಮತ್ತು ಈ ನೆಲವನ್ನ ಅರ್ಥಮಾಡಿಕೊಳ್ಳದಿದ್ದರೆ ಇಲ್ಲಿಯ ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ ಎಂದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರೊ. ಶ್ರೀಶೈಲ ಹೊರ್ತಿಕರ ಕನ್ನಡ ಕಲಿಸಿದರೆ ಕನಿಷ್ಠರು ಎನ್ನುವ ಪ್ರಜ್ಞೆಯನ್ನು ಇಂದಿನ ಜನರು ಬೆಳಸಿಕೊಂಡು ಪಾಶ್ಚಿಮಾತ್ಯರ ಅಂದಾನುಕರಣೆಯಲ್ಲಿ ತೊಡಗುತ್ತಿದ್ದಾರೆ. ಈ ವ್ಯವಸ್ಥೆ ಬದಲಾಗಬೇಕಿದೆ, ಪಾಶ್ಚಿಮಾತ್ಯರ ಅನುಕರಣೆಯಿಂದಾಗಿ ನಮ್ಮ ಸಂಸ್ಕೃತಿಯು ನಾಶವಾಗುತ್ತಿದೆ, ಮೊಬೈಲ ಬಳಕೆಯಿಂದಾಗಿ ನಮ್ಮತನವನ್ನು ಕಳೆದುಕೊಂಡು ನಮ್ಮ ಭಾಷೆಯನ್ನು ದೂರ ಮಾಡಿಕೊಳ್ಳುತ್ತಿದ್ದು ಜನರು ಆಂಗ್ಲಭಾಷಾ ವ್ಯಾಮೋಹಕ್ಕೆ ಒಳಗಾಗುತ್ತಿರುವದು ವಿಷಾದನೀಯ ಎಂದರು.

ಕ.ವಿ.ವ. ಸಂಘದ ಪ್ರಧಾನ ಕಾರ್ಯದರ್ಶಿ ಶಂಕರ ಹಲಗತ್ತಿ ಮತ್ತು ಕಾರ್ಯಕಾರಿ ಸಮಿತಿ ಸದಸ್ಯ ಡಾ. ಧನವಂತ ಹಾಜವಗೋಳ ವೇದಿಕೆಯಲ್ಲಿದ್ದರು. ಡಾ. ಚಿದಾನಂದ ಮಾಸನಕಟ್ಟಿ ಸ್ವಾಗತಿಸಿದರು ಗುರುರಾಜ ಸಬನೀಸ ನಿರೂಪಿಸಿ ವಂದಿಸಿದರು.

## ಗೋಷ್ಠಿ–೨
## ಕನ್ನಡ–ಮರಾಠಿ ಬಾಂಧವ್ಯ

ದಕ್ಷಿಣ ಮಹಾರಾಷ್ಟ್ರ ಮತ್ತು ಉತ್ತರ ಕರ್ನಾಟಕ ಒಂದೇ ಸಂಸ್ಕೃತಿಯಿಂದ ವಿಭಜಿಸಲ್ಪಟ್ಟ ಎರಡು ಪ್ರದೇಶಗಳು. ಎರಡು ಪ್ರದೇಶ ಸಂಪ್ರದಾಯಗಳು ಒಂದೇ ರೀತಿಯದಾಗಿದ್ದು ಭಾಷೆಗಳು ವಿಭಿನ್ನವಾಗಿವೆ ಎಂದು ಡಾ. ಸಂಜೀವ ಕುಲಕರ್ಣಿ ಹೇಳಿದರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು, ಶ್ರೀ ಸುಕ್ಷೇತ್ರ ಗಚ್ಚಿನಮಠ, ಅಥಣಿ, ಶ್ರೀ ಮೋಟಗಿಮಠ ಅಥಣಿ, ವಿಮೋಚನಾ ಸಂಸ್ಥೆ ಅಥಣಿ, ಅಥಣಿ ತಾಲೂಕಾ ಕನ್ನಡ ಸಾಹಿತ್ಯ ಪರಿಷತ್ತು, ಸಾಹಿತ್ಯ ಸಾಂಸ್ಕೃತಿಕ ಸಂಘ,

ಅಥಣಿ ಸಹಭಾಗಿತ್ವದಲ್ಲಿ ಕರ್ನಾಟಕ-೫೦ ಸಂಭ್ರಮ ಅಂಗವಾಗಿ ದಿನಾಂಕ ೨೪, ೨೫ ಫೆಬ್ರವರಿ ೨೦೨೪ ರಂದು ಎರಡು ದಿನಗಳ ಕಾಲ ಅಥಣಿಯ ಶ್ರೀ ಸುಕ್ಷೇತ್ರ ಗಚ್ಚಿನಮಠದಲ್ಲಿ ಆಯೋಜಿಸಿರುವ 'ಗಡಿನಾಡಿನಲ್ಲಿ ಕನ್ನಡ ಜಾಗೃತಿ ಮತ್ತು ಸಾಂಸ್ಕೃತಿಕ ಸಂಭ್ರಮ' ವಿಚಾರ ಸಂಕಿರಣ ಹಾಗೂ ಕವಿಗೋಷ್ಠಿಯಲ್ಲಿ ಮೊದಲ ದಿನದ **ಕನ್ನಡ-ಮರಾಠಿ ಬಾಂಧವ್ಯ ಗೋಷ್ಠಿ-೨ ರಲ್ಲಿ 'ಕನ್ನಡ ಮರಾಠಿ ಬಿಡಿಸಲಾಗದ ನಂಟು'** ಕುರಿತು ವಿಷಯ ಮಂಡನೆ ಮಾಡುತ್ತಿದ್ದರು.

ಭಾಷೆಗಳು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶದಕ್ಕೆ ಅಂದರೆ ನಾಲ್ಕು ಹರಿದಾರಿಗೊಂದು ಭಾಷೆಗಳು ಬದಲಾಗುತ್ತಾ ಹೋಗುತ್ತವೆ. ಯಾವಾಗ ಪ್ರದೇಶಗಳು ಭಾಷಾ ಪ್ರಾಂತ್ರ್ಯಗಳಾಗಿ ಮಾರ್ಪಾಡುಗೊಂಡವು ಆವಾಗ ಸಂಘರ್ಷಗಳು, ವೈಮನಸ್ಸುಗಳು ಪ್ರಾರಂಭವಾದವು. ಭಾಷೆಗೆ ಯಾರೂ ಅಂಕುಶ ಹಾಕಲಿಕ್ಕೆ ಸಾಧ್ಯವಿಲ್ಲ. ಭಾಷೆ ಎನ್ನುವುದು ಎರಡು ವ್ಯಕ್ತಿಗಳ ನಡುವೆ ನಡೆಯುವ ಸಂವಾದ. ಅಕ್ಕಪಕ್ಕದ ಮನೆಯಲ್ಲಿ ದಿನನಿತ್ಯ ನಡೆಯುವ ವ್ಯವಹಾರದಂತೆ, ಗಡಿಭಾಗದಲ್ಲಿಯೂ ಕನ್ನಡ-ಮರಾಠಿಗರ ನಡುವೆ ಅನೂಚಾನವಾಗಿ ಪರಸ್ಪರ ಕೊಡುತೆಗೆದುಕೊಳ್ಳುವಿಕೆ, ವಿನಿಮಯ ನಡೆಯುತ್ತಾ ಬಂದಿದೆ. ಪ್ರಾತಿನಿಧಿಕವಾಗಿ ಸಾಹಿತ್ಯದ ವಿಷಯಕ್ಕೆ ಬಂದಾಗ ಡಾ. ದ.ರಾ. ಬೇಂದ್ರೆ, ರಂ.ಶ್ರೀ ಮುಗಳಿ, ಚಿಂತಾಮಣಿ, ಜಯಂತ ಕಾಯ್ಕಿಣಿಯಂಥವರು ಕನ್ನಡಕ್ಕೂ ಮತ್ತು ಮರಾಠಿಗೂ ಸಲ್ಲುವವರು. ಸಂಗೀತದಲ್ಲಿ ಸವಾಯಿ ಗಂಧರ್ವ, ಭೀಮಸೇನ ಜೋಶಿ, ಗಂಗೂಬಾಯಿ ಹಾನಗಲ್, ಅಮೀರಬಾಯಿ ಕರ್ನಾಟಕಿಯಂಥವರನ್ನು ಕನ್ನಡಿಗರು, ಮರಾಠಿಗರೂ ಎಂದು ವಿಭಜಿಸಲು ಸಾಧ್ಯವೇ ಇಲ್ಲ.

ಗಡಿ ಭಾಗದ ಜನರ ಭಾಷೆ ಅವರ ಜೀವ ಜೀವಾಳದ ಭಾಷೆಯಾಗಿದೆ. ಅಕ್ಷರ ಕಲಿಯದ ಜನರ ತಮ್ಮ ದೈನಂದಿನದಲ್ಲಿ ಭಾಷೆಯನ್ನು ಯಾವ ರೀತಿಯಾಗಿ ಬಳಸುತ್ತಾರೊ ಅದನ್ನು ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ, ವ್ಯವಹಾರಿಕವಾಗಿ ಬೇರ್ಪಡಿಸಲು ಸಾಧ್ಯವಿಲ್ಲ. ಭಾವನಾತ್ಮಕವಾಗಿಯಂತೂ ಅವರನ್ನು ಬೇರ್ಪಡಿಸಲು ಸಾಧ್ಯವೇ ಇಲ್ಲ. ಅಷ್ಟೊಂದು ಕನ್ನಡ-ಮರಾಠಿ ಭಾಷೆ ಬಾಂಧವ್ಯ ಹೊಂದಿದೆ. ತಮ್ಮದೇ ರೀತಿಯಲ್ಲಿ ಗಡಿನಾಡಿಗರು ಭಾಷೆಯನ್ನು ಪೋಷಿಸುತ್ತಾ, ಬೆಳೆಸುತ್ತಾ ಬಂದಿದ್ದಾರೆ, ಎಂದರು.

ಅಥಣಿಯ ಎನ್.ಬಿ. ಝುರೆ ಪ್ರತಿಕ್ರಿಯಿಸುತ್ತಾ, ಗಡಿನಾಡಿನಲ್ಲಿ ಕನ್ನಡ ಮತ್ತು ಮರಾಠಿ ಬಾಂಧವ್ಯವನ್ನು ಹೆಚ್ಚಿಸೋಣ. ಕನ್ನಡ ಮತ್ತು ಮರಾಠಿ ಭಾಷೆಯ ವಿಷಯಗಳನ್ನು ಹಂಚಿಕೊಳ್ಳುವಂತಾಗಬೇಕು. ಆಗ ಗಡಿನಾಡಿನಲ್ಲಿ ಸಾಮರಸ್ಯ ಬೆಳೆಯತ್ತದೆ ಭಾಷೆಯ ಜೊತೆಗೆ ದೀಪದಿಂದ ದೀಪ ಬೆಳಗುವಂತೆ ಕನ್ನಡಿಗ ಮತ್ತು ಮರಾಠಿಗರ ಸಾಮರಸ್ಯದ ಬಾಂಧವ್ಯ ಬೆಳೆಯಬೇಕೆಂದು ಹೇಳಿದರು.

ಉಗಾರಖುರ್ದದ ಶಾಲಿನಿತಾಯಿ ದೊಡಮನಿ ಗೋಷ್ಠಿ-೨ರ ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ, ಗಡಿಭಾಗದಲ್ಲಿ ಕನ್ನಡ ಮತ್ತು ಮರಾಠಿ ಜನರ ಭಾಷಾ ಬಾಂಧವ್ಯ ಸಾಹಿತ್ಯಿಕವಾಗಿ ಉತ್ತಮವಾಗಿದೆ. ನಾನು ಬಸವಣ್ಣನವರ ವಚನ ಸಾಹಿತ್ಯವನ್ನು ಕನ್ನಡದಿಂದ ಮರಾಠಿಗೆ ಭಾಷಾಂತರ ಮಾಡಿದ ಸಂದರ್ಭದಲ್ಲಿ ಅದನ್ನು ಎಲ್ಲರೂ ಮೆಚ್ಚಿ, ಮರಾಠಿಯಲ್ಲಿ ಕೆಲವರು ಬಸವಣ್ಣನವರ ವಚನ ಸಾಹಿತ್ಯದ ಮೇಲೆ ಪಿಎಚ್.ಡಿ ಮಾಡಿದ್ದಾರೆ. ಕೆಲವರು ಮರಾಠಿ ಭಾಷೆಯ ಕೃತಿಗಳನ್ನು ಕನ್ನಡಕ್ಕೆ ಭಾಷಾಂತರಿಸಿದ್ದಾರೆ. ಕನ್ನಡ ಮತ್ತು ಮರಾಠಿ ಸಾಹಿತ್ಯದ ಬಗ್ಗೆ ಗಡಿನಾಡಿನ ಎರಡು ಪ್ರದೇಶದ ಜನರು ಸಾಮರಸ್ಯದಿಂದ ಅದರಲ್ಲಿಯ ವಿಷಯಗಳನ್ನು ಹಂಚಿಕೊಂಡು ಬದುಕುತ್ತಿದ್ದಾರೆ ಎಂದು ಹೇಳಿದರು.

ಡಾ. ಎ.ಎಲ್. ದೇಸಾಯಿ ಸ್ವಾಗತಿಸಿದರು. ಪ್ರಮೀಳಾ ಜಕ್ಕಣ್ಣವರ ನಿರೂಪಿಸಿದರು. ಸುಧಾ ಕಬ್ಬೂರ ವಂದಿಸಿದರು. ಕಾರ್ಯಕ್ರಮದಲ್ಲಿ ಶಂಕರ ಹಲಗತ್ತಿ, ವೀರಣ್ಣ ಒಡ್ಡೀನ, ಡಾ. ಧನವಂತ ಹಾಜವಗೋಳ, ಶಿವಾನಂದ ಭಾವಿಕಟ್ಟಿ, ಮತ್ತು ಸಂಘದ ಹಲವಾರು ಸದಸ್ಯರು ಸೇರಿದಂತೆ ಮುಂತಾದವರಿದ್ದರು.

## ಸಾಂಸ್ಕೃತಿಕ ಕಾರ್ಯಕ್ರಮಗಳು

ಕಾರ್ಯಕ್ರಮದ ಮೊದಲ ದಿನ ಸಂಜೆ ೫ ರಿಂದ ೭-೩೦ ರವರೆಗೆ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

ಅಥಣಿಯ ಶ್ರೀ ಬಿ. ಎಲ್. ಪಾಟೀಲ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಗೋಕಾಕದ ಕು. ಜ್ಯೋತಿ ಕೌಜಲಗಿ ಮತ್ತು ತಂಡದವರು ಮನಮೋಹಕವಾಗಿ ವೈವಿಧ್ಯಮಯ ನೃತ್ಯ ಪ್ರದರ್ಶಿಸಿದರೆ, ಹುಬ್ಬಳ್ಳಿಯ ಡಾ. ಅಶೋಕ ಹುಗ್ಗಣ್ಣವರ ಸೊಗಸಾಗಿ ರಂಗ ಗೀತೆಗಳನ್ನು ಹಾಡಿ ಜನಮನ ತಣಿಸಿದರು.

## ಗೋಷ್ಠಿ–೩

## ಕೃಷಿ ಮತ್ತು ಪರಿಸರ

ದಿನಾಂಕ: ೨೫–೨–೨೦೨೪ ರಂದು ಜರುಗಿದ **'ಕೃಷಿ ಮತ್ತು ಪರಿಸರ' ಗೋಷ್ಠಿ–೩** ರಲ್ಲಿ ಧಾರವಾಡದ ಡಾ. ರಾಜೇಂದ್ರ ಪೋದ್ದಾರ **'ಗಡಿನಾಡು : ಜಲ ಮತ್ತು ನೆಲದ ಸಮಸ್ಯೆಗಳು'** ಕುರಿತು ವಿಷಯ ಮಂಡನೆ ಮಾಡಿದರು. ಅಥಣಿಯ ಡಾ. ಅರ್ಚನಾ ಅಥಣಿ ಪ್ರತಿಕ್ರಿಯಿಸಿದರು. ಸಂಖದ ಶ್ರೀ ಅರವಿಂದ ಕರಡಿ ಅಧ್ಯಕ್ಷತೆ ವಹಿಸಿದ್ದರು.

ನಂತರ ಕವಿಗೋಷ್ಠಿ ಜರುಗಿತು. ಹಾರೂಗೇರಿಯ ಡಾ. ವ್ಹಿ. ಎಸ್. ಮಾಳಿ, ಆಶಯ ನುಡಿಗಳನ್ನಾಡಿದರು. ಅಥಣಿಯ ಶ್ರೀ ಅಪ್ಪಾಸಾಹೇಬ ಅಲಿಬಾದಿ ಅಧ್ಯಕ್ಷತೆ ವಹಿಸಿದ್ದರು.

ಕವಿಗಳಾದ ಎಸ್. ಕೆ. ಹೊಳೆಪ್ಪನವರ, ಡಾ. ಮಲ್ಲಿಕಾರ್ಜುನ ಗುಮ್ಮಗೋಳ, ರೋಹಿಣಿ ಯಾದವಾಡ, ಭಾರತಿ ಕೋರಿ, ಶಶಿಧರ ಬರ್ಲಿ, ಸಂತೋಷ ಬಡಕಂಬಿ, ಭಾರತಿ ಗದ್ದಿ, ಗೀತಾ ನಾಯಕ, ಪ್ರಭಾ ಬೋರಗಾವ್ಕರ ದೀಪಾ ಚೊಳ್ಳಿ, ವಿಜಯ ಕಾಂಬಳೆ, ವೀರನಗೌಡ ಪಾಟೀಲ, ಶ್ರೀಶೈಲ ಅವಟಿ, ಶ್ರೀಮತಿ ಸುಧಾ ಕಬ್ಬೂರ ಕವನ ವಾಚಿಸಿದರು.

### ಸಮಾರೋಪ ಸಮಾರಂಭ :

ಕರ್ನಾಟಕ ವಿದ್ಯಾವರ್ಧಕ ಸಂಘದ ಉಪಾಧ್ಯಕ್ಷರಾದ ಪ್ರೊ. ಮಾಲತಿ ಪಟ್ಟಣಶೆಟ್ಟಿ ಅವರು ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಜಮಖಂಡಿಯ ಶಿಕ್ಷಣ ತಜ್ಞರಾದ ಶ್ರೀ ಅಶೋಕ ತುಂಗಳ ಸಮಾರೋಪ ನುಡಿಗಳನ್ನಾಡಿದರು.

ಸಂಖದ ಗುರುಬಸವ ವಿದ್ಯಾಮಂದಿರದ ಅಧ್ಯಕ್ಷರಾದ ಶ್ರೀ ಆರ್. ಕೆ. ಪಾಟೀಲ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.

ಕಾರ್ಯಕ್ರಮದಲ್ಲಿ ತುಂಗಳದ ಕನ್ನಡದ ಕಟ್ಟಾಳು ಶ್ರೀ ಎಂ. ಎಸ್. ಸಿಂಧೂರ ಮತ್ತು ಬೆಳಗಾವಿ ಕನ್ನಡ ಸಂಘಟನೆಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಅಶೋಕ ಚಂದರಗಿ ಇವರನ್ನು ಸನ್ಮಾನಿಸಿ ಗೌರವಿಸಲಾಯಿತು.

* = * = * = * = *




ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ
ಶ್ರೀ ಸುಕ್ಷೇತ್ರ ಗಚ್ಚಿನಮಠ, ಅಥಣಿ, ಶ್ರೀ ಮೋಟಗಿಮಠ ಅಥಣಿ, ವಿಮೋಚನಾ ಸಂಸ್ಥೆ, ಅಥಣಿ
ಅಥಣಿ ತಾಲೂಕಾ ಕನ್ನಡ ಸಾಹಿತ್ಯ ಪರಿಷತ್ತು, ಸಾಹಿತ್ಯ ಸಾಂಸ್ಕೃತಿಕ ಸಂಘ, ಅಥಣಿ
ಕರ್ನಾಟಕ-೬೦ ಸಂಭ್ರಮ
ಗಡಿನಾಡಿನಲ್ಲಿ ಕನ್ನಡ ಜಾಗೃತಿ ಮತ್ತು ಸಾಂಸ್ಕೃತಿಕ ಸಂಭ್ರಮ
ವಿಚಾರ ಸಂಕಿರಣ ಹಾಗೂ ಕವಿಗೋಷ್ಠಿ


ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ
ಶ್ರೀ ಸುಕ್ಷೇತ್ರ ಗಚ್ಚಿನಮಠ, ಅಥಣಿ, ಶ್ರೀ ಮೋಟಗಿಮಠ ಅಥಣಿ, ವಿಮೋಚನಾ ಸಂಸ್ಥೆ, ಅಥಣಿ
ಅಥಣಿ ತಾಲೂಕಾ ಕನ್ನಡ ಸಾಹಿತ್ಯ ಪರಿಷತ್ತು, ಸಾಹಿತ್ಯ ಸಾಂಸ್ಕೃತಿಕ ಸಂಘ, ಅಥಣಿ
ಕರ್ನಾಟಕ-೬೦ ಸಂಭ್ರಮ


ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ


ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ
ಕರ್ನಾಟಕ-೬೦ ಸಂಭ್ರಮ
ಗಡಿನಾಡಿನಲ್ಲಿ ಕನ್ನಡ ಜಾಗೃತಿ ಮತ್ತು ಸಾಂಸ್ಕೃತಿಕ ಸಂಭ್ರಮ
ವಿಚಾರ ಸಂಕಿರಣ ಹಾಗೂ ಕವಿಗೋಷ್ಠಿ

## ಗಡಿನಾಡಿನಲ್ಲಿ ಕನ್ನಡ ಜಾಗೃತಿ ಮತ್ತು ಸಾಂಸ್ಕೃತಿಕ ಸಂಭ್ರಮ

### ವಿಚಾರ ಸಂಕಿರಣ ಹಾಗೂ ಕವಿಗೋಷ್ಠಿ

**ಅನುಭವ ಮಂಟಪ ಶ್ರೀ ಚನ್ನಬಸವೇಶ್ವರ ಗುರುಕುಲ, ಕರಡ್ಯಾಳ, ಭಾಲ್ಕಿ**
**ದಿನಾಂಕ: ೧೭ ಮಾರ್ಚ ೨೦೨೪. ರವಿವಾರ**

ಪ್ರತಿಯೊಂದು ಭಾಷೆಯನ್ನು ಒಳಗೊಂಡಂತಹ ಬೀದರ ನಾಡಿನಲ್ಲಿಯೇ ವಿಶೇಷವಾದ ಜಿಲ್ಲೆಯಾಗಿದೆ. ಬೀದರಿಗೆ ಯಾವ ಭಾಷೆಯವರೇ ಬರಲಿ ಅವರೊಂದಿಗೆ ಮಾತಾಡುವ ಭಾಷಾ ಕೌಶಲ್ಯ ಇಲ್ಲಿಯ ಜನ ಹೊಂದಿರುವರು ಎಂದು ಮಾಂಜ್ರಾ ಮಹಿಳಾ ಕೋ-ಆಪರೇಟಿವ್ ಬ್ಯಾಂಕ ಅಧ್ಯಕ್ಷೆ ಶಕುಂತಲಾ ಬೆಲ್ದಾಳೆ ಹೇಳಿದರು.

ಕನಾಟಕ ವಿದ್ಯಾವರ್ಧಕ ಸಂಘವು ಹಿರೇಮಠ ಸಂಸ್ಥಾನ ವಿದ್ಯಾಪೀಠ ಟ್ರಸ್ಟ್, ಭಾಲ್ಕಿ ಸಹಭಾಗಿತ್ವದಲ್ಲಿ ಕರ್ನಾಟಕ ೫೦ ಸಂಭ್ರಮ ನಿಮಿತ್ತ ಭಾಲ್ಕಿಯ ಕರಡ್ಯಾಳ ಅನುಭವ ಮಂಟಪ ಶ್ರೀ ಚನ್ನಬಸವೇಶ್ವರ ಗುರುಕುಲದಲ್ಲಿ ಆಯೋಜಿಸಿದ್ದ "ಗಡಿನಾಡಿನಲ್ಲಿ ಕನ್ನಡ ಜಾಗೃತಿ ಮತ್ತು ಸಾಂಸ್ಕೃತಿಕ ಸಂಭ್ರಮ, ವಿಚಾರ ಸಂಕಿರಣ, ಕವಿಗೋಷ್ಠಿಯನ್ನು" ದೀಪ ಬೆಳಗಿಸುವುದರೊಂದಿಗೆ ಉದ್ಘಾಟಿಸಿ, ಅವರು ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ಅವರು, ಗಡಿಭಾಗದ ಸಮಸ್ಯೆಗಳನ್ನು ಬಗೆಹರಿಸುವುದಕ್ಕಾಗಿಯೇ ಗಡಿ ಅಭಿವೃದ್ಧಿ ಪ್ರಾಧಿಕಾರ ರಚಿಸಲಾಯಿತು. ಆದರೆ ಯಾವುದೇ ಸರಕಾರ ಬರಲಿ ಗಡಿ ಸಮಸ್ಯೆಗಳನ್ನು ನೀಗಿಸುವಲ್ಲಿ ಪ್ರಾಮಾಣಿಕ ಕಾಳಜಿಯನ್ನು ತೋರಿಸುತ್ತಿಲ್ಲ. ಹೀಗಾಗಿ ಗಡಿ ಭಾಗದ ಜನರು ಎರಡು ರಾಜ್ಯಗಳ ಆಡಳಿತದ ನಡುವೆ ನಲಗುತ್ತಿದ್ದಾರೆ. ಗಡಿ ಮಕ್ಕಳ ಭವಿಷ್ಯದ ಬಗ್ಗೆ ಸರಕಾರಗಳು ವಿಶೇಷ ಕಾಳಜಿ ತೆಗೆದುಕೊಳ್ಳುವಂತಾಗಬೇಕು ಎಂದು ಹೇಳಿದ ಶಕುಂತಲಾ ಬೆಲ್ದಾಳ ಕರ್ನಾಟಕ ವಿದ್ಯಾವರ್ಧಕ ಸಂಘ ಮತ್ತು ಬಾಲ್ಕಿ ಹಿರೇಮಠ ಸಂಸ್ಥಾನ ಮಾಡಿದ ಕನ್ನಡ ಸೇವೆ ಅವಿಸ್ಮರಣೀಯ, ಎಂದೆಂದಿಗೂ ಕನ್ನಡತನ್ನತನ ಉಳಿಸಿಕೊಂಡು ಮುನ್ನಡೆಯುತ್ತವೆ ಎಂದರು.

ಸಾನ್ನಿಧ್ಯ ವಹಿಸಿ ಮಾತನಾಡಿದ ಭಾಲ್ಕಿಯ ಹಿರೇಮಠ ಸಂಸ್ಥಾನದ ಪೀಠಾಧಿಪತಿ ಗುರುಬಸವ ಪಟ್ಟದ್ದೇವರು, ರಾಜ್ಯದ ಗಡಿಭಾಗದಲ್ಲಿ ಕನ್ನಡ ಕಟ್ಟಿ ಬೆಳೆಸುವಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘದ ಸೇವೆ ರಾಜ್ಯಕ್ಕೆ ಮಾದರಿ ಎನಿಸಿದೆ. ಮರಾಠಿ ಪ್ರಾಬಲ್ಯ ಹೊಂದಿದ ಧಾರವಾಡ ಭಾಗದಲ್ಲಿ ಕನ್ನಡ ಭಾಷೆ ಕಟ್ಟಿದ ಶ್ರೇಯಸ್ಸು ಕರ್ನಾಟಕ ವಿದ್ಯಾವರ್ಧಕ ಸಂಘಕ್ಕೆ ಸಲ್ಲುತ್ತದೆ. ಸುದೀರ್ಘ ೧೩೪ ವರ್ಷಗಳ ಇತಿಹಾಸ ಹೊಂದಿರುವ ಈ ಸಂಘ ನಿಸ್ವಾರ್ಥವಾಗಿ ಕನ್ನಡದ ಸೇವೆ ಮಾಡುತ್ತ ಬಂದಿದೆ ಎಂದು ಮೆಚ್ಚುಗೆ ವ್ಯಕ್ತ ಪಡಿಸಿದರು. ಸಂಘದ ಸಂಸ್ಥಾಪಕ ರಾ.ಹ.ದೇಶಪಾಂಡೆ, ಪಾಟೀಲ ಪುಟ್ಟಪ್ಪ ಅವರು ಕನ್ನಡಕ್ಕಾಗಿ ಶ್ರಮಿಸಿದ್ದರೆ, ಚಂದ್ರಕಾಂತ ಬೆಲ್ಲದ ಅವರು ಕನ್ನಡ ಭಾಷೆಗಾಗಿ ಜತೆಗೆ ಸಂಘದ ಬೆಳವಣಿಗೆಗೆ ಶ್ರಮಿಸುತ್ತಿದ್ದಾರೆ. ಕರ್ನಾಟಕ ವಿದ್ಯಾವರ್ಧಕ ಸಂಘ ಮತ್ತು ಹಿರೇಮಠ ಸಂಸ್ಥಾನಕ್ಕೂ ಅವಿನಾಭಾವ ಸಂಬಂಧ ಇದೆ. ಆ ಭಾಗದಲ್ಲಿ ವಿದ್ಯಾವರ್ಧಕ ಸಂಘ ಕನ್ನಡ ಕಟ್ಟಿದ ರೀತಿಯಲ್ಲಿ ಈ ಭಾಗದಲ್ಲಿ ಪಟ್ಟದ್ದೇವರು ಗಡಿ ಪ್ರದೇಶವನ್ನು ಕನ್ನಡದ ನೆಲದಲ್ಲಿ ಉಳಿಸಿದ್ದಾರೆ. ಹೀಗಾಗಿ ವಿದ್ಯಾವರ್ಧಕ ಸಂಘ ಹಾಗೂ ಮಠದ ಧ್ಯೇಯ ಒಂದೇಯಾಗಿದ್ದು ಕನ್ನಡದ ಅಸ್ಮಿತೆಗಾಗಿ ನಿರಂತರವಾಗಿ ಹೋರಾಟ ಮಾಡಿಕೊಂಡು ಬರಲಾಗುತ್ತಿದೆ ಎಂದು ತಿಳಿಸಿದರು.

ಅತಿಥಿಯಾಗಿ ಬೀದರ ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಅಧ್ಯಕ್ಷ ಸುರೇಶ ಚೆನ್ನಶೆಟ್ಟಿ ಮಾತನಾಡುತ್ತಾ, ಶಾಸ್ತ್ರ ಪುರಾಣಗಳು ಸಂಸ್ಕೃತದಲ್ಲಿ, ದ್ವೈತ-ಅದ್ವೈತಗಳು ಸಂಸ್ಕೃತದಲ್ಲಿ, ವೇದ, ಪುರಾಣಗಳು ಸಂಸ್ಕೃತದಲ್ಲಿ ಇರುವಾಗ ಕನ್ನಡಿಗರಿಗೆ ಕನ್ನಡದ ವಚನಗಳನ್ನು ಬರೆದು ಕನ್ನಡಿಗರ ಕರಸ್ತಲಕ್ಕೆ ನೀಡಿದವರು ಶರಣರು.

ವಚನ ಸಾಹಿತ್ಯ ಜಗತ್ತಿನ ಶ್ರೇಷ್ಠ ಸಾಹಿತ್ಯ. ಇಂಥ ಸಾಹಿತ್ಯವನ್ನು ತೆಲಗು, ತಮಿಳು ಮತ್ತು ಕನ್ನಡದ ನೆಲದಲ್ಲಿ ಪ್ರಸರಣ ಮಾಡುತ್ತಿರುವವರು ಬಾಲ್ಕಿಮಠದ ಶ್ರೀಗಳು. ಇಂದು ಭಾಷೆ, ಸಂಸ್ಕೃತಿ ನಲುಗುತ್ತಿರುವ ಸಂದರ್ಭದಲ್ಲಿ

ಇಂಥ ಸಮ್ಮೇಳನಗಳು ಮಹತ್ವವಾಗಿವೆ. ಎಂಟು ಜ್ಞಾನಪೀಠ ಪ್ರಶಸ್ತಿ ಪಡೆದ ಕನ್ನಡ ಸಾಹಿತ್ಯ ನೆಲದಲ್ಲಿ ಕನ್ನಡ ಜಾಗೃತಿಗೊಳಿಸುವ ಕಾರ್ಯ ನಡೆಯುತ್ತಿರುವುದು ಅನಿವಾರ್ಯವಾಗಿದೆ. ನಮ್ಮ ಪಾಲಕರಲ್ಲಿ ಇಂಗ್ಲೀಷ ವ್ಯಾಮೋಹ ಹೆಚ್ಚಾಗಿದೆ. ಯಾರೇ ಬರಲಿ ಅವರವರ ಭಾಷೆಯಲ್ಲಿಯೇ ಮಾತಾಡುವ ಪ್ರವೃತ್ತಿ ಕನ್ನಡಿಗರದ್ದಾಗಿದೆ. ಇದು ಹೋಗಬೇಕಿದೆ. ಮೊದಲು ಪ್ರತಿಯೊಬ್ಬ ಕನ್ನಡಿಗ ಕನ್ನಡ ಸಹಿಯನ್ನು ಮಾಡುವುದನ್ನು ಶುರು ಮಾಡಬೇಕು ಎಂದರು.

ಬೀದರಿನ ಪ್ರಗತಿಪರ ಚಿಂತಕ ಎಂ. ಎಸ್ ಮನೋಹರ ಅತಿಥಿಯಾಗಿ ಮಾತನಾಡುತ್ತಾ, ಭಾಷೆಯ ವಿಷಯ ಬಂದಾಗ ಕನ್ನಡ ಬೆಳೆಸುವ ನಿಟ್ಟಿನಲ್ಲಿ ಕೃತಿಗಿಂತ ಮಾತು ಹೆಚ್ಚು. ಯಾವುದೆ ಸರ್ಕಾರಗಳು ಭಾಷೆಯ ಉದ್ಧಾರ ಮಾಡುವ ಕೆಲಸ ಮಾಡಲಿಲ್ಲ. ಕನ್ನಡ ಶಾಲೆಗಳನ್ನು ಸಾವಿರ ಸಾವಿರ ಸಂಖ್ಯೆಯಲ್ಲಿ ಮುಚ್ಚುತ್ತಿದ್ದಾರೆ. ಗಡಿ ಭಾಗದಲ್ಲಿ ಕನ್ನಡ ಉಳುವಿಗಾಗಿ ಹಲವಾರು ಸಂಸ್ಥೆಗಳು ಕಾರ್ಯಮಾಡುತ್ತಿವೆ. ಇಂಗ್ಲೀಷ ವ್ಯಾಮೋಹದಿಂದ ಹೊರಬರದೇ ಕನ್ನಡ ಶಾಲೆಗಳನ್ನು ಉಳಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಹೊರ ರಾಜ್ಯಗಳಲ್ಲಿ ಹೊರ ದೇಶಗಳಲ್ಲಿ ಕನ್ನಡಿಗರು ಕನ್ನಡ ಉಳಿಸಿಕೊಳ್ಳುವಲ್ಲಿ ಕಾರ್ಯಮಾಡುತ್ತಿದ್ದರೆ. ಅದರಂತೆ ನಾಡಿನ ಒಳಗೆ ಆ ಕಾಳಜಿ ಕಾಣುತ್ತಿಲ್ಲ ಎಂದರು. ಇನ್ನೋರ್ವ ಮುಖ್ಯ ಅತಿಥಿ ಜೈರಾಜ ದಾಬಶೆಟ್ಟಿ ಮಾತಾಡಿದರು.

ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ವಿದ್ಯಾವರ್ಧಕ ಸಂಘದ ಕಾರ್ಯಾಧ್ಯಕ್ಷ ಬಸವಪ್ರಭು ಹೊಸಕೇರಿ ಮಾತನಾಡಿ, ಕನ್ನಡಿಗರು ನಾವು ಕನ್ನಡವನ್ನು ತಲೆಯಿಂದ ಪ್ರೀತಿಸುತ್ತೇವೆ ವಿನಹ ಹೃದಯದಿಂದಲ್ಲ. ಗಡಿ ಭಾಗದ ಜನ ಕನ್ನಡವನ್ನು ಹೃದಯದಿಂದ ಪ್ರೀತಿಸುತ್ತಿರುವುದರಿಂದ ಜತ್ತ, ಅಕ್ಕಲಕೋಟದಲ್ಲಿ ನಾಮಫಲಕಗಳನ್ನು ಪೂರ್ಣ ಕನ್ನಡದಲ್ಲಿ ಬರೆಸಿದ್ದಾರೆ. ಕರ್ನಾಟಕದಲ್ಲಿ ಶೇಕಡಾ ಅರವತ್ತರಷ್ಟು ಬರೆಸಲು ಸರಕಾರ ಸುತ್ತೋಲೆ ಹೊರಡಿಸುವ ಮಟ್ಟಿಗೆ ಬಂದಿದ್ದೇವೆ. ಕರ್ನಾಟಕ ವಿದ್ಯಾವರ್ಧಕ ಸಂಘ ಹೃದಯದಲ್ಲಿ ಇಟ್ಟುಕೊಂಡು ಕಾರ್ಯಮಾಡುತ್ತಿದೆ ಎಂದರು. ನಮ್ಮ ಮಕ್ಕಳನ್ನು ಇಂಗ್ಲೀಷ ಶಾಲೆಗೆ ಕಳಿಸಿ ಕನ್ನಡ ಉಳಿಯಬೇಕು ಎನ್ನುವುದರಲ್ಲಿ ಅರ್ಥವಿಲ್ಲ ಎಂದರು.

ಇದೇ ಸಂದರ್ಭದಲ್ಲಿ ಗದಗನ ಶಂಕರಗೌಡ ಪಾಟೀಲ ಅವರ ಕರ್ನಾಟಕ ಏಕೀಕರಣ ಕುರಿತು ಚಿತ್ರಾವಳಿ ಪ್ರದರ್ಶನಕ್ಕೆ ಚಾಲನೆ ನೀಡಲಾಯಿತು.

ವೇದಿಕೆ ಮೇಲೆ ಪ್ರೊ ಮಾಲತಿ ಪಟ್ಟಣಶೆಟ್ಟಿ, ಶಂಕರ ಕುಂಬಿ, ಡಾ. ಲಿಂಗರಾಜ ಅಂಗಡಿ ಉಪಸ್ಥಿತರಿದ್ದರು. ಮೋಹನ ರಡ್ಡಿ ಸ್ವಾಗತಿಸಿದರು, ಶಂಕರ ಹಲಗತ್ತಿ ಪ್ರಾಸ್ತಾವಿಕವಾಗಿ ಮಾತಾಡಿದರು. ಶಿವಾನಂದ ಭಾವಿಕಟ್ಟಿ ವಂದಿಸಿದರು. ವಿಶ್ವೇಶ್ವರಿ ಬ. ಹಿರೇಮಠ ನಿರೂಪಿಸಿದರು. ಕಾರ್ಯಕ್ರಮದಲ್ಲಿ ಡಾ.ಸಂಜೀವ ಕುಲಕರ್ಣಿ, ವೀರಣ್ಣ ಒಡ್ಡೀನ, ಡಾ.ಮಹೇಶ ಹೊರಕೇರಿ, ಗುರುಕುಲದ ಮಕ್ಕಳು, ಸಿಬ್ಬಂದಿ ವರ್ಗದವರು, ಸಂಘದ ಸದಸ್ಯರು ಉಪಸ್ಥಿತರಿದ್ದರು.

### ಗೋಷ್ಠಿ–೧.

**'ಗಡಿಯಲ್ಲಿ ಕನ್ನಡ ಕಟ್ಟಿದ ಭಾಲ್ಕಿ ಹಿರೇಮಠ ಸಂಸ್ಥಾನ'** ಕುರಿತು ಬೆಂಗಳೂರು ಕ.ಸಾ.ಪ. ಮಹಿಳಾ ಪ್ರತಿನಿಧಿ ಶ್ರೀಮತಿ ಮಲ್ಲಮ್ಮ ಆರ್. ಪಾಟೀಲ ವಿಷಯ ಮಂಡನೆ ಮಾಡಿದರು.

ಭಾಲ್ಕಿ ಕ.ಸಾ.ಪ ತಾಲೂಕಾ ಅಧ್ಯಕ್ಷರಾದ ಶ್ರೀ ನಾಗಭೂಷಣ ಮಾಮಡಿ, ಸಾಹಿತಿ ಆನಂದವಾಡಿಯ ಶ್ರೀ ಗಣಪತಿ ಭೂರೆ ಹಾಗೂ ಸಾಹಿತಿ ಭಾಲ್ಕಿಯ ಶ್ರೀ ರಾಜು ಜುಬರೆ ಪ್ರತಿಕ್ರಿಯಿಸಿದರು. ವಿಶ್ರಾಂತ ಪ್ರಾಚಾರ್ಯ ಭಾಲ್ಕಿಯ ಡಾ. ಸೋಮನಾಥ ನುಚ್ಚಾ ಅಧ್ಯಕ್ಷತೆ ವಹಿಸಿದ್ದರು. ಕ.ವಿ.ವ.ಸಂಘದ ಕಾ.ಕಾ.ಸಮಿತಿ ಸದಸ್ಯ ವೀರಣ್ಣ ಒಡ್ಡೀನ ಕಾರ್ಯಕ್ರಮ ಸಂಯೋಜಿಸಿದರು.

### ಗೋಷ್ಠಿ–೨

## 'ಬೀದರ : ಸಾಹಿತ್ಯ ಮತ್ತು ಸಂಸ್ಕೃತಿ

ಕನ್ನಡದ ಮೊಟ್ಟ ಮೊದಲ ಸಾಹಿತ್ಯವಾಗಿರುವ ವಚನ ಸಾಹಿತ್ಯ ಉದಯಗೊಂಡಿರುವುದು ಬೀದರ್ ಜಿಲ್ಲೆಯ ಬಸವ ಕಲ್ಯಾಣದಲ್ಲಿ, ಹಾಗಾಗಿ, ಬೀದರ್ ಕನ್ನಡ ಸಾಹಿತ್ಯದ ತವರು ನೆಲವಾಗಿದೆ ಎಂದು ಅಕ್ಕಲಕೋಟ ಸಾಹಿತಿ ಗುರುಲಿಂಗಪ್ಪ ಧಬಾಲೆ ಹೇಳಿದರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು, ಭಾಲ್ಕಿಯ ಕರಡ್ಯಾಳದ ಶ್ರೀ ಚನ್ನಬಸವೇಶ್ವರ ಗುರುಕುಲ ಶಿಕ್ಷಣ ಸಮುಚ್ಛಯದ ಅನುಭವ ಮಂಟಪದಲ್ಲಿ ಹಮ್ಮಿಕೊಂಡಿದ್ದ ವಿಚಾರ ಸಂಕಿರಣ ಹಾಗೂ ಕವಿಗೋಷ್ಠಿ ಕಾರ್ಯಕ್ರಮದ ಗೋಷ್ಠಿ–೨ ರಲ್ಲಿ **'ಬೀದರ್ ಸಾಹಿತ್ಯ ಮತ್ತು ಸಂಸ್ಕೃತಿ'** ಕುರಿತು ಅವರು ಮಾತನಾಡಿದರು.

ವಚನ ಸಾಹಿತ್ಯವನ್ನು ಜಗತ್ತಿಗೆ ಕಾಣಿಕೆಯಾಗಿ ಕೊಟ್ಟಿರುವುದು ಬೀದರ್ ಜಿಲ್ಲೆ, ಬಸವಣ್ಣನವರು ಸ್ಥಾಪಿಸಿದ ಅನುಭವ ಮಂಟಪ ಕನ್ನಡದ ಮೊದಲ ವಿಶ್ವವಿದ್ಯಾಲಯ, ಕನ್ನಡ ವೈಜ್ಞಾನಿಕ, ವೈಚಾರಿಕ ಭಾಷೆ ಎಂದರು. ೧೨ನೇ ಶತಮಾನದಲ್ಲಿ ಬಸವಾದಿ ಶರಣರು ತಮ್ಮ ಸುತ್ತಮುತ್ತಲಿನಲ್ಲಿ ಕಂಡ ವಿಷಯಗಳ ಕುರಿತು ಸಾಮಾನ್ಯ ಜನರಿಗೂ ತಿಳಿಯುವ ಸರಳ ಭಾಷೆಯಲ್ಲಿ ವಚನಗಳನ್ನು ಬರೆದು ಸಮಾಜದಲ್ಲಿ ವೈಚಾರಿಕ ಕ್ರಾಂತಿ ತಂದರು. ಈ ಕ್ರಾಂತಿಯ ಫಲವಾಗಿ ಜನರಲ್ಲಿ ಜಾಗೃತಿ ಮೂಡಲು ಸಾಧ್ಯವಾಯಿತು ಎಂದರು. ಬೀದರ್ ಜಿಲ್ಲೆ ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು, ಕಳಚೂರಿಗಳು. ಬರೀದ್ ಶಾಹಿಗಳ ರಾಜಧಾನಿ ಆಗಿದ್ದ ನಗರ ಬೀದರ್. ಕನ್ನಡ ಹಲವು ಭಾಷೆಗಳ ಮಿಶ್ರಿತ ವಿಶಿಷ್ಟ ಭಾಷೆಯಾಗಿದೆ. ಬೀದರಿ ಕಲೆ. ಭುಲಾಯಿ ಹಾಡು, ಭಜ್ಜಿ, ಹಿಟ್ಟಿನ ಹೋಳಿಗೆ, ಕುಸುಬಿ ಹಾಲು ಬೀದರನ ವಿಶೇಷತೆಗಳು ಎಂದು ತಿಳಿಸಿದರು.

ಭಾಲ್ಕಿಯ ಹಿರೇಮಠ ವಚನಗಳನ್ನು ಕೇವಲ ಭಾಷಣಕ್ಕೆ ಬಳಸಿಕೊಳ್ಳದೆ ಅವುಗಳನ್ನು ನೈಜ ಆಚರಣೆಯಲ್ಲಿ ತರುವುದರ ಮೂಲಕ ಬದುಕುತ್ತಿದೆ. ಗಡಿ ನಾಡಿನಲ್ಲಿ ಕನ್ನಡ ಭಾಷೆ, ಸಾಹಿತ್ಯ ಸಂಸ್ಕೃತಿ ಉಳಿಸಿ, ಬೆಳೆಸುವಲ್ಲಿ ಹಿರೇಮಠದ ಪಾತ್ರ ವರ್ಣನಾತೀತ ಎಂದು ಬಣ್ಣಿಸಿದರು. ಸಾಹಿತಿಗಳಾದ ಬಸವರಾಜ ಬಲ್ಲೂರ, ರಾಜು ಜುಬರೆ, ವೀರಣ್ಣ ಕುಂಬಾರ, ಪತ್ರಕರ್ತ ಬಸವರಾಜ ಪ್ರಭಾ ಪ್ರತಿಕ್ರಿಯೆ ನುಡಿಗಳನ್ನಾಡಿದರು. ಶಿವಾನಂದ ಭಾವಿಕಟ್ಟಿ ಗೋಷ್ಠಿ ಸಂಯೋಜಿಸಿದರು.

## ಕವಿಗೋಷ್ಠಿ

ಕವಿಗೋಷ್ಠಿಯ ಅಧ್ಯಕ್ಷತೆಯನ್ನು ಬೀದರಿನ ಶಂಭುಲಿಂಗ ವಾಲ್ದೊಡ್ಡಿ ವಹಿಸಿದ್ದರು. ಸಾಹಿತಿಗಳು, ಧಾರವಾಡ ಎಸ್.ಎಸ್. ಚಿಕ್ಕಮಠ ಚಾಲನೆ ನೀಡಿದರು. ಕ.ವಿ.ವ.ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ಗುರು ಹಿರೇಮಠ ಕಾರ್ಯಕ್ರಮ ಸಂಯೋಜಿಸಿದರು.

ಕವಿಗಳಾದ ಕೀರ್ತಿಲತಾ ಹೊಸಾಳೆ, ಭಾಲ್ಕಿ, ಸುಜಾತ ಹಡಗಲಿ, ಧಾರವಾಡ, ಜಗದೇವಿ ದುಬಲಗುಂಡೆ, ಬೀದರ, ಮಹಾದೇವಿ ಗೋಖಲೆ, ಭಾಲ್ಕಿ, ಚನ್ನಮ್ಮ ವಲ್ಲೆಪುರೆ, ಬೀದರ, ಕೆ.ಎಚ್. ನಾಯಕ, ಧಾರವಾಡ, ಪುಷ್ಪಾ ಕನಕ, ಬೀದರ, ಸುನೀತಾ ನೂರಂದಪ್ಪ ಬಾಳೂರೆ, ತಳವಾಡ, ವೀರಣ್ಣ ಕುಂಬಾರ, ಭಾಲ್ಕಿ, ಮಹಾಲಕ್ಷ್ಮಿ ಕರಿಮಣಿ, ಕರಡ್ಯಾಳ, ರಮೇಶ ಬವರಾ, ಕಮಲನಗರ, ಲಕ್ಷ್ಮಣ ಮೇತ್ರೆ, ಭಾಲ್ಕಿ, ಮಹೇಶ ಬನ್ನಾಳೆ, ಭಾಲ್ಕಿ, ಈರಣ್ಣ ಅಗಳಗಟ್ಟಿ, ಧಾರವಾಡ, ಶ್ರೀದೇವಿ ಶಾಂತಯ್ಯಸ್ವಾಮಿ, ಭಾಲ್ಕಿ, ಡಾ. ಚಿದಾನಂದ ಮಾಸನಕಟ್ಟಿ, ಧಾರವಾಡ, ಸಂಗಮೇಶ ಜ್ಯಾಂತೆ, ಭಾಲ್ಕಿ, ಕೃಷ್ಣಮೂರ್ತಿ ಕುಲಕರ್ಣಿ, ಹುಬ್ಬಳ್ಳಿ, ಎನ್.ಆರ್. ರಗಟೆ, ಭಾಲ್ಕಿ, ಎ.ಎಲ್. ದೇಸಾಯಿ, ಧಾರವಾಡ ಇವರು ಕವಿತೆ ವಾಚಿಸಿದರು.

## ಸಮಾರೋಪ ಸಮಾರಂಭ

ಸಮಾರೋಪ ಸಮಾರಂಭದ ಸಾನ್ನಿಧ್ಯವನ್ನು ಪೂಜ್ಯ ಶ್ರೀ ಗುರುಬಸವ ಪಟ್ಟದ್ದೇವರು, ಹಿರೇಮಠ ಸಂಸ್ಥಾನ, ಭಾಲ್ಕಿ ಇವರು ವಹಿಸಿದ್ದರು.

ಶ್ರೀ ಸಿ. ಯು. ಬೆಳ್ಳಕ್ಕಿ, ವಿಶ್ರಾಂತ ನಿಲಯ ನಿರ್ದೇಶಕರು, ಆಕಾಶವಾಣಿ, ಧಾರವಾಡ ಅವರು ಸಮಾರೋಪ ನುಡಿಗಳನ್ನಾಡಿದರು. ಅಧ್ಯಕ್ಷತೆಯನ್ನು ಪ್ರೊ. ಮಾಲತಿ ಪಟ್ಟಣಶೆಟ್ಟಿ, ಉಪಾಧ್ಯಕ್ಷರು, ಕ.ವಿ.ವ. ಸಂಘ, ಧಾರವಾಡ ವಹಿಸಿದ್ದರು. ಶ್ರೀ ಶಂಕರ ಕುಂಬಿ, ಸಹಕಾರ್ಯದರ್ಶಿಗಳು, ಕ.ವಿ.ವ. ಸಂಘ, ಧಾರವಾಡ ಕಾರ್ಯಕ್ರಮ ಸಂಯೋಜನೆ ಮಾಡಿದರು.

## ಸಾಂಸ್ಕೃತಿಕ ಕಾರ್ಯಕ್ರಮಗಳು

ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಸಾಹಿತಿ ಧಾರವಾಡದ ಡಾ. ಸದಾಶಿವ ಮರ್ಜಿ ಚಾಲನೆ ನೀಡಿದರು. ಮುಖ್ಯ ಅತಿಥಿಗಳಾಗಿ ಸಮಾಜ ಕಾರ್ಯಕರ್ತರಾದ ಬೀದರಿನ ಶ್ರೀ ಮಹೇಶ ಗೊರನಾಳಕರ ಆಗಮಿಸಿದ್ದರು. ಕರ್ನಾಟಕ ವಿದ್ಯಾವರ್ಧಕ ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಡಾ. ಮಹೇಶ ಹೊರಕೇರಿ ಕಾರ್ಯಕ್ರಮ ಸಂಯೋಜನೆ ಮಾಡಿದರು.

ಅಂಬಾ ಮಹೇಶ್ವರಿ ಭಜನಾ ಮಂಡಳಿ ಯಕ್ಷಿಂತಿ, ತಾ: ವಡಗೇರಾ ಇವರಿಂದ ಭಜನಾ ಪದಗಳು.

ಇಂದ್ರಮ್ಮಾ ಹಾಗೂ ಸಂಗಡಿಗರು ಮೊಹರಂ ಮೈತ್ರಿ ಮಹಿಳಾ ನೃತ್ಯ ತಂಡ, ಜೋಜನಾ, ಔರಾದ ಶ್ರೀ ಶಂಕರ ಚೊಂಡಿ, ಅಧ್ಯಕ್ಷರು, ಕರ್ಮಭೂಮಿ ಜಾನಪದ ಕಲಾ ತಂಡ, ಬೀದರ, ಸಿವಾಯ್.ಸಿ.ಡಿ. ಕಲಾ ತಂಡ, ಹರ್ಲಾಪೂರ, ತಾ: ಕುಂದಗೋಳ ಹಾಗೂ ಗುರುಚನ್ನಬಸವ ಸಾಂಸ್ಕೃತಿಕ ಕಲಾ ತಂಡ, ಕರಡ್ಯಾಳ ತಂಡಗಳಿಂದ ವೈವಿಧ್ಯಮಯ ನೃತ್ಯ ಕಾರ್ಯಕ್ರಮಗಳು ಜರುಗಿ ಜನಮನ ಸೂರೆಗೊಂಡವು.








ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ
ಕರ್ನಾಟಕ-೬೦ ಸಂಭ್ರಮ
ಗಡಿನಾಡಿನಲ್ಲಿ ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಸಂಭ್ರಮ
ಸಂಕಿರಣ, ಕವಿಗೋಷ್ಠಿ

# ಸಂಘದ ೧೩೪ ನೇ ಸಂಸ್ಥಾಪನಾ ದಿನಾಚರಣೆ

ದಿನಾಂಕ: ೨೦ ರಿಂದ ೨೪ ಜುಲೈ ೨೦೨೩

ಕರ್ನಾಟಕದಲ್ಲಿ ಸಾಹಿತ್ಯ, ಸಂಗೀತ, ಸಾಂಸ್ಕೃತಿಕ ಕಲೆ ಸುಭದ್ರಗೊಳಿಸಿದ ಕೀರ್ತಿ ವಿದ್ಯಾವರ್ಧಕ ಸಂಘಕ್ಕೆ ಸಲ್ಲುತ್ತದೆ. ನಾಡು–ನುಡಿಗೆ ಅನುಪಮ ಸೇವೆ ಸಲ್ಲಿಸಿದ ಕನ್ನಡದ ಗುಡಿ ಎಂದು ನಿವೃತ್ತ ಪೊಲೀಸ್ ಮಹಾನಿರ್ದೇಶಕ ಬೆಂಗಳೂರಿನ ಶಂಕರ ಬಿದರಿ ಹೇಳಿದರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು ೧೩೪ನೇ ಸಂಸ್ಥಾಪನಾ ದಿನಾಚರಣೆ ಅಂಗವಾಗಿ ದಿನಾಂಕ: ೨೦ ರಿಂದ ೨೪ ಜುಲೈ ೨೦೨೩ ರವರೆಗೆ ಪ್ರತಿದಿನ ಸಂಜೆ ೫–೩೦ ರಿಂದ ಸಂಘದ ನಾಡೋಜ ಡಾ. ಪಾಟೀಲ ಪುಟ್ಟಪ್ಪ ಸಭಾಭವನದಲ್ಲಿ ಆಯೋಜಿಸಿದ್ದ **ಐದು ದಿನಗಳ ಕಾರ್ಯಕ್ರಮಗಳಿಗೆ ವಿಧ್ಯುಕ್ತ ಚಾಲನೆ ನೀಡಿ** ಮಾತನಾಡುತ್ತಿದ್ದರು.

ಕನ್ನಡ ನಾಡು ಒಗ್ಗೂಡಿಸುವಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘ ಮಹತ್ವದ ಕೆಲಸ ಮಾಡಿದೆ. ಕನ್ನಡ ನಾಡು, ನುಡಿ ಅಸ್ತಿತ್ವಕ್ಕೆ ಮಿಡಿಯುವ ಕವಿಸಂ ಕಾಯಕ ಇತರೆ ಸಂಘ–ಸಂಸ್ಥೆಗಳಿಗೆ ಮಾದರಿ. ಸಂಘದ ಕೈಂಕರ್ಯಗಳು ಹೀಗೆ ಮುನ್ನಡೆಯಲಿ ಎಂದರು.

ಉತ್ತರ ಕರ್ನಾಟಕಕ್ಕೆ ಸಾಕಷ್ಟು ಅನ್ಯಾಯ ಆಗುತ್ತಿದ್ದು, ಈ ಭಾಗದಲ್ಲಿ ನ್ಯಾಯಯುತ ಅಭಿವೃದ್ಧಿ ಕಾರ್ಯಗಳ ಬಗಗೆ ಸಂಘದ ಧ್ವನಿ ಮುಖ್ಯ ಪಾತ್ರ ವಹಿಸಲಿದೆ. ಈ ನಿಟ್ಟಿನಲ್ಲಿ ಇಲ್ಲಿಯ ನಾಯಕರು, ಸಾಹಿತಿಗಳು ಧ್ವನಿ ಎತ್ತಬೇಕಿದೆ ಎಂದು ಕಿವಿಮಾತು ಹೇಳಿದರು. ನಮ್ಮಲ್ಲಿ ಇರುವ ನಾಯಕತ್ವದ ಕೊರತೆ ನೀಗಬೇಕು. ಈ ಭಾಗದ ಜನರ ನೆಮ್ಮದಿ, ಏಳ್ಗೆಗಾಗಿ ಎಲ್ಲರೂ ಒಂದಾಗಬೇಕು. ಇಲ್ಲಿಯ ಸಂಪನ್ಮೂಲಗಳ ಸದ್ಬಳಕೆ ಆಗಬೇಕು. ಇದರ ಬಗ್ಗೆ ಜನರಲ್ಲಿ ಜಾಗೃತಿ, ಅರಿವು ಮೂಡಿಸುವ ಸಾಹಿತ್ಯ ರಚನೆ ಆಗಬೇಕಿದೆ ಎಂದರು.

ಸಾನ್ನಿಧ್ಯ ವಹಿಸಿದ್ದ ಬೈಲೂರು ನಿಷ್ಕಲ ಮಂಟಪದ ನಿಜಗುಣಪ್ರಭು ಸ್ವಾಮೀಜಿ ಮಾತನಾಡಿ, ಶರಣ ಸಾಹಿತ್ಯದಿಂದ ಕನ್ನಡಕ್ಕೆ ಉಳಿಗಾಲವಿದೆ. ಎಲ್ಲಿಯವರೆಗೆ ಬಸವಣ್ಣನನ್ನು ಸಾಂಸ್ಕೃತಿಕ ಭಾಷಾ ನಾಯಕನಾಗಿ ಘೋಷಿಸದ ಹೊರತು ಕನ್ನಡಕ್ಕೆ ಉಳಿಗಾಲವಿಲ್ಲ ಎಂದರು.

ಶಾಲಾ–ಕಾಲೇಜುಗಳಿಗೆ ವಚನ ಸಾಹಿತ್ಯ ಹೊತ್ತುಕೊಂಡು ಹೋಗೋಣ. ವಚನ ಸಾಹಿತ್ಯದಿಂದ ವ್ಯಕ್ತಿತ್ವ ವಿಕಸನಕ್ಕೆ ಕಾರ್ಯಕ್ರಮ ರೂಪಿಸೋಣ. ವಚನ ಸಾಹಿತ್ಯ ಬಗ್ಗೆ ವಿದ್ಯಾರ್ಥಿಗಳಿಗೆ ಅರಿವು ಮೂಡಿಸಬೇಕು. ಈ ಬಗ್ಗೆ ಕರ್ನಾಟಕ ವಿದ್ಯಾವರ್ಧಕ ಸಂಘವು ಯೋಜನೆ ರೂಪಿಸಲಿ ಎಂದರು.

ವಿಜಯಪುರದ ವಿಮರ್ಶಕ ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಮುಖ್ಯ ಅತಿಥಿಯಾಗಿ ಆಗಮಿಸಿದ್ದರು. ಸಂಘದ ಅಧ್ಯಕ್ಷ ಚಂದ್ರಕಾಂತ ಬೆಲ್ಲದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ವೇದಿಕೆ ಮೇಲೆ ಡಾ. ಆನಂದ ಪಾಟೀಲ, ನಿಂಗಣ್ಣ ಕುಂಟಿ ಉಪಸ್ಥಿತರಿದ್ದರು.

ಶಂಕರ ಹಲಗತ್ತಿ ಸ್ವಾಗತಿಸಿದರು. ಬಸವಪ್ರಭು ಹೊಸಕೇರಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರೊ. ಧನವಂತ ಹಾಜವಗೋಳ ಧಾರವಾಡ ಹಿರಿಮೆ ಹೆಚ್ಚಿಸಿದ ಚೇತನ 'ಡಾ. ಡಿ.ಸಿ. ಪಾವಟೆ' ಅವರ ಸ್ಮರಣೆ ಮಾಡಿದರು. ಶಂಕರ ಕುಂಬಿ ನಿರೂಪಿಸಿದರು. ಶಿವಾನಂದ ಭಾವಿಕಟ್ಟಿ ವಂದಿಸಿದರು.

ನಂತರ ಸುಗಮ ಸಂಗೀತ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

## ಚಿತ್ರಕಲಾ ಪ್ರದರ್ಶನ ಉದ್ಘಾಟನೆ

ಮನುಷ್ಯ ಸುಸಂಸ್ಕೃತ ಬದುಕನ್ನು ರೂಪಿಸಿಕೊಳ್ಳಬೇಕಾದರೆ ಅವನಲ್ಲಿ ಕಲಾರಾಧನೆ ಇರಬೇಕು ಎಂದು ಡಾ. ವೀರಣ್ಣ ರಾಜೂರ ಹೇಳಿದರು.

ಕರ್ನಾಟಕ ವಿದ್ಯಾವರ್ಧಕ ಸಂಘವು ೧೩೪ನೇ ಸಂಸ್ಥಾಪನಾ ದಿನಾಚರಣೆ ಅಂಗವಾಗಿ ದಿನಾಂಕ: ೨೦–೭–೨೦೨೩ ರಂದು ಸಂಘದ ಶ್ರೀ ರಾ. ಹ. ದೇಶಪಾಂಡೆ ಸಭಾಭವನದಲ್ಲಿ ಬೆಳಿಗ್ಗೆ ೧೧ ಗಂಟೆಗೆ ಆಯೋಜಿಸಿದ್ದ **ಚಿತ್ರಕಲಾ ಪ್ರದರ್ಶನದ ಉದ್ಘಾಟನೆ** ಮಾಡಿ ಅವರು ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡುತ್ತಾ, ಚಿತ್ರಕಲೆ ಮನುಷ್ಯನ ಮೊದಲ ಭಾಷೆ. ಮಾತನಾಡಲು ಶುರುಮಾಡಿದ್ದೆ ಚಿತ್ರಕಲೆಯ ಮೂಲಕ. ಮಾನವನ ವಿಕಾಸ ಆದಂತೆ ಬೇರೆಬೇರೆ ಅಭಿವೃದ್ಧಿ ಮಾಡುವ ಮಾಧ್ಯಮಗಳು ಬಂದವು. ಕಲೆ ಮನುಷ್ಯನ ಹುಟ್ಟಿನೊಂದಿಗೆ, ನಮ್ಮ ಬದುಕಿಗೆ ಅಂಟಿಕೊಂಡು ಬಂದಿದೆ. ನಮ್ಮ ಬದುಕೇ ಕಲೆಯ ಮೂಲಕ ವಿಕಾಸಗೊಂಡಿದೆ. ಮಗುವಿನ ಕಲಿಕೆಯೂ ಸಹ ಚಿತ್ರಕಲೆಯ ಮೂಲಕವೇ ಆರಂಭವಾಗಿ ಚಿತ್ರಗಳ ಮೂಲಕವೇ ಭಾಷೆಯನ್ನು ಕಲಿಯುವುದು ಎಂದರು.

ಮನುಷ್ಯ ಭಾಷೆ ಮೂಲಕ ಅಭಿವ್ಯಕ್ತಿಗೊಳಿಸುವನು ಇಲ್ಲವೆ ಕಥೆ, ಕವಿತೆ, ನಾಟಕ ಹೀಗೆ ಬರಹದ ಮೂಲಕ ವ್ಯಕ್ತಪಡಿಸುವನು. ಚಿತ್ರದ ಮೂಲಕ ಅಭಿವ್ಯಕ್ತಿಪಡಿಸುವನು ರೇಖಾ ಚಿತ್ರದಿಂದಲೋ, ವರ್ಣಚಿತ್ರದಿಂದಲೋ ಅಥವಾ ಇನ್ನಾವುದೋ ರೀತಿಯ ಚಿತ್ರಗಳನ್ನು ಬರೆದು ಅಭಿವ್ಯಕ್ತಿಪಡಿಸುವನು. ಹೀಗೆ ಏಳು ಕಲೆಗಳ ಮೂಲಕ ಅಂದರೆ ಸಾಹಿತ್ಯ, ಚಿತ್ರಕಲೆ, ನಾಟಕ, ನೃತ್ಯ, ಸಂಗೀತ, ಶಿಲ್ಪ ವಸ್ತುಗಳು ಮನುಷ್ಯನನ್ನು ಸುಸಂಸ್ಕೃತಗೊಳಿಸುವಂತಹವು.

ಒಂದು ಕಾದಂಬರಿ ಓದಿದ ಅನುಭವ ಒಂದು ಚಿತ್ರ ನೋಡುವುದರಿಂದ ಸಿಗುವುದು. ಇಂದು ಚಿತ್ರಕಲೆ ಒಂದು ಮಣ್ಣಿನಲ್ಲಿ ಮೂಡಿಸುವ ಗೆರೆಯಿಂದ ಕಂಪ್ಯೂಟರದವರೆಗೆ ಬೆಳೆದು ನಿಂತಿದೆ. ಚಿತ್ರ ಬಿಡಿಸುವಲ್ಲಿ ಈಗ ಅನೇಕ ಆವಿಷ್ಕಾರಗಳು ಆಗಿವೆ. ಕರ್ನಾಟಕ ವಿದ್ಯಾವರ್ಧಕ ಸಂಘವು ನಾಡಿನ ಹೆಮ್ಮೆಯ ಸಂಸ್ಥೆಯಾಗಿದ್ದು ಸದಾ ಹೊಸದನ್ನೇ ಮಾಡುವುದು. ಸಂಘಕ್ಕೆ ಅಭಿನಂದನೀಯ ಎಂದರು.

ಕಲಾವಿದರಾದ ಬಿ ಮಾರುತಿ ಮತ್ತು ಹುಬ್ಬಳ್ಳಿಯ ಶಾಮಲಾ ಗುರುಪ್ರಸಾದ ಅವರು ಮಾತನಾಡಿ, ಸಂಘವು ತನ್ನ ೧೩೪ನೇ ಸಂಸ್ಥಾನಪನಾ ದಿನಾಚರಣೆ ಸಂದರ್ಭದಲ್ಲಿ ನಮ್ಮ ಕಲೆಗೆ ಮಾನ್ಯತೆ ನೀಡಿ ಚಿತ್ರಪ್ರದರ್ಶನಕ್ಕೆ ಅವಕಾಶ ಕಲ್ಪಿಸಿ, ಪ್ರೋತ್ಸಾಹ ನೀಡಿರುವುದು ಸಂತೋಷ ತಂದಿದೆ. ಇದಕ್ಕೆ ಸಂಘಕ್ಕೆ ನಾವು ಚಿರಋಣಿಯಾಗಿದ್ದೇವೆ ಎಂದು ಹೇಳಿದರು.

ಸಂಘದ ಅಧ್ಯಕ್ಷ ಚಂದ್ರಕಾಂತ ಬೆಲ್ಲದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ವೇದಿಕೆ ಮೇಲೆ ಡಾ. ಆನಂದ ಪಾಟೀಲ, ನಿಂಗಣ್ಣ ಕುಂಟಿ ಉಪಸ್ಥಿತರಿದ್ದರು.

ವೀರಣ್ಣ ಒಡ್ಡೀನ ಸ್ವಾಗತಿಸಿದರು. ವಿಶ್ವೇಶ್ವರಿ ಹಿರೇಮಠ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಂಕರ ಹಲಗತ್ತಿ ನಿರೂಪಿಸಿದರು. ಗುರು ಹಿರೇಮಠ ವಂದಿಸಿದರು.

## 'ಸಿರಿಗನ್ನಡ ಪುಸ್ತಕ ಮನೆ' ಉದ್ಘಾಟನೆ

ಅನ್ನದಾಸೋಹದಂತೆ ಅಕ್ಷರದಾಸೋಹ ನಡೆಸಿ ಪುಸ್ತಕಗಳನ್ನು ಮಕ್ಕಳಿಗೆ ಮುಟ್ಟಿಸುವ ಅಭಿಯಾನ ನಡೆಯಬೇಕು ಎಂದು ಆಕಾಶವಾಣಿ ಧಾರವಾಡ ಕೇಂದ್ರದ ನಿವೃತ್ತ ನಿಲಯ ನಿರ್ದೇಶಕ ಸಿ. ಯು. ಬೆಳ್ಳಕ್ಕಿ ಹೇಳಿದರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು ದಿನಾಂಕ: ೨೧-೭-೨೦೨೩ ರಂದು ಆಯೋಜಿಸಿದ್ದ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ ಸಂಘವು ನೂತನವಾಗಿ ನಿರ್ಮಿಸಿದ **'ಸಿರಿಗನ್ನಡ ಪುಸ್ತಕ ಮನೆ'** ಉದ್ಘಾಟಿಸಿ ಮಾತನಾಡಿದರು.

ಪುಸ್ತಕಗಳನ್ನು ಓದುವವರು ಕಡಿಮೆಯಾಗಿಲ್ಲ. ಆದರೆ ಸಮರ್ಪಕವಾಗಿ ಪುಸ್ತಕಗಳನ್ನು ತಲುಪಿಸುವ ಕೆಲಸವಾಗಬೇಕು. ಮಕ್ಕಳಿಗೆ ಪುಸ್ತಕಗಳ ಬಗ್ಗೆ ಆಸಕ್ತಿ ಮೂಡಿಸಬೇಕು. ಶಾಲೆಗಳಲ್ಲಿ ಸ್ಪರ್ಧೆಗಳಲ್ಲಿ ವಿಜೇತರಾದ ಮಕ್ಕಳಿಗೆ ಪುಸ್ತಕಗಳನ್ನೇ ಬಹುಮಾನವಾಗಿ ನೀಡುವ ಪರಿಪಾಠ ಬೆಳೆಯಬೇಕಿದೆ. ಓದುಗರ ಕೈಗೆ ಪುಸ್ತಕ ಅಭಿಯಾನ ನಡೆಯಬೇಕು. ಪುಸ್ತಕಗಳ ವಿಮರ್ಶೆ ಮಾಡದೇ ಹೊಸ ಪುಸ್ತಕಗಳನ್ನು ಪರಿಚಯಿಸುವ ಕಾರ್ಯಕ್ರಮಗಳನ್ನು ವಿದ್ಯಾವರ್ಧಕ ಸಂಘ ಆಯೋಜಿಸುವುದು ಸೂಕ್ತ ಎಂದರು.

ಅಧ್ಯಕ್ಷತೆ ವಹಿಸಿದ್ದ ಖ್ಯಾತ ಮನೋರೋಗ ತಜ್ಞ ಡಾ. ಆನಂದ ಪಾಂಡುರಂಗಿ ಮಾತನಾಡಿ, ಕಂಪ್ಯೂಟರ್, ಮೊಬೈಲ್‌ನಲ್ಲಿ ನೋಡಿದ್ದು ಹೆಚ್ಚು ಕಾಲ ನಮಗೆ ನೆನಪಿರುವುದಿಲ್ಲ, ಆದರೆ ನಾವು ಪುಸ್ತಕ, ಪತ್ರಿಕೆಯಲ್ಲಿ ಓದಿದ್ದು ಹತ್ತಾರು ವರ್ಷಗಳ ಕಾಲ ನಮ್ಮ ಸ್ಮೃತಿ ಪಟಲದಲ್ಲಿರುತ್ತದೆ. ಪುಸ್ತಕಗಳನ್ನು ಖರೀದಿಸಿ ಓದಬೇಕೆಂದು, ಮಕ್ಕಳಿಗೆ ತಿಳಿಸಿಕೊಡಬೇಕು ಎಂದು ತಿಳಿಸಿದರು.




ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ
೧೩೩ ನೇ ಸಂಸ್ಥಾಪನಾ ದಿನಾಚರಣೆ

ಧಾರವಾಡದ ಹಿರಿಮೆ ಹೆಚ್ಚಿಸಿದ ಚೇತನಗಳಲ್ಲಿ ಒಬ್ಬರಾದ 'ಶ್ರೀ ಡಿ. ವ್ಹಿ. ಹಾಲಭಾವಿ' ಯವರ ಸ್ಮರಣೆಯನ್ನು ಹಿರಿಯ ಕಲಾವಿದ ಎಫ್. ವಿ. ಚಿಕ್ಕಮಠ ಮಾಡಿದರು.

ಇದೇ ಸಂದರ್ಭದಲ್ಲಿ ಸಂಘದ ಹಿರಿಯ ಸದಸ್ಯರಾದ ಡಾ. ಡಿ. ಎಂ. ಹಿರೇಮಠ, ಪ್ರಭಾವತಿ ಗುಂಜೆಟ್ಟಿ, ಶಂಕರ ಕುಂಬಿ, ಪ್ರೊ. ಕೆ.ಎಸ್. ಕೌಜಲಗಿ, ಲಲಿತಾ ಕೆರಿಮನಿ, ಡಿ. ಬಿ. ಢಂಗ ಅವರನ್ನು ಸತ್ಕರಿಸಲಾಯಿತು.

ಗಣ್ಯ ವ್ಯಾಪಾರಸ್ಥರಾದ ಧಾರವಾಡದ ಸಿದ್ಧರಾಮ ನಡಕಟ್ಟಿ ಹಾಗೂ ಹಿರಿಯ ಕಲಾವಿದೆ ಸೀತಾ ಛಪ್ಪರ ಸಂಘದ ಹಿರಿಯ ಸದಸ್ಯರಿಗೆ ಗೌರವ ಸಮರ್ಪಣೆ ಮಾಡಿದರು.

ವೇದಿಕೆಯಲ್ಲಿ ಸಂಘದ ಅಧ್ಯಕ್ಷರಾದ ಚಂದ್ರಕಾಂತ ಬೆಲ್ಲದ ಉಪಸ್ಥಿತರಿದ್ದರು. ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ಡಾ. ಶೈಲಜಾ ತ. ಅಮರಶೆಟ್ಟಿ, ವೀರಣ್ಣ ಒಡ್ಡೀನ, ಡಾ. ಮಹೇಶ ಧ. ಹೊರಕೇರಿ, ಡಾ. ಶ್ರೀಶೈಲ ಹುದ್ದಾರ ಹಿರಿಯ ಸದಸ್ಯರ ಪರಿಚಯ ಮಾಡಿಕೊಟ್ಟರು. ಡಾ. ಜಿನದತ್ತ ಹಡಗಲಿ ಸ್ವಾಗತಿಸಿದರು. ಡಾ. ಶ್ರೀಶೈಲ ಹುದ್ದಾರ ನಿರೂಪಿಸಿದರು. ಶಿವಾನಂದ ಬಾವಿಕಟ್ಟಿ ವಂದಿಸಿದರು.

ನಂತರ ಸುಗಮ ಸಂಗೀತ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

## 'ಸಿರಿಗನ್ನಡಂ ಗೆಲ್ಗೆ' ರಾ. ಹ. ದೇಶಪಾಂಡೆ ಪ್ರಶಸ್ತಿ ಪ್ರದಾನ

ಭಾಲ್ಕಿಯ ಹಿರೇಮಠ ಸಂಸ್ಥಾನಕ್ಕೆ **'ಸಿರಿಗನ್ನಡಂ ಗೆಲ್ಗೆ' ರಾ.ಹ. ದೇಶಪಾಂಡೆ ಪ್ರಶಸ್ತಿ ಪ್ರದಾನ** ಮಾಡಲಾಯಿತು. ಕರ್ನಾಟಕ ವಿದ್ಯಾವರ್ಧಕ ಸಂಘದ ೧೩೪ನೇ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ ದಿನಾಂಕ: ೨೨-೭-೨೦೨೩ ರಂದು ವಿಧಾನ ಪರಿಷತ್ ಸದಸ್ಯ ಜಗದೀಶ ಶೆಟ್ಟರ ಅವರು ಹಿರೇಮಠ ಸಂಸ್ಥಾನ, ಭಾಲ್ಕಿ ಅನುಭವ ಮಂಟಪದ ಅಧ್ಯಕ್ಷರಾದ ಡಾ. ಬಸವಲಿಂಗ ಪಟ್ಟದ್ದೇವರಿಗೆ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿ, ರಜಾಕಾರರ ಹಾವಳಿಯ ಕಾಲದಲ್ಲಿ ಶಾಲೆಯ ಹೊರಗೆ ಉರ್ದು ಫಲಕ ಹಾಕಿ ಕನ್ನಡ ಕಲಿಸುವ ಮೂಲಕ ಹಿರೇಮಠ ಸಂಸ್ಥಾನದ ಚನ್ನಬಸವ ಪಟ್ಟದ್ದೇವರು ಗಡಿ ಭಾಗದಲ್ಲಿ ಕನ್ನಡ ಉಳಿಸಲು, ಬೆಳೆಸಲು ಸಾಕಷ್ಟು ಶ್ರಮಿಸಿದರು. ಅವರ ಪ್ರಯತ್ನದ ಫಲವಾಗಿಯೇ ಕಲ್ಯಾಣ ಕರ್ನಾಟಕದಲ್ಲಿ ಕನ್ನಡ ಉಳಿದಿದೆ. ಕನ್ನಡದ ಶಕ್ತಿ ಕುಂದಿದ ಕಾಲದಲ್ಲಿ ಕನ್ನಡ ಕಲಿಸಿದ್ದು ಶ್ರೇಷ್ಠ ಕಾರ್ಯ ಎಂದರು.



ಭಾಲ್ಕಿಯ ಹಿರೇಮಠ ಸಂಸ್ಥಾನ ಕನ್ನಡದ ಮಠ ಎಂದೇ ಪ್ರಸಿದ್ಧಿ ಪಡೆದಿದೆ. ಭಾಲ್ಕಿ ಮಠಕ್ಕೆ ಪ್ರಶಸ್ತಿ ನೀಡುವುದೆಂದರೆ ನಮಗೆ ನಾವೇ ಪ್ರಶಸ್ತಿ ಕೊಟ್ಟುಕೊಂಡಂತೆ. ಶ್ರೀಮಠ ಮಾಡಿದ ಕನ್ನಡ ಕಾರ್ಯಕ್ಕಾಗಿ ನಾನು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ರಾಜ್ಯೋತ್ಸವ ಪ್ರಶಸ್ತಿ ಕೊಡಿಸಿದೆ ಎಂದು ನುಡಿದರು.

ಉತ್ತರ ಕರ್ನಾಟಕ ಭಾಗದಲ್ಲಿ ಕನ್ನಡವನ್ನು ಕಟ್ಟುವ ಕೆಲಸ ಮಾಡಿದ ಪ್ರಮುಖರಲ್ಲಿ ರಾ.ಹ, ದೇಶಪಾಂಡೆ ಒಬ್ಬರು. ಅವರು ಆರಂಭಿಸಿದ ಕರ್ನಾಟಕ ವಿದ್ಯಾವರ್ಧಕ ಸಂಘ ೧೩೪ ವರ್ಷಗಳಿಂದ ಕನ್ನಡ ಉಳಿಸಿ, ಬೆಳೆಸುವ ಕಾರ್ಯವನ್ನು  ಮಾಡುತ್ತಿದೆ ಎಂದು ತಿಳಿಸಿದರು.

"ಸಿರಿಗನ್ನಡಂ ಗೆಲ್ಗೆ' ರಾ.ಹ. ದೇಶಪಾಂಡೆ ಪ್ರಶಸ್ತಿ ಸ್ವೀಕರಿಸಿದ ಭಾಲ್ಕಿಯ ಹಿರೇಮಠ ಸಂಸ್ಥಾನದ ಶ್ರೀ ಬಸವಲಿಂಗ ಪಟ್ಟದ್ದೇವರು ಮಾತನಾಡಿ, ಬೀದರ್ ಭಾಗದಲ್ಲಿ, ಕರ್ನಾಟಕದಲ್ಲಿ ಕನ್ನಡ ಉಳಿಯಲು ಮಠದ ಶ್ರೀ ಚನ್ನಬಸವ ಪಟ್ಟದೇವರ ಕೊಡುಗೆ ಅಪಾರವಾಗಿದೆ. ಅವರು ಕನ್ನಡವನ್ನು ಉಳಿಸಿ, ಬೆಳೆಸುವುದರೊಂದಿಗೆ ಕನ್ನಡಿಗರನ್ನು ಸಂಘಟಿಸಿದರು. ಕನ್ನಡ ಶಾಲೆಗಳನ್ನು ಆರಂಭಿಸಿ ಮಕ್ಕಳಿಗೆ ಅನ್ನದಾಸೋಹದೊಂದಿಗೆ ಕನ್ನಡ ಜ್ಞಾನದಾಸೋಹ ಕೈಗೊಂಡರು. ಜೋಳಿಗೆ ಹಾಕಿ, ಮನೆ ಮನೆಗೆ ತೆರಳಿ ದವಸಧಾನ್ಯಗಳನ್ನು ಸಂಗ್ರಹಿಸಿ ಮಕ್ಕಳ ಹೊಟ್ಟೆ ತುಂಬಿಸಿ, ಕನ್ನಡ ಕಲಿಸಿದ ಪೂಜ್ಯರ ಕನ್ನಡಕಾಯಕ ಅವಿಸ್ಮರಣೀಯ.

ಪ್ರಶಸ್ತಿಯಿಂದ ಇನ್ನಷ್ಟು ಸೇವೆ ಮಾಡಲು ಪ್ರೋತ್ಸಾಹ ಸಿಕ್ಕಂತಾಗಿದೆ. ನಮ್ಮ ಉದ್ದೇಶ ಸರಿಯಾಗಿದ್ದರೆ, ನಡೆಯುವ ದಾರಿ ಸರಿಯಾಗಿದ್ದರೆ ಯಾರಿಗೂ ಹೆದರಬೇಕಾಗಿಲ್ಲ ಎಂದರು.

ಶ್ರೀ ರಾ. ಹ. ದೇಶಪಾಂಡೆ ಅವರ ಕುರಿತು ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ಡಾ. ಸಂಜೀವ ಕುಲಕರ್ಣಿ, ಡಾ. ಗಂಗೂಬಾಯಿ ಹಾನಗಲ್ ಕುರಿತು ವಿಶ್ವೇಶ್ವರಿ ಹಿರೇಮಠ ಹಾಗೂ ಭಾಲ್ಕಿ ಹಿರೇಮಠ ಸಂಸ್ಥಾನದ ಬಗ್ಗೆ ಪ್ರಿ. ಶಶಿಧರ ತೋಡಕರ ಮಾತನಾಡಿದರು.

ಪ್ರೊ. ಮಾಲತಿ ಪಟ್ಟಣಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ವೇದಿಕೆ ಮೇಲೆ ಸಂಘದ ಅಧ್ಯಕ್ಷ ಚಂದ್ರಕಾಂತ ಬೆಲ್ಲದ, ಕಾರ್ಯಾಧ್ಯಕ್ಷ ಬಸವಪ್ರಭು ಹೊಸಕೇರಿ, ಕೋಶಾಧ್ಯಕ್ಷ ಶಿವಾನಂದ ಬಾವಿಕಟ್ಟಿ, ಪ್ರಧಾನ ಕಾರ್ಯದರ್ಶಿ ಶಂಕರ ಹಲಗತ್ತಿ, ಕಾರ್ಯಕಾರಿ ಸಮಿತಿ ಸದಸ್ಯ ಡಾ. ಜಿನದತ್ತ ಹಡಗಲಿ ಇದ್ದರು.

ನಂತರ ಸುಗಮ ಸಂಗೀತ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

## ಸನ್ಮಾನ ಮತ್ತು ಕೃತಿ ಬಿಡುಗಡೆ

ಕನ್ನಡಿಗರು ಐಎಎಸ್, ಐಪಿಎಸ್, ಐಸಿಎಸ್ ಪರೀಕ್ಷೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಉತ್ತೀರ್ಣರಾಗುವ ದಿಸೆಯಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘ ವರದಿ ನೀಡಿದರೆ ಸರ್ಕಾರದಿಂದ ಯೋಜನೆ ರೂಪಿಸಲು ಸಾಧ್ಯವಾಗುತ್ತದೆ ಎಂದು ವಿಧಾನ ಪರಿಷತ್ ಸದಸ್ಯ ಎಸ್. ವಿ. ಸಂಕನೂರ ಹೇಳಿದರು. ಅವರು ಕರ್ನಾಟಕ ವಿದ್ಯಾವರ್ಧಕ ಸಂಘದ ೧೩೪ನೇ ಸಂಸ್ಥಾಪನಾ ದಿನಾಚರಣೆ ಅಂಗವಾಗಿ ದಿನಾಂಕ: ೨೩-೭-೨೦೨೩ ರಂದು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಹಿರಿಯ ಗಾಯಕ **ಡಾ. ಪಂಡಿತ ಎಂ. ವೆಂಕಟೇಶಕುಮಾ ಅವರನ್ನು ಸನ್ಮಾನಿ**ಸಿ ಮಾತನಾಡಿದರು.

ಐಎಎಸ್ ಹಾಗೂ ಐಪಿಎಸ್ ಪರೀಕ್ಷೆಗಳಲ್ಲಿ ಕನ್ನಡಿಗರು ಉತ್ತೀರ್ಣರಾಗುವುದು ಕಡಿಮೆ. ಇದಕ್ಕೆ ಕಾರಣಗಳನ್ನು ಕಂಡುಕೊಂಡರೆ ಸರಕಾರಕ್ಕೆ ವರದಿ ಸಲ್ಲಿಸಿ ಯೋಜನೆ ರೂಪಿಸಬಹುದು. ಕನ್ನಡಿಗರಿಗೆ ಅನುಕೂಲವಾಗುವ ದಿಸೆಯಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘವು ಸಾಹಿತಿಗಳು, ಶಿಕ್ಷಣ ತಜ್ಞರು, ಚಿಂತಕರ ಅಭಿಪ್ರಾಯ ಪಡೆದು ವರದಿ ನೀಡಬೇಕೆಂದು ಮನವಿ ಮಾಡಿದರು.

ಕನ್ನಡ ಶಾಲೆಗಳಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗುತ್ತಿದೆ. ರಾಜ್ಯದಲ್ಲಿ ೧ ರಿಂದ ೭ ನೇ ತರಗತಿಯ ೬೦೦ ಶಾಲೆಗಳಲ್ಲಿ ತಲಾ ೫ ವಿದ್ಯಾರ್ಥಿಗಳಿದ್ದಾರೆ. ಅದೇ ರೀತಿ ೮ ರಿಂದ ೧೦ನೇ ತರಗತಿಯ ೧೦೦೦ ಕ್ಕೂ ಹೆಚ್ಚು ಶಾಲೆಗಳಲ್ಲಿ ತಲಾ ೫ ಮಕ್ಕಳು ಕಲಿಯುತ್ತಿದ್ದಾರೆ. ಕನ್ನಡ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಹೆಚ್ಚಾಗಬೇಕು. ಸರಕಾರದ ಮೇಲೆ ನಾವು ಒತ್ತಡ ತಂದು ಕನ್ನಡ ಶಾಲೆಗಳನ್ನು ಮುಚ್ಚಲು ಅವಕಾಶ ನೀಡಿಲ್ಲ. ಕನ್ನಡ ಶಾಲೆಗಳನ್ನು ಮುಚ್ಚಿದರೆ ಆದರಿಂದ ಕನ್ನಡ ನಾಡು, ನುಡಿ, ಸಂಸ್ಕೃತಿಗೆ ಧಕ್ಕೆಯಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಕನ್ನಡ ನಾಡಿನ ಜನರೆಲ್ಲರೂ ವಿದ್ಯಾವರ್ಧಕ ಸಂಘದ ಬಗ್ಗೆ ಗೌರವ ಹೊಂದಿರಬೇಕು. ಒಂದು ವೇಳೆ ಈ ಸಂಘ ಬೆಂಗಳೂರು, ಮೈಸೂರಿನಲ್ಲಿದ್ದರೆ ಸಾಕಷ್ಟು ಅನುದಾನ ದೊರೆಯುತ್ತಿತ್ತು. ಸಂಘಕ್ಕೆ ಅಗತ್ಯ ಅನುದಾನ ಕೊಡಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದರು.

**'ಕನ್ನಡ ನಾಡಿನ ಕವಿ ಶ್ರೇಷ್ಠರು' ಕೃತಿ ಲೋಕಾರ್ಪಣೆ** ಮಾಡಿದ ಹು-ಧಾ ಸೆಂಟ್ರಲ್ ಶಾಸಕ ಮಹೇಶ ಟೆಂಗಿನಕಾಯಿ ಮಾತನಾಡಿ, ರಾಜ್ಯ ಸರಕಾರ ಬಜೆಟ್‌ನಲ್ಲಿ ಶಿಕ್ಷಣ ಹಾಗೂ ಆರೋಗ್ಯ ಕ್ಷೇತ್ರಗಳನ್ನು ಕಡೆಗಣಿಸಿದ್ದು ಖಂಡನೀಯ. ಕರ್ನಾಟಕ ವಿದ್ಯಾವರ್ಧಕ ಸಂಘ ಧಾರವಾಡಕ್ಕೆ ಸೀಮಿತವಾಗಿಲ್ಲ, ಅದು ಇಡೀ ರಾಜ್ಯದ ಒಳಿತು ಬಯಸುವ ಸಂಘ ಎಂಬುದನ್ನು ಸರಕಾರ ಮನಗಾಣಬೇಕು. ಸಂಘಕ್ಕೆ ಸರಕಾರ ಅನುದಾನ ನೀಡಲು ಹಿಂದೇಟು ಹಾಕುತ್ತಿದ್ದು, ವಿಧಾನಸಭೆಯಲ್ಲಿ ಸಂಘದ ಧ್ವನಿಯಾಗಿ ಅನುದಾನ ಕೊಡಿಸಲು ಪ್ರಯತ್ನಿಸುತ್ತೇನೆ ಎಂದು ಭರವಸೆ ನೀಡಿದರು.

ಸನ್ಮಾನ ಸ್ವೀಕರಿಸಿದ ಪಂ. ವೆಂಕಟೇಶಕುಮಾರ ಮಾತನಾಡಿ, ನನ್ನಂತೆ ಸಹಸ್ರಾರು ಮಂದಿಗೆ ಸಂಗೀತ, ಕಲಿಸಿದ ಪುಟ್ಟರಾಜ ಗವಾಯಿಗಳಿಗೆ ಭಾರತರತ್ನ ಪ್ರಶಸ್ತಿ ಸಿಗಬೇಕಿತ್ತು. ಅವರಿಗೆ ಸಿಗಲಿಲ್ಲ. ಅವರು ಎಂದಿಗೂ ಪ್ರಶಸ್ತಿ ಬಯಸಲಿಲ್ಲ. ಪ್ರಶಸ್ತಿಯಿಂದ ಯಾರೂ ಕೂಡ ದೊಡ್ಡವರಾಗುವುದಿಲ್ಲ, ನಡೆ, ನುಡಿ, ಸಂಸ್ಕಾರ, ಸಾಧನೆಯಿಂದ ದೊಡ್ಡವರಾಗುತ್ತಾರೆ. ಹಿರಿಯರ ಸಂಪ್ರದಾಯ ಮುಂದುವರೆಸಿಕೊಂಡು ಹೋದರೆ ನಾವು ಹಾದಿ ತಪ್ಪುವುದಿಲ್ಲ ಎಂದು ಸಂಘದ ಈ ಸತ್ಕಾರ ನನ್ನ ಜವಾಬ್ದಾರಿಯನ್ನು ಮತ್ತಷ್ಟು ಹೆಚ್ಚಿಸಿದೆ ಎಂದು ಸಂತೋಷ ವ್ಯಕ್ತಪಡಿಸಿ ಸಂಘಕ್ಕೆ ಕೃತಜ್ಞತೆ ಸಲ್ಲಿಸಿದರು.

ಸಂಘದ ಕಾರ್ಯಾಧ್ಯಕ್ಷ ಬಸವಪ್ರಭು ಹೊಸಕೇರಿ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕಾರಿ ಸಮಿತಿ ಸದಸ್ಯ ಗುರು ಹಿರೇಮಠ **ಹಿರಿಯ ಚೇತನ ಎಸ್.ಡಬ್ಲೂ. ಮೆಣಸಿನಕಾಯಿ ಅವರ ಸ್ಮರಣೆ ಮಾಡಿದರು.**

ವೇದಿಕೆ ಮೇಲೆ ಸಂಘದ ಅಧ್ಯಕ್ಷ ಚಂದ್ರಕಾಂತ ಬೆಲ್ಲದ, ಉಪಾಧ್ಯಕ್ಷೆ ಮಾಲತಿ ಪಟ್ಟಣಶೆಟ್ಟಿ ಇದ್ದರು. ಕೋಶಾಧ್ಯಕ್ಷ ಶಿವಾನಂದ ಬಾವಿಕಟ್ಟಿ ಸ್ವಾಗತಿಸಿದರು. ಪ್ರಧಾನ ಕಾರ್ಯದರ್ಶಿ ಶಂಕರ ಹಲಗತ್ತಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಹಕಾರ್ಯದರ್ಶಿ ಶಂಕರ ಕುಂಬಿ ಸನ್ಮಾನಿತರನ್ನು ಪರಿಚಯಿಸಿದರು. ಕಾರ್ಯಕಾರಿ ಸಮಿತಿ ಸದಸ್ಯೆ ಶೈಲಜಾ ಅಮರಶೆಟ್ಟಿ ನಿರೂಪಿಸಿದರು.

ನಂತರ ಸುಗಮ ಸಂಗೀತ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

## 'ಕನ್ನಡ ಪ್ರಪಂಚ ಡಾ. ಪಾಟೀಲ ಪುಟ್ಟಪ್ಪ' ರಾಷ್ಟ್ರೀಯ ಪ್ರಶಸ್ತಿ ಪ್ರದಾನ

ಉತ್ತರ ಕರ್ನಾಟಕ ಭಾಗದಲ್ಲಿ ಕನ್ನಡ ಭಾಷೆ ಉಳಿದಿದ್ದು, ಇಲ್ಲಿಯೇ ಗಟ್ಟಿಯಾಗಿದೆ. ಆದರೆ ಬೆಂಗಳೂರಿನಲ್ಲಿ ಕನ್ನಡ ಬಿಟ್ಟು ಉಳಿದೆಲ್ಲಾ ಭಾಷೆಗಳಿವೆ. ಈ ಹಿಂದೆ ಕನ್ನಡ ಉಳಿವಿಗಾಗಿ ನಡೆದ ಗೋಕಾಕ ಚಳವಳಿ ಮಾದರಿಯ ಕನ್ನಡ ಪರ ಚಳವಳಿ ಈಗ ಮತ್ತೆ ಮೊಳಗಬೇಕಿದೆ. ಈ ನಿಟ್ಟಿನಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘ ಕಾರ್ಯೋನ್ಮುಖಿ ಆಗಬೇಕಿದೆ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘದ ೧೩೪ನೇ ಸಂಸ್ಥಾಪನಾ ದಿನಾಚರಣೆ ಅಂಗವಾಗಿ ದಿನಾಂಕ: ೨೪-೭-೨೦೨೩ ರಂದು ಸಂಘದ ನಾಡೋಜ ಡಾ. ಪಾಪು ಸಭಾಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ **೫೦ ಸಾವಿರ ರೂ. ನಗದು** ಹಾಗೂ **ಫಲಕ** ಒಳಗೊಂಡಿರುವ **'ಕನ್ನಡ ಪ್ರಪಂಚ ಡಾ. ಪಾಟೀಲ ಪುಟ್ಟಪ್ಪ' ರಾಷ್ಟ್ರೀಯ ಪ್ರಶಸ್ತಿ** ಯನ್ನು ಹಿರಿಯ ಪತ್ರಕರ್ತ ಬೆಂಗಳೂರಿನ ಡಾ. ಜಿ. ರಾಮಕೃಷ್ಣ ಅವರಿಗೆ ಪ್ರದಾನ ಮಾಡಿ ಮಾತನಾಡಿರು.

ಮುಂದುವರೆದು ಮಾತನಾಡಿದ ಅವರು, ನಮ್ಮ ಕಾಲದಲ್ಲಿದ್ದ ಮೌಲ್ಯಾಧಾರಿತ ರಾಜಕಾರಣ ಈಗಿಲ್ಲ. ಈ ಹಿಂದಿಗಿಂತ ಹೆಚ್ಚು ಸೌಲಭ್ಯಗಳಿದ್ದರೂ ರಾಜಕಾರಣಿಗಳಲ್ಲಿ ನೆಮ್ಮದಿ, ಸಮಾಧಾನ ಇಲ್ಲ. ರಾಜಕಾರಣದಲ್ಲಿ ಈಗ ಮೌಲ್ಯಗಳು ಉಳಿದಿಲ್ಲ" ಎಂದು ಹೊರಟ್ಟಿಯವರು ಬೇಸರ ವ್ಯಕ್ತಪಡಿಸಿದರು.

ಪ್ರಶಸ್ತಿ ಸ್ವೀಕರಿಸಿದ ಹಿರಿಯ ಪತ್ರಕರ್ತ ಡಾ. ಜಿ. ರಾಮಕೃಷ್ಣ ಮಾತನಾಡಿ, ಸಮಾಜದಲ್ಲಿ ವೈಚಾರಿಕತೆಯ ಅರಿವು ಮೂಡಿದಾಗಲೇ ಸಮಾಜದ ಏಳ್ಗೆ ಸಾಧ್ಯವಿದೆ. ಈ ನಿಟ್ಟಿನಲ್ಲಿ ಪ್ರತಿಯೊಬ್ಬರೂ ಮನಸ್ಸಿನಲ್ಲಿ ವೈಚಾರಿಕತೆ




ತುಂಬಿಕೊಳ್ಳಬೇಕು. ಪ್ರತಿಯೊಬ್ಬರೂ ಸ್ವಂತಿಕೆಯ ವಿಮರ್ಶಾ ಬುದ್ಧಿ ರೂಢಿಸಿಕೊಳ್ಳುವುದರ ಜತೆಗೆ ಗ್ರಹಿಕೆ, ಪ್ರಸ್ತುತ ವಸ್ತುಸ್ಥಿತಿಗಳ ಬಗ್ಗೆ ಅವಲೋಕನ ಹೊಂದಬೇಕು. ಆಗ ಮಾತ್ರವೇ ಸಮಾಜದ ಜತೆ ಹೆಜ್ಜೆ ಹಾಕಲು ಸಾಧ್ಯವಿದೆ" ಎಂದರು. ಸಾಹಿತಿ ಮಂಡ್ಯದ ಡಾ. ಜಗದೀಶ ಕೊಪ್ಪ ಅಭಿನಂದನಾ ಪರ ನುಡಿಗಳನ್ನಾಡಿದರು.

ಕರ್ನಾಟಕ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಚಂದ್ರಕಾಂತ ಬೆಲ್ಲದ ಅಧ್ಯಕ್ಷತೆ ವಹಿಸಿದ್ದರು. ಕೋಶಾಧ್ಯಕ್ಷ ಶಿವಾನಂದ ಭಾವಿಕಟ್ಟಿ ಪಾಟೀಲ ಪುಟ್ಟಪ್ಪನವರ ಸ್ಮರಣೆ ಮಾಡಿದರು. ಡಾ. ಅರವಿಂದ ಯಾಳಗಿ, ಧಾರವಾಡದ ಹಿರಿಮೆ ಹೆಚ್ಚಿಸಿದ ಚೇತನ ಶ್ರೀ ಚನ್ನಪ್ಪ ಉತ್ತಂಗಿಯವರ ಸ್ಮರಣೆ ಮಾಡಿದರು.

ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ವೀರಣ್ಣ ಒಡ್ಡೀನ ಸ್ವಾಗತಿಸಿದರು. ಕಾರ್ಯಾಧ್ಯಕ್ಷ ಬಸವಪ್ರಭು ಹೊಸಕೇರಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕಾರಿ ಸಮಿತಿ ಸದಸ್ಯ ಡಾ. ಮಹೇಶ ಹೊರಕೇರಿ, ಪ್ರಧಾನ ಕಾರ್ಯದರ್ಶಿ ಶಂಕರ ಹಲಗತ್ತಿ ವಂದಿಸಿದರು.

ಉಪಾಧ್ಯಕ್ಷೆ ಪ್ರೊ. ಮಾಲತಿ ಪಟ್ಟಣಶೆಟ್ಟಿ, ಗುರು ಹಿರೇಮಠ, ವಿಶ್ವೇಶ್ವರಿ ಹಿರೇಮಠ, ಶ್ರೀಶೈಲ ಹುದ್ದಾರ ಇತರರು ಉಪಸ್ಥಿತರಿದ್ದರು.

ಪ್ರಾರಂಭದಲ್ಲಿ ಭಾರತಿ ಮತ್ತು ಸ್ನೇಹಾ ಕಳ್ಳಿಮಠ ಅವರು ನಾಡಗೀತೆ ಹಾಡಿದರು.

ದೀಪಾ ಭಟ್ಟ ಅವರಿಂದ ಸುಗಮ ಸಂಗೀತ ಜರುಗಿತು. ಮೆಹಬೂಬಸಾಬ ನದಾಫ, ಹರ್ಲಾಪುರ ಅವರಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರ

* = * = * = *

## ಸಂಘದ ಒಂಭತ್ತು ಮಂಟಪಗಳ ಕಾರ್ಯಕ್ರಮಗಳು

### ೧. ಸಾಹಿತ್ಯ ಮಂಟಪ : ಸಂಚಾಲಕರು, ಡಾ. ಸಂಜೀವ ಕುಲಕರ್ಣಿ

೧. ಕರ್ನಾಟಕ ವಿದ್ಯಾವರ್ಧಕ ಸಂಘದ ಸಾಹಿತ್ಯ ಮಂಟಪವು ದಿನಾಂಕ: ೨೮-೬-೨೦೨೩ ರಂದು, ಸಂಘದ ಶ್ರೀ ರಾ. ಹ. ದೇಶಪಾಂಡೆ ಸಭಾಭವನದಲ್ಲಿ **ನಾಡೋಜ ಚೆನ್ನವೀರ ಕಣವಿ-೯೫ ಸಂಸ್ಮರಣ ಹಾಗೂ 'ಹೂವು ಹೊರಳುವವು ಸೂರ್ಯನ ಕಡೆಗೆ' ಪುಸ್ತಕ ಲೋಕಾರ್ಪಣೆ, ಕಣವಿ ಕವಿತೆಗಳ ವಾಚನ ಮತ್ತು ಕಣವಿ ಭಾವಗೀತೆಗಳ ಗಾಯನ ಕಾರ್ಯಕ್ರಮ ಆಯೋಜಿಸಿತ್ತು.**

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರ್ನಾಟಕ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾದ ಚಂದ್ರಕಾಂತ ಬೆಲ್ಲದ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಹಿರಿಯ ಸಾಹಿತಿ ಡಾ. ಗುರುಲಿಂಗ ಕಾಪಸೆ ಆಗಮಿಸಿದ್ದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಳಗಾವಿ ವಿಭಾಗ, ಬೆಳಗಾವಿಯ ಜಂಟಿ ನಿರ್ದೇಶಕ ಬಸವರಾಜ ಹೂಗಾರ ಕೃತಿ ಕುರಿತು ಮಾತನಾಡಿದರು.

ಪ್ರೊ. ಮಾಲತಿ ಪಟ್ಟಣಶೆಟ್ಟಿ, ಡಾ. ಪ್ರಜ್ಞಾ ಮತ್ತಿಹಳ್ಳಿ, ಡಾ. ರಂಜನಾ ಗೋದಿ, ಡಾ. ಜಿ. ಎಂ. ಹೆಗಡೆ, ಶಂಕರ ಹಲಗತ್ತಿ, ಡಾ. ಎಂ. ಡಿ. ಒಕ್ಕುಂದ, ಡಾ. ಶರಣಮ್ಮ ಗೋರೆಬಾಳ, ಪ್ರಿ. ಶಶಿಧರ ತೋಡಕರ, ಡಾ. ಶಿವಾನಂದ ಟವಳಿ ಹಾಗೂ ಡಾ. ಸಂಜೀವ ಕುಲಕರ್ಣಿ ಇವರು ಕಣವಿ ಕವಿತೆಗಳನ್ನು ವಾಚಿಸಿದರು. ಶಿವಾನಂದ ಕಣವಿ ಸಂಯೋಜನೆ ಮಾಡಿದರು. ಡಾ. ಜ್ಯೋತಿ ಕೂಡ್ಲಗಿ ಅವರು ಸೊಗಸಾಗಿ ಚೆನ್ನವೀರ ಕಣವಿ ಅವರ ಭಾವಗೀತೆಗಳ ಗಾಯನ ಪ್ರಸ್ತುತಪಡಿಸಿದರು.

೨. ಹಳೆಗನ್ನಡವು ಕಬ್ಬಿಣದ ಕಡಲೆ ಎಂದು ಬಹಳಷ್ಟು ಮಕ್ಕಳು ಭಾವಿಸುತ್ತಾರೆ. ಆದರೆ ಶಿಕ್ಷಕರು ತಾವು ಮಾಡುವ ಪಾಠವನ್ನು ಸಂದರ್ಭ ಸಹಿತವಾಗಿ ಸರಿಯಾಗಿ ಓದಿಕೊಂಡು ಮಕ್ಕಳ ಮುಂದೆ ಹಳೆಗನ್ನಡ ಪದ್ಯಗಳನ್ನು ಕೂಡ ಅಭಿನಯಪೂರ್ಣವಾಗಿ ಸ್ವಾರಸ್ಯಮಯವಾಗಿ ಕಲಿಸಿದ್ದಾದರೆ ಮಕ್ಕಳಿಗೆ ಹಳೆಗನ್ನಡವು ಕಠಿಣವಾಗುವುದಿಲ್ಲ ; ಅವರಲ್ಲಿ ಕೂಡ ಹಳೆಗನ್ನಡದ ಬಗ್ಗೆ ಪ್ರೀತಿ ಅಭಿಮಾನ ಹುಟ್ಟುತ್ತದೆ ಎಂದು ಜಿಲ್ಲಾ ಶಿಕ್ಷಣ ಉಪನಿರ್ದೇಶಕ ಎಸ್. ಎಸ್. ಕೆಳದಿಮಠ ಅವರು ನುಡಿದರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘದ ಸಾಹಿತ್ಯ ಮಂಟಪವು ದಿನಾಂಕ: ೧೩-೧೨-೨೦೨೩ ರಂದು, ಸಂಘದ ಶ್ರೀ ರಾ. ಹ. ದೇಶಪಾಂಡೆ ಸಭಾಭವನದಲ್ಲಿ ಆಯೋಜಿಸಿದ್ದ ೧೦ ನೇ ತರಗತಿಯ ಪಠ್ಯಾಧಾರಿತ ನಾಟಕ **'ಕಾಲಾಯ ತಸ್ಮಯ:'** ರಂಗರೂಪಕ "ಪಠ್ಯಾಧಾರಿತ ಕಲಿಕಾ ಪ್ರಯೋಗದ" ಕಾರ್ಯಕ್ರಮವನ್ನು ಉದ್ಘಾಟಿಸುತ್ತಾ ಅವರು ಮಾತನಾಡಿದರು.

ವೀರೇಶ್ ಮತ್ತು ಗಣೇಶ ಎಂಬ ಇಬ್ಬರು ಯುವ ರಂಗ ಕಲಾವಿದರು ೧೦ನೇ ತರಗತಿಯ ಕನ್ನಡ ವಿಷಯದಲ್ಲಿರುವ ಬೇಂದ್ರೆಯವರ 'ಹಕ್ಕಿಹಾರುತಿದೆ ನೋಡಿದಿರಾ', ಪಂಚತಂತ್ರದ ಕಥೆಯಾದ 'ದುಷ್ಟಬುದ್ಧಿ ಮತ್ತು ಧರ್ಮ ಬುದ್ಧಿ', ಕುಮಾರವ್ಯಾಸನ 'ಕೌರವೇಂದ್ರನ ಕೊಂದೆ ನೀನು', 'ರನ್ನನ ಛಲವ ಮೆರೆವೆನ್ ನಾನು' ಹಾಗೂ ಡಾ. ಜಿ ಎಸ್ ಶಿವರುದ್ರಪ್ಪ ಅವರ 'ಸಂಕಲ್ಪ ಗೀತೆ' ಇವುಗಳನ್ನು ಸಂಯೋಜಿಸಿ ಸೃಷ್ಟಿಸಿರುವ ಸುಮಾರು ೪೦ ನಿಮಿಷಗಳ "ಕಾಲಾಯ ತಸ್ಮಯಃ' ಎಂಬ ರಂಗ ಪ್ರಯೋಗವನ್ನು ಪ್ರದರ್ಶಿಸಿದರು.

ಎಂ. ಎಂ. ಚಿಕ್ಕಮಠ , ಧನವಂತ ಹಾಜವಗೋಳ, ಕೆ.ಎಚ್. ನಾಯಕ, ಸಂಗಮೇಶ ಹಡಪದ, ಡಿಗ್ಗಿಮಠ ಮುಂತಾದ ಅನೇಕ ಸಹೃದಯರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ ಇಂತಹ ರಂಗ ಪ್ರಯೋಗಗಳು ಪ್ರತಿಯೊಂದು ಶಾಲೆಯಲ್ಲಿಯೂ ಜರುಗಬೇಕು, ಇವು ಮಕ್ಕಳಿಗೆ ಕೇವಲ ಮನರಂಜನೆ ಕೊಡುವುದು ಅಷ್ಟೇ ಅಲ್ಲ ಜೊತೆಗೆ ಕನ್ನಡ ಭಾಷೆಯ ಕಲಿಕೆಯನ್ನು ಸಂತೋಷಮಯವಾಗಿಸುತ್ತವೆ ಎಂದು ಹೇಳಿದರು.

ಪ್ರಾಸ್ತಾವಿಕ ಮಾತುಗಳನ್ನಾಡಿದ ಸಾಹಿತ್ಯ ಮಂಟಪದ ಸಂಚಾಲಕ ಡಾ. ಸಂಜೀವ ಕುಲಕರ್ಣಿ ಅವರು, ಈ ರೀತಿಯ ಪಠ್ಯಧಾರಿತ ರಂಗ ಪ್ರಯೋಗಗಳಿಂದ ಯುವ ರಂಗ ಕಲಾವಿದರಿಗೂ ಪ್ರೋತ್ಸಾಹ ದೊರೆಯುತ್ತದೆ,




ಮಕ್ಕಳಿಗೆ ಕನ್ನಡ ಪಠ್ಯ ಹೆಚ್ಚು ಸುಲಭವಾಗಿ ಅರ್ಥವಾಗುತ್ತದೆ ಹಾಗೂ ಬಹಳ ಮುಖ್ಯವಾಗಿ ಇದರಿಂದ ಕನ್ನಡ ಭಾಷೆ ಉಳಿದು, ಬೆಳೆಯಲು ಸಹಾಯವಾಗುತ್ತದೆ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಚಂದ್ರಕಾಂತ ಬೆಲ್ಲದ ಅವರು ರಂಗ ಪ್ರಯೋಗವನ್ನು ಬಹಳಷ್ಟು ಮೆಚ್ಚಿಕೊಂಡು, ಈ ಇಬ್ಬರು ಯುವ ಕಲಾವಿದರು ಬೇರೆ ಬೇರೆ ಶಾಲೆಗಳಲ್ಲಿ ಹೋಗಿ ಈ ಪ್ರಯೋಗವನ್ನು ಪ್ರದರ್ಶಿಸುವಂತೆ ಆಗಲಿ, ಈ ರೀತಿ ಕನ್ನಡವನ್ನು ಹೆಚ್ಚು ಆಕರ್ಷಕವಾಗಿ ಮತ್ತು ಆಸಕ್ತಿದಾಯಕವಾಗಿ ಕಲಿಸಿದರೆ ಮಕ್ಕಳು ಸಂತೋಷಪಡುತ್ತಾರೆ, ಹೀಗೆ ಕನ್ನಡವನ್ನು ಬೆಳೆಸುವುದೇ ಕರ್ನಾಟಕ ವಿದ್ಯಾವರ್ಧಕ ಸಂಘದ ಮೂಲ ಉದ್ದೇಶ ಎಂದು ಹೇಳಿದರು.

**೨. ಮಹಿಳಾ ಮಂಟಪ: ಸಂಚಾಲಕರು, ಡಾ. ಶೈಲಜಾ ತ. ಅಮರಶೆಟ್ಟಿ.**

೧. ಅಕ್ಕಮಹಾದೇವಿ ವಚನಗಳು ಸರ್ವಕಾಲಿಕ ಸತ್ಯಗಳಾಗಿವೆ. ಅಕ್ಕನ ವಚನಗಳನ್ನು ವಿಶ್ಲೇಷಿಸುತ್ತಾ ಹೋದಂತೆಲಾ ನಮ್ಮ ಲೌಕಿಕ ಜೀವನ ಹಸನಾಗುವುದು ಎಂದು ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದ ವಿಶ್ರಾಂತ ಪ್ರಾಧ್ಯಾಪಕರು ಮತ್ತು ಸಾಹಿತಿ ಡಾ. ಶಾಂತಾ ಇಮ್ರಾಪೂರ ಹೇಳಿದರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘದ ಮಹಿಳಾ ಮಂಟಪವು ಸಂಘದ ನಾಡೋಜ ಡಾ. ಪಾಟೀಲ ಪುಟ್ಟಪ್ಪ ಸಭಾಭವನದಲ್ಲಿ ದಿನಾಂಕ ೫-೪-೨೦೨೩ ರಂದು ಆಯೋಜಿಸಿದ್ದ **ಶರಣೆ ಅಕ್ಕಮಹಾದೇವಿ ಜಯಂತಿ** ಅಂಗವಾಗಿ **ವಚನ ವಿಶ್ಲೇಷಣೆ ಸ್ಪರ್ಧೆ** ಮತ್ತು **ಉಪನ್ಯಾಸ** ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡುತ್ತಾ ಮಾತನಾಡಿದರು.

ಇನ್ನೋರ್ವ ಅತಿಥಿ ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದ ವಿಶ್ರಾಂತ ಪ್ರಾಧ್ಯಾಪಕರು ಮತ್ತು ಲೇಖಕಿ ಡಾ. ವಿಜಯಾ ಗುತ್ತಲ ಮಾತನಾಡಿ, ಇಂದಿಗೂ ಸ್ತ್ರೀ ಕುಲಕ್ಕೆ ಮಾದರಿಯಾಗುವಂತಹ ವ್ಯಕ್ತಿತ್ವ ಹೊಂದಿದ ಆದ್ಯ ವಚನಗಾರ್ತಿ ಅಕ್ಕಮಹಾದೇವಿ ಎಂದರು.

ಅಧ್ಯಕ್ಷತೆ ವಹಿಸಿ ಕ.ವಿ.ವ. ಸಂಘದ ಪ್ರಧಾನ ಕಾರ್ಯದರ್ಶಿ ಶಂಕರ ಹಲಗತ್ತಿ ಮಾತನಾಡಿ, ಇಂದಿನ ವಚನ ವಿಶ್ಲೇಷಣೆ ಸ್ಪರ್ಧೆಯು ಸ್ತ್ರೀಯರ ಬೌದ್ಧಿಕ ಗುಣಮಟ್ಟವನ್ನು ಎತ್ತಿ ತೋರಿಸುತ್ತದೆ. ಇಂತಹ ಕಾರ್ಯಕ್ರಮಗಳು ಹೆಚ್ಚು ಹೆಚ್ಚು ಜರುಗಲಿ ಎಂದು ಆಶಿಸಿದರು.



ಶರಣೆ ಅಕ್ಕಮಹಾದೇವಿ ಜಯಂತಿ ಅಂಗವಾಗಿ ಜರುಗಿದ ವಚನ ವಿಶ್ಲೇಷಣೆ ಸ್ಪರ್ಧೆಯಲ್ಲಿ ೨೦ ಕ್ಕೂ ಹೆಚ್ಚು ಸ್ಪರ್ಧಾಳುಗಳು ಭಾಗವಹಿಸಿದ್ದರು. ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಶ್ರೀಮತಿ ಪ್ರೇಮಾ ನಡಕಟ್ಟಿ ಪಡೆದರೆ, ದ್ವಿತೀಯ ಸ್ಥಾನ ಶ್ರೀಮತಿ ಮಂಜುಳಾ ಹೊಸೂರ ಮತ್ತು ಶ್ರೀಮತಿ ಸುವರ್ಣಾ ಗದಿಗೆಪ್ಪಗೌಡರ ಹಾಗೂ ತೃತೀಯ ಸ್ಥಾನವನ್ನು ಡಾ. ಸುಧಾ ಹುಲಗೂರ, ಶ್ರೀಮತಿ ರೇಖಾ ಜೋಶಿ ಮತ್ತು ಶ್ರೀಮತಿ ಸುಧಾ ಕಬ್ಬೂರ ಹಂಚಿಕೊಂಡರು. ಸಮಾಧಾನಕರ ಬಹುಮಾನ ಶ್ರೀಮತಿ ದೀಪ ಮುಂಡರಗಿ ಪಡೆದರು. ಸ್ಪರ್ಧೆಯಲ್ಲಿ ವಿಜೇತರಾದವರಿಗೆ ನಗದು ಬಹುಮಾನದ ಜೊತೆಗೆ ಪ್ರಮಾಣ ಪತ್ರ ನೀಡಿ ಗೌರವಿಸಲಾಯಿತು. ಸ್ಪರ್ಧೆಯಲ್ಲಿ ಭಾಗವಹಿಸಿದ ಎಲ್ಲರಿಗೂ ಪ್ರಮಾಣ ಪತ್ರ ನೀಡಲಾಯಿತು.

ಮಹಿಳಾ ಮಂಟಪದ ಸಂಚಾಲಕಿ ಡಾ. ಶೈಲಜಾ ಅಮರಶೆಟ್ಟಿ ಸ್ವಾಗತಿಸಿದರು. ಡಾ. ವಿ. ಶಾರದಾ ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀಮತಿ ಶಾರದಾ ಕೌದಿ ಮತ್ತು ಶಿವಾನಂದ ಭಾವಿಕಟ್ಟಿ ಅತಿಥಿಗಳನ್ನು ಪರಿಚಯಿಸಿದರು. ಆರುಷ ಮತ್ತು ಆರಾಧ್ಯ ದೊಡವಾಡ ವಚನಗಳ ಮೂಲಕ ಪ್ರಾರ್ಥಿಸಿದರು. ಡಾ. ಅರುಣಾ ಹಳ್ಳಿಕೇರಿ ನಿರೂಪಿಸಿದರು.

೨. ಆರೋಗ್ಯವಂತ ಮಹಿಳೆಯರಿಂದಲೇ ದೇಶದ ಪ್ರಗತಿ ಎಂದು ಚರ್ಮರೋಗ ತಜ್ಞೆ, ವೈದ್ಯಾಧಿಕಾರಿ ಡಾ. ಗೌರಿ ಪಾಟೀಲ (ಬೆಲ್ಲದ) ಹೇಳಿದರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘದ ಮಹಿಳಾ ಮಂಟಪವು ಸಂಘದ ಶ್ರೀ ರಾ.ಹ. ದೇಶಪಾಂಡೆ ಸಭಾಭವನದಲ್ಲಿ ದಿನಾಂಕ ೨೮-೭-೨೦೨೩ ರಂದು ಆಯೋಜಿಸಿದ್ದ **ಮಹಿಳಾ ಸ್ವಾಸ್ಥ್ಯ** ವಿಷಯ ಕುರಿತು ಉಪನ್ಯಾಸ ಕಾರ್ಯಕ್ರಮದಲ್ಲಿ **'ಮಹಿಳೆಯ ದೈಹಿಕ ಸ್ವಾಸ್ಥ್ಯ, ಸೌಂದರ್ಯ ವರ್ಧನೆ'** ಕುರಿತು ಉಪನ್ಯಾಸ ನೀಡುತ್ತಾ ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ಅವರು, ಭಾರತದಲ್ಲಿ ಮಹಿಳೆಯರ ಸರಾಸರಿ ಜೀವಿತಾವಧಿ ಪುರುಷರಿಗಿಂತ ಹೆಚ್ಚಾಗಿದ್ದರೂ ಕೂಡ ಮಹಿಳೆಯರ ದೈಹಿಕ ಆರೋಗ್ಯ ಕುಟುಂಬದಲ್ಲಿ ನಿರ್ಲಕ್ಷಿಸಲ್ಪಡುತ್ತಿದೆ. ಈ ಆಧುನಿಕ ಯುಗದಲ್ಲಿ ಮಹಿಳೆಯರು ಮನೆಯ ಒಳಗೂ-ಹೊರಗೂ ಎಡಬಿಡದೆ ಕೆಲಸ ಮಾಡುತ್ತಿರುವದರಿಂದ ಅವರ ದೈಹಿಕ ಆರೋಗ್ಯ ಕಾಪಾಡಿಕೊಳ್ಳಲು ಸಾಕಷ್ಟು ಸಮಯ ಸಿಗುತ್ತಿಲ್ಲ. ಈ ಅಂಶದ ಕಡೆ ಮಹಿಳೆ ಗಮನಹರಿಸಬೇಕಾಗಿದೆ ಎಂದರು.

ಮಹಿಳೆಯ ಮಾನಸಿಕ ಸ್ವಾಸ್ಥ್ಯ ಕುರಿತು ಮನೋವಿಜ್ಞಾನಿ ಶ್ರೀಮತಿ ಸುಪ್ರಿಯಾ ಏಕಬೋಟೆ ಮಾತನಾಡಿ, ಇಂದಿನ ಮಹಿಳೆ ಅನೇಕ ವಿಧಗಳಲ್ಲಿ ಮಾನಸಿಕ ಒತ್ತಡಕ್ಕೆ ಒಳಗಾಗಿರುವುದರಿಂದ ಆಕೆಯ ಮಾನಸಿಕ ಆರೋಗ್ಯ ಹದಗೆಟ್ಟು, ದೈಹಿಕ ಆರೋಗ್ಯದ ಮೇಲೂ ಪರಿಣಾಮ ಉಂಟು ಮಾಡುತ್ತಲಿದೆ. ಆದ್ದರಿಂದ ಮಹಿಳೆ ಯಾವಾಗಲೂ ತನ್ನ ಸಂಯಮವನ್ನು ಕಳೆದುಕೊಳ್ಳದೇ ಮಾನಸಿಕ ಸಮತೋಲನವನ್ನು ಕಾಯ್ದುಕೊಳ್ಳಬೇಕೆಂದು ಸಲಹೆ ನೀಡಿದರು.

ಸಂಘದ ಉಪಾಧ್ಯಕ್ಷೆ ಪ್ರೊ. ಮಾಲತಿ ಪಟ್ಟಣಶೆಟ್ಟಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಸಂವಾದದಲ್ಲಿ ಸೇರಿದಂತೆ ಅನೇಕರು ಭಾಗವಹಿಸಿದ್ದರು.

ಜಯಶ್ರೀ ಪಾಟೀಲ ಮತ್ತು ಸಂಗಡಿಗರು ಪ್ರಾರ್ಥಿಸಿದರು. ಡಾ. ಶೈಲಜಾ ತ. ಅಮರಶೆಟ್ಟಿ ಸ್ವಾಗತಿಸಿದರು. ಶಂಕರ ಹಲಗತ್ತಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಡಾ. ವಿ. ಶಾರದಾ ಅತಿಥಿಗಳನ್ನು ಪರಿಚಯಿಸಿದರು. ಕೋಶಾಧ್ಯಕ್ಷ ಶಿವಾನಂದ ಭಾವಿಕಟ್ಟಿ ವಂದಿಸಿದರು. ಸುಜಾತಾ ಹಡಗಲಿ ನಿರೂಪಿಸಿದರು.

೩. ಹೆಣ್ಣು ಹುಟ್ಟದ ಮನೆ ಪರಿಪೂರ್ಣ ಅಲ್ಲ ಎನ್ನುವಾಗ ಹೆಣ್ಣು ಹುಣ್ಣು ಎಂದು ಜನಪದರು ಎಂದೂ ಭಾವಿಸಲಿಲ್ಲ. ಹೆಣ್ಣಿನದು ಬಹು ಪಾತ್ರ. ಆಯಾ ಕಾಲಘಟ್ಟಕ್ಕೆ ಅವಳು ಬದಲಾಗುವ ಪಾತ್ರವನ್ನು ಸಮರ್ಥವಾಗಿ ನಿರ್ವಹಿಸುವ ಅದ್ಭುತ ಶಕ್ತಿ ಹೊಂದಿದವಳು ಎಂದು ಧಾರವಾಡ ಕರ್ನಾಟಕ ಕಲಾ ಮಹಾವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥೆ ಡಾ. ಮಹಾದೇವಿ ಹಿರೇಮಠ ಹೇಳಿದರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘದ ಮಹಿಳಾ ಮಂಟಪ ಹಾಗೂ ಕರ್ನಾಟಕ ಕಾಲೇಜಿನ ಕನ್ನಡ ಸಂಘದ ಸಂಯುಕ್ತ ಆಶ್ರಯದಲ್ಲಿ ಧಾರವಾಡ ಕರ್ನಾಟಕ ಕಲಾ ಮಹಾವಿದ್ಯಾಲಯದ ೭ ಎ ಫ್ಯಾರನ್ ಹಾಲ್‌ನಲ್ಲಿ ದಿನಾಂಕ ೫-೮-೨೦೨೩ ರಂದು ಆಯೋಜಿಸಿದ್ದ **'ಜಾನಪದ ಸಂಭ್ರಮ'** ಕಾರ್ಯಕ್ರಮದಲ್ಲಿ **'**ಜನಪದದಲ್ಲಿ ಮಹಿಳಾ ಸಂಸ್ಕೃತಿ**'** ಕುರಿತು ಮಾತನಾಡುತ್ತಿದ್ದರು.

ನಮ್ಮ ಸಂಸ್ಕೃತಿಯನ್ನು ಒಮ್ಮೆ ತಿರುವಿ ಹಾಕಿ ನೋಡಬೇಕಾಗಿದೆ. ಇಂದು ಕೌಟುಂಬಿಕದಲ್ಲಿ ಬಳಷ್ಟು ಬದಲಾವಣೆ ಆಗುತ್ತಿದೆ. ಮಹಿಳೆ ಸ್ವಾವಲಂಬಿ ಆಗುತ್ತಿದ್ದಾಳೆ. ಈ ಕಾಲ ಸಂಘರ್ಷದ ಕಾಲ. ಹೆಣ್ಣು ಸ್ವಾವಲಂಬಿಯಾಗುತ್ತಿರುವಾಗ ಸಹಜವಾಗಿ ಕುಟುಂಬದಲ್ಲಿ ಕಲಹವನ್ನು ನೋಡುತ್ತೇವೆ. ಬದುಕಿನ ಅನುಭವಕ್ಕೆ ಸಾಟಿ ಇನ್ನೊಂದಿಲ್ಲ. ಇಂದು ಕೃತಕ ಬದುಕಿನಲ್ಲಿ ಬದುಕುತ್ತಾ ಇದ್ದೇವೆ. ಗ್ರಾಮೀಣ ಪ್ರದೇಶದಲ್ಲಿ ಬಳಸುತ್ತಿದ್ದ ಕೌದಿಯಲ್ಲಿ ಅಜ್ಜ, ಅಜ್ಜಿ, ಮಾವ, ಅತ್ತೆ ಹೀಗೆ ಎಲ್ಲರ ನೆನಪುಗಳ ಸಂಗಮವೇ ಕೌದಿಯಾಗಿರುತ್ತಿತ್ತು. ಹಿಂದಿನ ಜನ ಬಂದದ್ದನ್ನು ಸ್ವೀಕರಿಸುತ್ತಿದ್ದರು. ಎಂದೂ ಸಮಸ್ಯೆಗಳು ಬಂದಾಗ ಬೇಸರಪಟ್ಟುಕೊಳ್ಳುತ್ತಿದ್ದಿಲ್ಲ.

ಗ್ರಾಮೀಣ ವಿದ್ಯಾರ್ಥಿಗಳಲ್ಲಿ ಬದುಕಿನ ಅನುಭವ ಅಪಾರವಾಗಿರುತ್ತದೆ. ಆಟದ ಮೂಲಕ ಜ್ಞಾನ ಸಿಗುತ್ತಿತ್ತು. ಹಳ್ಳಿಯಲ್ಲಿ ಸಣ್ಣವರಿರುವಾಗಲೇ ಬದುಕು ಕಟ್ಟಿಕೊಳ್ಳುವ ಅನುಭವವನ್ನು ಪಡೆಯುವಂತೆ ಆಗುತ್ತಿತ್ತು. ಬದುಕಿನ ಮೌಲ್ಯಗಳಿಗೆ ಸಂಬಂಧಿಸಿದಂತೆ ಎಲ್ಲ ಹಂತಗಳಲ್ಲಿ ಹೆಣ್ಣು ದಾಟಿ ಬರುತ್ತಾಳೆ. ಅಂದಿನ ದಿನಗಳ ಸಂಬಂಧಗಳಲ್ಲಿ ಪ್ರೀತಿ ತುಂಬಿರುತ್ತಿತ್ತು. ಇಂದು ಆಧುನಿಕತೆಯ ಹೆಸರಿನಲ್ಲಿ ಕೃತಕತೆ ತುಂಬಿಕೊಂಡಿದೆ. ಜನಪದರಲ್ಲಿ ಹೆಣ್ಣಿಗೆ ನೀಡುವ ಗೌರವ ಅಪಾರವಾಗಿತ್ತು. ಜನಪದರು ಮುಕ್ತಮನಸಿನಿಂದ ಸ್ವೀಕರಿಸುತ್ತಿದ್ದರು. ಹೆಣ್ಣು ಮನೆಯನ್ನು ಬೆಳಗುವ ದೀಪದಂತೆ ಎಂದು ಜನಪದರು ಹೆಣ್ಣಿನ ಹಿರಿಮೆಯನ್ನು ಕಟ್ಟಿಕೊಟ್ಟಿರುವರು. ಬದುಕನ್ನು ಎಲ್ಲ ರೀತಿಯಿಂದ ಗೆದ್ದವಳು ಹೆಣ್ಣು ಎಂದು ಜನಪದರು ಹೇಳುತ್ತಾ ಬಂದಿದ್ದಾರೆ ಎಂದು ಡಾ. ಮಹಾದೇವಿ ಹಿರೇಮಠ ಹೇಳಿದರು.

ಜನಪದದಲ್ಲಿ ಪುರುಷ ಸಂಸ್ಕೃತಿ ಕುರಿತು ಜಾನಪದ ವಿದ್ವಾಂಸ ಡಾ. ರಾಮು ಮೂಲಗಿ ಮಾತನಾಡಿ, ಕವಿವಾಣಿ ಹೂವಾದರೆ ಜನಪದ ಅದರ ಬೇರು. ಮೂಲ ಜನಪದರು ಜೀವನಾನುಭವದ ಅನುಭವವನ್ನು ಹಾಡಾಗಿ ಕಟ್ಟಿಕೊಟ್ಟಿರುವರು. ಸುಖ, ದುಃಖಗಳನ್ನು ಹಾಡಾಗಿ ಹಾಡಿದ್ದೇ ಜನಪದ ಸಾಹಿತ್ಯ.

ಜನಪದಕ್ಕೆ ಯಾರೂ ಮಾಲಕರಲ್ಲ. ಎಲ್ಲರೂ ಜನಪದಕ್ಕೆ ಮಾಲಿಕರು. ಜನಪ್ರೀಯ ಜಾನಪದ ಹಾಡಿಗೆ ಜನಪದದ ಪದಗಳು ಮೂಲವಾಗಿ ರೂಪಗೊಂಡಿರುತ್ತವೆ. ಪರಂಪರೆಯಿಂದ ಬಂದ ಜನಪದವನ್ನು ವಿದ್ಯಾರ್ಥಿಗಳು ಹಾಡುವುದನ್ನು ರೂಢಿಸಿಕೊಳ್ಳಬೇಕು. ಹಿಂದಿನ ಹಿರಿಯರಲ್ಲಿ ಬದುಕಿನ ಪ್ರಜ್ಞೆ ಇತ್ತು. ಅದನ್ನು ಒಗಟಿನ ಪದಗಳನ್ನು ಬಳಸಿ ಬದುಕಿನ ಅನುಭವವನ್ನು ಕಟ್ಟಿಕೊಡುತ್ತಿದ್ದರು. ಪ್ರತಿ ಜನಪದದ ಪದಗಳಲ್ಲಿ ಸಂದೇಶ ಇರುತ್ತದೆ. ಜನಪದ ಹಾಡುಗಳಲ್ಲಿ ಮಹಿಳೆಯರ, ಮಕ್ಕಳ, ಪುರುಷರ ಹಾಡುಗಳನ್ನು ವರ್ಗೀಕರಿಸಿ ನೋಡಬಹುದು. ಹಳ್ಳಿಯಲ್ಲಿ ಜನಪದ ಹಾಡುಗಳನ್ನು ಕೇಳುತ್ತ, ಹಾಡುತ್ತಾ ಬಂದಿದ್ದರಿಂದ ಇನ್ನೂ ಜನಪದ ಕುರುಹು ಹಳ್ಳಿಯಲ್ಲಿ ಸಿಗುತ್ತದೆ ಅದಕ್ಕೆ ಪ್ರೋತ್ಸಾಹ ನೀಡುವ ಕೆಲಸವನ್ನು ಸಮಾಜ ಮಾಡಬೇಕು ಎಂದರು.

ಡಾ. ಐ. ಸಿ. ಮುಳಗುಂದವರು ಮಾತನಾಡಿ, ಮನುಷ್ಯನ ಮನಸ್ಸಿನಲ್ಲಿ ಏನಿದೆ, ಸಮಾಜದ ಮನಸು ಎಂಥದು ಎಂದು ತಿಳಿದುಕೊಳ್ಳಬೇಕಾದರೆ ಜನಪದ ಸಾಹಿತ್ಯವನ್ನು ಅಧ್ಯಯನವನ್ನು ಮಾಡಬೇಕಾಗುತ್ತದೆ. ಜನಪದ

ಸಾಹಿತ್ಯವನ್ನು ಅಧ್ಯಯನ ಮಾಡುವಾಗ ಲಿಂಗತಾರತಮ್ಯ, ವರ್ಣಬೇಧ, ಪುರುಷಪ್ರಧಾನ. ವ್ಯವಸ್ಥೆ ಹೇಗೆ ಇತ್ತು ಎಂದು ಗೊತ್ತಾಗುತ್ತದೆ. ನಮ್ಮ ಭಾರತಿಯ ಪರಂಪರೆ ಸುಂದರತೆ ಎಷ್ಟಿದೆ ಎಂಬುದನ್ನು ತಿಳಿದುಕೊಳ್ಳಬಹುದು. ಜನಪದದ ಮೂಲ ನೆಲೆಯನ್ನು ತಿಳಿದುಕೊಳ್ಳುವುದು ಕಷ್ಟ ಸಾಧ್ಯ. ರಾಮಾಯಣ ಮಹಾಭಾರತವನ್ನು ಜನಸಾಮಾನ್ಯರಿಗೆ ತಲುಪಿಸುವಲ್ಲಿ ಜನಪದರು ಬಹು ದೊಡ್ಡ ಕೊಡುಗೆಯನ್ನು ನೀಡಿರುವರು ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿ ಪ್ರಾಚಾರ್ಯ ಡಾ. ಡಿ.ಬಿ. ಕರಡೋಣಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಮಹಿಳೆಗೆ ಹೆಚ್ಚು ತಾಳ್ಮೆ ಇರೋದರಿಂದಲೇ ಸಂಸಾರ ಸುಂದರವಾಗಿರುತ್ತದೆ. ಹೆಣ್ಣು ಗಂಡಿನ ನಡುವಿನ ಸರಸ ವಿರಸಗಳು ಬರುವುದು ಸಹಜ. ಅವುಗಳನ್ನು ಜನಪದರು ಹಾಡುಗಳ ಮೂಲಕ ಹಂಚಿಕೊಳ್ಳುತ್ತಾ ತಮ್ಮ ಬದುಕನ್ನು ಶ್ರೀಮಂತಗೊಳಿಸಿಕೊಂಡು ಬಂದಿದ್ದಾರೆ. ಅನಕ್ಷರಸ್ತರು ಹಲವು ಚರಿತ್ರೆಗಳನ್ನು ಹಾಡುತ್ತಾ ಮುಂದಿನ ಪೀಳಿಗೆಗೆ ಕಟ್ಟಿಕೊಡುವ ಬಹು ದೊಡ್ಡ ಕಾರ್ಯವನ್ನು ಜನಪದರು ಮಾಡುತ್ತಾ ಬಂದಿದ್ದಾರೆ. ಇಂಥ ಹಿರಿಮೆಯ ಕಾಯಕವನ್ನು ಗೌರವಿಸುವ ಕಾರ್ಯ ಸಮಾಜದಿಂದ ಆಗಬೇಕಿದೆ ಎಂದರು.

ಮಹಿಳಾ ಮಂಟಪದ ಸಂಚಾಲಕಿ ಡಾ. ಶೈಲಜಾ ಅಮರಶೆಟ್ಟಿ ಸ್ವಾಗತಿಸಿದರು. ಪ್ರಧಾನ ಕಾರ್ಯದರ್ಶಿಶಂಕರ ಹಲಗತ್ತಿ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಶಾರದಾ ಕೌದಿ, ಜ್ಯೋತಿ ಭಾವಿಕಟ್ಟಿ, ಸುಜಾತಾ ಹಡಗಲಿ, ಡಾ. ಭೈರನ್ನವರ ಪರಿಚಯಿಸಿದರು. ಕುಮಾರಿ ಕಾವೇರಿ ಪ್ರಾರ್ಥಿಸಿದರು. ಡಾ. ವಿ. ಶಾರದಾ ಕಾರ್ಯಕ್ರಮ ನಿರೂಪಿಸಿದರು. ವಿದ್ಯಾರ್ಥಿಗಳು ಹಾಗೂ ಆಹ್ವಾನಿತರು ಜಾನಪದ ಗೀತೆಗಳನ್ನು ಪ್ರಸ್ತುತಪಡಿಸಿದರು.

೪. ಮಹಿಳಾ ಸಬಲೀಕರಣದ ಸಂದೇಶವನ್ನು ನಾಟಕಗಳು, ಕವನಗಳು, ಹಾಡುಗಳು ಹೆಚ್ಚು ಪರಿಣಾಮಕಾರಿಯಾಗಿ ಸಾರುತ್ತವೆ ಎಂದು ಧಾರವಾಡ ಪತ್ರಗಾರ ಇಲಾಖೆಯ ಸಹಾಯಕ ನಿರ್ದೇಶಕಿ ಶ್ರೀಮತಿ ಮಂಜುಳಾ ಎಲಿಗಾರ ಅಭಿಪ್ರಾಯಪಟ್ಟರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘದ ಮಹಿಳಾ ಮಂಟಪವು ದಿನಾಂಕ: ೧೧-೧೦-೨೦೨೩ ರಂದು ಸಂಘದ ನಾಡೋಜ ಡಾ. ಪಾಟೀಲ ಪುಟ್ಟಪ್ಪ ಸಭಾಭವನದಲ್ಲಿ ಆಯೋಜಿಸಿದ್ದ **ಮಹಿಳಾ ಸಬಲೀಕರಣ** ಉಪನ್ಯಾಸ ಹಾಗೂ **'ಸಾಂಸ್ಕೃತಿಕ ಸೌರಭ'** ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಮಾತನಾಡಿ, ಉಪನ್ಯಾಸಗಳಿಗಿಂತ ಸಾಂಸ್ಕೃತಿಕ ಕಾರ್ಯಕ್ರಮಗಳಿಂದ ರವಾನೆಯಾಗುವ ಸಂದೇಶಗಳು ಜನರ ಹೃದಯವನ್ನು ತಟ್ಟುತ್ತವೆ. ಆದ್ದರಿಂದ ಇಂತಹ ಕಾರ್‍ಯಕ್ರಮಗಳು ಹೆಚ್ಚು ಹೆಚ್ಚು ಆಯೋಜನೆಗೊಳ್ಳಬೇಕೆಂದರು.

ಅಧ್ಯಕ್ಷತೆ ವಹಿಸಿ ಚಂದ್ರಕಾಂತ ಬೆಲ್ಲದ ಮಾತನಾಡಿ, ಆಧುನಿಕ ಮಹಿಳೆ ಈಗ ಸಾಕಷ್ಟು ಸಬಲಳಾಗಿದ್ದಾಳೆ. ಆದರೆ ಸಬಲ ಮಹಿಳೆಯರ ಸಂಖ್ಯೆ ಇನ್ನೂ ಹೆಚ್ಚಾಗಬೇಕೆಂದರು. ಸ್ತ್ರೀ ಸಮುದಾಯಕ್ಕೆ ಕರೆ ಕೊಟ್ಟರು.

ಸಾಂಸ್ಕೃತಿಕ ಸೌರಭದಲ್ಲಿ ಕರ್ನಾಟಕ ಆರ್ಟ್ಸ್ ಕಾಲೇಜಿನ ತಂಡದವರು **'ಧೈರ್ಯಂ ಸರ್ವತ್ರ ಸಾಧನಂ'** ಮತ್ತು ಹುಬ್ಬಳ್ಳಿಯ ಮಂದಹಾಸ ಮಹಿಳಾ ಮಂಡಳ ತಂಡದವರು **'ನನಸಾದ ಕನಸು'** ಎಂಬ ಎರಡು ಕಿರುನಾಟಕಗಳನ್ನು ಪ್ರದರ್ಶಿಸುವ ಮೂಲಕ ಮಹಿಳೆ ತನಗೆ ಬಂದ ಕಷ್ಟಗಳನ್ನು ಎದುರಿಸಿ ಹೇಗೆ ತನ್ನತನವನ್ನು ಕಂಡುಕೊಳ್ಳುವಲ್ಲಿ ಯಶಸ್ವಿಯಾಗುತ್ತಾಳೆ ಎಂಬುದನ್ನು ತಮ್ಮ ಅಭಿನಯದ ಮೂಲಕ ಮನವರಿಕೆ ಮಾಡಿಕೊಡುವಲ್ಲಿ ಯಶಸ್ವಿಯಾದರು.

ಉತ್ತರ ಕರ್ನಾಟಕದ ಲೇಖಕಿಯರ ಸಂಘ, ಕುಮಾರೇಶ್ವರನಗರ ಮಹಿಳಾ ಮಂಡಳ ಹಾಗೂ ಚನ್ನಬಸವೇಶ್ವರನಗರ ಮಹಿಳಾ ಮಂಡಳದವರು ಮಹಿಳಾ ಸಬಲೀಕರಣ ಕುರಿತು ವೃಂದಗಾನ ಪ್ರಸ್ತುತಪಡಿಸಿದರು. ಪೊಲೀಸ್ ಇನ್ಸಪೆಕ್ಟರ್ ಶಿವರಾಜ ಪಾಟೀಲ, ಡಾ. ಚಿತ್ರಾ ನಾಯಕ ಹಾಗೂ ವಿದ್ಯಾರ್ಥಿಗಳಾದ ದತ್ತು ಅರಕೇರಿ ಮತ್ತು ಕವಿತಾ ಮಾದರ ಕವನ ವಾಚಿಸಿದರು.

ಮಹಿಳಾ ಮಂಟಪದ ಸಂಚಾಲಕಿ ಡಾ. ಶೈಲಜಾ ಅಮರಶೆಟ್ಟಿ ಸ್ವಾಗತಿಸಿದರು. ಶಂಕರ ಹಲಗತ್ತಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಡಾ. ವಿ. ಶಾರದಾ ವಂದಿಸಿದರು. ಸುಜಾತಾ ಹಡಗಲಿ ನಿರೂಪಿಸಿದರು.

೫. ಗುರಿ ರೂಪಿಸಿಕೊಳ್ಳುವಿಕೆ, ಅವಕಾಶ ಹುಡುಕಿಕೊಳ್ಳುವಿಕೆ ಗುರಿಯೆಡೆಗೆ ಪ್ರಯತ್ನಿಸಲು ಬದ್ಧತೆ, ದೃಢತೆ ಮುಂತಾದ ಹತ್ತು ಸೂತ್ರಗಳನ್ನು ವಿದ್ಯಾರ್ಥಿಗಳು ಪಾಲಿಸಿದಲ್ಲಿ ಅವರು ಯಶಸ್ಸಿನೆಡೆಗೆ ಸಾಗಲು ಸಾಧ್ಯ ಎಂದು ಧಾರವಾಡ ಕೃಷಿ ವಿಶ್ವವಿದ್ಯಾಲಯದ ವಿಶ್ರಾಂತ ಪ್ರಾಧ್ಯಾಪಕ ಪ್ರೊ. ಎಂ.ಆರ್. ಈಶಣ್ಣ ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘದ ಮಹಿಳಾ ಮಂಟಪವು ಅಮ್ಮಿನಭಾವಿಯ ಶ್ರೀ ಶಾಂತೇಶ್ವರ ಪ್ರೌಢ ಶಾಲೆಯಲ್ಲಿ ಶಾಲಾ ವಿದ್ಯಾರ್ಥಿನಿಯರಿಗಾಗಿ ದಿನಾಂಕ: ೧೬–೧೨–೨೦೨೩ ರಂದು ಆಯೋಜಿಸಿದ್ದ **'ವ್ಯಕ್ತಿತ್ವ ವಿಕಸನ ಶಿಬಿರ' (ರಸಪ್ರಶ್ನೆ ಸ್ಪರ್ಧೆ, ಘಟನೆ ವಿಶ್ಲೇಷಣೆ ಸ್ಪರ್ಧೆ, ಉಪನ್ಯಾಸ)** ಕಾರ್ಯಕ್ರಮದಲ್ಲಿ ಅವರು ಉಪನ್ಯಾಸ ನೀಡುತ್ತಾ ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ಅವರು, ವಿದ್ಯಾರ್ಥಿಗಳು ತಾವು ಇಟ್ಟುಕೊಂಡ ಗುರಿಯಿಂದ ವಿಚಲಿತರಾಗದೇ ಕಷ್ಟಪಟ್ಟು ಕ್ರೀಯಾಶೀಲರಾಗಿ ಯಶಸ್ಸು ಸಿಗುವವರೆಗೆ ಪ್ರಯತ್ನಿಸುತ್ತಲೇ ಇರಬೇಕೆಂದರು.

ಅಧ್ಯಕ್ಷತೆ ವಹಿಸಿ ಶಾಲೆಯ ನಿರ್ದೇಶಕ ಸುನೀಲ ಗುಡಿ ಮಾತನಾಡಿ, ಮೊಬೈಲ್, ಟಿ.ವಿ. ಗಳಂತಹ ಮೋಹಗಳಿಗೆ ಒಳಗಾಗದೇ ಜೀವನವನ್ನು ರೂಪಿಸಿಕೊಳ್ಳಬೇಕೆಂದರು.

ಈ ಶಿಬಿರದಲ್ಲಿ ಮಕ್ಕಳಿಗಾಗಿ ರಸಪ್ರಶ್ನೆ ಸ್ಪರ್ಧೆ ಮತ್ತು ಘಟನೆ ವಿಶ್ಲೇಷಣೆ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ಈ ಎರಡೂ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಮಾಳಪ್ಪ ಅಮರಶೆಟ್ಟಿ, ಬಸವಣ್ಣೆಪ್ಪ ನವಲಗುಂದ, ಎಂ.ವ್ಹಿ. ಹೊಸೂರ, ಹುಲಗೂರ ಹಾಗೂ ಕರ್ಕಿಯವರು ಪ್ರಮಾಣ ಪತ್ರ ವಿತರಿಸಿದರು.

ರಸಪ್ರಶ್ನೆ ಸ್ಪರ್ಧೆಯನ್ನು ಡಾ. ನಿರ್ಮಲಾ ಚಿಗಟೇರಿ, ಘಟನೆ ವಿಶ್ಲೇಷಣೆ ಸ್ಪರ್ಧೆಯನ್ನು ಡಾ. ವಿ. ಶಾರದಾ ನಡೆಸಿಕೊಟ್ಟರು. ವೀರಣ್ಣ ಒಡ್ಡೀನ, ಆನಂದ ಅಮರಶೆಟ್ಟಿ, ಪರಪ್ಪ ಅಂತಕ್ಕನವರ, ಮಂಜುನಾಥ ದೊಡವಾಡ ಸ್ಪರ್ಧೆಯ ನಿರ್ಣಾಯಕರಾಗಿದ್ದರು.

ಮಹಿಳಾ ಮಂಟಪದ ಸಂಚಾಲಕಿ ಡಾ. ಶೈಲಜಾ ಅಮರಶೆಟ್ಟಿ ಸ್ವಾಗತಿಸಿದರು. ಪ್ರಧಾನ ಕಾರ್ಯದರ್ಶಿ ಶಂಕರ ಹಲಗತ್ತಿ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಆರುಷ ಮತ್ತು ಆರಾಧ್ಯಾ ದೊಡವಾಡ ಪ್ರಾರ್ಥನಾ ಗೀತೆ ಹಾಡಿದರು. ಶಾರದಾ ಕೌದಿ ನಿರೂಪಿಸಿದರು. ಸುಜಾತಾ ಹಡಗಲಿ ವಂದಿಸಿದರು.

೬. ಮಕ್ಕಳು ಪಾಲಕರನ್ನು ಅನುಕರಿಸುತ್ತಾರೆ. ತಾಯಿಯೇ ಮಕ್ಕಳೊಂದಿಗೆ ಹೆಚ್ಚಿನ ಸಮಯ ಕಳೆಯುವುದರಿಂದ ಮಕ್ಕಳು ತಾಯಿಯನ್ನೇ ಹೆಚ್ಚಾಗಿ ಅನುಕರಿಸುತ್ತಾರೆ ಎಂದು ಹುಬ್ಬಳ್ಳಿಯ ಆಪ್ತ ಸಮಾಲೋಚಕ ಹಾಗೂ ತರಬೇತುದಾರ ಡಾ. ಗುರುರಾಜ ಪಾಟೀಲ ಅಭಿಪ್ರಾಯ ವ್ಯಕ್ತಪಡಿಸಿದರು.

ಕರ್ನಾಟಕ ವಿದ್ಯಾವರ್ಧಕ ಸಂಘದ ಮಹಿಳಾ ಮಂಟಪವು ದಿನಾಂಕ: ೧೨–೨–೨೦೨೪ ರಂದು ಸಂಘದ ಶ್ರೀ ರಾ. ಹ. ದೇಶಪಾಂಡೆ ಸಭಾಭವನದಲ್ಲಿ ಆಯೋಜಿಸಿದ್ದ ಉಪನ್ಯಾಸ ಮತ್ತು ಸಂವಾದ ಕಾಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ **'ಮಹಿಳೆ ಮತ್ತು ಪಾಲಕತ್ವ'** ವಿಷಯ ಕುರಿತು ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ಅವರು, ತಾಯಿಯು ಮಕ್ಕಳಿಗೆ ಏನನ್ನಾದರೂ ಹೇಳುವುದಕ್ಕಿಂತ ಮೊದಲು ತಾನು ಅದನ್ನು ಪಾಲಿಸಿದಾಗ ಮಾತ್ರ ಮಕ್ಕಳು ಪಾಲಕರ ಮಾತನ್ನು ಕೇಳುತ್ತಾರೆ ಎಂದ ಅವರು, ಸಂವಾದ ಕಾರ್ಯಕ್ರಮದಲ್ಲಿ ಬಂದ ಅನೇಕ ಪ್ರಶ್ನೆಗಳಿಗೆ ಸಮರ್ಪಕ ಉತ್ತರ ನೀಡಿ, ಉತ್ತಮ ಸಂವಾದಕ್ಕೆ ಅಣಿ ಮಾಡಿಕೊಟ್ಟರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ, ಸಾಹಿತಿ ಶ್ರೀಮತಿ ಅರುಂಧತಿ ಸವದತ್ತಿ ಮಾತನಾಡುತ್ತಾ, ತಾಯಿಯ ಪಾತ್ರದಷ್ಟೇ ತಂದೆಯ ಹೊಣೆಗಾರಿಕೆಯು ಮುಖ್ಯವಾಗಿದೆ. ಆದ್ದರಿಂದ ಮಕ್ಕಳಲ್ಲಿ ಉತ್ತಮ ಸಂಸ್ಕಾರ ಬೆಳೆಯಬೇಕಾದರೆ ತಂದೆ–ತಾಯಿ ಇಬ್ಬರೂ ಜವಾಬ್ದಾರರಾಗಿರುತ್ತಾರೆ ಎಂದರು.

ಮಹಿಳಾ ಮಂಟಪದ ಸಂಚಾಲಕಿ ಡಾ. ಶೈಲಜಾ ಅಮರಶೆಟ್ಟಿ ಸ್ವಾಗತಿಸಿದರೆ, ಶಂಕರ ಹಲಗತ್ತಿ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಡಾ. ವಿ. ಶಾರದಾ ಹಾಗೂ ಜ್ಯೋತಿ ಭಾವಿಕಟ್ಟಿ ಅತಿಥಿಗಳನ್ನು ಪರಿಚಯಿಸಿದರೆ, ಶಿವಾನಂದ ಭಾವಿಕಟ್ಟಿ ಅವರು ವಂದಿಸಿದರು. ಸುಜಾತ ಹಡಗಲಿ ನಿರೂಪಿಸಿದರು.

ಸ್ವರಾಂಜಲಿ ಸಂಗೀತ ಪಾಠ ಶಾಲೆಯ ವಿದ್ಯಾರ್ಥಿಗಳು ಪ್ರಾರ್ಥಿಸಿದರು. ಮೈತ್ರೇಯಿಣಿ ನೇಕಾರ ಹಾಗೂ ಸಂಗಡಿಗರು ಮಹಿಳೆ ಕುರಿತು ಹಾಡಿದರು.

೭ ಮಹಿಳೆಯರು ಚಿಂತನಶೀಲರಾಗಬೇಕು. ಪ್ರಯೋಗಶೀಲತೆಯನ್ನು ಮೈಗೂಡಿಸಿಕೊಳ್ಳಬೇಕು ಮತ್ತು ಸ್ವಂತ ನಿರ್ಧಾರಗಳನ್ನು ತೆಗೆದುಕೊಳ್ಳಬೇಕೆಂದು ಕ.ವಿ.ವ. ಸಂಘದ ಉಪಾಧ್ಯಕ್ಷೆ ಪ್ರೊ. ಮಾಲತಿ ಪಟ್ಟಣಶೆಟ್ಟಿ ಹೇಳಿದರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘದ ಮಹಿಳಾ ಮಂಟಪವು ದಿನಾಂಕ: ೨೧-೩-೨೦೨೪ ರಂದು ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಮಹಿಳೆಯರಿಗಾಗಿ ಆಯೋಜಿಸಿದ್ದ **'ಸ್ತ್ರೀ' ಕುರಿತು 'ಜಾನಪದ ಸಮೂಹ ಗಾಯನ'** ಮತ್ತು **'ಸ್ವರಚಿತ ಕವನ ವಾಚನ' ಸ್ಪರ್ಧೆ**ಗಳಿಗೆ ಚಾಲನೆ ನೀಡಿ ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ಅವರು, ಮಹಿಳೆಯರು ಎಂಥದೇ ಸಮಸ್ಯೆಗಳು ಬಂದರೂ ಅದರಾಚೆ ಬಂದು ಅವುಗಳಿಗೆ ಪರಿಹಾರ ಕಂಡುಕೊಳ್ಳಲು ಸನ್ನದ್ಧರಾಗಬೇಕು ಎಂದರು.

ಮಹಿಳಾ ದಿನಾಚರಣೆ ಅಂಗವಾಗಿ **'ಸ್ತ್ರೀ' ಕುರಿತು ಮಹಿಳೆಯರಿಗಾಗಿ ಜಾನಪದ ಸಮೂಹ ಗಾಯನ ಸ್ಪರ್ಧೆ ಮತ್ತು ಸ್ವರಚಿತ ಕವನ ವಾಚನ ಸ್ಪರ್ಧೆ**ಗಳನ್ನು ಏರ್ಪಡಿಸಲಾಗಿತ್ತು. ಈ ಎರಡೂ ಸ್ಪರ್ಧೆಗಳಲ್ಲಿ ನೂರಾರು ಮಹಿಳೆಯರು ಭಾಗವಹಿಸಿ ಕಾರ್ಯಕ್ರಮಕ್ಕೆ ಶೋಭೆ ತಂದರು.

ಸಮೂಹ ಗಾಯನ ಸ್ಪರ್ಧೆಯಲ್ಲಿ 'ಸಿಂಗಾರ ಸಖಿ' ಮಹಿಳಾ ಮಂಡಳ, 'ಕಲ್ಪತರು' ಮಹಿಳಾ ಮಂಡಳ, 'ಶ್ರೀರಂಜಿನಿ' ಮಹಿಳಾ ಮಂಡಳ, 'ಆಂಜನೇಯ' ಮಹಿಳಾ ಮಂಡಳ, ಕಸ್ತೂರಿ ಕುಂದರಗಿ ಹಾಗೂ ಸಂಗಡಿಗರು ಮತ್ತು ಸ್ವರಚಿತ ಕವನ ವಾಚನ ಸ್ಪರ್ಧೆಯಲ್ಲಿ ಗಾಯತ್ರಿ ಕಮ್ಮಾರ, ಶಶಿರೇಖಾ ಚಕ್ರಸಾಲಿ, ಜಯಶ್ರೀ ಮಂಗಳೂರು, ಎಸ್.ಎಮ್. ಬಳ್ಳಾರಿ, ಶ್ರೀದೇವಿ ದೇಶಪಾಂಡೆ ಬಹುಮಾನ ಪಡೆದರು. ವಿಜೇತರಿಗೆ ಮಕ್ಕಳ ಕವಿ ನಿಂಗಣ್ಣ ಕುಂಟಿ ಬಹುಮಾನ ವಿತರಿಸಿ, ಮಾತನಾಡಿದರು.

ಅಧ್ಯಕ್ಷತೆ ವಹಿಸಿ ಕ.ವಿ.ವ. ಸಂಘದ ಅಧ್ಯಕ್ಷ ಚಂದ್ರಕಾಂತ ಬೆಲ್ಲದ ಮಾತನಾಡಿ, ಮಹಿಳೆಯರು ಎಲ್ಲ ಕ್ಷೇತ್ರಗಳಲ್ಲಿ ಮುಂದುವರೆಯಬೇಕೆಂದು ಶುಭ ಹಾರೈಸಿದರು.

ನಿರ್ಣಾಯಕರ ಪರವಾಗಿ ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಡಾ. ಧನವಂತ ಹಾಜವಗೋಳ ಮಾತನಾಡಿದರು. ಡಾ. ನಿರ್ಮಲಾ ಚಿಗಟೇರಿ ಮತ್ತು ಪ್ರಮೀಳಾ ಜಕ್ಕಣ್ಣವರ ಹಾಡನ್ನು ಹಾಡಿ, ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ಸಹ ಕಾರ್ಯದರ್ಶಿ ಶಂಕರ ಕುಂಬಿ ವೇದಿಕೆ ಮೇಲೆ ಉಪಸ್ಥಿತರಿದ್ದರು.

ವೃಂದಾ ಮತ್ತು ಸಂಗಡಿಗರು ಪ್ರಾರ್ಥಿಸಿದರು. ಮಹಿಳಾ ಮಂಟಪದ ಸಂಚಾಲಕಿ ಡಾ. ಶೈಲಜಾ ತ. ಅಮರಶೆಟ್ಟಿ ಸ್ವಾಗತಿಸಿದರು. ಶಂಕರ ಹಲಗತ್ತಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಡಾ. ವಿ. ಶಾರದಾ ನಿರೂಪಿಸಿದರು. ಬಹುಮಾನ ವಿತರಣಾ ಕಾರ್ಯಕ್ರಮ ನಡೆಸಿಕೊಟ್ಟರು. ಸುಜಾತಾ ಹಡಗಲಿ ವಂದಿಸಿದರು.

**೩. ಶಿಕ್ಷಣ ಮಂಟಪ: ಸಂಚಾಲಕರು, ಶ್ರೀ ವೀರಣ್ಣ ಒಡ್ಡೀನ.**

೧. ನೀರು ಸೃಷ್ಟಿಯ ಅಮೂಲ್ಯ ಕೊಡುಗೆ. ನಾಳೆಗಾಗಿ, ನಮಗಾಗಿ, ನಮ್ಮ ಜನರಿಗಾಗಿ ನೀರನ್ನು ಮಿತವಾಗಿ ಬಳಕೆ ಮಾಡಬೇಕು ಎಂದು ಧಾರವಾಡದ ಜಲ ಮತ್ತು ನೆಲ ನಿರ್ವಹಣೆ ಸಂಸ್ಥೆಯ ಅಧೀಕ್ಷಕ ಅಭಿಯಂತರ ಬಿ. ವಾಯ್. ಬಂಡಿವಡ್ಡರ ಹೇಳಿದರು.

ಅವರು ತಾಲೂಕಿನ ಕರಡಿಗುಡ್ಡ ಸರಕಾರಿ ಪ್ರೌಢಶಾಲೆಯಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘದ ಶಿಕ್ಷಣ ಮಂಟಪವು ದಿನಾಂಕ: ೨೨-೬-೨೦೨೩ ರಂದು ಆಯೋಜಿಸಿದ್ದ **'ಜಲ ಸಂಪನ್ಮೂಲ ನಿರ್ವಹಣೆ - ಇಂದು, ನಾಳೆಗಾಗಿ'** ವಿಷಯ ಕುರಿತು ಉಪನ್ಯಾಸ ನೀಡಿ ಮಾತನಾಡಿದರು.

ಮುಂದುವರೆದು ಮಾತನಾಡಿದ ಅವರು ಭೂಮಿಯ ಮುಕ್ಕಾಲು ಭಾಗ ನೀರಿನಿಂದ ಆವೃತ್ತವಾಗಿದ್ದರೂ ಅದರಲ್ಲಿ ಸಿಹಿ ನೀರಿನ ಪ್ರಮಾಣ ಅಲ್ಪಪ್ರಮಾಣವಾಗಿದ್ದು, ಭಾರತದಲ್ಲಿ ನೀರಿನ ವೈಜ್ಞಾನಿಕ ನಿರ್ವಹಣೆ ಸಾಕಷ್ಟು ಪ್ರಮಾಣದಲ್ಲಿ ಆಗಿಲ್ಲ. ನೀರಿನ ದುರ್ಬಳಕೆಯಿಂದ ಮುಂದಿನ ಪೀಳಿಗೆ ನೀರಿಗಾಗಿ ಪರಿತಪಿಸಬೇಕಾಗುತ್ತದೆ. ಪ್ರತಿಯೊಬ್ಬರೂ ಸ್ವಯಂ ಸ್ಫೂರ್ತಿಯಿಂದ ನೀರಿನ ಸದ್ಬಳಕೆ ಮಾಡಿಕೊಳ್ಳಬೇಕು. ಇಂದು ಜಲವೇ ಒಂದು ರೀತಿ ನಮ್ಮ ಜೀವನವಾಗಿದೆ. ನಿರ್ಲಕ್ಷದಿಂದ ಹರಿಬಿಟ್ಟ ಸೆಕೆಂಡಿಗೆ ಒಂದು ಹನಿಯಷ್ಟು ನೀರು ಒಂದು ದಿನಕ್ಕೆ ೪೧.೦೪ ಲೀಟರನಷ್ಟಾಗುತ್ತದೆ. ವರ್ಷಕ್ಕೆ ೧೫೦೦೦ ಸಾವಿರ ಲೀಟರನಷ್ಟಾಗುತ್ತದೆ. ನಿರ್ಲಕ್ಷದ ಹನಿಯಿಂದ ಇಷ್ಟೊಂದು




ಪೋಲಾಗಬೇಕಾದರೆ, ನೀರನ್ನು ಪೋಲು ಮಾಡದೆ ನಾವುಗಳು ನೀರಿನ ಸಂರಕ್ಷಣೆಗಾಗಿ ಹಾಗೂ ಸದ್ಬಳಕೆಗಾಗಿ ಹರಿಯುವ ನೀರನ್ನು ತೆವಳುವಂತೆ ಮಾಡಿ, ತೆವಳುವ ನೀರನ್ನು ನಿಲ್ಲುವಂತೆ ಮಾಡಿ, ನಿಂತ ನೀರನ್ನು ಇಂಗುವಂತೆ ಮಾಡಿ ಅಂತರ್‌ಜಲವನ್ನು ಹೆಚ್ಚಿಸಬೇಕು. ನೀರಿನ ದುರ್ಬಳಕೆಯಿಂದ ಭೂಮಿಯ ಫಲವತ್ತತೆ ಕೂಡ ಕಡಿಮೆಯಾಗಿ ಬೆಳೆಹಾನಿ ಸಂಭವಿಸುತ್ತದೆ. ವಿದ್ಯಾರ್ಥಿಗಳು ನೀರಿನ ಮಿತ ಬಳಕೆಯ ಬಗ್ಗೆ ಅರಿವು ಹೊಂದಬೇಕೆಂದು ಹೇಳಿದರು.

ಸರಕಾರಿ ಪದವಿಪೂರ್ವ ಮಹಾವಿದ್ಯಾಲಯದ ಪ್ರಾಚಾರ್ಯ ನಂದೀಶ ಕಾಖಂಡಕಿ ಮಾತನಾಡಿ, ಹನಿ ನೀರು ಅಮೃತಕ್ಕೆ ಸಮಾನ. ವಿದ್ಯಾರ್ಥಿಗಳು ತಮ್ಮ ನೆರೆಹೊರೆಯವರಿಗೆ ನೀರಿನ ಮಹತ್ವ ಕುರಿತು ಸಾಕ್ಷರತೆಯ ಮೂಲಕ ಜನಜಾಗೃತಿ ಮೂಡಿಸಬೇಕೆಂದು ಹೇಳಿದರು. ಡೈಟ್‌ನ ಹಿರಿಯ ಉಪನ್ಯಾಸಕ ಅರ್ಜುನ ಕಾಂಬೋಗಿ ಮಾತನಾಡಿದರು.

ಅಧ್ಯಕ್ಷತೆ ವಹಿಸಿದ್ದ ಎಸ್.ಡಿ.ಎಂ.ಸಿ. ಉಪಾಧ್ಯಕ್ಷ ಬಸವರಾಜ ಗುತ್ತೆಪ್ಪನವರ ಮಾತನಾಡಿ, ಭೂಮಿಯ ಮೇಲೆ ಸಕಲ ಜೀವರಾಶಿಗಳಿಗೂ ನೀರು ಅಗತ್ಯವಾಗಿದ್ದು ನೀರಿಲ್ಲದೆ ಯಾವ ಜೀವ ರಾಶಿಗಳು ಬದುಕಲು ಅಸಾಧ್ಯ. ನೀರನ್ನು ಪ್ರತಿಯೊಬ್ಬರೂ ಸಮರ್ಪಕವಾಗಿ ಯೋಜನಾಬದ್ಧವಾಗಿ ಉಪಯೋಗಿಸಬೇಕೆಂದು ಹೇಳಿದರು.

ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಸುರೇಖಾ ಉಳ್ಳಿಗೇರಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿದ ೧೬ ಜನ ವಿದ್ಯಾರ್ಥಿಗಳಿಗೆ ಕರ್ನಾಟಕ ವಿದ್ಯಾವರ್ಧಕ ಸಂಘದ ಶಿಕ್ಷಣ ಮಂಟಪದ ವತಿಯಿಂದ ಬಹುಮಾನ ವಿತರಿಸಲಾಯಿತು.

ಅರ್ಚನಾ ಅರಮನಿ ಬಹುಮಾನ ವಿತರಣೆ ಮಾಡಿದರು. ಪಿ. ಎಸ್. ಅಂಕಲಗಿ ಸ್ವಾಗತಿಸಿದರು. ಶಿಕ್ಷಣ ಮಂಟಪದ ಸಂಚಾಲಕ ವೀರಣ್ಣ ಒಡ್ಡೀನ ಪ್ರಾಸ್ತಾವಿಕವಾಗಿ ಮಾತನಾಡಿದರು. ಎಮ್. ಎಚ್. ಮುದುಕವಿ ನಿರೂಪಿಸಿದರು. ಮಹಾಂತೇಶ ನರೇಗಲ್ಲ ನಿರೂಪಿಸಿದರು.

೨. ಈ ದೇಶದ ಮತ್ತು ನಾಡಿನ ಸ್ವಾತಂತ್ರ್ಯ ಹೋರಾಟದ ಹುತಾತ್ಮರ ತ್ಯಾಗ, ಬಲಿದಾನವನ್ನು ನಿಸ್ವಾರ್ಥ ಬದುಕನ್ನು ನಾವಿಂದು ಸ್ಮರಿಸಬೇಕು. ವಿದ್ಯಾರ್ಥಿಗಳು ತಂದೆ, ತಾಯಿ, ಸಮಾಜ ಹಾಗೂ ಗುರುವಿನ ಋಣ ತೀರಿಸಿ ಸಾಧಕರಾಗಬೇಕೆಂದು ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಡಾ. ಆರ್.ಸಿ. ಹಲಗತ್ತಿ ಹೇಳಿದರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘದ ಶಿಕ್ಷಣ ಮಂಟಪವು ನವನಗರದ ಸರಕಾರಿ ಪದವಿ ಪೂರ್ವ ಮಹಾವಿದ್ಯಾಲಯದಲ್ಲಿ ದಿನಾಂಕ: ೧೨-೮-೨೦೨೩ ರಂದು ಆಯೋಜಿಸಿದ್ದ, **ಕರ್ನಾಟಕದಲ್ಲಿ ಸ್ವಾತಂತ್ರ್ಯ ಹೋರಾಟದ ಆ ದಿನಗಳು ಸ್ಮರಣೆ**ಯಲ್ಲಿ ಕರ್ನಾಟಕದಲ್ಲಿ ಚಲೇಜಾವ್ ಚಳುವಳಿಯ ಸ್ವರೂಪ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಉಪನ್ಯಾಸಕರಾದ ಉದಯ ನಾಯಕ ಉಪನ್ಯಾಸ ನೀಡುತ್ತಾ, ಚಲೇಜಾವ್ ಚಳುವಳಿ ಕರ್ನಾಟಕದಲ್ಲಿ ಹೋರಾಟಗಾರರಲ್ಲಿ ಜಾಗೃತಿಗಿಂತ ಜನಜಾಗೃತಿ ಮೂಡಿಸಿ ಹೋರಾಟಗಾರರಲ್ಲಿ ಸ್ಫೂರ್ತಿಯನ್ನು ತಂದಿತು. ಈ ಹೋರಾಟ ಕರ್ನಾಟಕದಲ್ಲಿಯೂ ಉಗ್ರ ಸ್ವರೂಪದ್ದಾಗಿತ್ತು. ಈ ಚಳುವಳಿಯಲ್ಲಿ ಅನೇಕ ವಿದ್ಯಾರ್ಥಿಗಳು, ಅಧ್ಯಾಪಕರು ಶಾಲೆ ಕಾಲೇಜಿಗೆ ಬಹಿಷ್ಕಾರ ಹಾಕಿ ಹೊರ ಬಂದರೆ ವಕೀಲರು ನ್ಯಾಯಾಲಯ ಬಹಿಷ್ಕರಿಸಿ ಚಳುವಳಿಯಲ್ಲಿ ಪಾಲ್ಗೊಂಡಿದ್ದರು. ಬೆಳಗಾವಿ, ಧಾರವಾಡ, ಮೈಸೂರಿನಲ್ಲಿ ಉಗ್ರಸ್ವರೂಪ ತಾಳಿತು. ಎಲ್ಲೆಡೆ ವಿಧ್ವಂಸಕ ಕೃತ್ಯ ನಡೆದು ಸರ್ಕಾರಿ ಆಸ್ತಿಪಾಸ್ತಿ ನಾಶವಾಯಿತು. ರೈಲು ನಿಲ್ದಾಣಗಳು ಹಾಳಾದವು. ಸಹಸ್ರಾರು ವಿದ್ಯಾರ್ಥಿಗಳು ಲಾಠಿ ಏಟು ತಿಂದು ಬಂಧನಕ್ಕೊಳಗಾದರು. ಆರ್.ಆರ್. ದಿವಾಕರ್, ಹರ್ಡೇಕರ ಮಂಜಪ್ಪ, ಎಸ್. ನಿಜಲಿಂಗಪ್ಪ, ಶಿರೂರ ವೀರಭದ್ರಪ್ಪ, ಶಿವಮೂರ್ತಿಸ್ವಾಮಿ ಅಳವಂಡಿ ಮುಂತಾದವರು ಚಳುವಳಿಯ ನೇತೃತ್ವ ವಹಿಸಿದ್ದರು.

ಗಾಂಧೀಜಿಯವರ ಮಾಡು ಇಲ್ಲವೇ ಮಡಿ ಎಂಬ ಕರೆಗೆ ಓಗೊಟ್ಟ ಈಸೂರಿನ ಹೋರಾಟಗಾರರು 'ಏಸೂರು ಹೋದರು ಈಸೂರು ಕೊಡೆವು' ಎಂದು ಒಕ್ಕೊರಲಿನಿಂದ ಕೂಗಿ ಸ್ವಾತಂತ್ರ್ಯ ಸ್ಫೂರ್ತಿ ತುಂಬಿದರು. ಈಸೂರು ಕರ್ನಾಟಕದಲ್ಲಿ ಸ್ವಾತಂತ್ರ್ಯ ಘೋಷಣೆ ಮಾಡಿದ ಮೊದಲ ಗ್ರಾಮವಾಗಿದೆ. ಇದೆ ಸಮಯದಲ್ಲಿ ಕರ್ನಾಟಕ ಜಾಲಿಯನ್ ವಾಲಾಬಾಗ್ ಎಂದು ಕರೆಯಲ್ಪಟ್ಟ ವಿಧುರಾಶ್ವತ್ಥದಲ್ಲಿ ೩೫ ಜನ ಬ್ರಿಟಿಷ ಪೊಲೀಸರ ಗುಂಡಿಗೆ ಬಲಿಯಾದರು. ಆದರೂ ಈ ಘಟನೆ ಹೋರಾಟಗಾರರಲ್ಲಿ ಶೌರ್ಯ, ಸಂಕಲ್ಪ ಶಕ್ತಿಯನ್ನು ಹೆಚ್ಚಿಸಿತು. ಈ ಘಟನೆಗಳು ಇತಿಹಾಸದಲ್ಲಿ ಉಜ್ವಲ ಅಧ್ಯಾಯವಾಗಿವೆ. ನಮ್ಮ ಕನ್ನಡದ ಹೋರಾಟಗಾರರು ಶೌರ್ಯ ತ್ಯಾಗ, ಬಲಿದಾನವನ್ನು ವಿದ್ಯಾರ್ಥಿಗಳು ಸ್ಮರಿಸಬೇಕೆಂದು ಉದಯ ನಾಯಕ ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಚಾರ್ಯರಾದ ಅಶೋಕ ಸವಣೂರ ಮಾತನಾಡಿದರು. ವೇದಿಕೆಯಲ್ಲಿ ಶಂಕರ ಕುಂಬಿ, ಪ್ರೊ. ವೀರನಗೌಡ ಮರಿಗೌಡ್ರ, ಮಹಾಂತೇಶ ನರೇಗಲ್ ಮಾತನಾಡಿದರು. ಶಿಕ್ಷಣ ಮಂಟಪದ ಸಂಚಾಲಕ ವೀರಣ್ಣ ಒಡ್ಡೀನ ಪ್ರಾಸ್ತಾವಿಕವಾಗಿ ಮಾತನಾಡಿದರು. ಗಾಯತ್ರಿ ಹುದ್ದಾರ ಸ್ವಾಗತಿಸಿದರು. ಎಸ್.ಬಿ. ವಸ್ತ್ರಮಠ ನಿರೂಪಿಸಿದರು. ಬಿ.ವ್ಹಿ. ಮಡಿವಾಳರ ವಂದಿಸಿದರು.

೩. ಕರ್ನಾಟಕದಲ್ಲಿ ಬ್ರಿಟಿಷರ ವಿರುದ್ಧ ನಡೆದ ಸಶಸ್ತ್ರ ಬಂಡಾಯಗಳಲ್ಲಿ ಕನ್ನಡಿಗರ ದೇಶಭಕ್ತಿ, ಸ್ವಾತಂತ್ರ್ಯ ಪ್ರಿಯತೆ ಅನನ್ಯವಾಗಿದೆ ಎಂದು ಕರ್ನಾಟಕ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಚಂದ್ರಕಾಂತ ಬೆಲ್ಲದ ಹೇಳಿದರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘದ ಶಿಕ್ಷಣ ಮಂಟಪವು, ನಗರದ ವನಿತಾ ಮಹಿಳಾ ಪದವಿಪೂರ್ವ ಮಹಾವಿದ್ಯಾಲಯದಲ್ಲಿ ದಿನಾಂಕ: ೧೮-೮-೨೦೨೩ ರಂದು ೭೭ ನೇ ಸ್ವಾತಂತ್ರ್ಯೋತ್ಸವ ಅಂಗವಾಗಿ ಆಯೋಜಿಸಿದ್ದ **'ಕರ್ನಾಟಕದಲ್ಲಿ ಬ್ರಿಟಿಷರ್ ವಿರುದ್ಧ ನಡೆದ ಬಂಡಾಯಗಳು'** ಎಂಬ ಕಾರ್ಯಕ್ರಮ ಉದ್ಘಾಟಿಸಿ ನುಡಿದರು.

ಮುಂದುವರೆದು ಮಾತನಾಡಿ ಅವರು, ಬ್ರಿಟಿಷರ ವಿರುದ್ಧ ನಡೆದ ಬಂಡಾಯಗಳಲ್ಲಿ ಕನ್ನಡದ ಹೋರಾಟಗಾರರು ತಮ್ಮ ಜೀವಕ್ಕಿಂತ ಸ್ವಾತಂತ್ರ್ಯ ಹೆಚ್ಚು ಮೌಲ್ಯವಾದದ್ದು ಎಂದು ನಂಬಿದವರಾಗಿದ್ದರು. ಅವರ ತ್ಯಾಗ, ಸ್ವಾತಂತ್ರ್ಯಪ್ರಿಯತೆ ವಿದ್ಯಾರ್ಥಿಗಳಿಗೆ ಚೇತೋಹಾರಿಯಾಗಿದೆ ಎಂದು ಹೇಳಿದರು.

ಅತಿಥಿ ಉಪನ್ಯಾಸಕರಾಗಿ ಆಗಮಿಸಿದ್ದ ಡಾ. ವೀಣಾ ಬಿರಾದಾರ ಬ್ರಿಟಿಷರ ವಿರುದ್ಧ ಕರ್ನಾಟಕದಲ್ಲಿ ಬಂಡಾಯ ವಿಷಯ ಕುರಿತು ಉಪನ್ಯಾಸ ನೀಡಿ, ಕನ್ನಡದ ಸ್ವಾತಂತ್ರ್ಯ ಹೋರಾಟದ ಬಂಡಾಯಗಾರರು ಸ್ವಾಭಿಮಾನದ ಪ್ರತೀಕವಾಗಿದ್ದರು. ೧೮೦೦-೧೮೬೭ ರವರೆಗೆ ಬ್ರಿಟಿಷರ್ ದುರಾಡಳಿತದ ವಿರುದ್ಧ ಬಂಡಾಯವೆದ್ದ ಮೊದಲಿಗರೆಂದರೆ ದೊಂಡಿಯಾ ವಾಘ, ನಂತರ ಹಲಗಲಿ ಬೇಡರು, ಕಿತ್ತೂರ ಚೆನ್ನಮ್ಮ, ನರಗುಂದ ಬಾಬಾಸಾಹೇಬ, ಸುರಪುರದ ವೆಂಕಟಪ್ಪನಾಯಕ, ಮುಂತಾದವರು ಬ್ರಿಟಿಷರ ಆಡಳಿತವನ್ನು ತಲ್ಲಣಗೊಳಿಸಿದವು. ಈ ಹೋರಾಟಗಳು ವಿಫಲವಾದರೂ ಮುಂದಿನ ಶತಮಾನದಲ್ಲಿ ಸ್ವಾತಂತ್ರ್ಯ ಹೋರಾಟಕ್ಕೆ ಸ್ಫೂರ್ತಿ ನೀಡಿದವು. ಈ ಎಲ್ಲಾ ನಾಯಕರ

ಸಂಕಲ್ಪ ಶಕ್ತಿ, ದೃಢತೆ, ದೇಶಪ್ರೇಮ, ತ್ಯಾಗ, ಬಲಿದಾನವನ್ನು ವಿದ್ಯಾರ್ಥಿಗಳು ಎಂದಿಗೂ ಮರೆಯಬಾರದು ಎಂದರು.

ಅಧ್ಯಕ್ಷತೆ ವಹಿಸಿದ್ದ ವನಿತಾ ಸೇವಾ ಸಮಾಜದ ಅಧ್ಯಕ್ಷ ಟಿ. ಎಸ್. ಪಾಟೀಲ ಮಾತನಾಡಿ, ಕರ್ನಾಟಕ ವಿದ್ಯಾವರ್ಧಕ ಸಂಘದ ಶಿಕ್ಷಣ ಮಂಟಪವು ಆಯೋಜಿಸಿದ ಇಂತಹ ಕಾರ್ಯಕ್ರಮಗಳು ವಿದ್ಯಾರ್ಥಿಗಳಲ್ಲಿ ನಿಸ್ವಾರ್ಥತೆ, ದೇಶಪ್ರೇಮ, ರಾಷ್ಟ್ರಭಕ್ತಿ ಮೂಡಿಸಲು ಸಹಕಾರಿಯಾಗುತ್ತವೆ ಎಂದರು.

ವೇದಿಕೆಯಲ್ಲಿ ಮಧುರಾ ಹೆಗಡೆ, ಅಶೋಕ ನಾಯಕ, ಪ್ರಾಚಾರ್ಯ ರಾಮನಗೌಡ ದೊಡಮನಿ, ಎಂ. ಎಸ್. ನರೇಗಲ್ಲ, ಡಾ. ಡಿ.ಜಿ.ಶೆಟ್ಟಿ ಬಿ. ಬಿ. ಪಾಟೀಲ, ವಿಜಯಲಕ್ಷ್ಮಿ ಕಲ್ಯಾಣಶೆಟ್ಟರ ಮುಂತಾದವರಿದ್ದರು.

ಕ.ವಿ.ವ.ಸಂಘದ ಶಿಕ್ಷಣ ಮಂಟಪದ ಸಂಚಾಲಕ ವೀರಣ್ಣ ಒಡ್ಡೀನ ಪ್ರಾಸ್ತಾವಿಕವಾಗಿ ಮಾತನಾಡಿದರು. ಮಂಜುಳಾ ಮಾದರ ಪ್ರಾರ್ಥಿನೆ ಮಾಡಿದರು. ಹೇಮಾ ಕಮ್ಮಾರ ಸ್ವಾಗತಿಸಿದರು. ವಿಜಯಕುಮಾರ ಕೌಶಿಕ ನಿರೂಪಿಸಿದರು.

**೪.** ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಕನ್ನಡ ನಾಡಿನ ವೀರವನಿತೆಯರ ಕೆಚ್ಚೆದೆಯ ಹೋರಾಟ ಅಸಾಧಾರಣವಾದುದು ಎಂದು ಕರ್ನಾಟಕ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಚಂದ್ರಕಾಂತ ಬೆಲ್ಲದ ಹೇಳಿದರು. ಅವರು ಕರ್ನಾಟಕ ವಿದ್ಯಾವರ್ಧಕ ಸಂಘದ ಶಿಕ್ಷಣ ಮಂಟಪವು, ನಗರದ ಕೆ.ಇ. ಬೋರ್ಡಿನ ಸಂಯುಕ್ತ ಪದವಿಪೂರ್ವ ಮಹಾವಿದ್ಯಾಲಯದಲ್ಲಿ ದಿನಾಂಕ: ೨೩-೮-೨೦೨೩ ರಂದು ೭೭ ನೇ ಸ್ವಾತಂತ್ರ್ಯೋತ್ಸವ ಅಂಗವಾಗಿ ಆಯೋಜಿಸಿದ್ದ **'ಕರ್ನಾಟಕದಲ್ಲಿ ಸ್ವಾತಂತ್ರ್ಯ ಹೋರಾಟದ ಆ ದಿನಗಳು'** ಸ್ಮರಣೆಯ ಕಾರ್ಯಕ್ರಮ ಉದ್ಘಾಟಿಸಿ ನುಡಿದರು.

ಅತಿಥಿ ಉಪನ್ಯಾಸಕರಾಗಿ ಆಗಮಿಸಿದ್ದ ಕರಡಿಗುಡ್ಡ ಸರಕಾರಿ ಪ.ಪೂ. ಮಹಾವಿದ್ಯಾಲಯದ ಉಪನ್ಯಾಸಕ ಪ್ರಕಾಶ ಸುಣಗಾರ್ **'ಕರ್ನಾಟಕದಲ್ಲಿ ಮಹಿಳಾ ಸ್ವಾತಂತ್ರ್ಯ ಹೋರಾಟಗಾರರು'** ವಿಷಯ ಕುರಿತು ಉಪನ್ಯಾಸ ನೀಡುತ್ತಾ, ಕರಾವಳಿ ಉಳ್ಳಾಲದ ರಾಣಿ ಅಬ್ಬಕ್ಕದೇವಿ ೧೫೫೬ ರಲ್ಲಿ ಪೋರ್ಚುಗೀಸರ ವಿರುದ್ಧ ಹೋರಾಡಿದ ಮೊದಲ ಭಾರತೀಯ ರಾಣಿ. ಅವಳ ಶೌರ್ಯ, ಸಾಹಸದ ಹೋರಾಟ ಸ್ಮರಣೀಯ. ಬೆಳವಡಿ ಮಲ್ಲಮ್ಮ, ಕಿತ್ತೂರು ಚನ್ನಮ್ಮ, ಒನಕೆ ಓಬವ್ವ, ಕೆಳದಿ ಚನ್ನಮ್ಮ ಮುಂತಾದ ವೀರವನಿತೆಯರು ನಾಡ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಕನ್ನಡದ ವೀರ ಮಹಿಳೆಯರು.

ಗಾಂಧಿ ಯುಗದಲ್ಲಿ ಮಹಿಳಾ ಸ್ವಾತಂತ್ರ್ಯ ಹೋರಾಟಗಾರ್ತಿಯರಾದ ಸಿದ್ಧಮ್ಮ ಬಳ್ಳಾರಿ, ಉಮಾಬಾಯಿ ಕುಂದಾಪೂರ ಹುಬ್ಬಳ್ಳಿಯ ನಾಗಮ್ಮ ಪಾಟೀಲ, ಶಕುಂತಲಾ ಕುರ್ತಕೋಟಿ, ಯಶೋಧರಾ ದಾಸಪ್ಪ ಮುಂತಾದವರು ಗಾಂಧೀಜಿಯವರ ಮಾರ್ಗದರ್ಶನದಲ್ಲಿ ಕ್ವಿಟ್ ಇಂಡಿಯಾ ಹಾಗೂ ಅಸಹಕಾರ ಚಳುವಳಿಯಲ್ಲಿ ಸಂಘಟಿತರಾಗಿ ಹೋರಾಡಿ ಆಳರಸರ ವಿರುದ್ಧ ಸ್ವಾಭಿಮಾನದ ಹೋರಾಟ ನಡೆಸಿದರು.ಈ ಹೋರಾಟಗಾರ್ತಿಯರ ಜೀವನದ ಯಶೋಗಾಥೆ ವಿದ್ಯಾರ್ಥಿಗಳಿಗೆ ಪ್ರೇರಕ ಶಕ್ತಿಯಾಗಿದೆ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಕೆ.ಇ. ಬೋರ್ಡ್ ಸಂಸ್ಥೆಯ ಕಾರ್ಯದರ್ಶಿ ಡಿ.ಎಸ್. ರಾಜಪುರೋಹಿತ ಮಾತನಾಡಿ, ಕ.ವಿ.ವ. ಸಂಘದ ಶಿಕ್ಷಣ ಮಂಟಪವು ಇಂದಿನ ವಿದ್ಯಾರ್ಥಿಗಳಿಗೆ ದೇಶಾಭಿಮಾನ, ನಿಸ್ವಾರ್ಥ ಹೋರಾಟದ ಬಗ್ಗೆ ಜಾಗೃತಿ ಮೂಡಿಸುತ್ತಿರುವುದು ಶ್ಲಾಘನೀಯ ಎಂದರು.

ಕೆ.ಇ. ಬೋರ್ಡ್ ಸಂಸ್ಥೆಯ ಖಜಾಂಚಿ ಎಸ್.ಎನ್. ಪರಾಂಡೆ ಮಾತನಾಡಿದರು. ಶಿಕ್ಷಣ ಮಂಪಟದ ಸಂಚಾಲಕ ವೀರಣ್ಣ ಒಡ್ಡೀನ ಪ್ರಾಸ್ತಾವಿಕವಾಗಿ ಮಾತನಾಡಿದರು. ವೇದಿಕೆಯಲ್ಲಿ ಪತ್ರಕರ್ತ ವಸಂತ ಮುರ್ಡೇಶ್ವರ, ಎನ್.ಎಸ್. ಗೋವಿಂದರಡ್ಡೆ, ಪ್ರಾಚಾರ್ಯ ಸುನೀತಾ ಕಡಪಟ್ಟಿ ಇದ್ದರು.

ಕುಮಾರಿ ಗಂಗಾ ಮಂಗಳಗಟ್ಟಿ ಪ್ರಾರ್ಥಿಸಿದರು. ಎಸ್. ಜಿ. ಕಡಪಟ್ಟಿ ಸ್ವಾಗತಿಸಿದರು. ಎಸ್.ಎಲ್. ಶೇಖರಗೋಳ ನಿರೂಪಿಸಿದರು. ಗೋವಿಂದ ಕುಲಕರ್ಣಿ ವಂದಿಸಿದರು.

**೫.** ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಸಹಸ್ರಾರು ದೇಶಭಕ್ತರ ತ್ಯಾಗ ಹಾಗೂ ಬಲಿದಾನವನ್ನು ಇಂದಿನ ಯುವಕರು ಅರ್ಥೈಯಿಸಿಕೊಳ್ಳಬೇಕು ಎಂದು ಧಾರವಾಡ ಆಕಾಶವಾಣಿ ಕೇಂದ್ರದ ಹಿರಿಯ ರಂಗಕರ್ಮಿ

ಡಾ. ಶಶಿಧರ ನರೇಂದ್ರ ಹೇಳಿದರು. ಅವರು ಕರ್ನಾಟಕ ವಿದ್ಯಾವರ್ಧಕ ಸಂಘದ ಶಿಕ್ಷಣ ಮಂಟಪವು, ನಗರದ ವಿದ್ಯಾರಣ್ಯ ಪದವಿಪೂರ್ವ ಮಹಾವಿದ್ಯಾಲಯದಲ್ಲಿ ದಿನಾಂಕ: ೨೪-೮-೨೦೨೩ ರಂದು ಆಯೋಜಿಸಿದ್ದ **'ಕರ್ನಾಟಕದಲ್ಲಿ ಸ್ವಾತಂತ್ರ್ಯ ಹೋರಾಟದ ಆ ದಿನಗಳು'** ಸ್ಮರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಕರಡಿಗುಡ್ಡ ಸರಕಾರಿ ಪ. ಪೂ. ಮಹಾವಿದ್ಯಾಲಯದ ಉಪನ್ಯಾಸಕ ಪ್ರಕಾಶ ಸುಣಗಾರ್ **'ಕರ್ನಾಟಕದಲ್ಲಿ ಅಸಹಕಾರ ಚಳುವಳಿ ಪ್ರಖರತೆ'** ಕುರಿತು ಉಪನ್ಯಾಸ ನೀಡಿ ಮಾತನಾಡಿ, ೧೯೧೯ ರಲ್ಲಿ ಬ್ರಿಟಿಷರು ಜಾರಿಗೆ ತಂದ 'ರೌಲೆಟ್ ಶಾಸನ' ಜಲಿಯನ್‌ವಾಲಾಬಾಗ್ ದುರಂತಗಳು ಭಾರತೀಯರಲ್ಲಿ ಆಳರಸರ ವಿರುದ್ಧ ಪ್ರತಿಕಾರ ಭಾವನೆ ಮೂಡಿಸಿದವು. ಗಾಂಧೀಜಿಯವರು ರಾಜಕೀಯ ಪ್ರವೇಶಿದರು. ಸತ್ಯಾಗ್ರಹ ಎಂಬ ಹೊಸ ಪರಿಕಲ್ಪನೆಯ ಮೂಲಕ ಶಾಂತಿಯುತ ಹೋರಾಟ ಪ್ರಾರಂಭಿಸಿದರು. ಇದೇ ಸಮಯದಲ್ಲಿ ಪಂಜಾಬದ ಜಲಿಯನ್‌ವಾಲಾ ಭಾಗ್‌ದಲ್ಲಿ ಪ್ರತಿಭಟನಾಕಾರರ ವಿರುದ್ಧ ಜನರಲ್ ಡಯರ ಗುಂಡಿನ ಮಳೆ ಸುರಿಸಿದರು. ಈ ಹತ್ಯಾಕಾಂಡದಲ್ಲಿ ೩೭೮ ಜನ ಸಾವನ್ನಪ್ಪಿ ೧೨೦೦ ಜನರು ಗಾಯಗೊಂಡರು.

ಉತ್ತರ ಪ್ರದೇಶದ ಚೌರಿಚೌರಾದಲ್ಲಿ ಉದ್ರಿಕ್ತ ಜನ ಪೊಲೀಸ್ ಸ್ಟೇಶನ್‌ಗೆ ಬೆಂಕಿಹಚ್ಚಿ ೨೨ ಜನ ಪೊಲೀಸರನ್ನು ಕೊಂದರು. ಗಾಂಧೀಜಿಯವರು ಅಸಹಕಾರ ಚಳುವಳಿಯನ್ನು ಹಿಂತೆಗೆದುಕೊಂಡರು. ಯಾಕೆಂದರೆ ಹೋರಾಟ ಅವರ ತತ್ವ ನಿಷ್ಠೆಯ ವಿಷಯವಾಗಿತ್ತು. ಕರ್ನಾಟಕದಲ್ಲೂ ಅಸಹಕಾರ ಚಳುವಳಿ ಪ್ರಖರತೆಯಿಂದ ಕೂಡಿತ್ತು. ಗಂಗಾಧರ್‌ರಾವ್ ದೇಶಪಾಂಡೆ, ಆರ್.ಆರ್. ದಿವಾಕರ, ಕಡಪಾ ರಾಘವೇಂದ್ರರಾಯ, ಬಳ್ಳಾರಿ ಸಿದ್ಧಮ್ಮ, ಶಕುಂತಲಾ ಕುರ್ತಕೋಟಿ, ಯಶೋಧರಾ ದಾಸಪ್ಪ ಮುಂತಾದವರು ಅಸಹಕಾರ ಚಳುವಳಿ ಸಮರ್ಥವಾಗಿ ನಡೆಸಿಕೊಂಡು ಬಂದರು. ನಾ. ಸು. ಹರ್ಡೀಕರ ಹಿಂದುಸ್ಥಾನ ಸೇವಾದಳ ಸ್ಥಾಪಿಸಿ ಸ್ವಯಂ ಸೇವಕರನ್ನು ಸಿದ್ಧಗೊಳಿಸಿದರು. ಆ ನಾಯಕರ ದೇಶಭಕ್ತಿ ಸ್ವಾತಂತ್ರ್ಯ ಪ್ರಿಯತೆ ಅರಿಯಬೇಕೆಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ವಿದ್ಯಾರಣ್ಯ ಪ.ಪೂ. ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ಶರಣಮ್ಮ ಗೋರೆಬಾಳ ಮಾತನಾಡಿ, ಅನೇಕ ಮಹನೀಯರ ತ್ಯಾಗ, ಬಲಿದಾನದಿಂದ ಪಡೆದ ಸ್ವಾತಂತ್ರ್ಯವನ್ನು ಸರಿಯಾದ ಮಾರ್ಗದಲ್ಲಿ ನಡೆದು ಉಳಿಸಿಕೊಂಡು ಹೋಗಬೇಕೆಂದರು.

ಪ್ರಾಚಾರ್ಯ ನಂದೀಶ ಕಾಖಂಡಕಿ ಮಾತನಾಡಿದರು. ಶಿಕ್ಷಣ ಮಂಟಪ ಸಂಚಾಲಕ ವೀರಣ್ಣ ಒಡ್ಡೀನ ಪ್ರಾಸ್ತಾವಿಕವಾಗಿ ಮಾತನಾಡಿದರು.

ವೇದಿಕೆಯಲ್ಲಿ ಡಾ. ಡಿ. ಜಿ. ಶೆಟ್ಟಿ, ಎಂ. ಎಸ್. ನರೇಗಲ್ಲ ಇದ್ದರು. ಶಿವಕುಮಾರ ಗಾಣಿಗೇರ ಸ್ವಾಗತಿಸಿದರು. ಸದಾನಂದ ಶಿಂತ್ರಿ ನಿರೂಪಿಸಿದರು. ಡಾ. ಸುರೇಶ ಹಾನಗಲ್ಲ ವಂದಿಸಿದರು.

**೬.** ಶಿಕ್ಷಣ ಮಾನವ ಸಂಸ್ಕೃತಿಯ ಪ್ರತಿಬಿಂಬ. ಅದರಿಂದ ಅಂತರಂಗದ ಸಂಸ್ಕೃತಿ ಅರಳುವುದು ಎಂದು ಕರ್ನಾಟಕ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಚಂದ್ರಕಾಂತ ಬೆಲ್ಲದ ಅಭಿಪ್ರಾಯಪಟ್ಟರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘದ ಶಿಕ್ಷಣ ಮಂಟಪವು ದಿನಾಂಕ: ೨೯-೧೨-೨೦೨೩ ರಂದು ನರೇಂದ್ರದ ಸರಕಾರಿ ಪ್ರೌಢಶಾಲೆಯ ಸಹಯೋಗದಲ್ಲಿ ಆಯೋಜಿಸಿದ್ದ 'ಪ್ರಸಕ್ತ ಸಾಲಿನ ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳಿಗಾಗಿ **'ಅಧ್ಯಯನದಲ್ಲಿ ಏಕಾಗ್ರತೆ ಸಾಧಿಸುವುದು ಹೇಗೆ' ಉಪನ್ಯಾಸ** ಹಾಗೂ **ಸಂವಾದ** ಕಾರ್ಯಕ್ರಮ**'** ಉದ್ಘಾಟಿಸಿ ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ಅವರು, ಶಿಕ್ಷಣ ಪ್ರತಿ ವ್ಯಕ್ತಿಯ ಜೀವನದಲ್ಲಿ ಅತ್ಯಂತ ಮಹತ್ವವುಳ್ಳದ್ದು. ನಿರ್ದಿಷ್ಟ ಗುರಿ ಹಾಗೂ ಸಾಧಿಸಬೇಕೆಂಬ ಛಲದಿಂದ ಜೀವನದಲ್ಲಿ ಏನನ್ನಾದರೂ ಸಾಧಿಸಬಹುದು. ಒಳ್ಳೆಯ ಶಿಕ್ಷಣ ಪಡೆದು ತಂದೆ, ತಾಯಿ ಶಾಲೆಗೆ ಕೀರ್ತಿ ತರಬೇಕು. ದೇಶದ ಉನ್ನತಿ ನಿಮ್ಮನ್ನೇ ಅವಲಂಬಿಸಿದೆ. ವಿದ್ಯಾರ್ಥಿಗಳೇ ಭವ್ಯ ಭಾರತದ ಆಧಾರ ಸ್ತಂಭ ಎಂದು ಹೇಳಿದರು.

ಧಾರವಾಡ ಡಿಮ್ಹಾನ್ಸ್ ಮನೋ ವೈದ್ಯಕೀಯ ಸಮಾಜ ಕಾರ್ಯಕರ್ತ ಪ್ರಶಾಂತ ಪಾಟೀಲ **'ಏಕಾಗ್ರತೆ'** ಕುರಿತು ಉಪನ್ಯಾಸ ನೀಡಿ, ವಿದ್ಯಾರ್ಥಿಗು ತಮ್ಮ ಶಕ್ತಿಯಲ್ಲಿ ನಂಬಿಕೆ ಇರಬೇಕು. ಅದುವೇ ಆತ್ಮವಿಶ್ವಾಸ, ನಮ್ಮ ಭವಿಷ್ಯದ ನಿರ್ಮಾತೃಗಳು ನೀವೇ ಪಠ್ಯಪುಸ್ತಕದ ಸಮಗ್ರ ಅಧ್ಯಯನದಿಂದ ಹೆಚ್ಚು ಅಂಕ ಗಳಿಸಬಹುದು. ಓದಿನಲ್ಲಿ

ಶ್ರದ್ಧೆ, ಬದ್ಧತೆ ಇರಲಿ. ಸಮಯದ ಸದ್ಬಳಕೆಯೊಂದಿಗೆ ಕ್ರಮಬದ್ಧವಾಗಿ ಓದಿರಿ. ವಿನಾಕಾರಣ ಪರೀಕ್ಷೆಯ ಬಗ್ಗೆ ಭಯ, ಆತಂಕ ನಕಾರಾತ್ಮಕ ಭಾವನೆ ಬೇಡ ಎಂದು ಹೇಳಿದರು.

ಧಾರವಾಡ ಗ್ರಾಮೀಣ ಕ್ಷೇತ್ರ ಸಮನ್ವಯಾಧಿಕಾರಿ ಶ್ರೀಮತಿ ಎನ್.ಎಸ್. ದಫೇದಾರ ಮಾತನಾಡಿ, ವಿದ್ಯಾರ್ಥಿಗಳು ಅಧ್ಯಯನಕ್ಕಾಗಿ ಗೃಹ ವೇಳಾಪಟ್ಟಿಸಿದ್ಧಗೊಳಿಸಬೇಕು. ಗುರುಗಳ ಮಾರ್ಗದರ್ಶನ ಗುರಿಯೊಂದಿಗೆ ಅಧ್ಯಯನಶೀಲರಾಗಬೇಕೆಂದು ಹೇಳಿದರು.

ಶಿಕ್ಷಣ ಸಂಯೋಜಕ ಟಿ.ಎನ್. ಸೈಯದ್ ಪರೀಕ್ಷಾ ಸಿದ್ಧತೆಯ ಬಗ್ಗೆ ಅಗತ್ಯ ಸೂಚನೆ ನೀಡಿದರು.

ಪ್ರೌಢಶಾಲಾ ಎಸ್.ಡಿ.ಎಂ.ಸಿ. ಅಧ್ಯಕ್ಷ ಬಸವರಾಜ ಹುಂಬೇರಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ವೇದಿಕೆಯಲ್ಲಿ ಗ್ರಾಮ ಪಂಚಾಯತ ಅಧ್ಯಕ್ಷ ನಾಗಪ್ಪ ಹಟ್ಟಿಹೊಳಿ, ಮುಖ್ಯಾಧ್ಯಾಪಕ ಜಗದೀಶ ಬಳೆಗಾರ, ಬಸಪ್ಪ ತೇಗೂರ, ಶ್ರೀದೇವಿ ಕುಸುಗಲ್, ರೇವಣಸಿದ್ಧಪ್ಪ, ಅನಿತಾ ಹೊನ್ನವಾಡ ಮುಂತಾದವರಿದ್ದರು.

ಮಕ್ಕಳೊಂದಿಗೆ ಸಂವಾದ ಏರ್ಪಡಿಸಲಾಗಿತ್ತು. ಜಯಂತ ಗಾಮನಗಟ್ಟಿ ಸ್ವಾಗತಿಸಿದರು. ಶಿಕ್ಷಣ ಮಂಟಪದ ಸಂಚಾಲಕ ವೀರಣ್ಣ ಒಡ್ಡೀನ ಪ್ರಾಸ್ತಾವಿಕವಾಗಿ ಮಾತನಾಡಿದರು. ವಿಜಯಲಕ್ಷ್ಮಿ ಅಂಬಿಗೇರ ನಿರೂಪಿಸಿದರು. ಎಂ.ವಾಯ್. ಬಡಿಗೇರ ವಂದಿಸಿದರು.

೭. ಮನಸ್ಸನ್ನು ಏಕಾಗ್ರತೆಗೊಳಿಸಲು ಅಭ್ಯಾಸವೇ ಪ್ರಧಾನ ಸಾಧನ. ಅಭ್ಯಾಸ ಎಂದರೆ ಪುನಃ ಪುನಃ ಪ್ರತಿದಿನ ಮಾಡುವ ಪ್ರಯತ್ನ ಎಂದು ಧಾರವಾಡ ಶಹರ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಅಶೋಕಕುಮಾರ ಸಿಂಧಗಿ ಅಭಿಪ್ರಾಯಪಟ್ಟರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘದ ಶಿಕ್ಷಣ ಮಂಟಪವು, ಕರ್ನಾಟಕ ಪ್ರೌಢಶಾಲೆಯ ಸಹಯೋಗದಲ್ಲಿ ಕರ್ನಾಟಕ ಪ್ರೌಢ ಶಾಲೆಯಲ್ಲಿ ದಿನಾಂಕ: ೧–೧–೨೦೨೪ ರಂದು ಆಯೋಜಿಸಿದ್ದ ಪ್ರಸಕ್ತ ಸಾಲಿನ ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳಿಗಾಗಿ **'ಅಧ್ಯಯನದಲ್ಲಿ ಏಕಾಗ್ರತೆ ಸಾಧಿಸುವುದು ಹೇಗೆ' ಉಪನ್ಯಾಸ** ಹಾಗೂ **ಸಂವಾದ ಕಾರ್ಯಕ್ರಮ'** ಉದ್ಘಾಟಿಸಿ ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ಅವರು, ಶಿಕ್ಷಣಕಾಶಿ ಎಂದು ಕರೆಯಲ್ಪಡುವ ಧಾರವಾಡ ಜಿಲ್ಲೆ ಕಳೆದ ವರ್ಷ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಕಡಿಮೆ ಸಾಧನೆ ಮಾಡಿತ್ತು. ಈ ವರ್ಷ ಧಾರವಾಡ ಜಿಲ್ಲೆ ಉತ್ತೀರ್ಣತೆಯ ಪ್ರಮಾಣ ಹೆಚ್ಚಿಸಲು ಏನೆಲ್ಲಾ ಯೋಜನೆ ರೂಪಿಸಿದೆ. ಕರ್ನಾಟಕ ವಿದ್ಯಾವರ್ಧಕ ಸಂಘವು ಆಯೋಜಿಸಿರುವ ಈ ಕಾರ್ಯಕ್ರಮವು ಮಕ್ಕಳಲ್ಲಿ ಗುಣಾತ್ಮಕ ಬದಲಾವಣೆ ತರುವುದರ ಜೊತೆ ಪರೀಕ್ಷೆ ಬಗ್ಗೆ ನೈತಿಕ ಸ್ಥೈರ್ಯ ತರುತ್ತಿದೆ. ಕ.ವಿ.ವ. ಸಂಘದ ಈ ಪ್ರಯತ್ನ ಯಶಸ್ವಿಯಾಗಲಿ ಎಂದು ಹಾರೈಸಿದರು.

ಕ.ವಿ.ವ. ಸಂಘದ ಪ್ರಧಾನ ಕಾರ್ಯದರ್ಶಿ ಶಂಕರ ಹಲಗತ್ತಿ ಮಾತನಾಡಿ, ವಿದ್ಯಾರ್ಥಿಗಳು ಅಧ್ಯಯನ ಮಾಡುವಾಗ ವಿಷಯದ ಕಡೆ ಗಮನ ಕೊಡಬೇಕು. ಅವಧಾನಿಗಳಾಗಿ ಓದಬೇಕು. ಸಂದಿಗ್ಧ ಸಮಸ್ಯೆಗಳಿದ್ದರೆ ಪ್ರಶ್ನೆ ಕೇಳುವದರ ಮೂಲಕ ಪರಿಹಾರ ಪಡೆಯಬೇಕು. ಶ್ರದ್ಧೆ ಬದ್ಧತೆಯಿಂದ ಮಾತ್ರ ಏಕಾಗ್ರತೆ ಹೊಂದಲು ಸಾಧ್ಯ ಎಂದರು.

ಕರ್ನಾಟಕ ಪ್ರೌಢ ಶಾಲೆಯ ಆಡಳಿತಾಧಿಕಾರಿ ಜಿ.ಆರ್. ಭಟ್ ಮಾತನಾಡಿ, ಸ್ವಭಾವತಃ ಮನಸ್ಸು ಚಂಚಲವಾಗಿರುತ್ತದೆ. ಈ ಮನಸ್ಸನ್ನು ಕೇಂದ್ರಿಕರಿಸಿ ಅಧ್ಯಯನ ಮಾಡಿದರೆ ಸಾಧನೆ ಮಾಡಲು ಸಾಧ್ಯ. ಜ್ಞಾನಕ್ಕಿಂತ ಮಿಗಿಲಾದದ್ದು ಯಾವುದೂ ಇಲ್ಲ. ಜ್ಞಾನದಲ್ಲಿ ಶಕ್ತಿ ಇದೆ. ಜ್ಞಾನವು ಸಂಪತ್ತು ಹೌದು. ಪಠ್ಯದ ಜೊತೆ ಬೇರೆ ಆಕರ ಓದಿ ಜ್ಞಾನ ಸಂಗ್ರಹ ಮಾಡಿಕೊಳ್ಳಬೇಕೆಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಕೆ.ಇ.ಬೋರ್ಡ್ ಕಾರ್ಯದರ್ಶಿ ಡಿ.ಎಸ್. ರಾಜಪುರೋಹಿತ ಮಾತನಾಡಿ, ಪರೀಕ್ಷೆಗಾಗಿ ಓದುವುದು ಎಷ್ಟು ಮುಖ್ಯವೋ ಬರವಣಿಗೆಯೂ ಅಷ್ಟೇ ಮುಖ್ಯ. ಅಧ್ಯಯನ ಮಾಡುವಾಗ ನಿಮಗಾಗಿ ಶ್ರಮ ಪಡುತ್ತಿರುವ ತಂದೆ, ತಾಯಿ ಹಾಗೂ ಗುರಗಳ ಶ್ರಮ ನೆನಪಿಸಿಕೊಳ್ಳಿ ಎಂದರು.

ಧಾರವಾಡ ಡಿಮ್ಹಾನ್ಸನ್ ಮನೋ ವೈದ್ಯಕೀಯ ಸಮಾಜ ಕಾರ್ಯಕರ್ತ ಪ್ರಶಾಂತ ಪಾಟೀಲ ಕ್ರಮಬದ್ಧ ಅಧ್ಯಯನ ಮಾಡಲು ಓದು, ಬರಹ ಹಾಗೂ ಏಕಾಗ್ರತೆ, ಸ್ಮರಣ ಶಕ್ತಿಗೆ ಸಂಬಂಧಪಟ್ಟಂತೆ ಉದಾಹರಣೆ ಸಹಿತ ಉಪನ್ಯಾಸ ನೀಡಿದರು.

ವೇದಿಕೆಯಲ್ಲಿ ವಿಜಯಲಕ್ಷ್ಮಿ ಕಲ್ಯಾಣಶೆಟ್ಟರ, ಪ್ರಮೀಳಾ ಜಕ್ಕಣ್ಣವರ, ಎಂ.ಎಸ್. ನರೇಗಲ್, ಕೆ.ಜಿ. ದೇವರಮನಿ, ಸೇರಿದಂತೆ ಮುಂತಾದವರಿದ್ದರು.

ಹರ್ಷಾ ಆಚಾರ ಪ್ರಾರ್ಥಿಸಿದರು. ಪ್ರಾಚಾರ್ಯ ಎನ್.ಎನ್. ಸವಣೂರ ಸ್ವಾಗತಿಸಿದರು. ಕ.ವಿ.ವ. ಸಂಘದ ಶಿಕ್ಷಣ ಮಂಟಪದ ಸಂಚಾಲಕ ವೀರಣ್ಣ ಒಡ್ಡೀನ ಪ್ರಾಸ್ತಾವಿಕವಾಗಿ ಮಾತನಾಡಿದರು. ಆರ್.ಎಫ್. ಮೂಲಿಮನಿ ನಿರೂಪಿಸಿದರು. ಬಿ.ಬಿ. ಸಿಂಘೆ ವಂದಿಸಿದರು.

೮. ವಿದ್ಯಾರ್ಥಿ ಜೀವನದ ರಹಸ್ಯವಿರುವುದೇ ಏಕಾಗ್ರತೆಯಲ್ಲಿ. ಸತತಾಭ್ಯಾಸ, ನಿರಂತರ ಪ್ರಯತ್ನದಿಂದ ಏಕಾಗ್ರತೆ ಸುಲಭವಾಗಿ ಸಿದ್ದಿಸಬಹುದು ಎಂದು ಧಾರವಾಡ ಗ್ರಾಮೀಣ ಕ್ಷೇತ್ರ ಶಿಕ್ಷಣಾಧಿಕಾರಿ ರಾಮಕೃಷ್ಣ ಸದಲಗಿ ಅಭಿಪ್ರಾಯಪಟ್ಟರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘದ ಶಿಕ್ಷಣ ಮಂಟಪವು, ತಾಲೂಕಿನ ತಡಕೋಡದ ಸರಕಾರಿ ಪ್ರೌಢ ಶಾಲೆಯಲ್ಲಿ ದಿನಾಂಕ: ೩–೧–೨೦೨೪ ರಂದು ಆಯೋಜಿಸಿದ್ದ ಪ್ರಸಕ್ತ ಸಾಲಿನ ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳಿಗಾಗಿ **'ಅಧ್ಯಯನದಲ್ಲಿ ಏಕಾಗ್ರತೆ ಸಾಧಿಸುವುದು ಹೇಗೆ' ಉಪನ್ಯಾಸ** ಹಾಗೂ **ಸಂವಾದ ಕಾರ್ಯಕ್ರಮ'** ಉದ್ಘಾಟಿಸಿ ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ಅವರು, ವಿದ್ಯಾರ್ಥಿ ಜೀವನದಲ್ಲಿ ಏಕಾಗ್ರತೆ ದಿಢೀರನೆ ಪಡೆದುಕೊಳ್ಳುವುದು ಸಾಧ್ಯವಿಲ್ಲ. ಅದಕ್ಕೆ ಶ್ರದ್ಧೆ, ಆತ್ಮವಿಶ್ವಾಸ ಅಗತ್ಯ. ವಿದ್ಯಾರ್ಥಿಗಳು ಅಧ್ಯಯನಶೀಲರಾದಾಗ ಅನಗತ್ಯ ವಿಷಯಗಳು ಮನದಲ್ಲಿ ಪ್ರವೇಶಿಸದಂತೆ ಎಚ್ಚರವಿರಬೇಕು. ಓದುವಾಗ ಆರೋಗ್ಯದ ಕಡೆ ಗಮನವಿರಲಿ. ಸಮಯದ ಪರಿಪಾಲನೆ, ಸಾತ್ವಿಕವಾದ ಆಹಾರ ಸೇವನೆ, ಸಕಾರಾತ್ಮಕ ಚಿಂತನೆಯಿಂದ ಪರೀಕ್ಷೆಯಲ್ಲಿ ಯಶಸ್ಸು ಗಳಿಸಬಹುದು. ನಕಲು ಮಾಡುವ ಪ್ರವೃತ್ತಿ ಸಲ್ಲದು. ಓದಿದ್ದನ್ನು ಸಾರಾಂಶ ರೂಪದಲ್ಲಿ ಬರೆದಿಟ್ಟುಕೊಳ್ಳಿ. ನಿರ್ದಿಷ್ಟ ಗುರಿಯೊಂದಿಗೆ ಅಧ್ಯಯನ ಮಾಡಿ ಜಿಲ್ಲೆಯ ಉತ್ತೀರ್ಣತೆಯ ಪ್ರಮಾಣ ಹೆಚ್ಚಿಸಿಕೊಳ್ಳಬೇಕು ಎಂದು ಹೇಳಿದರು.

ಪತ್ರಿಕಾ ವರದಿಗಾರರಾದ ಚನ್ನಬಸಪ್ಪ ಲಗಮಣ್ಣವರ ಮಾತನಾಡಿ, ಗ್ರಾಮೀಣ ಪ್ರದೇಶದ ಮಕ್ಕಳಲ್ಲಿ ಬೌದ್ಧಿಕ ಸಾಮರ್ಥ್ಯ ಹೆಚ್ಚಿಸುವಲ್ಲಿ ಮತ್ತು ಹೆಚ್ಚು ಅಂಕ ಗಳಿಸುವಲ್ಲಿ ಕ.ವಿ.ವ.ಸಂಘದ ಶಿಕ್ಷಣ ಮಂಟಪದ ಈ ಕಾರ್ಯಕ್ರಮ ಅಭಿನಂದನೀಯ. ವಿದ್ಯಾರ್ಥಿಗಳು ನಿಷ್ಪ್ರಯೋಜಕ ಹಾಳುಹರಟೆಯಲ್ಲಿ ತೊಡಗಬಾರದು. ಇದು ನಿಮ್ಮ ಮನಸ್ಥಿತಿ ಕುಗ್ಗಿಸುತ್ತದೆ. ವಿದ್ಯಾರ್ಥಿಗಳು ಕೀಳರಿಮೆ ಬಿಟ್ಟು ಆಶಾವಾದಿಗಳಾಗಿ ಓದಬೇಕು ಎಂದರು.

ಧಾರವಾಡ ಡಿಮ್ಹಾನ್ಸ ಮನೋವೈದ್ಯಕೀಯ ಕಾರ್ಯಕರ್ತರಾದ ಅಶೋಕ ಕೋರಿ ಕ್ರಮಬದ್ಧ ಅಧ್ಯಯನ ಮತ್ತು ಓದುವ–ಬರೆಯುವ ಹಾಗೂ ಏಕಾಗ್ರತೆ ಕುರಿತು ಸಂವಾದದೊಂದಿಗೆ ಉಪನ್ಯಾಸ ನೀಡಿದರು.

ಪ್ರಾರಂಭದಲ್ಲಿ ಭಾರತದ ಪ್ರಥಮ ಮಹಿಳಾ ಶಿಕ್ಷಕಿ ಸಾವಿತ್ರಿಬಾಯಿ ಫುಲೆ ಭಾವಚಿತ್ರಕ್ಕೆ ಪುಷ್ಪಸಮರ್ಪಣೆ ಮಾಡಲಾಯಿತು.

ಅಧ್ಯಕ್ಷತೆ ವಹಿಸಿದ್ದ ಪ್ರೌಢಶಾಲಾ ಮುಖ್ಯ ಶಿಕ್ಷಕಿಯರಾದ ಭುವನೇಶ್ವರಿ ಕತ್ತಿ ಮಾತನಾಡಿ, ಅಧ್ಯಯನದಲ್ಲಿ ಪ್ರೀತಿ, ಉತ್ಸಾಹವಿರಬೇಕು. ವಿದ್ಯಾರ್ಥಿಗಳು ವ್ರತಾಧಾರರಂತೆ ಓದಬೇಕು, ಇದರಿಂದ ನೀವು ಸಾಧಕರಾಗಲು ಸಾಧ್ಯ ಎಂದರು.

ವೇದಿಕೆಯಲ್ಲಿ ಎಂ.ಎಸ್. ನರೇಗಲ್ಲ, ವಿಜಯಲಕ್ಷ್ಮಿ ಕಲ್ಯಾಣಶೆಟ್ಟಿ, ಪ್ರಮಿಳಾ ಜಕ್ಕಣ್ಣವರ, ಶಿಕ್ಷಣ ಸಂಯೋಜಕ ಟಿ. ಎನ್. ಸೈಯ್ಯದ್ ಇದ್ದರು.

ಎನ್.ಪಿ. ಲಮಾಣಿ ಸ್ವಾಗತಿಸಿದರು. ಕ.ವಿ.ವ.ಸಂಘದ ಶಿಕ್ಷಣ ಮಂಟಪದ ಸಂಚಾಲಕ ವೀರಣ್ಣ ಒಡ್ಡೀನ ಪ್ರಾಸ್ತಾವಿಸಿದರು. ಸದಾನಂದ ಬಡಿಗೇರ ನಿರೂಪಿಸಿದರು. ಮಂಜುಳಾ ಸಂಗಣ್ಣವರ ವಂದಿಸಿದರು. ಶಿಕ್ಷಕರು, ವಿದ್ಯಾರ್ಥಿಗಳು ಸೇರಿದಂತೆ ಅನೇಕರು ಭಾಗವಹಿಸಿದ್ದರು.

೯. ವಿದ್ಯಾರ್ಥಿಗಳ ಸಾಮರ್ಥ್ಯ ಅಳೆಯುವ ವಿಧಾನ ಪರೀಕ್ಷೆಗಳು. ಈ ಪರೀಕ್ಷೆಗಳು ವಿಜಯದ ಮೆಟ್ಟಿಲುಗಳನ್ನು ಒಂದೊಂದಾಗಿ ಹತ್ತಲು ಸಹಕಾರಿಗಳಾಗುತ್ತವೆ ಎಂದು ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿ ಜಯಶ್ರೀ ವರೂರ ಹೇಳಿದರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘದ ಶಿಕ್ಷಣ ಮಂಟಪವು, ಹುಬ್ಬಳ್ಳಿ ತಾಲೂಕಿನ ನೂಲ್ವಿಯ ಜಗದ್ಗುರು ರೇಣುಕಾಚಾರ್ಯ ಪದವಿ ಪೂರ್ವ ಮಹಾವಿದ್ಯಾಲಯದ ಪ್ರೌಢ ಶಾಲಾ ವಿಭಾಗದಲ್ಲಿ ದಿನಾಂಕ: ೫-೧-೨೦೨೪ ರಂದು ಆಯೋಜಿಸಿದ್ದ ಪ್ರಸಕ್ತ ಸಾಲಿನ **ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳಿಗಾಗಿ 'ಪರೀಕ್ಷಾ ಪೂರ್ವ ಸಿದ್ಧತೆ ಹೇಗೆ?' ಉಪನ್ಯಾಸ** ಹಾಗೂ **ಸಂವಾದ ಕಾರ್ಯಕ್ರಮ** ಉದ್ಘಾಟಿಸಿ ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ಅವರು, ಅಧ್ಯಯನಕ್ಕೆ ಕ್ರಮಬದ್ಧತೆ ಅಗತ್ಯ. ಸರಿಯಾಗಿ ಅರ್ಥಮಾಡಿಕೊಂಡು ಓದಿದರೆ ವಿದ್ಯಾರ್ಥಿಗಳಿಗೆ ಏಕಾಗ್ರತೆ ತನ್ನಿಂದ ತಾನೆ ಕುದುರುತ್ತದೆ. ಅಧ್ಯಯನ ಮಾಡುವಾಗ ನಕಾರಾತ್ಮಕ ಭಾವನೆ ಇರಬಾರದು. ಶ್ರದ್ಧೆಯಿಂದ ಓದಿರಿ. ನಿಮ್ಮಲ್ಲಿರುವ ಶಕ್ತಿ ಬಗ್ಗೆ ನಂಬಿಕೆ ಇರಲಿ. ಈ ಶ್ರದ್ಧೆಯಿಂದ ವಿದ್ಯಾರ್ಥಿಗಳು ಎಂತಹ ಮಹತ್ಕಾರ್ಯವನ್ನಾದರೂ ಸಾಧಿಸಬಹುದು. ಪರೀಕ್ಷಾ ಪರಿಣಾಮ ಸುಧಾರಣೆಗಾಗಿ ಕ.ವಿ.ವ. ಸಂಘದ ಶಿಕ್ಷಣ ಮಂಟಪದ ಕಾರ್ಯ ಅಭಿನಂದನೀಯ ಎಂದರು.

ಹುಬ್ಬಳ್ಳಿ ಗ್ರಾಮೀಣ ಕ್ಷೇತ್ರ ಶಿಕ್ಷಣಾಧಿಕಾರಿ ಉಮೇಶ ಬೊಮ್ಮಕ್ಕನವರ ಮಾತನಾಡಿ, ಈ ಎಸ್.ಎಸ್.ಎಲ್.ಸಿ ಪರೀಕ್ಷೆ ವಿದ್ಯಾರ್ಥಿ ಜೀವನದ ಒಳ್ಳೆಯ ತಿರುವು. ಅದು ನಿಮ್ಮ ಮುಂದಿನ ವಿದ್ಯಾಭ್ಯಾಸ ದಿನಗಳನ್ನು ನಿರ್ಧರಿಸುತ್ತದೆ. ಗ್ರಹ ವೇಳಾಪಟ್ಟಿ ಹಾಕಿಕೊಂಡು ಸಮಯದ ಸದ್ಬಳಕೆ ಮಾಡಿಕೊಂಡು ಓದಬೇಕು. ಗುಂಪು ಚರ್ಚೆ, ಪುನರಾವರ್ತನೆ ಮೂಲಕ ಅಧ್ಯಯನ ಮಾಡಿದರೆ ನಿಮ್ಮಲ್ಲಿ ನೆನಪಿನ ಶಕ್ತಿ ವೃದ್ಧಿಸುವುದು. ತಂದೆ, ತಾಯಿ, ಇಲಾಖೆ ಹಾಗೂ ಶಿಕ್ಷಕರು ನಿಮಗಾಗಿ ವ್ಯಯಿಸುತ್ತಿರುವ ಶ್ರಮ ಅರ್ಥಮಾಡಿಕೊಂಡು ಓದಬೇಕೆಂದರು.

ಧಾರವಾಡ ಡಿಮ್ಹಾನ್ಸ ಮನೋವೈದ್ಯಕೀಯ ಸಮಾಜ ಕಾರ್ಯಕರ್ತ ಪ್ರಶಾಂತ ಪಾಟೀಲ ಓದು, ಬರಹ, ಏಕಾಗ್ರತೆ, ಶ್ರದ್ಧೆ, ಆತ್ಮವಿಶ್ವಾಸ ಕಂಠಪಾಠ ಪ್ರವೃತ್ತಿ ಮುಂತಾದ ವಿಷಯಗಳ ಬಗ್ಗೆ ಸಂವಾದದೊಂದಿಗೆ ಉದಾಹರಣೆ ಸಹಿತ ಉಪನ್ಯಾಸ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಉಪ ಪ್ರಾಚಾರ್ಯ ಪ್ರಭು ತಳವಾರ ಮಾತನಾಡಿ, ಕರ್ನಾಟ ವಿದ್ಯಾವರ್ಧಕ ಸಂಘದ ಶಿಕ್ಷಣ ಮಂಟಪದ ಈ ಕಾರ್ಯಕ್ರಮ ಪರಿಣಾಮಕಾರಿಯಾಗಿದೆ ಎಂದರು.

ವೇದಿಕೆಯಲ್ಲಿ ಜಾನಪದ ವಿದ್ವಾಂಸ ಡಾ. ರಾಮು ಮೂಲಗಿ ಇದ್ದರು. ಗುರು ಬಾಗಲ್ ಸ್ವಾಗತಿಸಿದರು. ಕ.ವಿ.ವ.ಸಂಘದ ಶಿಕ್ಷಣ ಮಂಟಪದ ಸಂಚಾಲಕ ವೀರಣ್ಣ ಒಡ್ಡೀನ ಪ್ರಾಸ್ತಾವಿಸಿದರು. ಸಿ.ಎನ್. ಬಡ್ಡಿ ನಿರೂಪಿಸಿದರು. ಸಂಜನಾ ಮಟ್ಟಿ ವಂದಿಸಿದರು. ಶಿಕ್ಷಕರು, ವಿದ್ಯಾರ್ಥಿಗಳು ಸೇರಿದಂತೆ ಅನೇಕರು ಭಾಗವಹಿಸಿದ್ದರು.

೧೦. ವಿದ್ಯಾರ್ಥಿಗಳು ಅತಿಯಾದ ಆತ್ಮವಿಶ್ವಾಸಕ್ಕಿಂತ ದೃಢ ಸಂಕಲ್ಪ ಹಾಗೂ ಸಾಧಿಸುತ್ತೇನೆಂಬ ಛಲದೊಂದಿಗೆ ಅಧ್ಯಯನ ಮಾಡಬೇಕು ಎಂದು ಕುಂದಗೋಳ ತಾಲೂಕಿನ ಪ್ರಭಾರ ಕ್ಷೇತ್ರ ಶಿಕ್ಷಣಾಧಿಕಾರಿ ಸಂಜೀವಕುಮಾರ ಬೆಳವಟಗಿ ಅಭಿಪ್ರಾಯಪಟ್ಟರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘದ ಶಿಕ್ಷಣ ಮಂಟಪವು, ಕುಂದಗೋಳ ತಾಲೂಕಿನ ಯರೇಬೂದಿಹಾಳ ಸರಕಾರಿ ಪ್ರೌಢ ಶಾಲಾ ವಿಭಾಗದಲ್ಲಿ ದಿನಾಂಕ: ೯-೧-೨೦೨೪ ರಂದು ಆಯೋಜಿಸಿದ್ದ ಪ್ರಸಕ್ತ ಸಾಲಿನ **ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳಿಗಾಗಿ 'ಪರೀಕ್ಷಾ ಪೂರ್ವ ಸಿದ್ಧತೆ ಹೇಗೆ?' ಉಪನ್ಯಾಸ** ಹಾಗೂ **ಸಂವಾದ ಕಾರ್ಯಕ್ರಮ** ಉದ್ಘಾಟಿಸಿ ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ಅವರು, ಪರೀಕ್ಷಾ ಸಿದ್ಧತೆಯ ಈ ಸಂದರ್ಭದಲ್ಲಿ ವಿದ್ಯಾರ್ಥಿಗಳು ವಿನಾಕಾರಣ ಭಯಪಡಬಾರದು. ಉದ್ವೇಗ, ದುಗುಡ, ಸಂಶಯಗಳು ಏಕಾಗ್ರತೆಗೆ ಭಂಗ ತಂದು ನಿಮ್ಮನ್ನು ನಿಶ್ಯಕ್ತಿಗೊಳಿಸುವವು. ಅರೋಗ್ಯದ ಕಡೆ ಗಮನವಿಟ್ಟು ಓದಬೇಕು. ಗ್ರಹ ವೇಳಾಪಟ್ಟಿ ಸಿದ್ಧಗೊಳಿಸಿಕೊಂಡು ಸಮಯದ ಸದ್ಬಳಕೆ ಮಾಡಿಕೊಂಡು ಓದಬೇಕು. ವಿನಾಕಾರಣ ಹಾಳು ಹರಟೆ ಬೇಡ, ಗುಂಪು ಚರ್ಚೆ ಪುನರಾವರ್ತನೆ ಮಾಡಿ

ಓದುವುದರಿಂದ ನಿಮ್ಮಲ್ಲಿ ಸ್ಮರಣಶಕ್ತಿ ಹೆಚ್ಚುವುದು. ಕ.ವಿ.ವ. ಸಂಘದ ಈ ಕಾರ್ಯಕ್ರಮ ಗ್ರಾಮೀಣ ಮಕ್ಕಳಿಗೆ ಅನುಕೂಲಕರವಾಗಿದ್ದು ಕುಂದಗೋಳ ತಾಲೂಕಿನ ಆಯ್ದ ಶಾಲೆಗಳಲ್ಲಿ ಕಾರ್ಯಕ್ರಮ ಜರುಗುವಂತಾಗಲಿ ಎಂದರು.

ಡಿಮ್ಹಾನ್ಸ್ ಮನೋವೈದ್ಯಕೀಯ ಕಾರ್ಯಕರ್ತ ಪ್ರಶಾಂತ ಪಾಟೀಲ ಪರೀಕ್ಷೆ ಕೆಲವೇ ದಿನ ಉಳಿದಾಗ ಪರೀಕ್ಷಾ ಹಿಂದಿನ ದಿನ ಹಾಗೂ ಪರೀಕ್ಷಾ ದಿನ ವಿದ್ಯಾರ್ಥಿಗಳು ಹೇಗೆ ಓದಬೇಕು ಮಾರ್ಗಸೂಚಿಯೊಂದಿಗೆ ಉಪನ್ಯಾಸ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಮುಖ್ಯಾಧ್ಯಾಪಕ ವಸಂತ ಅರಮನಿ ಮಾತನಾಡಿ, ಕ.ವಿ.ವ. ಸಂಘದ ಪ್ರಥಮ ಬಾರಿಗೆ ಈ ಕಾರ್ಯಕ್ರಮ ಕುಂದಗೋಳ ತಾಲೂಕಿನಲ್ಲಿ ಆಯೋಜಿಸಿದೆ. ತಾಲೂಕಿನ ಹೆಚ್ಚು ಶಾಲೆಗೆ ಈ ಯೋಜನೆ ವಿಸ್ತರಿಸುವಂತೆ ವಿನಂತಿಸಿದರು.

ವೇದಿಕೆಯಲ್ಲಿ ಎಸ್.ಡಿ.ಎಂ.ಸಿ ಅಧ್ಯಕ್ಷ ಬಸವರಾಜ ಅಮ್ಮಿನಭಾವಿ ಮುಂತಾದವರಿದ್ದರು. ಶಿಕ್ಷಕರಾದ ಹೆಗ್ಗಪ್ಪ ಲಮಾಣಿ ಸ್ವಾಗತಿಸಿದರು. ಶಿಕ್ಷಣ ಮಂಟಪದ ಸಂಚಾಲಕ ವೀರಣ್ಣ ಒಡ್ಡೀನ ಪ್ರಾಸ್ತಾವಿಕವಾಗಿ ಮಾತನಾಡಿದರು. ಲಾಲಸಾಬ ನದಾಫ್ ನಿರೂಪಿಸಿದರು. ಬಿ.ಬಿ. ದೊಡಮನಿ ವಂದಿಸಿದರು. ಕಾರ್ಯಕ್ರಮದಲ್ಲಿ ಶಿಕ್ಷಕರು, ವಿದ್ಯಾರ್ಥಿಗಳು ಸೇರಿದಂತೆ ಮುಂತಾದವರಿದ್ದರು.

೧೧. ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಗಳು ತಾಯಿ ಇದ್ದಂತೆ. ಪಠ್ಯಪುಸ್ತಕದ ಸಮಗ್ರ ಅಧ್ಯಯನದಿಂದ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಲು ಸಾಧ್ಯ ಎಂದು ಡಿಮ್ಹಾನ್ಸ್ ಮನೋವೈದ್ಯಕೀಯ ಸಮಾಜ ಕಾರ್ಯಕರ್ತ ಪ್ರಶಾಂತ ಪಾಟೀಲ ಹೇಳಿದರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘದ ಶಿಕ್ಷಣ ಮಂಟಪವು, ಧಾರವಾಡ ತಾಲೂಕಿನ ಕೋಟೂರಿನ ಶ್ರೀಮತಿ ಡಿ. ಎಸ್. ಮರಿಗೌಡ್ರ ಸರಕಾರಿ ಪ್ರೌಢ ಶಾಲೆಯಲ್ಲಿ ದಿನಾಂಕ: ೧೨–೧–೨೦೨೪ ರಂದು ಆಯೋಜಿಸಿದ್ದ ಪ್ರಸಕ್ತ ಸಾಲಿನ **ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳಿಗಾಗಿ 'ಪರೀಕ್ಷಾ ಪೂರ್ವ ಸಿದ್ಧತೆ ಹೇಗೆ?' ಉಪನ್ಯಾಸ** ಹಾಗೂ **ಸಂವಾದ ಕಾರ್ಯಕ್ರಮ** ಉದ್ಘಾಟಿಸಿ ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ಅವರು, ವಿದ್ಯಾರ್ಥಿಗಳಿಗೆ ಓದಿನ ಬಗ್ಗೆ ಹಸಿವು ಇರಬೇಕು, ಬೇಸರ ಹಾಗೂ ಜಡತ್ವದಿಂದ ಏಕಾಗ್ರತೆ ಕುದುರುವುದಿಲ್ಲ. ವಿದ್ಯಾರ್ಥಿಗಳು ಪರೀಕ್ಷೆಯ ಬಗ್ಗೆ ಭಯಪಡದೆ ಆತ್ಮವಿಶ್ವಾಸದಿಂದ ಓದಬೇಕು. ಅಧ್ಯಯನದ ಸಂದರ್ಭದಲ್ಲಿ ಹಾಳುಹರಟೆ ಸಲ್ಲದು. ಇದು ನಿಮ್ಮಲ್ಲಿಯ ಶಕ್ತಿಯನ್ನು ಕುಗ್ಗಿಸುತ್ತದೆ. ಓದಿದ್ದನ್ನು ಪುನಃ ಪುನಃ ಓದಿ ಸಾರಾಂಶ ರೂಪದಲ್ಲಿ ಬರೆದು ತೆಗೆಯುವುದರಿಂದ ನೆನಪಿನ ಶಕ್ತಿ ವೃದ್ಧಿಯಾಗುವುದು. ಕಂಠಪಾಟ ಮಾಡುವ ಪ್ರವೃತ್ತಿ ಒಳ್ಳೆಯದಲ್ಲ. ನಿಮ್ಮಲ್ಲಿರುವ ಸಾಮರ್ಥ್ಯದ ಬಗ್ಗೆ ನಂಬಿಕೆ ಇರಬೇಕು. ಅಧ್ಯಯನ ಮಾಡುವಾಗ ಆಕರ್ಷಕ ವಸ್ತುಗಳಿಂದ ವಿಮುಖರಾಗಬೇಕು ಎಂದು ತಿಳಿಸಿ, ಮಕ್ಕಳೊಂದಿಗೆ ನಡೆದ ಸಂವಾದದಲ್ಲಿ ಮಕ್ಕಳ ಸಂದೇಹಗಳಿಗೆ ಉತ್ತರ ನೀಡಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಪ್ರೌಢಶಾಲೆ ಎಸ್.ಡಿ.ಎಂ.ಸಿ. ಅಧ್ಯಕ್ಷ ಪರಮೇಶ್ವರ ಕಟ್ಟಿಮನಿ ಮಾತನಾಡಿ,, ದೇಶದ ಉಜ್ವಲ ಭವಿಷ್ಯ ವಿದ್ಯಾರ್ಥಿಗಳಾದ ತಮ್ಮ ಕೈಯಲ್ಲಿದೆ. ನೀವು ಮಾಡುವ ಸಾಧನೆ ಸಮಾಜ ಹಾಗೂ ನಿಮ್ಮ ತಂದೆ, ತಾಯಿ, ಗುರುಗಳಿಗೆ ಗೌರವ ತರುವಂತಿರಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಮುಖ್ಯಾಧ್ಯಾಪಕ ವಿಜಯಲಕ್ಷ್ಮಿ ಪಾಟೀಲ ಮಾತನಾಡಿ, ವಿದ್ಯಾರ್ಥಿಗಳು ಪರೀಕ್ಷೆ ಸಮೀಪಿಸುತ್ತಿರುವ ಈ ಸಂದರ್ಭದಲ್ಲಿ ಅಧ್ಯಯನವನ್ನು ಒಂದು ತಪಸ್ಸು ಎಂದು ತಿಳಿಯಬೇಕು. ಓದಿನೊಂದಿಗೆ ಉತ್ತಮ ಬರವಣಿಗೆಗೂ ಮಹತ್ವ ಕೊಡಬೇಕು. ಪಾಸಾಗಲು ಯಾವುದೇ ಅಡ್ಡದಾರಿ ತುಳಿಯಬಾರದು ಎಂದರು.

ಸ್ವಾಮಿ ವಿವೇಕಾನಂದರ ಜನ್ಮದಿನದ ನಿಮಿತ್ತ ಅವರ ಭಾವಚಿತ್ರಕ್ಕೆ ಪುಷ್ಪನಮನದೊಂದಿಗೆ ಗೌರವ ಸಲ್ಲಿಸಲಾಯಿತು.

ಎಸ್. ವಾಯ್. ಕಾಟಕರ ಸ್ವಾಗತಿಸಿದರು. ಶಿಕ್ಷಣ ಮಂಟಪದ ಸಂಚಾಲಕ ವೀರಣ್ಣ ಒಡ್ಡೀನ ಪ್ರಾಸ್ತಾವಿಕವಾಗಿ ಮಾತನಾಡಿದರು. ಎಸ್. ಎಸ್. ಗೌಡರ ನಿರೂಪಿಸಿದರು. ಎಚ್. ಆಯ್. ಮುಲ್ಲಾನವರ ವಂದಿಸಿದರು.

ವೇದಿಕೆಯಲ್ಲಿ ಮಂಜುನಾಥ ಗೋಕಾವಿ, ಸೋನಿಯಾ ಬ್ಯಾಳಿ, ಪಿ. ಜಿ. ಬೆಟಗೇರಿ. ಟಿ. ಎಸ್. ಬಾಗೇವಾಡಿ, ಆರ್. ಎ. ಸಯ್ಯದ, ಎಸ್. ಎ. ಕಪಲಿ, ವೀರಭದ್ರಸ್ವಾಮಿ ಇದ್ದರು.

೧೨. ವಿದ್ಯಾರ್ಥಿಗಳು ಪರೀಕ್ಷಾ ಸಮಯದಲ್ಲಿ ಉತ್ಸಾಹದ ಬುಗ್ಗೆಗಳಾಗಬೇಕು. ವಿನಾಕಾರಣ ಭಯ ಹಾಗೂ ಉದ್ವೇಗಕ್ಕೆ ಒಳಗಾಗಬಾರದು ಎಂದು ನವಲಗುಂದ ತಾಲೂಕಾ ಕ್ಷೇತ್ರ ಶಿಕ್ಷಣಾಧಿಕಾರಿ ಎಸ್.ಬಿ. ಮಲ್ಲಾಡದ ಅಭಿಪ್ರಾಯಪಟ್ಟರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘದ ಶಿಕ್ಷಣ ಮಂಟಪವು, ನವಲಗುಂದ ತಾಲೂಕಿನ ಚಿಲಕವಾಡದ ಶ್ರೀ ಎಚ್.ಕೆ. ಮತ್ತು ಜಿ.ಕೆ. ಕೋನರಡ್ಡಿ ಸರಕಾರಿ ಪ್ರೌಢ ಶಾಲೆಯಲ್ಲಿ ದಿನಾಂಕ: ೧೮-೧-೨೦೨೪ ರಂದು ಆಯೋಜಿಸಿದ್ದ ಪ್ರಸಕ್ತ ಸಾಲಿನ ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳಿಗಾಗಿ 'ಪರೀಕ್ಷಾ ಪೂರ್ವ ಸಿದ್ಧತೆ ಹೇಗೆ?' ಉಪನ್ಯಾಸ ಹಾಗೂ ಸಂವಾದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ಅವರು, ಪ್ರತಿಯೊಬ್ಬ ವಿದ್ಯಾರ್ಥಿಯಲ್ಲೂ ಒಂದು ಅದಮ್ಯ ಶಕ್ತಿಯಿದೆ. ಆ ಶಕ್ತಿಯಲ್ಲಿ ನಿಮಗೆ ನಂಬಿಕೆ ಅಗತ್ಯ. ದೃಢ ಸಂಕಲ್ಪ ಹಾಗೂ ಬದ್ಧತೆಯೊಂದಿಗೆ ಅಧ್ಯಯನ ಮಾಡಬೇಕು. ಪುನಃ ಪುನಃ ಓದುವುದು, ಓದಿದ್ದನ್ನು ಬರೆದು ತೆಗೆಯುವುದರಿಂದ ವಿದ್ಯಾರ್ಥಿಗಳಲ್ಲಿ ಜ್ಞಾಪಕ ಶಕ್ತಿ ವೃದ್ಧಿಸುತ್ತದೆ. ನಿರ್ದಿಷ್ಟ ಗುರಿ ಮುಟ್ಟಲು ಶ್ರದ್ಧೆ ಅಗತ್ಯ. ಅಭ್ಯಾಸದಲ್ಲಿ ಪ್ರೀತಿ ಇದ್ದರೆ ಸಹಜವಾಗಿ ನಿಮ್ಮಲ್ಲಿ ಏಕಾಗ್ರತೆ ಕುದುರುತ್ತದೆ. ಉತ್ತರ ಬರೆಯುವಾಗ ವಿವೇಚನೆಯಿಂದ ಬರೆಯಬೇಕು. ನಕಾರಾತ್ಮಕ ಭಾವನೆಯಿಂದ ಮನಸ್ಸು ಕೆಡುತ್ತದೆ ಎಂದು ಹೇಳಿದರು.

ನ್ಯಾಯವಾದಿಗಳು ಹಾಗೂ ಎಸ್.ಡಿ.ಎಂ.ಸಿ. ಉಪಾಧ್ಯಕ್ಷ ಬಿ.ಎಫ್. ಕೋನರಡ್ಡಿ ಅಧ್ಯಕ್ಷತೆ ವಹಿಸಿ ಮಾತನಾಡಿ, ವಿದ್ಯಾರ್ಥಿಗಳು ಪರೀಕ್ಷೆಗಾಗಿ ಈಗಿನಿಂದಲೇ ಸಿದ್ಧರಾಗಬೇಕು. ನಿಮ್ಮಲ್ಲಿರುವ ಕೀಳರಿಮೆ ಬಿಟ್ಟು ಸಕಾರಾತ್ಮಕವಾಗಿ ಪರೀಕ್ಷೆಯನ್ನು ಎದುರಿಸಿ, ವಿದ್ಯಾರ್ಥಿಗಳು ಯಾವುದೇ ರೀತಿ ಆತಂಕಕ್ಕೆ ಒಳಗಾಗಬಾರದು ಎಂದರು.

ಧಾರವಾಡ ಡಿಮ್ಹಾನ್ಸ ಆಸ್ಪತ್ರೆಯ ಮನೋವೈದ್ಯಕೀಯ ಸಮಾಜ ಕಾರ್ಯಕರ್ತ ಪ್ರಶಾಂತ ಪಾಟೀಲ ಕ್ರಮಬದ್ಧ ಅಧ್ಯಯನಕ್ಕಾಗಿ ಅನುಸರಿಸಬೇಕಾದ ಆತ್ಮವಿಶ್ವಾಸ, ಏಕಾಗ್ರತೆ, ಸಮಯಪ್ರಜ್ಞೆ, ಹಾರ್ಡವರ್ಕ ಬದಲು ಸ್ಮಾರ್ಟವರ್ಕ ತಂತ್ರಗಳನ್ನು ಪ್ರಸ್ತುತಪಡಿಸಿದರು.

ವೇದಿಕೆಯಲ್ಲಿ ಎಸ್.ಡಿ.ಎಂ.ಸಿಯ ಸದಸ್ಯ ಚಂದ್ರಣ್ಣ ಕೋನರೆಡ್ಡಿ, ಸಿ.ಜಿ. ಕೋನರೆಡ್ಡಿ, ವಿಲಾಸ್‌ರಡ್ಡಿ ಕೋನರಡ್ಡಿ, ಎನ್.ಆರ್. ಪಾಟೀಲ, ಬಿಇಓ ಕಚೇರಿ ಸಿ.ಇ.ಓ ಭಾಗೀರಥಿ ಮಳಲಿ ಮುಂತಾದವರಿದ್ದರು.

ಮುಖ್ಯಾಧ್ಯಾಪಕ ಡಾ. ಪ್ರಭಾಕರ ಎಸ್. ಲಗಮಣ್ಣನವರ ಸ್ವಾಗತಿಸಿ, ನಿರೂಪಿಸಿದರು. ಶಿಕ್ಷಣ ಮಂಟಪ ಸಂಚಾಲಕ ವೀರಣ್ಣ ಒಡ್ಡೀನ ಪ್ರಾಸ್ತಾವಿಕವಾಗಿ ಮಾತನಾಡಿದರು. ಆರ್. ಎಚ್. ಕೆಳಗೇರಿ ವಂದಿಸಿದರು.

೧೩. ಯಶಸ್ಸಿನ ರಹಸ್ಯವಿರುವುದೇ ಏಕಾಗ್ರತೆಯಲ್ಲಿ. ನಿರಂತರ ಪರಿಶ್ರಮದಿಂದ ವಿದ್ಯಾರ್ಥಿಗಳು ಜೀವನದಲ್ಲಿ ಎಂತಹ ಮಹತ್ಕಾರ್ಯವನ್ನಾದರೂ ಸಾಧಿಸಬಹುದು ಎಂದು ಹುಬ್ಬಳ್ಳಿ ಗ್ರಾಮೀಣ ಕ್ಷೇತ್ರ ಶಿಕ್ಷಣಾಧಿಕಾರಿ ಉಮೇಶ ಬಮ್ಮಕ್ಕನವರ ಅಭಿಪ್ರಾಯಪಟ್ಟರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘದ ಶಿಕ್ಷಣ ಮಂಟಪವು, ಹುಬ್ಬಳ್ಳಿ ತಾಲೂಕಿನ ರಾಯನಾಳದ ಶ್ರೀ ರೇವಣಸಿದ್ಧೇಶ್ವರ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ದಿನಾಂಕ: ೨೩-೧-೨೦೨೪ ರಂದು ಆಯೋಜಿಸಿದ್ದ ಪ್ರಸಕ್ತ ಸಾಲಿನ **ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳಿಗಾಗಿ 'ಅಧ್ಯಯನದಲ್ಲಿ ಏಕಾಗ್ರತೆ ಸಾಧಿಸುವುದು ಹೇಗೆ?' ಉಪನ್ಯಾಸ** ಹಾಗೂ **ಸಂವಾದ ಕಾರ್ಯಕ್ರಮದಲ್ಲಿ** ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ಅವರು, ವಿದ್ಯಾರ್ಥಿಗಳು ದೃಢ ಸಂಕಲ್ಪ, ಸಾಧನೆ ಮಾಡುತ್ತೇನೆಂಬ ಛಲದಿಂದ ಅಧ್ಯಯನ ನಿರತರಾದರೆ ಪರೀಕ್ಷೆಯಲ್ಲಿ ಖಂಡಿತ ಜಯ ಸಾಧಿಸಬಹುದು. ಅನೇಕ ಕೊರತೆಗಳಿದ್ದರೂ ಮಹಾನ್ ವ್ಯಕ್ತಿಗಳು ಮಾಡಿದ ಸಾಧನೆ ವಿದ್ಯಾರ್ಥಿಗಳು ಗಮನಿಸಬೇಕು. ವಿದ್ಯಾರ್ಥಿಗಳು ಪರೀಕ್ಷಾ ಸಮಯದಲ್ಲಿ ಉದ್ವೇಗ ಹಾಗೂ ನಕಾರಾತ್ಮಕ ಭಾವನೆಗೆ ಒಳಗಾಗದೇ ಏಕಾಗ್ರತೆ ಹಾಗೂ ಸಮಯ ಪ್ರಜ್ಞೆಯಿಂದ ಓದಬೇಕು ಎಂದು ಹೇಳಿದರು.

ಪ್ರಾಚಾರ್ಯ ಮಹಾಂತೇಶ ಕೋರಿಶೆಟ್ಟರ ಮಾತನಾಡಿ, ಎಸ್.ಎಸ್.ಎಲ್.ಸಿ. ನಿಮ್ಮ ಮುಂದಿನ ದಾರಿ ನಿರ್ಧರಿಸುವ ಹಂತ. ಪರೀಕ್ಷೆಗಳು ವಿದ್ಯಾರ್ಥಿಗಳಿಗೆ ಜೀವನದ ಪಾಠ ಕಲಿಸುತ್ತವೆ ಎಂದು ಹೇಳಿದರು.

ರಾಯನಾಳ ಗ್ರಾಮ ಪಂಚಾಯತ ಅಧ್ಯಕ್ಷ ರುದ್ರಪ್ಪ ಮೇಟಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಮುಖ್ಯಾಧ್ಯಾಪಕಿ ಶ್ರೀಮತಿ ಡಾ. ರೇಣುಕಾತಾಯಿ ಸಂತಬಾ ಅಧ್ಯಕ್ಷತೆ ವಹಿಸಿ ಮಾತನಾಡಿ, ಗ್ರಾಮೀಣ ಮಕ್ಕಳ ಉತೀರ್ಣತೆ ಪ್ರಮಾಣ ಹೆಚ್ಚಿಸಲು ಕ.ವಿ.ವ. ಸಂಘದ ಈ ಪ್ರಯತ್ನವು ಶ್ಲಾಘನೀಯ. ವಿದ್ಯಾರ್ಥಿಗಳು ಪರೀಕ್ಷೆಯ ಬಗ್ಗೆ ಭಯ ಪಡದೇ ಆತ್ಮವಿಶ್ವಾಸ ಹಾಗೂ ಸಕಾರಾತ್ಮಕತೆಯಿಂದ ಎದುರಿಸಿ ಎಂದು ಹೇಳಿದರು.

೧೪. ನಿರಂತರ ಪ್ರಯತ್ನವೇ ವಿದ್ಯಾರ್ಥಿ ಜೀವನದ ಯಶಸ್ಸಿನ ಗುಟ್ಟು. ಸಾಧಿಸುತ್ತೇನೆಂಬ ಛಲ ಇದ್ದರೆ ಎಂತಹ ಮಹತ್ಕಾರ್ಯವನ್ನಾದರೂ ಮಾಡಬಹುದು ಎಂದು ಕಲಘಟಗಿ ತಾಲೂಕ ಕ್ಷೇತ್ರ ಸಮನ್ವಯಾಧಿಕಾರಿ ಕುಮಾರ್ ಕೆ.ಎಫ್. ಹೇಳಿದರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘದ ಶಿಕ್ಷಣ ಮಂಟಪವು, ಕಲಘಟಗಿ ತಾಲೂಕಿನ ಬೆಲವಂತರ ಸರಕಾರಿ ಪ್ರೌಢ ಶಾಲೆಯಲ್ಲಿ ದಿನಾಂಕ: ೩೧-೧-೨೦೨೪ ರಂದು ಆಯೋಜಿಸಿದ್ದ ಪ್ರಸಕ್ತ ಸಾಲಿನ ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳಿಗಾಗಿ **'ಪರೀಕ್ಷಾಪೂರ್ವ ಸಿದ್ಧತೆ ಹೇಗೆ?'** ಉಪನ್ಯಾಸ ಹಾಗೂ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ಅವರು, ವಿದ್ಯಾರ್ಥಿಗಳು ಬುದ್ಧಿಶಕ್ತಿಯನ್ನು ಉಪಯೋಗಿಸಿಕೊಂಡು ಶ್ರದ್ಧೆ, ಬದ್ಧತೆ ಹಾಗೂ ಉತ್ಸಾಹದಿಂದ ಅಧ್ಯಯನ ಮಾಡಬೇಕು. ಹಾಳು ಹರಟೆ ನಿಮ್ಮ ಮನಸ್ಸಿನ ಶಕ್ತಿ ಕುಂಠಿತಗೊಳಿಸುತ್ತದೆ. ವಿದ್ಯಾರ್ಥಿಗಳು ವಿಷಯದ ಕಡೆ ಚನ್ನಾಗಿ ಗಮನವಿಟ್ಟು ಓದಬೇಕು. ಮಾಡಬೇಕಾದ ಕೆಲಸವನ್ನು ಬಿಟ್ಟು ಉಳಿದೆಲ್ಲಾ ವಿಚಾರಗಳಲ್ಲಿ ತಲೆ ಹಾಕಬಾರದು.

ಅಧ್ಯಯನ ನಿರತರಾದಾಗ ವಿನಾಕಾರಣ ಭಯ, ಆತಂಕ, ಉದ್ವೇಗಕ್ಕೆ ಒಳಗಾಗದೇ ಸಂತೋಷದಿಂದ ಪರೀಕ್ಷೆ ಎದುರಿಸಬೇಕು. ಸಕಾರಾತ್ಮಕ ಚಿಂತನೆಗಳಿಂದ ನಿಮ್ಮ ಅಧ್ಯಯನ ಖಂಡಿತ ಯಶಸ್ವಿಯಾಗುತ್ತದೆ. ಪರೀಕ್ಷಾ ಸಮಯದಲ್ಲಿ ಆರೋಗ್ಯದ ಕಡೆ ಚನ್ನಾಗಿ ಗಮನವಿರಲಿ. ಸಾತ್ವಿಕ ಆಹಾರ ಸೇವನೆಯೊಂದಿಗೆ ಗೃಹ ವೇಳಾಪಟ್ಟಿ ಹಾಕಿಕೊಂಡು ಸಮಯದ ಸದ್ಬಳಕೆ ಮಾಡಿಕೊಂಡು ಅಧ್ಯಯನ ಮಾಡಬೇಕೆಂದು ಹೇಳಿದರು.

ಖ್ಯಾತ ಜಾನಪದ ವಿದ್ವಾಂಸ ಎಂ.ಆರ್. ತೋಟಗಂಟಿ ಮಾತನಾಡಿ, ಎಸ್.ಎಸ್.ಎಲ್.ಸಿ ವಿದ್ಯಾರ್ಥಿ ಜೀವನದ ಮಹತ್ವದ ತಿರುವು. ಅಂಕ ಗಳಿಕೆಯೇ ಜೀವನದ ಪರಮ ಗುರಿ ಅಲ್ಲ. ಒಳ್ಳೆಯ ಜೀವನ ಮೌಲ್ಯಗಳನ್ನು ಕಲಿಯುವುದರಿಂದ ನಿಮ್ಮ ವ್ಯಕ್ತಿತ್ವ ವಿಕಸನವಾಗುತ್ತದೆ. ದೃಢ ಸಂಕಲ್ಪ ಆತ್ಮ ವಿಶ್ವಾಸದಿಂದ ಅಧ್ಯಯನ ಮಾಡಬೇಕು ಎಂದು ಹೇಳಿದರು.

ಅತಿಥಿ ಉಪನ್ಯಾಸಕ ಡಾ. ವೀಣಾ ಬಿರಾದಾರ ಏಕಾಗ್ರತೆಯಿಂದ ಅಧ್ಯಯನ ಮಾಡಲು ಅನುಸರಿಸಬೇಕಾದ ವಿವಿಧ ತಂತ್ರಗಳನ್ನು ಉದಾಹರಣೆ ಸಹಿತ ವಿವರಿಸಿದರು.

ಪ್ರೌಢ ಶಾಲಾ ಎಸ್.ಡಿ.ಎಂ.ಸಿ. ಅಧ್ಯಕ್ಷ ಕಲ್ಲಪ್ಪ ಬಸನಕೊಪ್ಪ ಅಧ್ಯಕ್ಷತೆ ವಹಿಸಿದ್ದರು. ಮುಖ್ಯಾಧ್ಯಾಪಕರಾದ ಲಂಬೋಧರ್ ಉಪಾಧ್ಯ ಮಾತನಾಡಿದರು. ಮಹಾದೇವಪ್ಪ ಬಸನಕೊಪ್ಪ ವೇದಿಕೆಯಲ್ಲಿದ್ದರು.

ಜಯರಾಜ ಗೊಳಸಂಗಿ ಸ್ವಾಗತಿಸಿದರು. ಕ.ವಿ.ವ. ಸಂಘದ ಶಿಕ್ಷಣ ಮಂಟಪದ ಸಂಚಾಲಕ ವೀರಣ್ಣ ಒಡ್ಡೀನ ಪ್ರಾಸ್ತಾವಿಕವಾಗಿ ಮಾತನಾಡಿದರು. ಅಕ್ಕಪ್ಪ ಕುರಣಿ ನಿರೂಪಿಸಿದರು. ಶೀತಲ್ ಝುಳ್ಕಿ ವಂದಿಸಿದರು. ಶಿಲ್ಪಾ ಕವರಿ, ಯೋಗೇಶ ನಾಯಕ, ಪ್ರೇಮಾ ದೇವಳೆ, ಐಶ್ವರ್ಯ ಅಂಗಡಿ ಸೇರಿದಂತೆ ವಿದ್ಯಾರ್ಥಿಗಳು ಶಿಕ್ಷಕೇತರರು ಇದ್ದರು.

ಧಾರವಾಡ ಡಿಮ್ಹಾನ್ಸನ ಮನೋ ವೈದ್ಯಕೀಯ ಸಮಾಜ ಕಾರ್ಯಕರ್ತ ಪ್ರಶಾಂತ ಪಾಟೀಲ ಅಧ್ಯಯನದಲ್ಲಿ ಏಕಾಗ್ರತೆ ಸಾಧಿಸುವ ತಂತ್ರ ಹಾಗೂ ಕ್ರಮಬದ್ಧ ಅಧ್ಯಯನದ ಬಗ್ಗೆ ಉಪನ್ಯಾಸ ನೀಡಿದರು.

ವೇದಿಕೆಯಲ್ಲಿ ಶಿಕ್ಷಣ ಸಂಯೋಜಕ ಆರ್.ಬಿ. ಪಾಟೀಲ, ಶಿವಾನಂದ ಹರಕುಣಿ, ಎಂ.ಎಸ್. ನರೇಗಲ್ ಇದ್ದರು. ಜಯಪ್ಪ ಕುದರಿಹಾಳ ಸ್ವಾಗತಿಸಿದರು. ಶಿಕ್ಷಣ ಮಂಟಪ ಸಂಚಾಲಕ ವೀರಣ್ಣ ಒಡ್ಡೀನ ಪ್ರಾಸ್ತಾವಿಕವಾಗಿ ಮಾತನಾಡಿದರು. ರಾಘವೇಂದ್ರ ಎಂ.ಆರ್.ವಂದಿಸಿದರು. ಪ್ರತಿಭಾ ಹೂಗಾರ ನಿರೂಪಿಸಿದರು.

**೧೫.** ಪುನರಾವರ್ತನೆ ಜ್ಞಾಪಕ ಶಕ್ತಿ ಹೆಚ್ಚಿಸುವ ಪ್ರಭಲ ಆಯುಧ. ಪುನಃ ಪುನಃ ಓದುವುದು ಹಾಗೂ ಬರೆಯುವುದರಿಂದ ಸ್ಮರಣಶಕ್ತಿ ಹೆಚ್ಚುವುದು ಎಂದು ಹುಬ್ಬಳ್ಳಿ ಗ್ರಾಮೀಣ ಕ್ಷೇತ್ರ ಸಮನ್ವಯಾಧಿಕಾರಿ ಸಂತೋಷ ದಂಡಗಲ್ ಅಭಿಪ್ರಾಯಪಟ್ಟರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘದ ಶಿಕ್ಷಣ ಮಂಟಪವು, ಹುಬ್ಬಳ್ಳಿ ತಾಲೂಕಿನ ಭೈರಿದೇವರಕೊಪ್ಪದ ಶ್ರೀ ಜಗದ್ಗುರು ಶಿವಾನಂದ ಪ್ರೌಢ ಶಾಲೆಯಲ್ಲಿ ದಿನಾಂಕ: ೫-೨-೨೦೨೪ ರಂದು ಆಯೋಜಿಸಿದ್ದ ಪ್ರಸಕ್ತ ಸಾಲಿನ **ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳಿಗಾಗಿ 'ಪರೀಕ್ಷಾಪೂರ್ವ ಸಿದ್ಧತೆ ಹೇಗೆ?' ಕುರಿತು ಉಪನ್ಯಾಸ** ಹಾಗೂ **ಸಂವಾದ ಕಾರ್ಯಕ್ರಮ** ಉದ್ಘಾಟಿಸಿ ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ಅವರು, ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಲು ಆಳವಾದ ಅಧ್ಯಯನ ಮುಖ್ಯ. ಪರೀಕ್ಷೆಗಳು ವಿದ್ಯಾರ್ಥಿಗಳ ಸಾಮರ್ಥ್ಯ ಅಳೆಯುವ ಅಳತೆಗೋಲು. ಓದುವುದು ಎಷ್ಟು ಮುಖ್ಯವೋ ಬರವಣಿಗೆಯೂ ಅಷ್ಟೇ ಮುಖ್ಯ. ಶ್ರದ್ಧೆ ಹಾಗೂ ಆತ್ಮ ವಿಶ್ವಾಸಗಳಿದ್ದರೆ ಜೀವನದಲ್ಲಿ ಎಂತಹ ಮಹತ್ಕಾರ್ಯವನ್ನಾದರೂ ಸಾಧಿಸಬಹುದು. ಸಮಯ ಪರಿಪಾಲನೆಯೊಂದಿಗೆ ವಿದ್ಯಾರ್ಥಿಗಳು ಅಧ್ಯಯನಶೀಲರಾಗಬೇಕೆಂದರು.

ಅತಿಥಿಯಾಗಿ ಕ.ವಿ.ವ. ಸಂಘದ ಕೋಶಾಧ್ಯಕ್ಷ ಸತೀಶ ತುರಮರಿ ಮಾತನಾಡಿ, ವಿದ್ಯಾರ್ಜನೆ ಒಂದು ತಪಸ್ಸು ಇದ್ದಂತೆ. ಕೀಳರಿಮೆ ಬಿಟ್ಟು ಹೆಚ್ಚು ಅಂಕ ಗಳಿಸುವ ಸಾಮರ್ಥ್ಯ ನನ್ನಲ್ಲಿದೆ ಎಂಬ ಭಾವನೆ ವಿದ್ಯಾರ್ಥಿಗಳಲ್ಲಿ ಬರಬೇಕು. ನಿರ್ದಿಷ್ಟ ಗುರಿಯೊಂದಿಗೆ ಅಭ್ಯಾಸ ಮಾಡಲು ಕಿವಿಮಾತು ಹೇಳಿದರು.

ಅತಿಥಿ ಉಪನ್ಯಾಸಕರಾದ ಪ್ರೊ. ನಾಗರಾಜ ಶಿರೂರ ಕ್ರಮಬದ್ಧ ಅಧ್ಯಯನದ ವಿವಿಧ ತಂತ್ರಗಳ ಬಗ್ಗೆ ಉಪನ್ಯಾಸ ನೀಡಿದರು.

ಜಗದ್ಗುರು ಶ್ರೀ ಶಿವಾನಂದ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಆರ್.ಬಿ. ಗುಂಡೂರ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ ಉಪಸ್ಥಿತರಿದ್ದ ಮುಖ್ಯಾಧ್ಯಾಪಕರಾದ ಪಿ.ಎನ್. ಬಾಳಪ್ಪಗೌಡ್ರ ಶಿಕ್ಷಣ ಸಂಯೋಜಕರಾದ ಆರ್.ಬಿ. ಪಾಟೀಲ, ವಾಯ್.ಡಿ. ಮದ್ದಿಯವರ್ ಮಾತನಾಡಿದರು. ಎಸ್.ಎಸ್. ಗೋವಿಂದರಡ್ಡಿ ಸ್ವಾಗತಿಸಿದರು. ಶಿಕ್ಷಣ ಮಂಟಪದ ಸಂಚಾಲಕ ವೀರಣ್ಣ ಒಡ್ಡೀನ ಪ್ರಾಸ್ತಾವಿಕವಾಗಿ ಮಾತನಾಡಿದರು. ಜಿ.ಜಿ. ಪಾಟೀಲ ನಿರೂಪಿಸಿದರು. ರಾಯನಗೌಡ ಪಾಟೀಲ ವಂದಿಸಿದರು.

**೧೬.** ಮನಸ್ಸಿನ ಏಕಾಗ್ರತೆಗೆ ಅಭ್ಯಾಸ ಬಲ ಅಗತ್ಯ. ಬುದ್ಧಿ ಉಪಯೋಗಿಸಿ ಕ್ರಮಬದ್ಧವಾದ ಅಧ್ಯಯನ ಮಾಡಿದರೆ ಯಶಸ್ಸು ಖಂಡಿತ ನಿಮ್ಮದಾಗುವುದು ಎಂದು ಖ್ಯಾತ ಜಾನಪದ ವಿದ್ವಾಂಸ ಮಲ್ಲಯ್ಯಸ್ವಾಮಿ ತೋಟಗಂಟಿ ಅಭಿಪ್ರಾಯಪಟ್ಟರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘದ ಶಿಕ್ಷಣ ಮಂಟಪವು, ಕಲಘಟಗಿ ತಾಲೂಕಿನ ಹಿರೇಹೊನ್ನಿಹಳ್ಳಿಯ ಸರಕಾರಿ ಪ್ರೌಢ ಶಾಲೆಯಲ್ಲಿ ದಿನಾಂಕ: ೭-೨-೨೦೨೪ ರಂದು ಆಯೋಜಿಸಿದ್ದ ಪ್ರಸಕ್ತ ಸಾಲಿನ **ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳಿಗಾಗಿ 'ಪರೀಕ್ಷಾಪೂರ್ವ ಸಿದ್ಧತೆ ಹೇಗೆ?' ಕುರಿತು ಉಪನ್ಯಾಸ** ಹಾಗೂ **ಸಂವಾದ ಕಾರ್ಯಕ್ರಮ** ಉದ್ಘಾಟಿಸಿ ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ಅವರು, ಅಧ್ಯಯನ ನಿರತರಾದಾಗ ಹಾಳು ಹರಟೆ ಸಲ್ಲದು. ದೃಢತೆ ಹಾಗೂ ಸಂಕಲ್ಪ ಶಕ್ತಿಯಿಂದ ಓದಿದರೆ ಉನ್ನತ ಶ್ರೇಣಿಯಲ್ಲಿ ಪಾಸಾಗಬಹುದು. ಕಂಠಪಾಠ ಮಾಡದೇ ಅರ್ಥಮಾಡಿಕೊಂಡು ಓದಬೇಕು. ಇದರಿಂದ ವಿಷಯದ ಗ್ರಹಿಕೆ ಆಗುವುದು. ಪಾಸಾಗಲು ವಿದ್ಯಾರ್ಥಿಗಳು ಅಡ್ಡದಾರಿ ಹಿಡಿಯಬಾರದು. ಓದುವ ಹಸಿವು ಹಾಗೂ ಹಂಬಲ ಇದ್ದರೆ ಏಕಾಗ್ರತೆ ತಾನೆ ಬರುತ್ತದೆ ಎಂದು ಹೇಳಿದರು.

ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಡಾ. ಮಹೇಶ ಹೊರಕೇರಿ ಮಾತನಾಡಿ, ವಿದ್ಯಾರ್ಥಿಗಳಿಗೆ ಆತ್ಮವಿಶ್ವಾಸವಿರಬೇಕು. ಆದರೆ ಅತಿಯಾದ ಆತ್ಮವಿಶ್ವಾಸ ಇರಬಾರದು. ಕೀಳರಿಮೆ ಬಿಟ್ಟು ಅಧ್ಯಯನ ಮಾಡಬೇಕು. ಸಾಧನೆ ಮಾಡೇ ಮಾಡುತ್ತೇನೆಂಬ ಛಲ ನಿಮ್ಮಲ್ಲಿರಲಿ ಎಂದು ಹೇಳಿದರು.

ಶಿಕ್ಷಣ ಮಂಟಪದ ಸಂಚಾಲಕ ವೀರಣ್ಣ ಒಡ್ಡೀನ ಉಪನ್ಯಾಸ ನೀಡಿ, ವಿದ್ಯಾರ್ಥಿಗಳು ಪ್ರಾರಂಭದಿಂದಲೇ ಅಧ್ಯಯನ ಮಾಡಿದರೆ ಯಾವುದೇ ರೀತಿ ಭಯ ಆತಂಕ ಉಂಟಾಗುವುದಿಲ್ಲ. ಗೃಹ ವೇಳಾಪಟ್ಟಿ ಹಾಕಿಕೊಂಡು ಸಮಯದ ಸದ್ಬಳಕೆ ಮಾಡಿ ಓದಬೇಕು. ಅವಿಶ್ರಾಂತವಾಗಿ ಓದಬಾರದು. ಆರೋಗ್ಯದ ಕಡೆ ಗಮನವಿರಬೇಕು. ಪುನಃ ಪುನಃ ಓದುವುದರಿಂದ ಜ್ಞಾಪಕ ಶಕ್ತಿ ವೃದ್ಧಿಸುತ್ತದೆ. ಪರೀಕ್ಷೆ ಶಿಕ್ಷೆ ಎಂದು ಭಾವಿಸಬಾರದು. ಹಬ್ಬದಂತೆ ವಿಜ್ರಂಭಿಸಿ ಆತ್ಮವಿಶ್ವಾಸ ಬದ್ಧತೆಯಿಂದ ಓದಿರಿ ಎಂದು ಹೇಳಿದರು.

ಪ್ರೌಢ ಶಾಲೆಯ ಎಸ್.ಡಿ.ಎಂ.ಸಿ ಅಧ್ಯಕ್ಷ ನಿಂಗಪ್ಪ ಬೆಳ್ಳಿವಾಲೆ ಅಧ್ಯಕ್ಷತೆ ವಹಿಸಿ ಮಾತನಾಡಿ, ವಿದ್ಯಾರ್ಥಿಗಳು ಕರ್ತವ್ಯ ಪ್ರಜ್ಞೆಯಿಂದ ಅಧ್ಯಯನ ಮಾಡಿ, ಶಾಲೆಗೆ, ಗ್ರಾಮಕ್ಕೆ, ನಿಮ್ಮ ಕುಟುಂಬಕ್ಕೆ ಗೌರವ ತರಬೇಕು ಎಂದು ಹೇಳಿದರು. ಶೌಕತ್ ಶೇಖ್ ಸ್ವಾಗತಿಸಿದರು. ಜಯಶ್ರೀ ಚೂರಿ ನಿರೂಪಿಸಿದರು. ಮಹಾಂತೇಶ ನೇಮತಿ ಪ್ರಾಸ್ತಾವಿಸಿದರು.

೧೭. ವಿದ್ಯಾರ್ಥಿಗಳಲ್ಲಿ ದೃಢ ಸಂಕಲ್ಪ ಹಾಗೂ ಸಾಧಿಸುತ್ತೇನೆಂಬ ಛಲವಿದ್ದರೆ ಜೀವನದಲ್ಲಿ ಎಂತಹ ಮಹತ್ಕಾರ್ಯವನ್ನಾದರೂ ಸಾಧಿಸಬಹುದು. ಸಾಧನೆಗೆ ಆತ್ಮ ವಿಶ್ವಾಸವೂ ಅಗತ್ಯ ಎಂದು ನರಗುಂದ ತಾಲೂಕ ಕ್ಷೇತ್ರ ಶಿಕ್ಷಣಾಧಿಕಾರಿ ಡಾ. ಗುರುನಾಥ ಹೂಗಾರ ಅಭಿಪ್ರಾಯಪಟ್ಟರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘದ ಶಿಕ್ಷಣ ಮಂಟಪವು, ನರಗುಂದದ ಸರಕಾರಿ ಬಾಲಕರ ಪ್ರೌಢ ಶಾಲೆಯಲ್ಲಿ ದಿನಾಂಕ: ೧೬-೨-೨೦೨೪ ರಂದು ಆಯೋಜಿಸಿದ್ದ ಪ್ರಸಕ್ತ ಸಾಲಿನ **ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳಿಗಾಗಿ 'ಪರೀಕ್ಷಾಪೂರ್ವ ಸಿದ್ಧತೆ ಹಾಗೂ ಅಧ್ಯಯನದಲ್ಲಿ ಏಕಾಗ್ರತೆ'** ಕುರಿತು **ಉಪನ್ಯಾಸ ಹಾಗೂ ಸಂವಾದ** ಕಾರ್ಯಕ್ರಮ ಉದ್ಘಾಟಿಸಿ ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ಅವರು, ಪ್ರತಿಯೊಬ್ಬ ವಿದ್ಯಾರ್ಥಿಗಳಲ್ಲಿ ಅದಮ್ಯ ಶಕ್ತಿ ಇರುತ್ತದೆ. ನಿಮ್ಮ ಶಕ್ತಿಯ ಬಗ್ಗೆ ನಿಮಗೆ ನಂಬಿಕೆ ಇರಬೇಕು. ಪರೀಕ್ಷೆಯಲ್ಲಿ ಯಶಸ್ಸು ಸುಮ್ಮನೆ ಬರದು, ಅದಕ್ಕೆ ನಿರಂತರ ಪ್ರಯತ್ನ ಹಾಗೂ ಶ್ರದ್ಧೆ, ಬದ್ಧತೆ ಮುಖ್ಯ. ಅಧ್ಯಯನ ನಿರತರಾದಾಗ ನಕಾರಾತ್ಮಕ ಭಾವನೆಗಳಿಗೆ ಅವಕಾಶ ನೀಡಬಾರದು. ಅದು ನಿಮ್ಮ ಶಕ್ತಿಯನ್ನು ಕುಗ್ಗಿಸುತ್ತದೆ. ಕ್ರಮಬದ್ಧ ಅಧ್ಯಯನದಿಂದ ಏಕಾಗ್ರತೆ ಲಭಿಸಲು ಸಾಧ್ಯ ಎಂದು ಹೇಳಿದರು.

ಕ.ವಿ.ವ. ಸಂಘದ ಶಿಕ್ಷಣ ಮಂಪಟದ ಸಂಚಾಲಕ ವೀರಣ್ಣ ಒಡ್ಡೀನ ಪ್ರಾಸ್ತಾವಿಕವಾಗಿ ಮಾತನಾಡಿ, ವಿದ್ಯಾರ್ಥಿಗಳಿಗೆ ಅಭ್ಯಾಸದ ಬಗ್ಗೆ ಹಸಿವು ಹಾಗೂ ಹಂಬಲ ಮುಖ್ಯ. ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಬಲ್ಲೆ ಆ ಸಾಮರ್ಥ್ಯ ನನ್ನಲ್ಲಿದೆ ಎಂಬ ಭಾವನೆ ಮುಖ್ಯ. ಎಸ್.ಎಸ್.ಎಲ್.ಸಿ. ವಿದ್ಯಾರ್ಥಿ ಜೀವನದ ಒಂದು ಮಹತ್ವದ ತಿರುವು. ಅದು ನಿಮ್ಮ ಮುಂದಿನ ಭವಿಷ್ಯ ನಿರ್ಧರಿಸುತ್ತದೆ. ಅರ್ಥ ಮಾಡಿಕೊಂಡು ಓದುವುದರಿಂದ ನಿಮ್ಮಲ್ಲಿ ಜ್ಞಾಪಕ ಶಕ್ತಿ ಹೆಚ್ಚುತ್ತದೆ. ಓದಿದ್ದನ್ನು ಸಾರಾಂಶ ರೂಪದಲ್ಲಿ ಬರೆಯುವುದರಿಂದ ಸ್ಮರಣ ಶಕ್ತಿ ಕುದುರುವುದು ಎಂದು ಹೇಳಿದರು.

ಧಾರವಾಡದ ಹೊಂಬೆಳಕು ಪ್ರತಿಷ್ಠಾನದ ಅಧ್ಯಕ್ಷೆ ಡಾ. ವೀಣಾ ಬಿರಾದಾರ ಉಪನ್ಯಾಸ ನೀಡಿ, ಪರೀಕ್ಷಾ ಸಂದರ್ಭದಲ್ಲಿ ಕ್ರಮಬದ್ಧ ಅಧ್ಯಯನ ಮುಖ್ಯ. ಪುನರಾವರ್ತನೆ, ಗುಂಪು ಚರ್ಚೆ ಮಾಡುವುದರಿಂದ ವಿಷಯದ ಗ್ರಹಿಕೆ ಹೆಚ್ಚಾಗುತ್ತದೆ. ಕಂಠ ಪಾಠ ಮಾಡಕೂಡದು. ಸಮಯ ಪರಿಪಾಲನೆ, ಕರ್ತವ್ಯ ಪ್ರಜ್ಞೆ ಪ್ರಾಮಾಣಿಕತೆ ಸತತಾಭ್ಯಾಸದಿಂದ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಲುಬಹುದು. ಸಾತ್ವಿಕ ಆಹಾರ ಸೇವನೆ, ಅಲ್ಪ ವಿಶ್ರಾಂತಿಯೂ ಮುಖ್ಯ. ವಿದ್ಯಾರ್ಥಿಗಳಿಗೆ ಓದುವುದು ಎಷ್ಟು ಮುಖ್ಯವೋ ಬರವಣಿಗೆಯೂ ಅಷ್ಟೇ ಮುಖ್ಯ ಎಂಬುದನ್ನು ತಿಳಿಯಬೇಕು. ಪರೀಕ್ಷೆಯ ಬಗ್ಗೆ ಭಯಪಡದೇ ಹಬ್ಬದಂತೆ ವಿಜ್ರಂಭಿಸಬೇಕು ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಉಪ ಪ್ರಾಚಾರ್ಯ ಎಸ್.ಬಿ. ಹರಪನಹಳ್ಳಿ ಮಾತನಾಡಿ, ವಿದ್ಯಾರ್ಥಿಗಳಲ್ಲಿ ಪರೀಕ್ಷೆಯ ಬಗ್ಗೆ ಆತ್ಮವಿಶ್ವಾಸ ಹೆಚ್ಚಿಸಲು ಧಾರವಾಡದ ಕ.ವಿ.ವ. ಸಂಘದ ಈ ಪ್ರಯತ್ನ ಅಭಿನಂದನೀಯ. ವಿದ್ಯಾರ್ಥಿಗಳು ಹೆಚ್ಚು ಅಂಕ ಗಳಿಸಲು ಬೇಕಾದ ವಿವಿಧ ಆಯಾಮಗಳು ಅರ್ಥ ಮಾಡಿಕೊಳ್ಳಬೇಕು ಎಂದು ಹೇಳಿದರು.

ವೇದಿಕೆಯಲ್ಲಿ ಬಿ.ಇ.ಓ ಕಚೇರಿಯ ಶಿಕ್ಷಣ ಸಂಯೋಜಕ ಡಾ. ಎಂ.ಎಚ್. ಚೂರಿ, ಎಸ್.ಎಸ್. ಸಜ್ಜನರ, ಮಾಧ್ಯಮಿಕ ಶಾಲಾ ನೌಕರರ ಸಂಘದ ಅಧ್ಯಕ್ಷ, ಮುಖ್ಯಾಧ್ಯಾಪಕ ಝಡ್. ಎಂ. ಖಾಜಿ, ಶಿಕ್ಷಣಾಧಿಕಾರಿಗಳ ಸಂಘದ ಅಧ್ಯಕ್ಷ, ಮುಖ್ಯಾಧ್ಯಾಪಕ ಪಿ.ಸಿ. ಕಲಹಾಳ ಸೇರಿದಂತೆ ಮುಂತಾದವರಿದ್ದರು.

ಎಫ್.ಎಂ. ಹಾಡಕಾರ ಸ್ವಾಗತಿಸಿದರು. ಎಸ್.ಜಿ. ಮಣ್ಣೂರಮಠ ನಿರೂಪಿಸಿದರು. ಆರ್.ಎಸ್. ಗೆಜ್ಜಿ ವಂದಿಸಿದರು. ವಿವಿಧ ಶಾಲೆಗಳ ಸುಮಾರು ೨೦೦ ವಿದ್ಯಾರ್ಥಿಗಳು ಶಿಕ್ಷಕರು ಸೇರಿದಂತೆ ಇತರರು ಇದ್ದರು.

೧೮. ವಿದ್ಯಾರ್ಥಿಗಳು ಅಧ್ಯಯನ ನಿರತರಾದಾಗ ಬೇಸರ ಹಾಗೂ ಜಡತ್ವದಿಂದ ಮುಕ್ತರಾಗಬೇಕು. ಆಳವಾದ ಅಧ್ಯಯನದಿಂದ ಮಾತ್ರ ಪರೀಕ್ಷೆಯಲ್ಲಿ ಯಶಸ್ಸು ಸಾಧಿಸಬಹುದು ಎಂದು ಧಾರವಾಡದ ಹೊಂಬೆಳಕು ಪ್ರತಿಷ್ಠಾನದ ಅಧ್ಯಕ್ಷರಾದ ಡಾ. ವೀಣಾ ಬಿರಾದಾರ ಅಭಿಪ್ರಾಯಪಟ್ಟರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘದ ಶಿಕ್ಷಣ ಮಂಟಪವು, ತಾಲೂಕಿನ ಉಪ್ಪಿನ ಬೆಟಗೇರಿ ಎಂ.ಜಿ. ಹಳವೂರ ಉರ್ದು ಪ್ರೌಢ ಶಾಲೆಯಲ್ಲಿ ಆಯೋಜಿಸಿದ್ದ ಪ್ರಸಕ್ತ ಸಾಲಿನ **ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳಿಗಾಗಿ 'ಪರೀಕ್ಷಾಪೂರ್ವ ಸಿದ್ಧತೆ ಹಾಗೂ ಅಧ್ಯಯನದಲ್ಲಿ ಏಕಾಗ್ರತೆ'** ಕುರಿತು **ಉಪನ್ಯಾಸ ಹಾಗೂ ಸಂವಾದ ಕಾರ್ಯಕ್ರಮ** ಉದ್ಘಾಟಿಸಿ ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ಅವರು, ವಿನಾಕಾರಣ ವಿದ್ಯಾರ್ಥಿಗಳು ಪರೀಕ್ಷೆ ಬಗ್ಗೆ ಭಯ ಹಾಗೂ ಉದ್ವೇಗ ಪಡಬಾರದು. ಅದು ವಿದ್ಯಾರ್ಥಿಯಲ್ಲಿಯ ಶಕ್ತಿಯನ್ನು ಕುಂಠಿಸುತ್ತದೆ. ಹಾರ್ಡವರ್ಕ್ ಬದಲಾಗಿ ವಿದ್ಯಾರ್ಥಿಗಳು ಸ್ಮಾರ್ಟವರ್ಕ ಮಾಡುವುದು ಲೇಸು. ನಿಮ್ಮ ಶಕ್ತಿಯ ಬಗ್ಗೆ ನಂಬಿಕೆ ಹಾಗೂ ಆತ್ಮವಿಶ್ವಾಸ ಇರಬೇಕು. ಪೂರ್ವಸಿದ್ಧತೆ ಚನ್ನಾಗಿದ್ದರೆ ಮಾತ್ರ ಹೆಚ್ಚು ಅಂಕಗಳನ್ನು ಗಳಿಸಲು ಸಾಧ್ಯ. ಪುನರಾವರ್ತನೆಯಿಂದ ವಿಷಯದ ಗ್ರಹಿಕೆ ಹೆಚ್ಚುವುದು ಎಂದರು.

ಕ.ವಿ.ವ. ಸಂಘದ ಪ್ರಧಾನ ಕಾರ್ಯದರ್ಶಿ ಶಂಕರ ಹಲಗತ್ತಿ ಮಾತನಾಡಿ, ವಿದ್ಯಾರ್ಥಿಗಳು ಸಿಕ್ಕ ಸಮಯವನ್ನು ಸದುಪಯೋಗಪಡಿಸಿಕೊಂಡು ಅಧ್ಯಯನ ಮಾಡಬೇಕು. ಸಾಧನೆ ಮಾಡಲು ಛಲ ಮತ್ತು ಆತ್ಮವಿಶ್ವಾಸ ಮುಖ್ಯ. ಚಂಚಲ ಚಿತ್ತವಾದ ಮನಸ್ಸನ್ನು ಒಮ್ಮುಖಗೊಳಿಸಿ ಅಧ್ಯಯನ ನಿರತರಾಗಬೇಕು. ನಿಮಗಾಗಿ ಏನೆಲ್ಲಾ ತ್ಯಾಗ ಮಾಡುತ್ತಿರುವ ಶಾಲಾ ಆಡಳಿತ ಮಂಡಳಿ, ಗುರುಗಳು ಹಾಗೂ ತಂದೆ-ತಾಯಿಗಳ ಶ್ರಮ ಸಾರ್ಥಕವಾಗುವಂತೆ ಅಧ್ಯಯನ ಮಾಡಬೇಕು ಎಂದು ತಿಳಿಸಿದರು.

ಆಝಾದ ಎಜ್ಯುಕೇಶನ್ ಸೊಸೈಟಿಯ ಕಾರ್ಯದರ್ಶಿ ಅಬ್ದುಲ್‌ರಹಮಾನ್ ಜೋರಮ್ಮನವರ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ಕರ್ನಾಟಕ ವಿದ್ಯಾವರ್ಧಕ ಸಂಘದ ಶಿಕ್ಷಣ ಮಂಟಪವು ಗ್ರಾಮೀಣ ಮಕ್ಕಳಿಗಾಗಿ ಆಯೋಜಿಸಿದ ಪರೀಕ್ಷಾ ಪೂರ್ವ ಸಿದ್ಧತಾ ಕಾರ್ಯಕ್ರಮವು ಅಭಿನಂದನೀಯ. ನಿರ್ದಿಷ್ಟ ಗುರಿಯೊಂದಿಗೆ ಗುರುಗಳ ಮಾರ್ಗದರ್ಶನದಲ್ಲಿ ಯಶಸ್ಸು ನಿಮ್ಮದಾಗಿಸಿಕೊಳ್ಳಬೇಕು ಎಂದು ಹೇಳಿದರು.

ಆಝಾದ ಎಜ್ಯುಕೇಶನ್ ಸೊಸೈಟಿಯ ಪದಾಧಿಕಾರಿ ಅಜೀಂ ಕರಡಿಗುಡ್ಡ ಅಧ್ಯಕ್ಷತೆ ವಹಿಸಿದ್ದರು. ಡೈಟ್ ನಿವೃತ್ತ ಶಿಕ್ಷಕ ಜಮೀರ ಅಹಮ್ಮದ ದಿಲಶಾದ್, ಪತ್ರಕರ್ತ ಚನಬಸಪ್ಪ ಲಗಮಣ್ಣವರ, ಪ್ರೊ. ವೀರನಗೌಡ ಮರಿಗೌಡ್ರ, ಮಹಮ್ಮದ ಮುನ್ನಾಸಾಹೇಬ ವೇದಿಕೆಯಲ್ಲಿದ್ದು ಮಾತನಾಡಿದರು.

ಪ್ರಾರಂಭದಲ್ಲಿ ಶಾಲೆಯ ವಿದ್ಯಾರ್ಥಿಗಳು ಪ್ರಾರ್ಥಿಸಿದರು. ಮುಖ್ಯಾಧ್ಯಾಪಕರಾದ ವಾಯ್.ಎಚ್. ಜೋರಮ್ಮನವರ ಸ್ವಾಗತಿಸಿದರು. ಕ.ವಿ.ವ. ಸಂಘದ ಶಿಕ್ಷಣ ಮಂಟಪದ ಸಂಚಾಲಕ ವೀರಣ್ಣ ಒಡ್ಡೀಣ ಪ್ರಾಸ್ತಾವಿಕವಾಗಿ ಮಾತನಾಡಿದರು. ಎ.ಎ. ಕಿಲ್ಲೇದಾರ ನಿರೂಪಿಸಿದರು. ಎಂ.ಎಂ. ಕೊಹಲಿ ವಂದಿಸಿದರು.

### ೪. ಕಾನೂನು ಮಂಟಪ: ಸಂಚಾಲಕರು, ಶ್ರೀ ಗುರು ಹಿರೇಮಠ

೧. ರಾಜಕಾರಣ ಎಂದರೆ ಅಧಿಕಾರ ದಾಹ, ಹಣಬಲ ಹೊಂದಿದ ವ್ಯಕ್ತಿಗಳ ಸಂಘ ಎಂದಾಗಿರುವ ಸಂದರ್ಭದಲ್ಲಿ ಸಮಗ್ರ ಅಧ್ಯಯನದ ಜೊತೆ ರಾಜಕಾರಣಕ್ಕೆ ಮೇಧಾವಿ, ತತ್ವ ಸಿದ್ಧಾಂತ ಹೊಂದಿದ ಜನರು ಹೆಚ್ಚಾಗಿ ಬರಬೇಕು ಎಂದು ಸರಕಾರಿ ವಿಶೇಷ ಅಭಿಯೋಜಕರಾದ(CBI) ಎಸ್.ಎಸ್. ಶಿವಳ್ಳಿ ಖೇದ ವ್ಯಕ್ತಪಡಿಸಿದರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘದ ಕಾನೂನು ಮಂಟಪವು ದಿನಾಂಕ: ೧೬-೧೦-೨೦೨೩ ರಂದು ಆಯೋಜಿಸಿದ್ದ 'ನಾಗರಿಕ ಕರ್ತವ್ಯ, ರಾಜಕೀಯ ಅಧಿಕಾರ ಹಾಗೂ ನೈತಿಕ ಮೌಲ್ಯಗಳು' ವಿಷಯ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಅತಿಥಿ ಉಪನ್ಯಾಸಕರಾಗಿ ಮಾತನಾಡುತ್ತಿದ್ದರು.




ಮುಂದುವರೆದು ಮಾತನಾಡಿದ ಅವರು, ಪ್ರಸ್ತುತ ದಿನಮಾನಗಳಲ್ಲಿ ಅಧಿಕಾರ ದುರುಪಯೋಗ ಮಾಡಿಕೊಳ್ಳುವ ರಾಜಕಾರಣಿಗಳ ಸಂಖ್ಯೆ ವಿಪರೀತವಾಗಿದೆ. ರಾಜಕಾರಣಿಗಳಿಗೆ ಅಧ್ಯಾತ್ಮದ ಒಲುವು ಇದ್ದರೆ ಮಾತ್ರ ಸಮೃದ್ಧ ಸಮಾಜ ಕಟ್ಟಲು ಸಾಧ್ಯ. ಸಾರ್ವಜನಿಕ ಸಭೆ ಸಮಾರಂಭಗಳಲ್ಲಿ ಬಳಸುವ ಪದ ಬಳಕೆಯಿಂದ ಎಚ್ಚರ ಇರಬೇಕು. ಮನಸ್ಸಿಗೆ ತೋಚುವ ಹಾಗೆ ಮಾತನಾಡಿದರೆ ನಾಗರಿಕರ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ. ರಾಜಕೀಯಕ್ಕೆ ಬರುವವರಿಗೆ ತಮ್ಮದೇ ಆದ ಕಾನೂನು ನೀತಿ, ನಿಯಮ, ತತ್ವ ಸಿದ್ಧಾಂತ ರೂಪಿಸಿಕೊಳ್ಳಬೇಕು. ಅಂದಾಗ ಮಾತ್ರ ಸಜ್ಜನರು ಯಾವುದೇ ಪಕ್ಷಕ್ಕೆ ಬರಲು ಸಾಧ್ಯವಾಗುತ್ತದೆ.

ಗ್ಯಾರಂಟಿಗಳ ಯೋಜನೆಯಲ್ಲಿ ಸರಕಾರದ ಧೋರಣೆ ಸಮರ್ಪಕವಲ್ಲ. ಸರಕಾರದ ಖರ್ಚಿನಲ್ಲಿಯೇ ವಿಲಾಸಿ ಜೀವನ ನಡೆಸಬೇಕು ಎಂಬ ಧೋರಣೆ ರಾಜಕಾರಣಿಗಳ ನಡೆಯಾಗಬಾರದು. ಜನರು ಈ ಕುರಿತು ಜಾಗೃತಿ ವಹಿಸಬೇಕು ಎಂದರು.

ವಕೀಲತಿ ಶ್ರೀಮತಿ ಮಹಾನಂದಾ ಮುದೇನಗುಡಿ ಮಾತನಾಡಿ, ಸಂವಿಧಾನ ಹಕ್ಕುಗಳನ್ನು ಕೇಳುವ ನಾಗರಿಕರು ತಮ್ಮ ಕರ್ತವ್ಯಗಳನ್ನು ಸಹ ಚಾಚು ತಪ್ಪದೆ ಪಾಲಿಸಬೇಕೆಂದರು.

ಚಂದ್ರಕಾಂತ ಬೆಲ್ಲದ ಅವರು ಮಾತನಾಡಿ, ನಾಗರಿಕರು ಮತ್ತು ರಾಜಕಾರಣಿಗಳು ಮೌಲ್ಯಗಳನ್ನು ಕಾಪಾಡಿಕೊಂಡು ನಿರಂತರ ಮನಸಾಕ್ಷಿಯಾಗಿ ಕೆಲಸ ಮಾಡಿದರೆ ಮಾತ್ರ ಸ್ವಸ್ಥ ಸಮಾಜ ಕಟ್ಟಲು ಸಾಧ್ಯವೆಂದರು.

ಅಧ್ಯಕ್ಷತೆ ವಹಿಸಿ ಧಾರವಾಡ ಹೈಕೋರ್ಟ್ ವಕೀಲರ ಸಂಘದ ಅಧ್ಯಕ್ಷ ಸುರೇಶ ಹುಡೇದಗಡ್ಡಿ ಅವರು ಮಾತನಾಡಿ, ನಾಗರಿಕರು ಪ್ರಜ್ಞಾವಂತಿಕೆಯಿಂದ ಕಾರ್ಯನಿರ್ವಹಿಸಬೇಕು. ಅಂದಾಗ ಮಾತ್ರ ಮೌಲ್ಯಕ್ಕೆ ಅರ್ಥ ಬರುತ್ತದೆ. ಸಂವಿಧಾನ ಕೊಟ್ಟ ಹಕ್ಕು ಕೇಳಿದಾಗ ನನ್ನ ಕರ್ತವ್ಯ ಏನು ಎಂಬುದನ್ನು ಅರ್ಥೈಸಿಕೊಂಡು ಸಮಾಜಕ್ಕೆ ಏನನ್ನು ಕೊಡಬೇಕೆಂಬ ಅರಿವು ಜನರಲ್ಲಿ ಇರಬೇಕು ಎಂದರು.

ಎನ್.ಆರ್. ಬಾಳಿಕಾಯಿ ಸ್ವಾಗತಿಸಿದರು. ಶಂಕರ ಹಲಗತ್ತಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾನೂನು ಮಂಟಪದ ಸಂಚಾಲಕ ಗುರು ಹಿರೇಮಠ ನಿರೂಪಿಸಿದರು. ಸರಸ್ವತಿ ಪೂಜಾರ ವಂದಿಸಿದರು.

೨.	ಭಾರತ ಕಂಡ ನಿರ್ಭಯಾ ಮತ್ತು ಅರುಣಾ ಶಾನಭಾಗ ಪ್ರಕರಣಗಳ ಧೀರ ಮಹಿಳೆಯರ ನೆನಪಿನಲ್ಲಿ ಪೋಕ್ಸೊ ಕಾಯ್ದೆ ಜಾರಿಗೆ ಬಂದಿತು ಎಂದು ಜಿಲ್ಲಾ ವಿಶ್ರಾಂತ ನ್ಯಾಯಾಧೀಶ ಶ್ರೀಕಾಂತ ಬಬಲಾದಿ ತಿಳಿಸಿದರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘದ ಕಾನೂನು ಮಂಟಪವು ದಿನಾಂಕ: ೪-೧೨-೨೦೨೩ ರಂದು ಆಯೋಜಿಸಿದ್ದ 'ಪೋಕ್ಸೊ ಕಾಯ್ದೆ ಮತ್ತು ನಮ್ಮ ಸಮಾಜ' ವಿಷಯ ಕುರಿತ ಉಪನ್ಯಾಸ ಕಾರ್ಯಕ್ರಮದಲ್ಲಿ ಅತಿಥಿ ಉಪನ್ಯಾಸಕರಾಗಿ ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ಅವರು, ಕಾಲಕ್ಕೆ ತಕ್ಕಂತೆ ಸಮಾಜ ಬದಲಾಗುತ್ತಿರುವ ಹಿನ್ನೆಲೆಯಲ್ಲಿ ಕಾನೂನಿನಲ್ಲಿ ನ್ಯೂನ್ಯತೆಯನ್ನು ಹುಡುಕಿ ತಿದ್ದುಪಡಿ ಮಾಡುತ್ತಾ ಆರೋಪಿಗಳಿಗೆ ತಕ್ಕ ಶಿಕ್ಷೆಯಾಗುವಲ್ಲಿ ಮತ್ತು ಕಾನೂನು ರಚನೆಯಲ್ಲಿ ಹಿಂದೆ ಬೀಳಬಾರದೆಂದು ಭಾರತದಲ್ಲಿ ಬಿಗಿಯಾದ ಪೋಕ್ಸೊ ಕಾನೂನು ಪರಿಣಾಮಕಾರಿಯಾಗಿದೆ. ನಮ್ಮ ಸ್ವಸ್ತ ಸಮಾಜ ಕಟ್ಟುವಲ್ಲಿ ಪ್ರತಿಯೊಬ್ಬರು ಅಪರಾಧಿಕ ಮನೋಭಾವನೆಯಿಂದ ಹೊರಬರಬೇಕೆಂದು ವಿಶ್ರಾಂತ ಜಿಲ್ಲಾ ನ್ಯಾಯಾಧೀಶರಾದ ಶ್ರೀಕಾಂತ ಬಬಲಾದಿ ಹೇಳಿದರು.

ಜನ ಸಾಮಾನ್ಯರಲ್ಲಿರುವ ಸಮಸ್ಯೆ ಏನು? ಕಾನೂನಿನ ಅನುಷ್ಠಾನದ ಪರಿಕಲ್ಪನೆಯಲ್ಲಿ ಹಿಂದಿನ ಭಾರತಿಯ ದಂಡ ಸಂಹಿತೆಯಲ್ಲಿ ಮಕ್ಕಳ ಮೇಲಿನ ಅಪರಾಧಕ್ಕೆ ತಕ್ಕಂತೆ ಶಿಕ್ಷೆ ಇರಲಿಲ್ಲ, ಅಪರಾಧಿಗಳಿಗೆ ತಕ್ಕ ಶಿಕ್ಷೆ ವಿಧಿಸುವಲ್ಲಿ ಪ್ರತ್ಯೇಕ ಪೋಕ್ಸೊ ಕಾಯ್ದೆ ಜಾರಿಗೆ ತಂದಿರುವುದು ಸಹಕಾರಿ ಆಗಿದೆ. ತನಿಖೆ, ಸಾಕ್ಷಾದಾರ ರುಜುವಾತು ಪಡಿಸುವಲ್ಲಿ ಸಾಕ್ಷಿ ಹೇಳಿಕೆದಾರರು ಹಿಂದೇಟು ಹಾಕಬಾರದು. ಭಾರತದಲ್ಲಿ ಈ ಪೋಕ್ಸೊ ಕಾಯ್ದೆ ನ್ಯಾಯದಾನದ ಪ್ರಕ್ರಿಯೆಗಳನ್ನು ಅಧ್ಯಯನ ಮಾಡಲು ಫಿಲಿಪೈನ್ಸ ದೇಶದ ತಂಡವೊಂದು ತಾವು ಕೊಪ್ಪಳ ಜಿಲ್ಲೆಯ ಜಿಲ್ಲಾ ನ್ಯಾಯಾಧೀಶರಾಗಿ ಸೇವೆ ಸಲ್ಲಿಸುತ್ತಿದ್ದಾಗ ಭೇಟಿ ಕೊಟ್ಟಿದ್ದನ್ನು ಶ್ರೀಕಾಂತ ಬಬಲಾದಿ ಅವರು ನೆನಪಿಸಿಕೊಂಡು ತಮ್ಮ ವೃತ್ತಿ ಜೀವನದಲ್ಲಿಯ ಅಪಾರ ಸಿಹಿಕಹಿ ಅನುಭವಗಳನ್ನು ಬಿಚ್ಚಿಟ್ಟರು.

ಸರ್ವೋಚ್ಚ ನ್ಯಾಯಾಲಯದ ಕೆಲ ಪ್ರಮುಖ ತೀರ್ಪುಗಳನ್ನು ಉಲ್ಲೇಖಿಸಿ ಪೋಕ್ಸೊ ಕಾಯ್ದೆಯ ಅವಶ್ಯಕತೆ ಮತ್ತು ಮಹತ್ವ ಕುರಿತಂತೆ ಎಳೆ ಎಳೆಯಾಗಿ ಮನದಟ್ಟು ಮಾಡಿದರು. ನಂತರ ಸಭಿಕರೊಂದಿಗೆ ಸಂವಾದ ನಡೆಸಿ, ಅನೇಕರ ಸಂದೇಹಗಳನ್ನು ಪರಿಹರಿಸಿದರು.

ಅಧ್ಯಕ್ಷತೆ ವಹಿಸಿದ್ದ ಭಾರತದ ಹೆಚ್ಚುವರಿ ಸಾಲಿಸೀಟರ್ ಜನರಲ್(ವಿಶ್ರಾಂತ) ಕರ್ನಾಟಕ ಉಚ್ಚ ನ್ಯಾಯಾಲಯದ ಹಿರಿಯ ನ್ಯಾಯವಾದಿ ಕೆ. ಬಿ. ನಾವಲಗಿಮಠ ಮಾತನಾಡಿ, ಊಹೆ ಮತ್ತು ತರ್ಕದ ಆಧಾರದ ಮೇಲೆ ಆರೋಪಿಗಳಿಗೆ ಶಿಕ್ಷೆ ವಿಧಿಸುವಾಗ ಹಳೆಯ ಗ್ರಹಿಕೆ ಬಿಟ್ಟು ಕಾನೂನಿನ ಪರಿಕಲ್ಪನೆಯ ಅರ್ಥ ಮಾಡಿಕೊಳ್ಳುವಲ್ಲಿ ನ್ಯಾಯಾಧೀಶರು, ವಕೀಲರು ಆಳವಾಗಿ ಅಧ್ಯಯನ ಮಾಡುವದು ಅವಶ್ಯ ಎಂದರು.

ನ್ಯಾಯವಾದಿಗಳಾದ ಶಿವಾನಂದ ಭಾವಿಕಟ್ಟಿ ಸ್ವಾಗತಿಸಿದರು. ಬಸವಪ್ರಭು ಹೊಸಕೇರಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾನೂನು ಮಂಟಪದ ಸಂಚಾಲಕ ಗುರು ಹಿರೇಮಠ ನಿರೂಪಿಸಿದರು. ಶಂಕರ ಹಲಗತ್ತಿ ವಂದಿಸಿದರು.

೩.	ಹದಿಹರೆಯದ ಸಂದರ್ಭದಲ್ಲಿ ದೈಹಿಕ ಮತ್ತು ಮಾನಸಿಕ ಬೆಳವಣಿಗೆ, ದೇಹದಲ್ಲಿಯ ಹಾರ್ಮೋನ್‌ಗಳ ಪರಿವರ್ತನೆಯ ಸಮಯ. ಇಂಥ ಚಂಚಲತೆಯಲ್ಲಿ ಜೀವನದ ಸ್ಪಷ್ಟತೆ ಕಂಡುಕೊಳ್ಳುವ ವಿಚಾರ ಹೆಚ್ಚಾಗಿರುತ್ತದೆ ಎಂದು ಧಾರವಾಡ ಡಿಮ್ಹಾನ್ಸ್ ಟೆಲಿಮಾನಸ ಸಹಾಯಕ ಪ್ರಾಧ್ಯಾಪಕ ಡಾ. ಸುಧೀಂದ್ರ ಹುದ್ದಾರ ಹೇಳಿದರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘದ ಕಾನೂನು ಮಂಟಪವು, ಕಿತ್ತೂರ ನಾಡ ವಿದ್ಯಾವರ್ಧಕ ಸಂಘದ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಚನ್ನಮ್ಮನ ಕಿತ್ತೂರು ಸಹಯೋಗದಲ್ಲಿ ದಿನಾಂಕ: ೭-೨-೨೦೨೪ ರಂದು ಚೆನ್ನಮ್ಮನ ಕಿತ್ತೂರಿನಲ್ಲಿ ಆಯೋಜಿಸಿದ್ದ ಕರ್ನಾಟಕ ೫೦ ರ ಸಂಭ್ರಮ ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ 'ವಿದ್ಯಾರ್ಥಿ ಜೀವನವನ್ನು ಯಶಸ್ವಿಗೊಳಿಸುವುದು ಹೇಗೆ? ವಿಷಯ ಕುರಿತು ಉಪನ್ಯಾಸ ನೀಡುತ್ತಾ ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿ ಅವರು, ವಿದ್ಯಾರ್ಥಿಗಳ ಮುಂದಿನ ಜೀವನ ಏನು? ಎತ್ತ ಎಂದು ತಿಳಿಯದ ಮುಗ್ಧ ವಯಸ್ಸು. ಎಲ್ಲವನ್ನು ತಿಳಿದುಕೊಳ್ಳಬೇಕೆನ್ನುವ ಹಂಬಲ, ಉತ್ಕಟ ಆಸೆ, ದುಗುಡ ಆತಂಕಕ್ಕೆ ಸೆಳೆಯುತ್ತದೆ.

ವ್ಯಕ್ತಿತ್ವ ಬೆಳವಣಿಗೆ ಸಮಯ. ಈ ಸಮಯವನ್ನು ತಾವು ಒಳ್ಳೆಯ ಸಹವಾಸ, ಉತ್ತಮ ಜ್ಞಾನ ಪಡೆದ ವ್ಯಕ್ತಿಗಳ ಜೊತೆಗೆ ಒಡನಾಟ ಇದ್ದರೆ ನಿಮ್ಮ ಮುಂದಿನ ಗುರಿ ಮತ್ತು ಭವಿಷ್ಯ ಹಾದಿ ಸುಗಮವಾಗುತ್ತದೆ ಎಂದರು.

೧೬ ರಿಂದ ೨೩ ಮತ್ತು ೨೩ ರಿಂದ ೨೫ ವಯಸ್ಸು ತುಂಬಾ ಮಹತ್ವದ್ದು... ಈ ವಯಸಿನಲ್ಲಿ ಯಾವ ದುಶ್ಚಟಗಳಿಗೆ ದಾಸರಾಗದೆ ವ್ಯಸನ ಮುಕ್ತ ಜೀವನ ಮಾಡಿಕೊಳ್ಳಲು ಸಾಧ್ಯ. ಗಾಂಜಾ, ಡ್ರಗ್ಸ್, ಮೊಬೈಲ್‌ಗಳ ಗೀಳಿನಿಂದ ದೇಹದಲ್ಲಿ ಡೊಕೊಮೀನ್ ಎಂಬ ರಾಸಾಯನಿಕ ಕ್ರಿಯೆ ಆಗುತ್ತಾ ಇರುತ್ತದೆ. ಅದು ವ್ಯಸನವಾಗಿ ಆಗಿ ಪರಿವರ್ತನೆ ಆಗಿ, ಆ ವ್ಯಸನಗಳು ನಿಮ್ಮ ದೇಹ ಮನಸ್ಸನ್ನು ನಿಯಂತ್ರಣ ಮಾಡುತ್ತವೆ. ಮುಂದೆ ಗುರಿ, ಹಿಂದೆ ಗುರು ಇಟ್ಟುಕೊಂಡು ಸಾಗಿದರೆ ಜೀವನದಲ್ಲಿ ಯಶಸ್ಸು ಪಡೆಯಲು ಸಾಧ್ಯ ಎಂದರು.

ಪ್ರಾಚಾರ್ಯರಾದ ಶ್ರೀ ಎಮ್ ಎಸ್ ಪಾಟೀಲ ಅಧ್ಯಕ್ಷತೆ ವಹಿಸಿ ಮಾತನಾಡುತ್ತ... ಪಾಠ ಪಠ್ಯೇತರ ಹೊರತಾಗಿ ಕಾನೂನಿನ ಜ್ಞಾನ ಅತೀ ಅವಶ್ಯ ಮತ್ತು ಹದಿ ಹರೆಯದ ವಯಸ್ಸಿನಲ್ಲಿ ವ್ಯಸನಗಳಿಗೆ ತುತ್ತಾಗುವುದು ಜಾಸ್ತಿ. ವ್ಯಸನಗಳಿಗೆ ತುತ್ತಾಗದೆ ವಿದ್ಯಾರ್ಥಿ ಜೀವನ ವನ್ನು ಯಶಸ್ವಿ ಮಾಡಿಕೊಳ್ಳಲು ಈ ಕಾರ್ಯಕ್ರಮ ತಮಗೆ ಒಳ್ಳೆಯ ದಾರಿ ದೀಪ ವಾಗಿದೆ ಎಂದು ಹೇಳಿದರು.

ದಿವ್ಯ ಸಾನ್ನಿಧ್ಯ ವಹಿಸಿದ್ದ ಕಲ್ಮಠ ರಾಜಗುರು ಸಂಸ್ಥಾನ ಮಠದ ಶ್ರೀ ಮಡಿವಾಳ ರಾಜಯೋಗೀಂದ್ರ ಸ್ವಾಮಿಜಿಯವರು ಆಶೀರ್ವಚನ ನೀಡುತ್ತಾ, ಕನ್ನಡ ನಾಡು ನುಡಿಗಾಗಿ ಅವಿರತವಾಗಿ ಶ್ರಮಿಸುತ್ತಿರುವ ಕರ್ನಾಟಕ ವಿದ್ಯಾವರ್ಧಕ ಸಂಘದ ಕಾರ್ಯಚಟುವಟಿಕೆಗಳನ್ನು ಶ್ಲಾಘಿಸಿದರು.

ಉಪಸ್ಥಿತರಿದ್ದ ಪ್ರಾಚಾರ್ಯ ಜಿ ಕೆ ಬೊಮ್ಮನಗೌಡರ ಮಾತನಾಡಿ, ಒಬ್ಬರ ವ್ಯಕ್ತಿತ್ವ ಇನ್ನೊಬ್ಬರಿಂದ ವಿಭಿನ್ನವಾಗಿದೆ. ಅಭಿರುಚಿ ಭಿನ್ನವಾಗಿವೆ... ವಿಚಾರಗಳು ಅಶೋತ್ತರಗಳು ಭಿನ್ನವಾಗಿವೆ. ಈ ಒಂದು ಕಾರ್ಯಕ್ರಮ ತಮ್ಮ ಪಾಠ ಪಠ್ಯದ ಹೊರತಾಗಿದ್ದು ನಿಮ್ಮ ಜೀವನಕ್ಕೆ ಪಾಠ ಪಠ್ಯದಷ್ಟೇ ಪ್ರಾಮುಖ್ಯತೆ ಇದೆ. ಇದರ ಸದುಪಯೋಗ ಮಾಡಿಕೊಳ್ಳಿ ಅಂತ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು. ವೇದಿಕೆ ಮೇಲೆ ಸುರೇಶ ನಾಯ್ಕ, ಅರುಣ ಕುಮಾರ ಬಿಕ್ಕಣ್ಣವರ ಇದ್ದರು.

ಸಿ. ಸಿ. ಮಹಾಜನಶೆಟ್ಟರ ಸ್ವಾಗತಿಸಿದರು. ಅಶೋಕ ಕೋರಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಎಸ್ ಜೆ ಶಾಪೂರಮಠ ವಂದಿಸಿದರು. ಸರಸ್ವತಿ ಪೂಜಾರ ಕಾರ್ಯಕ್ರಮ ನಿರೂಪಿಸಿದರು.

### ೫. ಜಾನಪದ ಮಂಟಪ: ಸಂಚಾಲಕರು, ಡಾ. ಶ್ರೀಶೈಲ ಹುದ್ದಾರ

೧. ಮೂಲ ಜನಪದ ಕಲೆಗಳು ಭಾರತೀಯ ಸಂಸ್ಕೃತಿಯನ್ನು ಬೆಳೆಸುವಲ್ಲಿ ಮುಖ್ಯ ಪಾತ್ರವನ್ನು ವಹಿಸುತ್ತವೆ. ಜನಪದದ ವಿವಿಧ ಮಜಲುಗಳಾದ ಕರಡಿ ಮೇಳ, ಹಂತಿ ಪದಗಳು, ಡೊಳ್ಳು ಕುಣಿತ, ಗೀಗೀ ಪದಗಳು, ಲಾವಣಿ, ಏಕತಾರಿ, ಸೋಬಾನೆ ಹೆಜ್ಜೆ ಮೇಳಗಳನ್ನು ಉಳಿಸಿ ಬೆಳೆಸಿಕೊಂಡು ಹೋಗಬೇಕಾದ ಅವಶ್ಯಕತೆ ಇದೆ ಎಂದು ಕೆ.ಇ. ಬೋರ್ಡ್ಸ್ ಪ್ರಥಮ ದರ್ಜೆ ಮಹಾವಿದ್ಯಾಲಯದ ಪ್ರಾಂಶುಪಾಲ ಪ್ರೊ. ಎಂ.ಎ. ಸಿದ್ಧಾಂತಿ ತಿಳಿಸಿದ್ದಾರೆ.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘದ ಜಾನಪದ ಮಂಟಪವು ಸುವರ್ಣ ಸಂಭ್ರಮ ಕರ್ನಾಟಕ –೫೦ ಕೆ.ಇ.ಬೋರ್ಡ್ ಪ್ರಥಮ ದರ್ಜೆ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಧಾರವಾಡ, ರಾಷ್ಟ್ರೀಯ ಸೇವಾಯೋಜನೆ ಘಟಕ ೧ ಮತ್ತು ೨ರ ವಾರ್ಷಿಕ ವಿಶೇಷ ಶಿಬಿರ ಇಟಿಗಟ್ಟಿ ಗ್ರಾಮದಲ್ಲಿ ಏರ್ಪಡಿಸಿದ ಪ್ರಯುಕ್ತ ಇಟಿಗಟ್ಟಿಯ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ದಿನಾಂಕ: ೨೬–೧೨–೨೦೨೩ ರಂದು ಆಯೋಜಿಸಿದ್ದ **'ಗ್ರಾಮ ಕಲಾ ಉತ್ಸವ'** ವನ್ನು ಉದ್ಘಾಟಿಸಿ ಮಾತನಾಡಿದರು.

ಕ.ವಿ.ವ. ಸಂಘದ ಜಾನಪದ ಮಂಟಪದ ಸಂಚಾಲಕ ಡಾ. ಶ್ರೀಶೈಲ ಹುದ್ದಾರ ಮಾತನಾಡಿ, ಇಂದಿನ ಯುವಪೀಳಿಗೆ ಪಾಶ್ಚಾತ್ಯ ಸಂಸ್ಕೃತಿಗೆ ಮಾರುಹೋಗಿ ದೇಶೀಯ ಸಂಸ್ಕೃತಿಯನ್ನು ಧಿಕ್ಕರಿಸುತ್ತಿದ್ದಾರೆ. ಅವರಲ್ಲಿ ಜನಪದ ಸಂಸ್ಕೃತಿಯ ಮೂಲಕ ಮಾನವೀಯ ಮೌಲ್ಯಗಳನ್ನು ಬೆಳೆಸಬೇಕಾದ ಅವಶ್ಯಕತೆಯಿಂದರು.

ಮುಖ್ಯ ಅತಿಥಿಯಾಗಿ ಹು.ಧಾ.ಮಹಾನಗರ ಪಾಲಿಕೆಯ ಸದಸ್ಯೆ ನೀಲಮ್ಮ ಅರವಾಳದವರ ಮಾತನಾಡಿ, ಬೀಸುವ ಕಲ್ಲಿನ ಪದಗಳು, ಲಾಲಿ ಹಾಡುಗಳು, ಜೋಗತಿ ನೃತ್ಯ, ವೀರಗಾಸೆ, ಗೊರವರ ಕುಣಿತದಂತ ಜಾನಪದ



ಕಲೆಗಳನ್ನು ನಾವು ಉಳಿಸಿ–ಬೆಳೆಸಿ ನಮ್ಮ ಮೂಲ ಜನಪದ ಸಂಸ್ಕೃತಿಯನ್ನು ಗಟ್ಟಿಗೊಳಿಸಬೇಕಾಗಿದೆ. ಈ ನಿಟ್ಟಿನಲ್ಲಿ ಪ್ರಭು ಕುಂದರಗಿಯಂತಹ ಜಾನಪದ ತಜ್ಞರು ಜಾನಪದ ಕಲೆಗಳನ್ನು ಕುರಿತು ಉತ್ಸವ, ಕಾರ್ಯಾಗಾರ, ಮೇಳಗಳನ್ನು ಹಮ್ಮಿಕೊಳ್ಳುತ್ತಿರುವುದು ಪ್ರಶಂಸನೀಯ ಎಂದರು.

ಗ್ರಾಮ ಕಲಾ ಉತ್ಸವದಲ್ಲಿ ಪ್ರಭು ಕುಂದರಗಿ ಹಾಗೂ ತಂಡದವರಿಂದ ಭಜನೆ (ಜಾನಪದ ಗೀತೆ), ಕು. ಪ್ರಿಯಾಂಕಾ ಕುಂದರಗಿ ಹಾಗೂ ತಂಡದವರಿಂದ ಸೋಬಾನ ನೆಬಿಸಾಬ್ ಕಿಲ್ಲೆದಾರ ಹಾಗೂ ಸಂಗಡಿಗರಿಂದ ರಿವಾಯತ್ ಪದ, ಕಲ್ಲಪ್ಪ ಕುಂದರಗಿ ಹಾಗೂ ಸಂಗಡಿಗರಿಂದ ಹೋಳಿ ಪದಗಳು, ನಾಗಪ್ಪ ರೇವಡಿಹಾಳ ಹಾಗೂ ಸಂಗಡಿಗರಿಂದ ಹಂತಿ ಹಾಡುಗಳು, ಇಟಿಗಟ್ಟಿ ಗ್ರಾಮದ ಶಾಲಾ ಮಕ್ಕಳಿಂದ ಕೋಲಾಟ, ಗಣಪತಿ ಗಾಯಕವಾಡ ಹಾಗೂ ಸಂಗಡಿಗರಿಂದ ಹೆಜ್ಜೆಮೇಳ, ಮಹಾಂತೇಶ ಮು. ಪೂಜಾರ ಹಾಗೂ ಸಂಗಡಿಗರಿಂದ ಡೊಳ್ಳು ಕುಣಿತ ಪ್ರದರ್ಶನಗೊಳಿಸಿ ತಮ್ಮ ಕಲಾ ಪ್ರತಿಭೆಯನ್ನು ಪ್ರದರ್ಶಿಸಿದರು. ಕಲಾವಿದರಿಗೆ ನೆನಪಿನ ಕಾಣಿಕೆ ಮತ್ತು ಪ್ರಮಾಣ ಪತ್ರವನ್ನು ನೀಡಿ ಗೌರವಿಸಲಾಯಿತು.

ಶಿಕ್ಷಕ, ಕಲಾವಿದ ಎಫ್.ಬಿ.ಕಣವಿ ಜಾನಪದ ಹಾಡುಗಳೊಂದಿಗೆ ಕಾರ್ಯಕ್ರಮ ನಿರೂಪಿಸಿದರು. ಪ್ರಭು ಕುಂದರಗಿ ಪ್ರಾಸ್ತಾವಿಕವಾಗಿ ಮಾತನಾಡಿದರು.

೨. ಯುವ ಪ್ರತಿಭೆಗಳಿಗೆ ಅವಕಾಶ ಕಲ್ಪಿಸಿ ಅವರ ಸಾಮರ್ಥ್ಯಕ್ಕೆ ನಾವು ಬೆಂಬಲ ನೀಡಿದರೆ ಕಲೆ, ಕಲಾವಿದರನ್ನು ಬೆಳೆಸಲು ಸಾಧ್ಯ ಎಂದು ಖ್ಯಾತ ಜಾನಪದ ಕಲಾವಿದ ಬಸವರಾಜ ನರೇಂದ್ರ (ಬಳಿಗಾರ) ಅಭಿಪ್ರಾಯಪಟ್ಟರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘದ ಜಾನಪದ ಮಂಟಪವು ದಿನಾಂಕ: ೨೮–೧೨–೨೦೨೩ ರಂದು ಆಯೋಜಿಸಿದ್ದ **'ಮಾತಾಡ್ ಮಾತಾಡ್ ಮಲ್ಲಿಗೆ' ಜನಪದ ಮಾತುಗಳ ಸರಣಿ ಕಾರ್ಯಕ್ರಮದಲ್ಲಿ** ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ಅವರು, ಯುವಕ ಯುವತಿಯರಿಗೆ ದೇಶಿ **ಹಾಡಿನ ಮೂಲಗಳನ್ನು** ಪರಿಚಯಿಸಿದರು. ಅದಕ್ಕಾಗಿ ಬಹಳ ವರ್ಷ ಪಡೆದ ಯುವಕ ಯುವತಿಯರು ಇಂತಹ ವಾತಾವರಣ ಬೆಳೆಸಬೇಕು. ಅಂತಹ ಕಾರ್ಯಕ್ರಮವನ್ನು ವಿದ್ಯಾವರ್ಧಕ ಸಂಘ ಮಾಡಿದ್ದು ಶ್ಲಾಘನೀಯ ಎಂದರು.

ಮುಖ್ಯ ಅತಿಥಿಯಾಗಿ ಹಿರಿಯ ಪತ್ರಕರ್ತ ಮಂಡಲೀಕ ಹಡಪದ ಮಾತನಾಡಿ, ಸಂಘ ಸಂಸ್ಥೆಗಳು ಎಲ್ಲ ಕಲಾವಿದರಿಗೂ ಪ್ರೋತ್ಸಾಹ ನೀಡಬೇಕು. ಜೊತೆಗೆ ಜನಪದ ಕಲೆಗಳನ್ನು ವಿಶೇಷವಾಗಿ ಉಳಿಸಿ ಬೆಳೆಸಲು ವಿದ್ವತ್ ವಲಯ ಚಿಂತನೆ ಮಾಡಬೇಕು ಎಂದರು.

ಈ ಕಾರ್ಯಕ್ರಮದಲ್ಲಿ ಬಸವರಾಜ ನರೇಂದ್ರವರು ನಾಡು-ನುಡಿಯ ವೀರರಾದ ಸಂಗೊಳ್ಳಿರಾಯಣ್ಣ ಮೈಲಾರ ಮಹದೇವ ಅವರ ಹಾಡುಗಳನ್ನು ಹಾಡಿ ಜೊತೆಗೆ ಜನಪದ ಗೀತೆಗಳನ್ನು ಪ್ರಸ್ತುತಪಡಿಸಿದರು.

ಇದೇ ಸಂದರ್ಭದಲ್ಲಿ ಬಸವರಾಜ ನರೇಂದ್ರ ಮತ್ತು ಇವರ ಪತ್ನಿ ಶ್ರೀಮತಿ ನೀಲಮ್ಮ ಇವರನ್ನು ಸನ್ಮಾನಿಸಲಾಯಿತು.

ಗುರು ಹಿರೇಮಠ ಸ್ವಾಗತಿಸಿದರು. ಡಾ. ಶ್ರೀಶೈಲ ಹುದ್ದಾರ ಪ್ರಾಸ್ತಾವಿಕವಾಗಿ ಮಾತನಾಡಿದರು. ಅನುರಾಧಾ ಅಸೂಟಿ ಕಾರ್ಯಕ್ರಮ ನಿರೂಪಿಸಿದರು.

೩. ಕಲೆ ಕಲಾವಿದರು ಬದುಕಿದಾಗ ಮಾತ್ರ ಸ್ವಾಸ್ಥ ಸಮಾಜ ಕಟ್ಟಲು ಸಾಧ್ಯ. ಕಲೆ ಸಾಮಾಜಿಕ ಬದ್ಧತೆಯನ್ನು ಹೊಂದಿರಬೇಕು. ನಮ್ಮ ಸಮಾಜ ಕಲಾವಿದರಿಗೆ ಮನ್ನಣೆ ನೀಡಬೇಕೆಂದು ಗಂಗೀಭಾವಿ ಯಲಿಗಾರ ಸೇವಾ ಸಂಸ್ಥೆಯ ಕಲಾಪೋಷಕ ಶಶಿಧರ ಯಲಿಗಾರ ಹೇಳಿದರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘದ ಜಾನಪದ ಮಂಟಪವು, ರಂಭಾಪುರಿ ಜಗದ್ಗುರು ವೀರಗಂಗಾಧರ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ ಶಿಗ್ಗಾವಿ ಸಹಯೋಗದಲ್ಲಿ ಕಾಲೇಜಿನ ರಾಷ್ಟ್ರೀಯ ಯೋಜನೆಯ ವಾರ್ಷಿಕ ಶಿಬಿರದ ಅಂಗವಾಗಿ ಶಿಗ್ಗಾವಿ ಹೊಸೂರಿನ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ದಿನಾಂಕ: ೧೯-೫-೨೦೨೪ ರಂದು ಆಯೋಜಿಸಿದ್ದ ಡೊಳ್ಳು ಕಲಾ ಮೇಳವನ್ನು ಡೊಳ್ಳು ಬಾರಿಸುವುದರ ಮೂಲಕ ಉದ್ಘಾಟಿಸಿ ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ಅವರು, ನಮ್ಮ ಕಲಾವಿದರ ಮಕ್ಕಳಿಗೆ ಭವಿಷ್ಯದಲ್ಲಿ ವಸತಿ ಶಾಲೆ ಪ್ರಾರಂಭಿಸಿ ಉತ್ತಮ ಸಮಾಜದಲ್ಲಿ ಬದುಕುವ ವಾತಾವರಣ ನಿರ್ಮಾಣ ಮಾಡಬೇಕು ಎಂದ ಅವರು ಗ್ರಾಮೀಣ ಪ್ರದೇಶದಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘ ಇಂತಹ ಮಹತ್ವದ ಕಾರ್ಯಕ್ರಮಗಳನ್ನು ರೂಪಿಸುತ್ತಿರುವುದು ಉತ್ತಮ ಕಾರ್ಯ ಎಂದರು.

ಕ.ವಿ.ವ. ಸಂಘದ ಜಾನಪದ ಮಂಟಪದ ಸಂಯೋಜಕರಾದ ಡಾ. ಶ್ರೀಶೈಲ ಹುದ್ದಾರ ಮಾತನಾಡಿ, ಕಲೆ ಸಮಾಜದ ಕನ್ನಡಿ, ಕಲಾವಿದರಿಗೆ ಆರ್ಥಿಕವಾಗಿ ಸರಕಾರ ಸಹಾಯ ಮಾಡಬೇಕು ಎಂದು ಹೇಳಿ ಕಲಾವಿದ ಮಕ್ಕಳಿಗೆ ರೆಪರ್ಟರಿ ಮಾದರಿಯಲ್ಲಿ ಕಲಾ ವಸತಿ ಶಾಲೆ ಪ್ರಾರಂಭಿಸಬೇಕು. ಯುವಕರಿಗೆ ತರಬೇತಿ ನೀಡುವ ಮೂಲಕ ಕಲೆ ಉಳಿಸಿಕೊಳ್ಳುವ ಪ್ರಯತ್ನ ಮಾಡಬೇಕು ಎಂದರು.

ಕಾರ್ಯಕ್ರಮದಲ್ಲಿ ಸರ್ಕಲ್ ಇನ್ಸಪೆಕ್ಟರ್ ಶ್ರೀಮತಿ ಶ್ರೀದೇವಿ ಪಾಟೀಲ ಮಾತನಾಡಿ ಅಪರಾಧಗಳ ವಿವಿಧ ಪ್ರಕಾರಗಳ ಕುರಿತು ವಿವರಿಸಿ, ಮುನ್ನೆಚ್ಚರಿಕೆ ಕ್ರಮಗಳನ್ನು ಯಾವ ರೀತಿ ತೆಗೆದುಕೊಳ್ಳಬೇಕೆಂದುಬುದನ್ನು ಉದಾಹರಣೆ ಮೂಲಕ ತಿಳಿಸಿದರು. ಇದೇ ಸಂದರ್ಭದಲ್ಲಿ ತಡಸ ಠಾಣಾ ಸಬ್ ಇನ್ಸಪೆಕ್ಟರ್ ಆನಂದ ನಾಯಕ್ ಉಪಸ್ಥಿತರಿದ್ದರು

ಇದೇ ಸಂದರ್ಭದಲ್ಲಿ ನಾಡಿನ ಖ್ಯಾತ ಡೊಳ್ಳು ಹಾಡುಗಾರರಾದ ಇಮಾಮ್‌ಸಾಬ್ ವಲ್ಲೆಪ್ಪನವರ ಹಾಗೂ ನಿಂಗಪ್ಪ ಸುಣಗಾರ, ಗೂಳಪ್ಪ ಸುಣಗಾರ ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಗ್ರಾಮದ ಹಿರಿಯರಾದ ನಾಗರಾಜ ಸೂರಗೊಂಡ ಅವರು ವಹಿಸಿದ್ದರು.

ಕಾಲೇಜಿನ ಎನ್.ಎಎಸ್.ಎಸ್ ಅಧಿಕಾರಿ ಡಾ ರಾಜರತನ್ ದಾದುಗೌಡರ ಸ್ವಾಗತಿಸಿದರು. ಕಾಲೇಜಿನ ಪ್ರಾಚಾರ್ಯ ಡಾ. ಬಿ.ವೈ ತೊಂಡಿಹಾಳ್ ಹಾಗೂ ಆರ್ಥಿಕ ಸಲಹೆಗಾರ ಪ್ರೊ. ರಾಜು ಕೆಂಭಾವಿ ಅವರು ಇದೇ ಸಂದರ್ಭದಲ್ಲಿ ಕಲಾಮೇಳ ಉದ್ದೇಶಿಸಿ ಮಾತನಾಡಿದರು. ಪ್ರಾರಂಭದಲ್ಲಿ ಎನ್. ಎಸ್. ಎಸ್. ವಿದ್ಯಾರ್ಥಿನ ಚೈತ್ರ ಕಾಳೆ ಪ್ರಾರ್ಥನೆ ಸಲ್ಲಿಸಿದರು. ಕುಮಾರಿ ಸೌಂದರ್ಯ ನಂದಿ ಕಾರ್ಯಕ್ರಮ ನಿರೂಪಿಸಿದರು. ಕೊನೆಯಲ್ಲಿ ಕುಮಾರಿ ನಿಂಗಮ್ಮ ವಾಲ್ಮೀಕಿ ವಂದಿಸಿದರು. ನಂತರ ನಡೆದ ಕಾರ್ಯಕ್ರಮದಲ್ಲಿ ಡೊಳ್ಳಿನ ಕೈಪೆಟ್ಟು .ಡೊಳ್ಳಿನ ಹಾಡು, ಡೊಳ್ಳು ಕುಣಿತ ಲಂಬಾಣಿ ಕುಣಿತ ಮುಂತಾದ ಕಲಾಪ್ರಕಾರಗಳ ಪ್ರದರ್ಶನ ನಡೆಯಿತು.

## ೬. ಯುವಜನ ಮಂಟಪ: ಸಂಚಾಲಕರು, ಡಾ. ಮಹೇಶ ಧ. ಹೊರಕೇರಿ.

೧. ಕರ್ನಾಟಕ ವಿದ್ಯಾವರ್ಧಕ ಸಂಘದ ಯುವಜನ ಮಂಟಪವು, ದಿನಾಂಕ: ೧೨-೧-೨೦೨೩ ರಂದು ಸಂಘದ ಶ್ರೀ ರಾ. ಹ. ದೇಶಪಾಂಡೆ ಸಭಾಭವನದಲ್ಲಿ ಸ್ವಾಮಿ ವಿವೇಕಾನಂದರ ೧೬೦ ನೇ ಜಯಂತಿ ಹಾಗೂ ರಾಷ್ಟ್ರೀಯ ಯುವ ದಿನ ಆಚರಣೆ ಕಾರ್ಯಕ್ರಮ ಆಯೋಜಿಸಿತ್ತು.

೨. ಕರ್ನಾಟಕ ವಿದ್ಯಾವರ್ಧಕ ಸಂಘದ ಯುವಜನ ಮಂಟಪವು, ಹುಬ್ಬಳ್ಳಿ ವಿದ್ಯಾನಗರ, ಶಿರೂರ ಪಾರ್ಕ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಸಹಕಾರದೊಂದಿಗೆ ದಿನಾಂಕ: ೨೨-೯-೨೦೨೩ ರಂದು ಹುಬ್ಬಳ್ಳಿ ವಿದ್ಯಾನಗರ, ಶಿರೂರ ಪಾರ್ಕಿನಲ್ಲಿ **'ಸಾಮಾಜಿಕ ಸಮಸ್ಯೆಗಳು ಹಾಗೂ ಪರಿಹಾರ ಕುರಿತು ಉಪನ್ಯಾಸ'** ಹಾಗೂ **'ನೃತ್ಯ ವೈವಿಧ್ಯ'** ಕಾರ್ಯಕ್ರಮ ಆಯೋಜಿಸಿತ್ತು.

ಅತಿಥಿ ಉಪನ್ಯಾಸಕರಾಗಿ ಧಾರವಾಡ ಡಿಮ್ಹಾನ್ಸ್‌ನ ಮನೋವೈದ್ಯ ಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ. ಆದಿತ್ಯ ಪಾಂಡುರಂಗಿ ಆಗಮಿಸಿದ್ದರು.

ಅಧ್ಯಕ್ಷತೆಯನ್ನು ಕ.ವಿ.ವ. ಸಂಘದ ಅಧ್ಯಕ್ಷರಾದ ಶ್ರೀ ಚಂದ್ರಕಾಂತ ಗುರಪ್ಪ ಬೆಲ್ಲದ ವಹಿಸಿದ್ದರು.

ಶ್ರೀಮತಿ ನಾಗರತ್ನಾ ಹಡಗಲಿ, ರತಿಕಾ ನೃತ್ಯ ನಿಕೇತನ, ಧಾರವಾಡ ತಂಡದವರು ಸೊಗಸಾಗಿ ವೈವಿಧ್ಯಮಯ ನೃತ್ಯ ಕಾರ್ಯಕ್ರಮ ನೀಡಿದರು.

೩. ಕರ್ನಾಟಕ ವಿದ್ಯಾವರ್ಧಕ ಸಂಘದ ಯುವಜನ ಮಂಟಪವು, ಕಲಘಟಗಿಯ ಗುಡ್‌ನ್ಯೂಜ್ ವೆಲ್‌ಫೇರ ಸಂಸ್ಥೆಯ ಕಲಾ ಹಾಗೂ ವಾಣಿಜ್ಯ ಪ್ರಥಮ ದರ್ಜೆ ಮಹಾವಿದ್ಯಾಲಯ ಸಹಯೋಗದಲ್ಲಿ ದಿನಾಂಕ: ೧೩-೨-೨೦೨೪ ರಂದು ಪದವಿಪೂರ್ವ ಮಹಾವಿದ್ಯಾಲಯದ ವಿದ್ಯಾರ್ಥಿಗಳಿಗೆ 'ಪರೀಕ್ಷಾ ಪೂರ್ವ ಸಿದ್ಧತೆ ಹೇಗೆ ? ಮತ್ತು ಡಿಜಿಟಲ್ ಗ್ರಂಥಾಲಯದ ಬಳಕೆ' ಕುರಿತು ಉಪನ್ಯಾಸ ಕಾರ್ಯಕ್ರಮ ಆಯೋಜಿಸಿತ್ತು.

ಅತಿಥಿ ಉಪನ್ಯಾಸಕರಾಗಿ ಮನೋಶಾಂತಿ ಕ್ಲಿನಿಕ್, ಹುಬ್ಬಳ್ಳಿ-ಧಾರವಾಡ, ವೈದ್ಯಕೀಯ ನಿರ್ದೇಶಕರಾದ ಡಾ. ಗಿರೀಶ ಬಾಬು ನಂಜುಂಡಪ್ಪ ಆಗಮಿಸಿದ್ದರು.

ಅಧ್ಯಕ್ಷತೆಯನ್ನು ಕಲಘಟಗಿಯ ಜಿ.ಎನ್.ಡಬ್ಲ್ಯು.ಎಸ್. ಪ್ರಥಮ ದರ್ಜೆ ಮಹಾವಿದ್ಯಾಲಯದ ಕಾರ್ಯದರ್ಶಿ ರೇ. ಬ್ರ. ಥಾಮಸ್ ಥಾನಿಕಲ್ ವಹಿಸಿದ್ದರು.

ಜಿ.ಎನ್.ಡಬ್ಲ್ಯು.ಎಸ್. ಕಲಘಟಗಿ, ಕಾರ್ಯದರ್ಶಿ ರೇ. ಬ್ರ. ವರ್ಗೀಸ್ ಕೆ.ಜೆ. ಹಾಗೂ ಜಿ.ಎನ್.ಡಬ್ಲ್ಯು.ಎಸ್. ಪ್ರಥಮ ದರ್ಜೆ ಮಹಾವಿದ್ಯಾಲಯ, ಕಲಘಟಗಿ ಪ್ರಾಚಾರ್ಯ ಡಾ. ಬಿ. ಜಿ. ಬಿರಾದಾರ, ಕಾಲೇಜು ಒಕ್ಕೂಟದ ಕಾರ್ಯಾಧ್ಯಕ್ಷ ಡಾ. ವ್ಹಿ. ಆರ್. ಬೆಟಗಾರ ಹಾಗೂ ಐ.ಕ್ಯೂ.ಎ.ಸಿ. ಸಂಯೋಜಕ ಕು. ಮಹಿಮಾ ಪೂಜಾರ ಉಪಸ್ಥಿತರಿದ್ದರು.

೪. ನಿಮ್ಮ ಜೀವ ಸುರಕ್ಷತೆ ಇರಬೇಕೆಂದರೆ ರಸ್ತೆ ನಿಯಮಗಳನ್ನು ಪಾಲಿಸಿ ಎಂದು ಕಲಘಟಗಿ ತಾಲೂಕಿನ ಪಿ.ಎಸ್.ಆಯ್ ಬಸವರಾಜ ಯದ್ದಲಗುಡ್ಡ ಹೇಳಿದರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘದ ಯುವಜನ ಮಂಟಪವು, ಕಲಘಟಗಿಯ ಎನ್.ಎಸ್.ಎಸ್. ವಾರ್ಷಿಕ ವಿಶೇಷ ಶಿಬಿರ ಗುಡ್‌ನ್ಯೂಜ್ ಪ್ರಥಮ ದರ್ಜೆ ಕಾಲೇಜಿನ ಸಹಯೋಗದಲ್ಲಿ ಕಲಘಟಗಿ ತಾಲೂಕಿನ ಗಂಭ್ಯಾಪುರ ಗ್ರಾಮದಲ್ಲಿ ದಿನಾಂಕ: ೨೩-೩-೨೦೨೪ ರಂದು ಆಯೋಜಿಸಿದ್ದ 'ಜಾನಪದ ಸಂಭ್ರಮ' ಕಾರ್ಯಕ್ರಮದಲ್ಲಿ 'ಕಾನೂನು ಅರಿವು' ಕುರಿತು ಉಪನ್ಯಾಸ ನೀಡುತ್ತಾ ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ಅವರು, ಯುವಕರು ವಾಹನ ಚಲಾಯಿಸುವಾಗ ಕಡ್ಡಾಯವಾಗಿ ಹೆಲ್ಮೆಟ್ ಹಾಕಬೇಕು, ಕಾರು ಚಲಾಯಿಸುವಾಗ ಸಿಟ್ ಬೆಲ್ಟ ಹಾಕಬೇಕು. ಕಾನೂನುಗಳು ಇರುವುದು ಜನರ ಸುರಕ್ಷತೆಗಾಗಿ. ರಸ್ತೆ ಸುರಕ್ಷತಾ ಕ್ರಮಗಳನ್ನು ಪಾಲಿಸಿದರೆ ಎಲ್ಲರೂ ಸುರಕ್ಷಿತವಾಗಿ ಪ್ರಯಾಣ ಮಾಡಬಹುದು ಸೋಷಿಯಲ್ ಮಿಡಿಯಾ ಉಪಯೋಗಿಸುವವರು ಬಹಳ ಎಚ್ಚರಿಕೆಯಿಂದ ಇರಬೇಕು ಮತ್ತು ಅನವಶ್ಯಕವಾಗಿ ಫೇಸ್ಬುಕ್, ಇನ್‌ಸ್ಟಾಗ್ರಾಮ ಮುಂತಾದ ಜಾಲತಾಣಗಳಲ್ಲಿ ಗೊತ್ತಿಲ್ಲದವರ ಜೊತೆಗೆ ಯಾವುದೇ ರೀತಿಯ ವ್ಯವಹಾರ




ಇಟ್ಟುಕೊಳ್ಳಬಾರದು. ಯಾವುದೇ ವೆಬ್‌ಸೈಟ್‌ಗಳನ್ನು ಮತ್ತು ಲಿಂಕ್‌ಗಳನ್ನು ಅವುಗಳು ಅತೆಂಟಿಕ್ ಚೆಕ್ ಮಾಡದೆ ಒತ್ತಬಾರದು. ಹಾಗೆ ಮಾಡುವುದರಿಂದ ನಮ್ಮ ಖಾತೆಯಲ್ಲಿನ ಹಣ ಖದೀಮರು ಕದಿಯುವುದಕ್ಕೆ ಅವಕಾಶ ನೀಡಿದಂತಾಗುತ್ತದೆ. ಅದಕ್ಕಾಗಿ ಮೊಬೈಲ್ ಬಳಸುವಾಗ ಅರವಿನೊಂದಿಗೆ ಬಳಸಿರಿ ಎಂದು ಯುವಕರಿಗೆ ಕಿವಿಮಾತು ಹೇಳಿದರು.

ಮುಖ್ಯ ಅತಿಥಿಗಳಾಗಿ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ಡಾ. ಜಿನದತ್ತ ಹಡಗಲಿ, ಹಿಂದಿನ ಕೋಶಾಧ್ಯಕ್ಷರಾದ ಶಿವಾನಂದ ಭಾವಿಕಟ್ಟಿ, ಇದ್ದರು. ಕಾರ್ಯಕಾರಿ ಸಮಿತಿ ಸದಸ್ಯರಾದ ಡಾ. ಮಹೇಶ ಧ. ಹೊರಕೇರಿ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು.

ಕರ್ನಾಟಕ ವಿದ್ಯಾವರ್ಧಕ ಸಂಘದ ಪ್ರಧಾನ ಕಾರ್ಯದರ್ಶಿ ಶಂಕರ ಹಲಗತ್ತಿ ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ, ವಿದ್ಯಾರ್ಥಿಗಳು ತಮ್ಮ ಗ್ರಾಮಕ್ಕೆ ಸ್ವಯಂ ಸೇವೆ ಸಲ್ಲಿಸಲು ಆಗಮಿಸಿದ ಸಂದರ್ಭದಲ್ಲಿ ಅವರ ಜೊತೆಗೆ ಊರಿನ ಯುವಕರು ಕೈ ಜೊಡಿಸಿದರೆ ಒಂದು ಗ್ರಾಮವನ್ನು ಮಾದರಿ ಗ್ರಾಮವನ್ನಾಗಿ ಮಾಡಬಹುದೆಂದರು.

ಶಾಂತಲಾ ಸಂಶಿಮಠ ಹಾಗೂ ಸಂಗಡಿಗರು ಪ್ರಾರ್ಥಿಸಿದರು. ನೀಲಮ್ಮ ಕಲಕೇರಿ ಕಾರ್ಯಕ್ರಮ ನಿರೂಪಿಸಿದರು. ಸಮಾರಂಭದಲ್ಲಿ ಎನ್.ಎಸ್.ಎಸ್ ಕಾರ್ಯಕ್ರಮ ಅಧಿಕಾರಿ ಮಹಾದೇವ ಉಳ್ಳಾಗಡ್ಡಿ, ಉಪನ್ಯಾಸಕಾರದ ಅಕ್ಷತಾ ಕುಬಿಹಾಳ, ಎನ್.ಎಂ. ನಿಂಬಣ್ಣವರ, ರೆಹಮಾನಸಾಬ ಗೋಳಲ್ಲಿ ಹಾಗೂ ಸ್ವಯಂ ಸೇವಕರು ಊರಿನ ಹಿರಿಯರು, ಮಹಿಳೆಯರು ಭಾಗವಹಿಸಿದ್ದರು.

ನಂತರ ಹರ್ಲಾಪುರದ ಶಂಭಯ್ಯ ಹಿರೇಮಠ, ಸಿ.ವಾಯ್.ಸಿ.ಡಿ ಕಲಾ ಸಂಘ, ಹರ್ಲಾಪೂರ ಹಾಗೂ ತಂಡದವರು ಜಾನಪದ ಸಂಭ್ರಮದಲ್ಲಿ ಅನೇಕ ಜಾಗೃತಿ ಗೀತೆಗಳನ್ನು ಹಾಡುವುದರೊಂದಿಗೆ ರೈತ ಗೀತೆ ಮತ್ತು ಹಾಸ್ಯ ಕಾರ್ಯಕ್ರಮ ನಡೆಸಿಕೊಟ್ಟು ಪ್ರೇಕ್ಷಕರನ್ನು ರಂಜಿಸಿದರು.

**೭. ವಿಜ್ಞಾನ ಮಂಟಪ : ಸಂಚಾಲಕರು, ಡಾ. ಜಿನದತ್ತ ಹಡಗಲಿ.**

೧. ಪ್ರಸ್ತುತ ದಿನಮಾನಗಳಲ್ಲಿ ಆಹಾರದದಲ್ಲಿ ಆರೋಗ್ಯದ ಅರಿವು ಬೇಕಾಗಿದೆ ಎಂದು ಧಾರವಾಡದ ನ್ಯಾಯವಾದಿ ಹಾಗೂ ಕಪ್ಪು ಗೋಧಿ ಹೊಸ ತಳಿ ಸಂಶೋಧಕರಾದ ಮೃತ್ಯುಂಜಯ ವಸ್ತ್ರದ ಅಭಿಪ್ರಾಯ ವ್ಯಕ್ತಪಡಿಸಿದರು.

ಅವರು ಕ.ವಿ.ವ. ಸಂಘದ ವಿಜ್ಞಾನ ಮಂಟಪವು, ಸಂಘದ ಶ್ರೀ ರಾ.ಹ. ದೇಶಪಾಂಡೆ ಸಭಾಭವನದಲ್ಲಿ ದಿನಾಂಕ: ೨೨-೧೨-೨೦೨೩ ರಂದು ಏರ್ಪಡಿಸಿದ್ದ **'ಆಹಾರದಲ್ಲಿ ಆರೋಗ್ಯ'** ವಿಷಯ ಕುರಿತು ಉಪನ್ಯಾಸ ನೀಡುತ್ತಾ ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ಅವರು, ಹಿಂದಿನ ಕಾಲದಲ್ಲಿ ಒಂಭತ್ತು ತಿಂಗಳವರೆಗೆ ಬೆಳೆಯುವ ಫಸಲನ್ನು ರೈತರು ಬೆಳೆಯುತ್ತಿದ್ದರು. ಹಾಗಾಗಿ ಮನುಷ್ಯನು ಕೂಡ ಶತಾಯುಷಿಯಾಗಿ ಬದುಕುವ ಸಾಮರ್ಥ್ಯವನ್ನು ಹೊಂದಿದ್ದ. ಇಂದಿನ ದಿನಮಾನಗಳಲ್ಲಿ ರಾಸಾಯನಿಕ ಗೊಬ್ಬರಗಳನ್ನು ಬಳಸಿ, ಮೂರು ತಿಂಗಳಿಗೊಮ್ಮೆ ಬರುವ ಫಸಲನ್ನು ಬೆಳೆದು ಆಹಾರ ಸೇವನೆ ಮಾಡುವುದರಿಂದ ಆಯುಷ್ಯ ೩೦ ವರ್ಷಕ್ಕೆ ಕ್ಷಿಣಿಸಿದೆ. ಅನೇಕ ಕಾಯಿಲೆಗಳನ್ನು ನಿರ್ಮೂಲನೆ ಮಾಡುವ ಸಾಮರ್ಥ್ಯ ಗೋಮೂತ್ರದಲ್ಲಿ ಇದೆ. ಅದನ್ನು ಬಳಸುವುದಕ್ಕಾಗಿ ಇಂದಿನ ಜನ ಹಿಂದೇಟು ಹಾಕುತ್ತಿದ್ದಾರೆ. ಸಗಣಿಯನ್ನು ಬಳೆಯುವುದರಿಂದ ಅದರ ಅಂಶಗಳು ಹಲವಾರು ರೋಗಗಳಿಗೆ ಮುಕ್ತಿಯನ್ನು ನೀಡುತ್ತಿದ್ದವು. ಇಂದು ಕೈಕವಚಗಳನ್ನು ಹಾಕಿಕೊಂಡು ಇಲ್ಲವೇ ಆಧುನಿಕ ಸಲಕರಣೆಗಳನ್ನು ಬಳಸಿಕೊಂಡು ಸಗಣಿ ಬಳೆಯುವುದು ಕಾಣಸಿಗುತ್ತದೆ. ಇದರಿಂದ ಕೈಕೆಸರಾಗದೇ ಬಾಯಿ ಮೊಸರಾಗುವುದು ಹೇಗೆ? ಎಂಬ ಪ್ರಶ್ನೆಯನ್ನು ಹಾಕಿದರು.

ಅಧ್ಯಕ್ಷತೆ ವಹಿಸಿದ ಧಾರವಾಡ ಕರ್ನಾಟಕ ಪ್ರದೇಶ ಕೃಷಿಕ ಸಮಾಜ ಜಿಲ್ಲಾ ಅಧ್ಯಕ್ಷ ಬಸವರಾಜ ಕುಂದಗೋಳ ಮಾತನಾಡಿ, ಇವತ್ತು ರಾಸಾಯನಿಕ ಗೊಬ್ಬರಗಳ ಬಳಕೆ ಅನಿವಾರ್ಯವಾಗಿದೆ. ಆಧುನಿಕ ಕೃಷಿ ಪದ್ಧತಿಗೆ ರೈತ ಹೊಂದಿಕೊಳ್ಳಲೇ ಬೇಕಾಗಿದೆ. ಇಲ್ಲದೆ ಹೋದರೆ ಬೆಳೆಗಳ ಇಳುವರಿಯ ಪ್ರಮಾಣ ಕಡಿಮೆಯಾಗಿ ರೈತನ ಆದಾಯ ಕನಿಷ್ಠ ಮಟ್ಟಕ್ಕೆ ಇಳಿದಿದೆ. ಇದರಿಂದಾಗಿ ರೈತ ಬದುಕುವುದೇ ಕಷ್ಟವಾಗಿದೆ. ವಾಸ್ತವವೇ ಬೇರೆ, ವೇದಿಕೆಯ ಮೇಲೆ ನಿಂತು ಮಾತನಾಡುವುದೇ ಬೇರೆ. ಸರಕಾರವು ಕೂಡ ರೈತರಿಗಾಗಿ ಅನೇಕ ಯೋಜನೆಗಳನ್ನು ರೂಪಿಸುತ್ತಾ ಬಂದಿದೆ. ಇದರ ಸದುಪಯೋಗವನ್ನು ರೈತರು ಪಡೆದುಕೊಂಡರೆ ಹೆಚ್ಚಿನ ಲಾಭವನ್ನು ಕೃಷಿಯಲ್ಲಿ ಪಡೆದುಕೊಳ್ಳಬಹುದು ಎಂದು ಹೇಳಿದರು.



ಶಂಕರ ಹಲಗತ್ತಿ ಪ್ರಾಸ್ತಾವಿಕವಾಗಿ ಮಾತನಾಡಿ ವಿಜ್ಞಾನ ಮಂಟಪದ ಕಾರ್ಯಗಳನ್ನು ಶ್ಲಾಘಿಸಿ ಮುಂಬರುವ ದಿನಗಳಲ್ಲಿಯೂ ಕೂಡ ವಿಜ್ಞಾನ ಮಂಟಪ ಇನ್ನೂ ಹೆಚ್ಚಿನ ಕಾರ್ಯಗಳನ್ನು ಮಾಡಿ, ಯಶಸ್ವಿಯಾಗಲಿ ಎಂದು ಆಶಿಸಿದರು.

ವಿಜ್ಞಾನ ಮಂಟಪದ ಸಂಚಾಲಕ ಡಾ. ಜಿನದತ್ತ ಹಡಗಲಿ ಸ್ವಾಗತಿಸಿದರು. ವಿದ್ವಾನ್ ನವೀನಶಾಸ್ತ್ರಿ ಪುರಾಣಿಕ ನಿರೂಪಿಸಿದರು. ಬಿ. ಜಿ. ಬಾರ್ಕಿ ವಂದಿಸಿದರು.

೨. ಆಧುನಿಕ ಜೀವನ ಶೈಲಿಯೇ ಸಕ್ಕರೆ ಕಾಯಿಲೆಯ ಮೂಲ, ಇತ್ತೀಚಿನ ದಿನಮಾನಗಳಲ್ಲಿ ಹೆಚ್ಚು ಜನರಲ್ಲಿ ಮಧುಮೇಹ ಕಾಯಿಲೆ ಕಂಡು ಬರುತ್ತಿರುವುದು ಆತಂಕಕಾರಿ ಸಂಗತಿ ಎಂದು ಮಧುಮೇಹ ಹಾಗೂ ಹೃದಯ ರೋಗ ತಜ್ಞ ಡಾ. ಶಿವಕುಮಾರ ತುರಮರಿ ಹೇಳಿದರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘದ ವಿಜ್ಞಾನ ಮಂಟಪವು ದಿನಾಂಕ: ೨೬–೧–೨೦೨೪ ರಂದು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 'ಸಕ್ಕರೆ ಕಾಯಿಲೆ ನಿಯಂತ್ರಣ ಹಾಗೂ ಪರಿಹಾರ' ವಿಷಯ ಕುರಿತು ಉಪನ್ಯಾಸ ನೀಡುತ್ತಾ ಮಾತನಾಡಿದರು.

ಮುಂದುವರೆದು ಮಾತನಾಡಿದ ಅವರು, ದೇಶದಲ್ಲಿ ೨೦೦೬ ರ ವರದಿ ಪ್ರಕಾರ ಶೇ ೯೦ ರಷ್ಟು ಜನರಲ್ಲಿ ಸಕ್ಕರೆ ಕಾಯಿಲೆ ಇರುವುದು ಕಂಡು ಬಂದಿದೆ. ಕುಟುಂಬದ ನಾಲ್ವರಲ್ಲಿ ಮೂರು ಜನರಿಗೆ ಸಕ್ಕರೆ ಕಾಯಿಲೆ ಇರುವುದು ಕಂಡುಬರುತ್ತಿದೆ. ಈ ಕಾಯಿಲೆಯಿಂದ ಮೂತ್ರಪಿಂಡ ವೈಫಲ್ಯ, ಹೃದಯಾಘಾತ, ನೇತ್ರ ಸಮಸ್ಯೆ ಇತ್ಯಾದಿ ಗಂಭೀರ ಕಾಯಿಲೆಗಳಿಗೆ ಜನರು ತುತ್ತಾಗುತ್ತಿದ್ದಾರೆ, ಜೀವನ ಶೈಲಿಯಲ್ಲಿ ಬದಲಾವಣೆ, ಹಿತಮಿತ ಸಮತೋಲಿತ ಆಹಾರ ಸೇವನೆ, ನಿಯಮಿತ ವ್ಯಾಯಾಮ, ಆತ್ಮವಿಶ್ವಾಸದಿಂದ ಇದನ್ನು ನಿಯಂತ್ರಣದಲ್ಲಿರಿಸಿಕೊಂಡು ಆರೋಗ್ಯಕರ ಜೀವನ ಸಾಗಿಸಬಹುದೆಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ನವನಗರ ಕ್ಯಾನ್ಸರ್ ಆಸ್ಪತ್ರೆ ಹಿರಿಯ ವೈದ್ಯ ಡಾ. ಎಸ್. ಪಿ. ಶೆಟ್ಟರ ಮಾತನಾಡಿ, ಇತ್ತೀಚೆಗೆ ರಸ್ತೆಬದಿಯ ಫಾಸ್ಟಫುಡ, ಜಂಕ್ ಫುಢ ಇತ್ಯಾದಿ ಅನಾರೋಗ್ಯಕರ ಆಹಾರ ಪದಾರ್ಥಗಳನ್ನು ಹೆಚ್ಚಾಗಿ ಸೇವನೆ ಮಾಡುತ್ತಿರುವುದರಿಂದ ಮತ್ತು ದೈಹಿಕ ಶ್ರಮ ಇಲ್ಲದೆ ಇರುವುದರಿಂದ ಜನರು ಹೆಚ್ಚಿನ ಪ್ರಮಾಣದಲ್ಲಿ ಸಕ್ಕರೆ ಕಾಯಿಲೆಗೆ ತುತ್ತಾಗುತ್ತಿದ್ದಾರೆ. ಚಟುವಟಿಕೆಯುಕ್ತ ಜೀವನ ಶೈಲಿ, ಉತ್ತಮ ಆಹಾರ ಪದ್ದತಿ ರೂಢಿಸಿಕೊಂಡು, ಮಾದಕ ಪದಾರ್ಥಗಳ ಸೇವನೆಯಿಂದ ದೂರ ಇದ್ದು, ಪ್ರತಿಯೊಬ್ಬ ರೋಗಿಗೂ ತನ್ನ ಬಗ್ಗೆ ತನಗೇ ವಿಶ್ವಾಸ ಇರಬೇಕು. ವೈದ್ಯರು ಕೊಡುವ ಔಷಧಿಗಳ ಜೊತೆಗೆ ರೋಗಿಯಾದವನು ಸ್ವತಃ ತಾನೂ ಕೂಡ ಈ ರೋಗದ ಹತೋಟಿಗೆ ಮನಸು ಮಾಡಬೇಕು ಅಂದಾಗ ಉತ್ತಮ ಆರೋಗ್ಯಪೂರ್ಣ ಜೀವನ ಸಾಗಿಸಲು ಸಾಧ್ಯ ಎಂದರು.

ಕಾರ್ಯಕ್ರಮದಲ್ಲಿ ನಡೆದ ಸಂವಾದದಲ್ಲಿ ಸಕ್ಕರೆ ಕಾಯಿಲೆ ಕುರಿತಾದ ಸಭೀಕರ ಅನೇಕ ಸಂದೇಹಗಳಿಗೆ ಪರಿಹಾರಗಳನ್ನು ಸೂಚಿಸಿದರು.

ಮಹಾವೀರ ಉಪಾಧ್ಯ ಸ್ವಾಗತಿಸಿದರು. ಪ್ರಧಾನ ಕಾರ್ಯದರ್ಶಿ ಶಂಕರ ಹಲಗತ್ತಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಂಘದ ವಿಜ್ಞಾನ ಮಂಟಪದ ಸಂಚಾಲಕ ಡಾ. ಜಿನದತ್ತ ಅ. ಹಡಗಲಿ ನಿರೂಪಿಸಿದರು. ವಿದ್ವಾನ ನವೀನಶಾಸ್ತ್ರಿ ಪುರಾಣಿಕ ವಂದಿಸಿದರು. ಶ್ರೀಮತಿ ಮಧುಮತಿ ಸಣಕಲ್ಲ ಪ್ರಾರ್ಥಿಸಿದರು.

## ೮. ಕಲಾ ಮಂಟಪ : ಸಂಚಾಲಕರು, ಶ್ರೀಮತಿ ವಿಶ್ವೇಶ್ವರಿ ಬ. ಹಿರೇಮಠ

೧. ಕರ್ನಾಟಕ ವಿದ್ಯಾವರ್ಧಕ ಸಂಘದ ಕಲಾಮಂಟಪವು ದಿನಾಂಕ: ೨೫–೫–೨೦೨೩ ರಂದು ಸಂಘದ ಶ್ರೀ ರಾ.ಹ. ದೇಶಪಾಂಡೆ ಸಭಾಭವನದಲ್ಲಿ ಹಿರಿಯ ಸಂಗೀತ ಕಲಾವಿದ ಶ್ರೀ ರವೀಂದ್ರ ಜಕಾತಿ, ಹುಬ್ಬಳ್ಳಿ ಅವರಿಂದ **'ಸುಗಮ ಸಂಗೀತ'** ಕಾರ್ಯಕ್ರಮ ಏರ್ಪಡಿಸಿತ್ತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಹಿರಿಯ ಸಂಗೀತ ವಿದ್ವಾಂಸ ಧಾರವಾಡದ ಶ್ರೀ ಶ್ರೀಕಾಂತ ಕುಲಕರ್ಣಿ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶಾಸ್ತ್ರೀಯ ಸಂಗೀತ ಕಲಾವಿದ ಧಾರವಾಡದ ಶ್ರೀಮತಿ ಸುಜಾತ ಕಮ್ಮಾರ (ಗುರವ) ಆಗಮಿಸಿದ್ದರು.

೨. ಕರ್ನಾಟಕ ವಿದ್ಯಾವರ್ಧಕ ಸಂಘದ ಕಲಾ ಮಂಟಪ ಹಾಗೂ ರಾಗರಂಜಿನಿ ಸಂಗೀತ ಸಂಘ, ಚನ್ನಮ್ಮನ ಕಿತ್ತೂರು ಸಹಯೋಗದಲ್ಲಿ ದಿನಾಂಕ: ೧೬–೭–೨೦೨೩ ರಂದು ಚನ್ನಮ್ಮನ ಕಿತ್ತೂರಿನ, ಗುರುವಾರ ಪೇಟೆಯ ವಿಠ್ಠಲ ದೇವಸ್ಥಾನದಲ್ಲಿ ಹಿರಿಯ ಸಂಗೀತಗಾರರಾದ ಶ್ರೀಮತಿ ಸುಜಾತಾ ಗುರವ (ಕಮ್ಮಾರ), ಧಾರವಾಡ ಅವರಿಂದ **'ಸಂಗೀತ ಕಾರ್ಯಕ್ರಮ'** ಏರ್ಪಡಿಸಿತ್ತು. ಇವರಿಗೆ ಅಲ್ಲಮಪ್ರಭು ಕಡಕೋಳ ತಬಲಾ ಹಾಗೂ ವಿನೋದ ಪಾಟೀಲ ಹಾರ್ಮೋನಿಯಂ ಸಾಥ್ ನೀಡಿದರು.

ಅಧ್ಯಕ್ಷತೆಯನ್ನು ಕರ್ನಾಟಕ ವಿದ್ಯಾವರ್ಧಕ ಸಂಘದ ಉಪಾಧ್ಯಕ್ಷರಾದ ಪ್ರೊ. ಮಾಲತಿ ಪಟ್ಟಣಶೆಟ್ಟಿ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಕಿತ್ತೂರಿನ ಎಸ್.ಜಿ. ಹೈಸ್ಕೂಲಿನ ವಿಶ್ರಾಂತ ಸಂಗೀತ ಶಿಕ್ಷಕಿ ಶ್ರೀಮತಿ ಅನುರಾಧಾ ದೇಶಪಾಂಡೆ ಆಗಮಿಸಿದ್ದರು.

೩. ಇಂದಿನ ಮಕ್ಕಳಲ್ಲಿ ದೇಶಭಕ್ತಿಯ ಬೀಜವನ್ನು ಬಿತ್ತಬೇಕಾಗಿದೆ ಮಕ್ಕಳಲ್ಲಿ ಸ್ವಾತಂತ್ರ್ಯ ಹೋರಾಟದ ಇತಿಹಾಸವನ್ನು ಅರುಹಬೇಕು ಎಂದು ಪವನ್ ಶಿಕ್ಷಣ ಸಮೂಹ ಸಂಸ್ಥೆಯ ಉಪಾಧ್ಯಕ್ಷೆ ಶ್ರೀಮತಿ ರತ್ನಾ ಪಾಟೀಲ ಅಭಿಪ್ರಾಯ ಪಟ್ಟರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘದ ಕಲಾ ಮಂಟಪವು ದಿನಾಂಕ: ೧೧–೮–೨೦೨೩ ರಂದು ಆಯೋಜಿಸಿದ್ದ ಪ್ರಾಥಮಿಕ ಹಾಗೂ ಪ್ರೌಢಶಾಲಾ ಮಕ್ಕಳಿಗಾಗಿ ಧಾರವಾಡದ ಕವಿಗಳೇ ಬರೆದಿರುವ **ದೇಶಭಕ್ತಿ ಗೀತೆಗಳ ಸ್ಪರ್ಧೆ**ಯ ಉದ್ಘಾಟಕರಾಗಿ ಮಾತನಾಡುತ್ತಿದ್ದರು.

ಧಾರವಾಡದ ಕವಿಗಳೇ ಬರೆದಿರುವ ದೇಶಭಕ್ತಿ ಗೀತೆಗಳನ್ನು ಪ್ರಸ್ತುತಪಡಿಸಬೇಕು ಎಂದು ಮಕ್ಕಳಲ್ಲಿ ತಿಳಿಸಿದ್ದು ಅಭಿನಂದನೀಯ. ಧಾರವಾಡದ ಕವಿಗಳು ರಾಷ್ಟ್ರದಲ್ಲಿ ಹೆಸರು ಮಾಡಿದವರು ಅವರ ರಚನೆಗಳನ್ನು ಮಕ್ಕಳು ಹಾಡಿ ಪ್ರಸ್ತುತಪಡಿಸಿದ್ದು ಮನಸ್ಸಿಗೆ ನಿಜವಾಗಿಯೂ ಮುದ ನೀಡಿತು ಎಂದರು. ಸಂಗೀತಕ್ಕೆ ಸರ್ವರೋಗವನ್ನು ಗುಣಪಡಿಸುವ ಶಕ್ತಿ ಇದೆ. ಇಂದಿನ ಮಕ್ಕಳೇ ನಾಳಿನ ದೇಶದ ಭವಿಷ್ಯ ನಿರ್ಮಾಪಕರಾಗಿರುವುದರಿಂದ ಮಕ್ಕಳನ್ನು ದೈಹಿಕವಾಗಿ ಹಾಗೂ ಮಾನಸಿಕವಾಗಿ ಸದೃಢಗೊಳಿಸಬೇಕಾಗಿದೆ. ಧಾರವಾಡದ ಕವಿಗಳಾದ ದ.ರಾ. ಬೇಂದ್ರೆ, ಚೆನ್ನವೀರ ಕಣವಿ, ವ್ಹಿ.ಸಿ. ಐರಸಂಗ, ಎಂ.ಡಿ. ಗೋಗೇರಿ, ನರಸಿಂಹ ಪರಾಂಜಪೆ ಮುಂತಾದವರು ಬರೆದಂತ ಕವಿತೆಗಳನ್ನು ಹಾಡಿದ್ದು ಅಭಿನಂದನೀಯ ಎಂದರು.



ಅತಿಥಿಗಳಾಗಿ ಆಗಮಿಸಿದ್ದ ಚಂದ್ರಶೇಖರ್ ಅಮೀನಗಡ ಅವರು ಮಾತನಾಡಿ, ಶಾಲಾ, ಕಾಲೇಜುಗಳಲ್ಲಿ ಮಕ್ಕಳಿಗೆ ದೇಶ ಕುರಿತು ದೇಶದ ಇತಿಹಾಸ ಹಾಗೂ ದೇಶಾಭಿಮಾನದ ಕುರಿತು ಶಿಕ್ಷಣ ನೀಡಬೇಕಾಗಿದೆ. ದೇಶಭಕ್ತಿ ಗೀತೆಗಳು ಹಾಡುವುದರ ಮೂಲಕ ಮಕ್ಕಳು ವ್ಯಕ್ತಪಡಿಸಿದ ಭಾವನೆಗಳನ್ನು ಅಭಿನಂದಿಸಿದರು. ಇಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರಿಂದ ಮಕ್ಕಳಲ್ಲಿ ನಾಡಿನ ಕವಿಗಳ, ದೇಶದ ಸ್ವಾತಂತ್ರ್ಯಕ್ಕೆ ಕಾರಣರಾದವರ ಕುರಿತು ದೇಶಭಕ್ತಿ ಗೀತೆಗಳನ್ನು ಹಾಡಿಸುವುದರ ಮೂಲಕ ಕನ್ನಡ ನಾಡು–ನುಡಿ, ಭಾಷೆ ಹಾಗೂ ದೇಶ ಕುರಿತಂತೆ ಒಳ್ಳೆಯ ಪರಿಕಲ್ಪನೆಯನ್ನು ನೀಡುತ್ತದೆ ಎಂದರು. ಹಿರಿಯರ ತ್ಯಾಗ, ಬಲಿದಾನದಿಂದ ಇಂದು ಸ್ವತಂತ್ರ ಭಾರತದಲ್ಲಿ ನಾವು ಬದುಕಿದ್ದು, ಅದರ ಘನತೆಯನ್ನು ಉಳಿಸಿಕೊಂಡು ಹೋಗಬೇಕಾಗಿದೆ. ಮಕ್ಕಳು ನಮ್ಮ ನಾಡಿನ ಭವಿಷ್ಯವಾಗಿದ್ದು ಅವರಲ್ಲಿ ಒಳ್ಳೆಯ ಭಾವನೆಗಳನ್ನು ನಾವು ಬಿತ್ತಬೇಕಾಗಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ಚಂದ್ರಕಾಂತ ಬೆಲ್ಲದ, ಮಾತನಾಡಿ ದೇಶಭಕ್ತಿ ಗೀತೆಯನ್ನು ಹಾಡಿದ ಎಲ್ಲ ಮಕ್ಕಳನ್ನು ಅಭಿನಂದಿಸಿದರು. ಸ್ಪರ್ಧೆಯಲ್ಲಿ ಧಾರವಾಡ ಹಾಗೂ ಹುಬ್ಬಳ್ಳಿಯ ಸುಮಾರು ೧೮ಕ್ಕೂ ಹೆಚ್ಚು ಪ್ರೌಢಶಾಲೆ ಹಾಗೂ ಪ್ರಾಥಮಿಕ ಶಾಲೆಗಳ ಮಕ್ಕಳು ಭಾಗವಹಿಸಿದ್ದರು.

ದೇಶಭಕ್ತಿ ಗೀತೆ ಸ್ಪರ್ಧೆಯಲ್ಲಿ ಪ್ರೌಢಶಾಲಾ ವಿಭಾಗದಲ್ಲಿ ಭಾಗವಹಿಸಿದ್ದ ಆರ್.ಎಲ್.ಎಸ್ ಪ್ರೌಢಶಾಲೆ ಪ್ರಥಮ ಸ್ಥಾನ, ಮಲ್ಲಸಜ್ಜನ ಆಂಗ್ಲ ಮಾಧ್ಯಮ ಶಾಲೆ ದ್ವಿತೀಯ ಹಾಗೂ ಸರಕಾರಿ ಪ್ರೌಢಶಾಲೆ, ಧಾರವಾಡ ಮೂರನೇ ಬಹುಮಾನವನ್ನು ಪಡೆಯಿತು. ಪ್ರಜೆಂಟೇಷನ್ ಬಾಲಕಿಯರ ಪ್ರೌಢಶಾಲೆ ಹಾಗೂ ಅಂಜುಮನ್ ಪ್ರೌಢಶಾಲೆ, ಧಾರವಾಡ ಇವುಗಳು ಸಮಾಧಾನಕರ ಬಹುಮಾನವನ್ನು ಪಡೆದವು.

ಪ್ರಾಥಮಿಕ ಶಾಲಾ ಮಕ್ಕಳ ವಿಭಾಗದಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ರೆವಡಿಹಾಳ, ಜೆ.ಎಸ್.ಎಸ್. ಕನ್ನಡ ಮಾಧ್ಯಮ ಶಾಲೆ ದ್ವಿತೀಯ ಸ್ಥಾನ ಪಡೆದರೆ ವಿದ್ಯಾರಣ್ಯ ಪ್ರಾಥಮಿಕ ಶಾಲೆಯ ಮಕ್ಕಳು ತೃತೀಯ ಸ್ಥಾನವನ್ನು ಪಡೆದರು. ಬಹುಮಾನ ಪಡೆದ ಹಾಗೂ ಭಾಗವಹಿಸಿದ ಎಲ್ಲ ಮಕ್ಕಳಿಗೂ ಪ್ರಮಾಣ ಪತ್ರ ವಿತರಿಸಲಾಯಿತು. ನಿರ್ಣಾಯಕರಾಗಿ ಅನೀಲ ಮೇತ್ರಿ ಹಾಗೂ ಮಲ್ಲಮ್ಮ ದಳವಾಯಿ ಅವರು ಆಗಮಿಸಿದ್ದರು.

ಸಹ ಕಾರ್ಯದರ್ಶಿ ಶಂಕರ ಕುಂಬಿ ಸ್ವಾಗತಿಸಿದರು. ಕಲಾ ಮಂಟಪದ ಸಂಚಾಲಕಿ ವಿಶ್ವೇಶ್ವರಿ ಹಿರೇಮಠ ಪ್ರಾಸ್ತವಿಕವಾಗಿ ಮಾತನಾಡಿದರು. ಮೇಘಾ ಹುಕ್ಕೇರಿ ವಂದಿಸಿದರು. ಆಶಾ ಸೈಯದ್ ನಿರೂಪಿಸಿದರು.

೪. ಕಾವ್ಯಕ್ಕಿರುವಷ್ಟೇ ಮಹತ್ವ ಸಂಗೀತಕ್ಕಿದೆ. ಸಂಗೀತವನ್ನು ಭಾವಪೂರ್ಣವಾಗಿ ಹಾಡಬೇಕು ಎಂದು ಹಿರಿಯ ಹಿಂದೂಸ್ತಾನಿ ಗಾಯಕರಾದ ಡಾ. ಮೃತ್ಯುಂಜಯ ಶೆಟ್ಟರ ಹೇಳಿದರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘದ ಕಲಾಮಂಟಪವು ದಿನಾಂಕ: ೪–೧೦–೨೦೨೩ ರಂದು ರಂದು ಆಯೋಜಿಸಿದ್ದ ಸುಗಮ ಸಂಗೀತ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ಅವರು, ಕಾವ್ಯ ಮತ್ತು ಸಂಗೀತ ಎರಡು ಸಮ್ಮಿಳಿತಗೊಂಡಾಗ ಅದರ ಪರಿಣಾಮ ಮತ್ತು ಪ್ರಭಾವ ಅತ್ಯಂತ ಹೆಚ್ಚು ರಸಾನುಭೂತಿ ತಂದುಕೊಡುತ್ತದೆ. ಹಿರಿಯ ಸಂಗೀತಗಾರರೆಲ್ಲಾ ಸಭಾಗೌರವದೊಂದಿಗೆ ವಿಚಾರ ಮಾಡಿ ಹಾಡುತ್ತಿದ್ದರು. ಭಾರತೀಯ ಸಂಗೀತದ ಯಾವುದೇ ಪ್ರಕಾರಕ್ಕೂ ಒಂದು ಮಾಂತ್ರಿಕತೆ ಇದೆ. ಶಬ್ದಗಳಿಗೆ, ಅಕ್ಷರಗಳಿಗೆ ತನ್ನದೇ ಆದ ಬಣ್ಣ, ಭಾವರಸವಿದೆ. ಸಂಗೀತದಲ್ಲಿ ಸ್ವರಗಳನ್ನು ಕಿತ್ತುಕೊಳ್ಳುವದಲ್ಲ ಎತ್ತಿಕೊಳ್ಳಬೇಕು. ಗುರುಗಳು ಕಲಿಸಿದ ಅಂಶಗಳನ್ನು ಇಂದಿನ ಯುವಸಂಗೀತಗಾರರು ತಮ್ಮ ಸಂಗೀತ ಅಭ್ಯಾಸದಲ್ಲಿ ತೊಡಗಿಸಿಕೊಳ್ಳಬೇಕು ಎಂದರು.

ಮುಖ್ಯ ಅತಿಥಿ ಹಾಗೂ ಸಂತ ಶಿಶುನಾಳ ಶರೀಫ್ ಪ್ರಶಸ್ತಿ ಪುರಸ್ಕೃತ ಪಂ. ವಾದಿರಾಜ ನಿಂಬರಗಿ ಅವರನ್ನು ಸಂಘದಿಂದ ಗೌರವಿಸಿ ಸನ್ಮಾನಿಸಲಾಯಿತು. ಸನ್ಮಾನಕ್ಕೆ ಪ್ರತಿಕ್ರಿಯಿಸಿ ಈ ಸನ್ಮಾನ ಎಲ್ಲ ವಾದ್ಯ ಸಂಗೀತಗಾರರಿಗೆ ಸಲ್ಲುತ್ತದೆ. ಮರೆತು ಹೋಗುತ್ತಿರುವ ವಾದ್ಯ ಸಂಗೀತಕ್ಕೆ ಜೀವ ತುಂಬುವ ಕೆಲಸವಾಗಬೇಕಾಗಿದೆ. ನನ್ನನ್ನು ಸನ್ಮಾನಿಸಿದ್ದಕ್ಕಾಗಿ ಸಂಘಕ್ಕೆ ಕೃತಜ್ಞತೆ ಸಲ್ಲಿಸಿ, ಸಂಗೀತ ಮತ್ತು ಕಲಾವಿದರನ್ನು ಉಳಿಸಿ, ಬೆಳೆಸುವಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘ ಕಾರ್ಯ ಮಾಡುತ್ತಿರುವುದು ಶ್ಲಾಘನೀಯ ಎಂದರು.

ಇದೇ ಸಂದರ್ಭದಲ್ಲಿ ಉದಯವಾಗಲಿ ಚೆಲುವ ಕನ್ನಡ ನಾಡು ಗೀತೆಯ ರಚನಾಕಾರ ಹುಯಿಲಗೋಳ ನಾರಾಯಣರಾವ ಅವರ ೧೪೦ನೇ ಜನ್ಮದಿನದ ನಿಮಿತ್ತ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ, ಅವರನ್ನು ಸ್ಮರಿಸಲಾಯಿತು.

ಧಾರವಾಡ ಹಿರಿಯ ಸಂಗೀತ ಕಲಾವಿದ ಪಂ. ಶ್ರೀಕಾಂತ ಕುಲಕರ್ಣಿ ಅವರು ಸುಗಮ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು. ತಬಲಾದಲ್ಲಿ ಅನಿಲ ಮೇತ್ರಿ ಸಾಥ್ ನೀಡಿದರು.

ಜಾನಪದ ಸಂಶೋಧನಾ ಕೇಂದ್ರದ ಸಂಗೀತ ಬಳಗ ಆರಂಭದಲ್ಲಿ ಸ್ವಾಗತ ಗೀತೆ ಹಾಡಿದರು. ಶಂಕರ ಕುಂಬಿ ಸ್ವಾಗತಿಸಿದರು. ಶಂಕರ ಹಲಗತ್ತಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಲಾ ಮಂಟಪದ ಸಂಚಾಲಕಿ ವಿಶ್ವೇಶ್ವರಿ ಹಿರೇಮಠ ಕಾರ್ಯಕ್ರಮ ನಿರೂಪಿಸಿದರು. ಶಿವಾನಂದ ಭಾವಿಕಟ್ಟಿ ವಂದಿಸಿದರು.

೩. ಕವಿಗಳ ಕಾವ್ಯ ಜನಪ್ರಿಯವಾಗುವುದು ಸಂಗೀತ ಕಲಾವಿದರಿಂದ ಪುಸ್ತಕದೊಳಗಿರುವುದು ಮಸ್ತಕದೊಳಗೆ ಇಳಿದಾಗ ಮಾತ್ರ ಅದಕ್ಕೊಂದು ಅರ್ಥ ಸಿಗುತ್ತದೆ ಎಂದು ಆಕಾಶವಾಣಿ ಧಾರವಾಡದ ಕಾರ್ಯಕ್ರಮ ನಿರ್ವಾಹಕ ಅಧಿಕಾರಿಗಳಾದ ಶರಣಬಸವ ಚೋಳಿನ್ ಅವರು ಅಭಿಪ್ರಾಯ ಪಟ್ಟರು.

ಕರ್ನಾಟಕ ವಿದ್ಯಾವರ್ಧಕ ಸಂಘದ ಕಲಾಮಂಟಪವು ದಿನಾಂಕ: ೩೧–೧–೨೦೨೪ ರಂದು ಸಂಘದ ಶ್ರೀ ರಾ.ಹ. ದೇಶಪಾಂಡೆ ಸಭಾಭವನದಲ್ಲಿ ಆಯೋಜಿಸಿದ್ದ **ಸಂಗೀತ ಸಂಜೆ** ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಮುಂದುವರೆದು ಕಲೆಯನ್ನ ಆಸ್ವಾದಿಸುವುದರಿಂದ ಬದುಕು ಕಲಾತ್ಮಕವಾಗಿರುತ್ತದೆ, ಹೃದಯವಂತಿಕೆಯಿಂದ ಕೂಡಿರುತ್ತದೆ. ನಾವು ಭೌತಿಕವಾಗಿ ನಮ್ಮನ್ನು ತೆರೆದುಕೊಳ್ಳಬೇಕಾದರೆ ಇಂದು ನಮ್ಮ ಮಕ್ಕಳನ್ನು, ಯುವಜನತೆಯನ್ನು ಒಳ್ಳೆಯ ಮಾರ್ಗದಲ್ಲಿ ನಡೆಸಬೇಕಾಗಿದೆ. ಒಳ್ಳೆಯ ಸಂಸ್ಕಾರ ನಡುವಳಿಕೆಯಿಂದ ಇಂದಿನ ಯಾಂತ್ರಿಕ ಬದುಕಿನೊಳಗೆ ಶಾಂತಿ ಸಮಾಧಾನ ಸಿಗುತ್ತದೆ. ಅಲ್ಲದೇ ಹಿರಿಯ ಕಲಾವಿದರು ಸಮಾಜದಲ್ಲಿ ಹೊಸ ಪೀಳಿಗೆಯನ್ನು ಹುಟ್ಟು ಹಾಕಬೇಕಿದೆ. ಇವತ್ತಿನ ಸಂದರ್ಭದಲ್ಲಿ ಬದುಕಿಗೆ ಅರ್ಥವಿಲ್ಲದೆ, ವಿಚಾರಧಾರೆಗಳ ಕೊರತೆಯಿಂದ ಭ್ರಮನಿರಸನವಾಗಿ ಎತ್ತೆತ್ತಲೋ ಸಾಗುತ್ತಿದ್ದಾರೆ, ಕರ್ನಾಟಕ ವಿದ್ಯಾವರ್ಧಕ ಸಂಘ ಇಂತಹ ಕಲಾವಿದರನ್ನು ಹುಡುಕಿ, ಹೆಕ್ಕಿ ತೆಗೆದು ಸಮಾಜಕ್ಕೆ ಪರಿಚಯಿಸುವಲ್ಲಿ ಬಹಳ ಒಳ್ಳೆಯ ಕೆಲಸವನ್ನು ಮಾಡುತ್ತಿರುವದು ಶ್ಲಾಘನೀಯ.

ಕರ್ನಾಟಕದಲ್ಲಿ ಧಾರವಾಡ ಸಾಂಸ್ಕೃತಿಕ ರಾಜಧಾನಿ ಎಂದು ಕರೆಸಿಕೊಳ್ಳುವುದಲ್ಲದೆ ನಮ್ಮ ದೇಶಕ್ಕೆ ಬಹಳ ದೊಡ್ಡ ಕೊಡುಗೆಯನ್ನು ಸಂಗೀತ ಕ್ಷೇತ್ರಕ್ಕೆ ನೀಡಿದೆ ಇವತ್ತಿಗೂ ನೀಡುತ್ತಲಿದೆ. ಆ ದೆಸೆಯಲ್ಲಿ ನಮ್ಮ ಯುವ ಕಲಾವಿದರು ಸಾಗಬೇಕಿದೆ. ಕಲೆಯನ್ನು ತಪಸ್ಸಾಗಿ ತೆಗೆದುಕೊಂಡು ಅನುಭವಿಸಬೇಕಾಗಿದೆ. ಇಂದಿನ ಕಾರ್ಯಕ್ರಮದಲ್ಲಿ ಬಿ.ಸಿ. ಪಾಟೀಲ ಅವರ ತತ್ವಪದಗಳು ಹಾಗೂ ಸವಿತಾ ಮಂಗೀಯವರ ನಾಡಿನ ಹೆಸರಾಂತ ಕವಿಗಳ ಭಾವಗೀತೆಗಳು ಚೆನ್ನಾಗಿ ಮೂಡಿಬಂದವು. ಸರಕಾರ ಮತ್ತು ಸಂಘ ಸಂಸ್ಥೆಗಳು ಇಂತಹ ಕಲಾವಿದರನ್ನು ಬೆಳೆಸಬೇಕು. ಆಕಾಶವಾಣಿ ಧಾರವಾಡದ ಕೇಂದ್ರ ಇವತ್ತಿಗೂ ಅನೇಕ ಕಲಾವಿದರನ್ನು ನಾಡಿಗೆ ಪರಿಚಯಿಸುವಲ್ಲಿ ಜಾನಪದ, ನಾಟಕ, ಸಂಗೀತ, ಸುಗಮ ಸಂಗೀತ, ಯುವಜನ, ಮಹಿಳೆಯರ ಕಾರ್ಯಕ್ರಮಗಳನ್ನು ಶ್ರೋತೃಗಳಿಗೆ ತಲುಪಿಸುವಲ್ಲಿ ಯಶಸ್ವಿಯಾಗಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿಕೊಂಡು ಮಾತನಾಡಿದ ಸಂಘದ ಸಹ ಕಾರ್ಯದರ್ಶಿ ಶಂಕರ ಕುಂಬಿ ಧಾರವಾಡದಲ್ಲಿ ಮನೆಗೊಬ್ಬ ಕಲಾವಿದರಿದ್ದಾರೆ. ಕರ್ನಾಟಕ ವಿದ್ಯಾವರ್ಧಕ ಸಂಘ ಈ ದೆಸೆಯಲ್ಲಿ ಸಾಂಸ್ಕೃತಿಕವಾಗಿ, ಸಾಹಿತ್ಯಿಕವಾಗಿ ಬಹಳಷ್ಟು ಯುವ ಜನಾಂಗವನ್ನು ಬೆಳೆಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದೆ. ಸುಸಜ್ಜಿತವಾದ ಸಭಾಭವನಗಳನ್ನು ಹೊಂದಿ ಕಲಾವಿದರನ್ನು ಸಂಘಟಿಸಿ ಕಾರ್ಯಕ್ರಮಗಳನ್ನು ಮಾಡುತ್ತಿದೆ. ೧೩೪ ವರ್ಷಗಳ ಇತಿಹಾಸವುಳ್ಳ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ೧೪೦ ಕ್ಕೂ ಹೆಚ್ಚು ದತ್ತಿಗಳಿದ್ದು, ಎಲ್ಲ ದತ್ತಿಗಳನ್ನು ವೇಳೆಗೆ ಸರಿಯಾಗಿ ಉತ್ತಮ ಅತಿಥಿಗಳನ್ನ ಕರೆಸಿ, ವಿದ್ವಾಂಸರನ್ನು ಕರೆಸಿ, ಅವರ ಮೂಲಕ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸುತ್ತಿದೆ. ಕನ್ನಡ, ನಾಡು, ನುಡಿ, ನೆಲ, ಜಲ ಕುರಿತಂತೆ ಇವತ್ತಿಗೂ ಕರ್ನಾಟಕ ವಿದ್ಯಾವರ್ಧಕ ಸಂಘ ನಾಡಿನಾದ್ಯಂತ ತನ್ನ ಕಾರ್ಯ ಚಟುವಟಿಕೆಗಳನ್ನು ವಿಸ್ತರಿಸಿಕೊಂಡಿದೆ ಎಂದರು.

ಕಾರ್ಯಕ್ರಮದಲ್ಲಿ ಹುಬ್ಬಳ್ಳಿಯ ಬಿ.ಸಿ ಪಾಟೀಲ ಅವರು ತತ್ವಪದಗಳನ್ನು ಪ್ರಸ್ತುತಪಡಿಸಿ ಜನ ಮೆಚ್ಚುಗೆ ಪಡೆದರು. ಸವಿತಾ ನಿಜಗುಣಿ ಮಂಗಿ ಅವರು ಕೆ.ಎಸ್. ನರಸಿಂಹಸ್ವಾಮಿ, ಕುವೆಂಪು, ಹಿರಿಯ ಪ್ರಸಿದ್ಧ ಕವಿಗಳ ಭಾವಗೀತೆಗಳನ್ನು ಪ್ರಸ್ತುತಪಡಿಸಿದರು. ಬಸವರಾಜ ಹಿರೇಮಠ ಅವರು ತಬಲಾ ಸಾತ್ ನೀಡಿದರೆ ವಿಜಯ್ ಕುಮಾರ್ ಅರ್ಕಸಾಲಿ ಹಾರ್ಮೋನಿಯಂ ಸಾತ್ ನೀಡಿದರು.

ಆರಂಭದಲ್ಲಿ ಡಾ. ಪ್ರಭಾ ನೀರಲಗಿ ಪ್ರಾರ್ಥಿಸಿದರು. ಸಲಹಾ ಸಮಿತಿಯ ಸದಸ್ಯರಾದ ಅನಿಲ್ ಮೇತ್ರಿ ಸ್ವಾಗತಿಸಿದರು. ಕಲಾ ಮಂಟಪದ ಸಂಚಾಲಕಿ ವಿಶ್ವೇಶ್ವರಿ ಹಿರೇಮಠ ಪ್ರಾಸ್ತವಿಕವಾಗಿ ಮಾತನಾಡಿ, ಕಾರ್ಯಕ್ರಮವನ್ನು ನಿರೂಪಿಸಿದರು. ಆಶಾ ಸಯ್ಯದ ವಂದಿಸಿದರು.

೬. ಕರ್ನಾಟಕ ವಿದ್ಯಾವರ್ಧಕ ಸಂಘದ ಕಲಾ ಮಂಟಪವು ದಿನಾಂಕ: ೩೧–೩–೨೦೨೪ ರಂದು ಸಂಘದ ನಾಡೋಜ ಡಾ. ಪಾಟೀಲ ಪುಟ್ಟಪ್ಪ ಸಭಾಭವನದಲ್ಲಿ ಆಯೋಜಿಸಿದ್ದ ಸಂಪ್ರದಾಯ ಸೌರಭ ಸುವರ್ಣ ಮಹಿಳೆಯರ ಕನಸಿನ ಧಾರವಾಡ (ರಿ) ಧಾರವಾಡ ಇವರಿಂದ **ಗ್ರಾಮೀಣರ 'ಹಬ್ಬದ ಹಾಡು–ಪಾಡು ಮತ್ತು ಹಳ್ಳಿಯ ಸೊಗಡಿನಿಂದ–ಪ್ಯಾಟಿಯ ಕಡೆಗೆ ಉಡುಗೆ–ತೊಡುಗೆಯ ನಡಿಗೆ' ಕಾರ್ಯಕ್ರಮ** ಏರ್ಪಡಿಸಿತ್ತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರ್ನಾಟಕ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾದ ಶ್ರೀ ಚಂದ್ರಕಾಂತ ಬೆಲ್ಲದ ವಹಿಸಿದ್ದರು.

ಸಾಹಿತಿಗಳು ಹಾಗೂ ಧಾರವಾಡ ಆಕಾಶವಾಣಿ ಕಾರ್ಯಕ್ರಮ ಮುಖ್ಯಸ್ಥರಾದ ಡಾ. ಬಸು ಬೇವಿನಗಿಡದ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.

ನಂತರ ಸುವರ್ಣ ಮಹಿಳೆಯರ ಕನಸಿನ ಧಾರವಾಡ (ರಿ) ಧಾರವಾಡ ತಂಡದವರು ಅತ್ಯಂತ ಸೊಗಸಾಗಿ **ಗ್ರಾಮೀಣರ 'ಹಬ್ಬದ ಹಾಡು–ಪಾಡು ಮತ್ತು ಹಳ್ಳಿಯ ಸೊಗಡಿನಿಂದ–ಪ್ಯಾಟಿಯ ಕಡೆಗೆ ಉಡುಗೆ–ತೊಡುಗೆಯ ನಡಿಗೆ' ಕಾರ್ಯಕ್ರಮ** ಪ್ರಸ್ತುತಪಡಿಸಿ ಜನಮನ ಗೆದ್ದರು.

**೯. ಮಕ್ಕಳ ಮಂಟಪ : ಸಂಚಾಲಕರು, ಡಾ. ಧನವಂತ ಹಾಜವಗೋಳ.**

೧. ಮಾದಕ ವಸ್ತುಗಳ ದುರ್ಬಳಕೆ ಹಾಗೂ ವ್ಯಸನವು ನಾಗರಿಕತೆಯ ಅಧಃಪತನದ ಸಂಕೇತವಲ್ಲದೆ ೨೧ನೇ ಶತಮಾನದ ನಾಗರಿಕ ಸಮಾಜದ ದುರಂತ ಎಂದು ಧಾರವಾಡ ಡಿಮ್ಹಾನ್ಸ ಮನೋ ಆರೋಗ್ಯ ಸಾಮಾಜಿಕ ಕಾರ್ಯಕರ್ತ ಪ್ರಶಾಂತ ಪಾಟೀಲ ಅಭಿಪ್ರಾಯಪಟ್ಟರು.

ಅವರು ಕ.ವಿ.ವ. ಸಂಘದ ಮಕ್ಕಳ ಮಂಟಪವು, ಸಂಶಿಯ ಕೆ.ಎಲ್.ಇ. ಮಹಾವಿದ್ಯಾಲಯದಲ್ಲಿ ದಿನಾಂಕ: ೩–೭–೨೦೨೩ ರಂದು ಏರ್ಪಡಿಸಿದ್ದ **'ವ್ಯಸನಮುಕ್ತ ಸಮಾಜ ನಿರ್ಮಾಣದಲ್ಲಿ ವಿದ್ಯಾರ್ಥಿಗಳ ಪಾತ್ರ'** ವಿಷಯ ಕುರಿತು ಉಪನ್ಯಾಸ ನೀಡುತ್ತಾ ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ಅವರು, ಈ ನಾಡಿನ ನಿಜವಾದ ಆಸ್ತಿ ನವಯುವಕರು, ಈ ಕರಾಳ ಛಾಯೆಯಲ್ಲಿ ಸಿಲುಕಿಕೊಂಡಿರುವುದು ದಿಗಿಲು ಹುಟ್ಟಿಸುವ ಸಂಗತಿಯಾಗಿದೆ. ಮಾದಕ ವಸ್ತುಗಳ ಸೇವನೆ ಕೇವಲ ಭಾರತದಲ್ಲಿ ಮಾತ್ರವಲ್ಲ, ಪಶ್ಚಿಮ ರಾಷ್ಟ್ರಗಳಲ್ಲೂ ಸಹ ವ್ಯಾಪಕವಾಗಿ ಹರಡಿದೆ. ಯುವಕರು ಪರಿಸರದ ಪ್ರಭಾವ, ಸ್ನೇಹಿತರ ಒತ್ತಡ, ಜೀವನದ ಜಂಜಾಟ, ಕೌಟುಂಬಿಕ ವಿಘಟನೆಗಳಿಂದ ಈ ದುಶ್ಚಟಕ್ಕೆ ಬಲಿಯಾಗುತ್ತಿರುವುದು ವಿಷಾದನೀಯ. ಈ ಅಮಲಿನ ಪದಾರ್ಥಗಳ ಸೇವನೆಯಿಂದ ಯುವಕರು ಕೊಲೆ, ಸುಲಿಗೆ, ಅಪಘಾತ, ಲೈಂಗಿಕ ಅತ್ಯಾಚಾರದಂತಹ ಕೃತ್ಯ ಮಾಡುವ ಸಾಧ್ಯತೆ ಇದೆ.

ಮಾದಕ ವಸ್ತುಗಳ ಸೇವನೆಯಿಂದ ಹೃದಯಾಘಾತ, ನರ ದೌರ್ಬಲ್ಯ, ಜೀರ್ಣಕ್ರಿಯೆ ನಷ್ಟ, ರಕ್ತ ಹೀನತೆಯಂತಹ ಗಂಭೀರ ಕಾಯಿಲೆಗೆ ಬಲಿಯಾಗಬೇಕಾಗುತ್ತದೆ. ವಿದ್ಯಾರ್ಥಿಗಳು ದುಶ್ಚಟಗಳ ದಾಸರಾಗದೇ ಆರ್ಯೋಗ್ಯ ಪೂರ್ಣ ಜೀವನ ನಡೆಸಬೇಕು. ಜೊತೆಗೆ ಚರ್ಚಾಕೂಟ, ವಿಚಾರ ಸಂಕಿರಣ, ಉಪನ್ಯಾಸ, ಬೀದಿ ನಾಟಕಗಳ ಮೂಲಕ ಜನಜಾಗೃತಿ ಸಮಾಜದಲ್ಲಿ ಉಂಟು ಮಾಡಬೇಕೆಂದರು.

ಅಧ್ಯಕ್ಷತೆ ವಹಿಸಿದ್ದ ಸಂಶಿಯ ಕೆ.ಎಲ್.ಇ. ಕಾಲೇಜಿನ ಸ್ಥಾನಿಕ ಆಡಳಿತ ಮಂಡಳಿ ಅಧ್ಯಕ್ಷ' ಎ.ಬಿ. ಉಪ್ಪಿನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ ಗ್ರಾಮೀಣ ಪ್ರದೇಶದಲ್ಲಿ ಆಯೋಜಿಸುತ್ತಿರುವ ಈ ಕಾರ್ಯಕ್ರಮ ಅರ್ಥಪೂರ್ಣವಾಗಿದ್ದು, ಯುವಕರನ್ನು ಎಚ್ಚರಿಸುವಲ್ಲಿ ಕ.ವಿ.ವ. ಸಂಘದ ಮಕ್ಕಳ ಮಂಟಪದ ಕಾರ್ಯ ಶ್ಲಾಘನೀಯ ಎಂದರು.

ಶಂಕರ ಕುಂಬಿ, ವೀರಣ್ಣ ಒಡ್ಡೀನ ಉಪಸ್ಥಿತರಿದ್ದು ಮಾತನಾಡಿದರು. ಕಾಲೇಜಿನ ಪ್ರಾಚಾರ್ಯ ಪ್ರೊ. ರಮೇಶ ಅತ್ತಿಗೇರಿ ಸ್ವಾಗತಿಸಿದರು. ಮಕ್ಕಳ ಮಂಟಪದ ಸಂಚಾಲಕ ಡಾ. ಧನವಂತ ಹಾಜವಗೋಳ ಪ್ರಾಸ್ತಾವಿಕವಾಗಿ ಮಾತನಾಡಿದರು. ಎಸ್.ಸಿ. ಅಂಗಡಿ ನಿರೂಪಿಸಿದರು. ಶ್ರೀಮತಿ ಚನ್ನಮ್ಮ ಗುರುಮಠ ವಂದಿಸಿದರು.

೨. ಕವಿಯು ತನ್ನ ಕಲ್ಪನಾ ವಿಹಾರದಲ್ಲಿ ಕಂಡ ಅಗಮ್ಯವಾದ ಚಿತ್ರಣಗಳನ್ನು ಕಾವ್ಯಾತ್ಮಕಗೊಳಿಸುತ್ತಾನೆ. ಕಾವ್ಯವು ಕವಿಯ ಪ್ರತಿಭಾ ಸೃಷ್ಟಿಯಾಗಿದ್ದು, ಅದು ವಿಶಿಷ್ಟವಾದ ಹೃದ್ಯ ಸೃಷ್ಟಿಯ ಸಂಗಮವೂ ಆಗಿದೆ ಎಂದು ಲೇಖಕ ಡಾ. ಗುರುಮೂರ್ತಿ ಯರಗಂಬಳಿಮಠ ಪ್ರತಿಪಾದಿಸಿದರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘದ **'ಮಕ್ಕಳ ಮಂಟಪ'** ಹಾಗೂ ಶಿರೂರಿನ ಶ್ರೀ ಎನ್. ಜಿ. ಬಾಳನಗೌಡ್ರ ಸರಕಾರಿ ಪ್ರೌಢ ಶಾಲೆಯ ಜಂಟಿ ಆಶ್ರಯದಲ್ಲಿ ದಿನಾಂಕ: ೫–೧–೨೦೨೪ ರಂದು ಶಿರೂರ ಗ್ರಾಮದ ಪ್ರೌಢ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಶಾಲೆಯ ಹಳೆಯ ವಿದ್ಯಾರ್ಥಿನಿ ಲಕ್ಷ್ಮಿಬಾಯಿ ಪಾಟೀಲ ಶಿರೂರ ಬರೆದ **'ಪ್ರೀತಿಯ ಹಣತೆ' ಕವನ ಸಂಕಲನ ಬಿಡುಗಡೆ** ಮತ್ತು **ತಾಯಂದಿರ ದಿನ**ದ ಸಮಾರಂಭದಲ್ಲಿ ಕೃತಿ ಪರಿಚಯಮಾಡಿ ಮಾತನಾಡುತ್ತಿದ್ದರು.

ಕಾವ್ಯ ಒಂದು ಸ್ವತಂತ್ರ ಜಗತ್ತು. ಕವಿಯು ತನ್ನ ಅಂತರಂಗ ಮತ್ತು ಬಹಿರಂಗದ ಬದುಕಿನ ಅವಲೋಕನದಲ್ಲಿ ಕಂಡ ವಿಭಿನ್ನ ಅನುಭವಗಳನ್ನು ಕಾವ್ಯದ ಚೌಕಟ್ಟಿನಲ್ಲಿ ಪೋಣಿಸಿ ಅಭಿವ್ಯಕ್ತಿಸುತ್ತಾನೆ. ಯಾವುದೇ ಕಾವ್ಯವಿದ್ದರೂ ಅದು ಕವಿಯ ಮತ್ತು ಓದುಗರ ಮಧ್ಯೆ ಹೃದಯ ಸಂವಾದವನ್ನು ಹುಟ್ಟುಹಾಕುತ್ತದೆ. ಎಲ್ಲರೂ ಕೂಡಿ ಬಾಳುವಲ್ಲಿ **'ಪ್ರೀತಿಯ ಹಣತೆ'** ಹಚ್ಚಲು ಬಯಸಿರುವ ಲಕ್ಷ್ಮಿಬಾಯಿ ಪಾಟೀಲ ಅವಳ ಕಾವ್ಯ ಕೃಷಿಯಲ್ಲಿ ತನ್ನೂರು, ಕೌಟುಂಬಿಕ ಸಂಬಂಧಗಳು, ಬದುಕಿನ ಸಂತೋಷ, ಸತ್ಯದ ಹಾದಿ, ಭಾವೈಕ್ಯತೆ, ವಿಜ್ಞಾನ, ಸ್ತ್ರೀಶಕ್ತಿ, ಕನಸುಗಳು, ನಿಸರ್ಗ, ಅಕ್ಷರದ ಬೆಳಕು ಮುಂತಾದ ಮನುಕುಲಕ್ಕೆ ಹತ್ತಿರವಾದ ಅನೇಕ ಸಂಗತಿಗಳನ್ನು ಕೇಂದ್ರೀಕರಿಸಿರುವುದು ಗಮನಸೆಳೆಯುತ್ತದೆ ಎಂದರು.

ಸಾಹಿತಿ ಪ್ರೊ. ಧನವಂತ ಹಾಜವಗೋಳ ಮಾತನಾಡಿ, ವಿದ್ಯಾರ್ಥಿಗಳು ನಿರಂತರ ಆಳವಾದ ಅಧ್ಯಯನಕ್ಕೆ ತೊಡಗಿಕೊಂಡಿರಬೇಕು. ಕನ್ನಡ ಮಾತನಾಡುವ, ಗ್ರಹಿಸುವ, ಓದುವ ಮತ್ತು ಬರೆಯುವ ಕೌಶಲ್ಯಗಳನ್ನು ರೂಡಿಸಿಕೊಂಡಾಗ ಜ್ಞಾನಾರ್ಜನೆ ನಿಖರ ನೆಲೆಯಲ್ಲಿ ಸಾಧ್ಯವಾಗುತ್ತದೆ. ತಮ್ಮ ಅನುಭವದೊಂದಿಗೆ ಅಧ್ಯಯನದ ಸಂಗತಿಗಳನ್ನು ಸಮೀಕರಿಸಬೇಕು. ವ್ಯಾಪಕ ಭಾಷಾಪ್ರಭುತ್ವ ಪಡೆದುಕೊಂಡಾಗ ಮಾತ್ರ ಕಾವ್ಯ ರಚನೆ ವಿಶಿಷ್ಟವಾಗಿ ಓದುಗರ ಗಮನಸೆಳೆಯುತ್ತದೆ ಎಂದರು.

ಕವನ ಸಂಕಲನ ಬಿಡುಗಡೆ ಮಾಡಿದ ಶಿರೂರ ಗ್ರಾಮದ ಭೂ ದಾನಿ, ರೈತ ಮುಖಂಡ ಶಂಕರಗೌಡ ಬಾಳನಗೌಡ್ರ ಮಾತನಾಡಿ, ಶಿರೂರ ಸರಕಾರಿ ಪ್ರೌಢ ಶಾಲೆಯ ಮುಖ್ಯಾಧ್ಯಾಪಕಿ ಡಾ. ಭಾಗ್ಯಜ್ಯೋತಿ ಕೋಟಿಮಠ ಅವರು ತಮ್ಮ ವಿದ್ಯಾರ್ಥಿನಿ ಲಕ್ಷ್ಮಿಬಾಯಿಯ ಕವಿತಾ ಶಕ್ತಿಯನ್ನು ಗುರುತಿಸಿ ಪ್ರೋತ್ಸಾಹಿಸಿ **'ಪ್ರೀತಿಯ ಹಣತೆ'** ಕವನ ಸಂಕಲನ ಮುದ್ರಣಗೊಂಡು ಬಿಡುಗಡೆಗೊಳ್ಳಲು ಕಾರಣವಾಗಿದ್ದು, ಅವರು ಅಭಿನಂದನೆಗೆ ಪಾತ್ರರಾಗಿದ್ದಾರೆ ಎಂದರು.

'ವಿದ್ಯಾರ್ಥಿಗಳ ವಿದ್ಯಾ ವಿಕಾಸದಲ್ಲಿ ತಾಯಂದಿರ ಪಾತ್ರ' ಕುರಿತು ಲಕ್ಷ್ಮೇಶ್ವರ ತಾಲೂಕು ಉಂಡೇನಹಳ್ಳಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಮುಖ್ಯಾಧ್ಯಾಪಕಿ ದೇವಕ್ಕ ಪಾಟೀಲ ಹಾಗೂ ಶಿರೂರ ಸರಕಾರಿ ಪ್ರೌಢ ಶಾಲೆ ಮುಖ್ಯಾಧ್ಯಾಪಕಿ ಡಾ. ಭಾಗ್ಯಜ್ಯೋತಿ ಕೋಟಿಮಠ ಮಾತನಾಡಿದರು. ಲೇಖಕ ಸಿದ್ಧಲಿಂಗಯ್ಯ ಕುಲಕರ್ಣಿ, ಶಿರೂರ ಗ್ರಾ.ಪಂ. ಅಧ್ಯಕ್ಷೆ ಉಮಾಶ್ರೀ ಕಾಳಿ, ಉಪಾಧ್ಯಕ್ಷ ಸಂಗನಗೌಡ ತೋಟದ, ಮಾಜಿ ಅಧ್ಯಕ್ಷ ಬಸಪ್ಪಗೌಡ ಗೌಡ್ರ, ಮಂಜುನಾಥ ಹುಲಮನಿ, ಮಹಾಂತೇಶ ಬೆನಕಣ್ಣವರ, ಶಂಕರೆಪ್ಪ ಯಮನೂರ, ಎಂ.ಎಂ. ಗಾಣಿಗೇರ, ಮಲ್ಲನಗೌಡ ಪಾಟೀಲ, ಗುರನಗೌಡ ಗೌಡರ, ಯಲ್ಲಪ್ಪ ಗೋಕಾವಿ, ಉಮೇಶ ದೇಸಾಯಿ, ನಿಂಗನಗೌಡ

ಪಾಟೀಲ, ಮಲ್ಲನಗೌಡ ಗೌಡರ, ವಿಜಯಲಕ್ಷ್ಮಿ ಕೊರವರ, ಮನೋಜ ತೋರಣಗಟ್ಟಿ, ಶಿವಾನಂದ ನಾಗೂರ, ಎನ್.ಎ. ಹೊಂಗಲ, ಲಲಿತಾಕ್ಷಿ ಯಮನಾಳ, ಶ್ರೀದೇವಿ ಕಾಳಚರಂತಿಮಠ, ಸುಮಂಗಲಾ ಪಾರ್ವತಿ ಅವರು ವೇದಿಕೆಯಲ್ಲಿದ್ದರು.

ಎಸ್.ವೈ. ಗೌಡರ ಸ್ವಾಗತಿಸಿದರು. ಪ್ರೀತಿ ನಾಯ್ಕ ನಿರೂಪಿಸಿದರು. ಪ್ರಭುಲಿಂಗ ನರೇಗಲ್ಲ ವಂದಿಸಿದರು. ಪಾಲ್ಗೊಂಡ ತಾಯಂದಿರಿಗೆ ನೆನಪಿನ ಕಾಣಿಕೆ ನೀಡಿ ಗೌರವಿಸಲಾಯಿತು.

೩. ಕರ್ನಾಟಕ ವಿದ್ಯಾವರ್ಧಕ ಸಂಘದ **'ಮಕ್ಕಳ ಮಂಟಪ'** ಹಾಗೂ ಯರಗಟ್ಟಿಯ ಶ್ರೀ ಮಹಾಂತ ದುರದುಂಡೀಶ್ವರ ಮಠ ಹಾಗೂ ಶಿವಶರಣೆ ಅಕ್ಕಮಹಾದೇವಿ ಅಕ್ಕನ ಬಳಗ ಸಹಯೋಗದಲ್ಲಿ ದಿನಾಂಕ: ೭–೧–೨೦೨೪ ರಂದು ಶ್ರೀ ಮಹಾಂತ ದುರದುಂಡೀಶ್ವರ ಮಠ, ಯರಗಟ್ಟಿಯಲ್ಲಿ, ರಂಗಸಾಮ್ರಾಟ ಅಭಿನಯ ಶಾಲೆ, ಧಾರವಾಡ ಮಕ್ಕಳಿಂದ **'ಅನುಭವ ಮಂಟಪ' ನಾಟಕ ಪ್ರದರ್ಶನ** ಮತ್ತು **ಉಪನ್ಯಾಸ** ಕಾರ್ಯಕ್ರಮ ಆಯೋಜಿಸಿತ್ತು.

ಪ. ಪೂ. ಶ್ರೀ ಮ.ನಿ.ಪ್ರ.ಸ್ವ ಸಚ್ಚಿದಾನಂದ ಮಹಾಸ್ವಾಮಿಗಳು, ಕುಮಾರೇಶ್ವರ ವಿರಕ್ತಮಠ, ಕಟಕೋಳ ಅವರು ದಿವ್ಯಸಾನ್ನಿಧ್ಯ ಹಾಗೂ ಉದ್ಘಾಟಕರಾಗಿ ಆಗಮಿಸಿದ್ದರು.

ಅತಿಥಿ ಉಪನ್ಯಾಸಕರಾಗಿ ಆಗಮಿಸಿದ್ದ ಕ್ಷೇತ್ರ ಸಂಪನ್ಮೂಲ ವ್ಯಕ್ತಿಗಳಾದ ಯರಗಟ್ಟಿಯ ಡಾ. ಬಾಳಪ್ಪ ಈ ಚಿನಗುಡಿ 'ಮಕ್ಕಳ ಮೇಲೆ ಶರಣ ಸಂಸ್ಕೃತಿ ಪ್ರಭಾ' ವಿಷಯ ಕುರಿತು ಉಪನ್ಯಾಸ ನೀಡಿದರು.

ಮುಖ್ಯ ಅತಿಥಿಗಳಾಗಿ ಯರಗಟ್ಟಿಯ ಶ್ರೀ ಮಹಾಂತ ದುರದುಂಡೀಶ್ವರಮಠದ ಅಧ್ಯಕ್ಷರಾದ ಶ್ರೀ ಮಹಾಂತೇಶ ಜಕಾತಿ ಆಗಮಿಸಿದ್ದರು. ಅಕ್ಕನಬಳಗ, ಯರಗಟ್ಟಿ ಅಧ್ಯಕ್ಷರಾದ ಶರಣೆ ಉಮಾತಾಯಿ ಪೂರ್ವಿಮಠ ಅಧ್ಯಕ್ಷತೆ ವಹಿಸಿದ್ದರು. ಯರಗಟ್ಟಿಯ ಹಿರಿಯರಾದ ಶ್ರೀ ದುಂಡಪ್ಪ ಬಾಳಿ ಹಾಗೂ ಉದ್ಯಮಿಗಳಾದ ಶ್ರೀ ಅಶೋಕ ಗಾಣಗಿ ಗೌರವ ಉಪಸ್ಥಿತರಿದ್ದರು.

* = * = * = * = *



## ಕ.ವಿ.ವ. ಸಂಘದಲ್ಲಿ ೭೭ನೇ ಸ್ವಾತಂತ್ರ್ಯೋತ್ಸವ

ಸುದೀರ್ಘ ಕಾಲದವರೆಗೆ ಭಾರತೀಯರಾದ ನಮ್ಮನ್ನು ಆಳಿದ ಬ್ರಿಟೀಷರನ್ನು ಹೊರಹಾಕುವುದಕ್ಕಾಗಿ ಅನೇಕ ಮಹನೀಯರು ನಿಸ್ವಾರ್ಥ ಭಾವದಿಂದ ದೇಶಕ್ಕಾಗಿ ತ್ಯಾಗ ಮಾಡಿದ್ದುಂಟು. ಅಂಥವರಲ್ಲಿ ನಮ್ಮ ಸಂಘದ ಹಿರಿಯರೂ ಪಾಲ್ಗೊಂಡಿದ್ದಾರೆಂಬುದು ಹೆಮ್ಮೆಯ ಸಂಗತಿ. ಸಂಘದ ಧೇಯೋದ್ದೇಶಗಳಿಗೆ ಅನುಗುಣವಾಗಿ ನಡೆದು ನಾಡಿನ ಕಲ್ಯಾಣಕ್ಕೆ ನೆರವಾಗೋಣ ಎಂದು ಕ.ವಿ.ವ. ಸಂಘದ ಕಾರ್ಯಾಧ್ಯಕ್ಷ ಬಸವಪ್ರಭು ಹೊಸಕೇರಿ ಹೇಳಿದರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ದಿನಾಂಕ: ೧೫-೮-೨೦೨೩ ರಂದು ೭೭ನೇ ಸ್ವಾತಂತ್ರ್ಯೋತ್ಸವದ ನಿಮಿತ್ತ ಧ್ವಜಾರೋಹಣವನ್ನು ನೆರವೇರಿಸಿ ಮಾತನಾಡಿದರು.

ಈ ಸಂದರ್ಭದಲ್ಲಿ ನಾಗಭೂಷಣ ಬಸವಲಿಂಗಯ್ಯ ಹಿರೇಮಠ, ಪ್ರಮೀಳಾ ಜಕ್ಕಣ್ಣವರ, ಡಾ. ಶ್ರೀಶೈಲ ಹುದ್ದಾರ, ಸುನೀತಾ ತಪಶೆಟ್ಟಿ, ದೇವಲಾಪೂರ ಅವರು ದೇಶಭಕ್ತಿಗೀತೆ ಹಾಡಿದರು. ಶ್ರೀನಿವಾಸ ಪಾಟೀಲ(ಕಡಿವಾಲ) ಕವಿತೆ ಓದಿದರು.

ಪ್ರಾರಂಭದಲ್ಲಿ ಸಂಘದ ಸಂಸ್ಥಾಪಕರಾದ ಶ್ರೀ ರಾ.ಹ. ದೇಶಪಾಂಡೆ ಅವರ ಮುತ್ಥಳಿಗೆ ಸಂಘದ ಕಾರ್ಯಾಧ್ಯಕ್ಷರಾದ ಬಸವಪ್ರಭು ಹೊಸಕೇರಿ ಮಾಲಾರ್ಪಣೆ ಮಾಡಿದರೆ, ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀಮತಿ ವಿಶ್ವೇಶ್ವರಿ ಬ. ಹಿರೇಮಠ ಸಂಘದ ಅಧ್ಯಕ್ಷರಾಗಿದ್ದ ನಾಡೋಜ ಡಾ. ಪಾಟೀಲ ಪುಟ್ಟಪ್ಪ ಅವರ ಮುತ್ಥಳಿಗೆ ಮಾಲಾರ್ಪಣೆ ಮಾಡಿದರು.

ಧ್ವಜಾರೋಹಣ ಕಾರ್ಯಕ್ರಮದಲ್ಲಿ ಸಂಘದ ಪದಾಧಿಕಾರಿಗಳಾದ ಸಂಘದ ಕೋಶಾಧ್ಯಕ್ಷ ಸತೀಶ ತುರಮರಿ, ಸಹ ಕಾರ್ಯದರ್ಶಿ ಶಂಕರ ಕುಂಬಿ, ಕಾ.ಕಾ. ಸಮಿತಿ ಡಾ. ಶೈಲಜಾ ಅಮರಶೆಟ್ಟಿ, ವೀರಣ್ಣ ಒಡ್ಡೀನ, ಗುರು ಹಿರೇಮಠ, ಡಾ. ಜಿನದತ್ತ ಹಡಗಲಿ, ಡಾ. ಧನವಂತ ಹಾಜವಗೋಳ ಹಾಗೂ ಶಿವಾನಂದ ಭಾವಿಕಟ್ಟಿ, ಆಶಾ ಸೈಯ್ಯದ, ಚಿದಾನಂದ ಮಾಸನಕಟ್ಟಿ ಸೇರಿದಂತೆ ಸಂಘದ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು

## ಕ.ವಿ.ವ. ಸಂಘದಲ್ಲಿ ಗಣರಾಜ್ಯೋತ್ಸವ ಆಚರಣೆ

ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ೭೫ ನೇ ಗಣರಾಜ್ಯೋತ್ಸವ ಅಂಗವಾಗಿ ಸಂಘದ ಅಧ್ಯಕ್ಷ ಚಂದ್ರಕಾಂತ ಬೆಲ್ಲದ ಅವರು ಧ್ವಜಾರೋಹಣ ನೇರವೇರಿಸಿ ಸರ್ವರಿಗೂ ಶುಭಾಶಯ ಕೋರಿದರು.

ಈ ಸಂದರ್ಭದಲ್ಲಿ ಪದಾಧಿಕಾರಿಗಳಾದ ಪ್ರೊ. ಮಾಲತಿ ಪಟ್ಟಣಶೆಟ್ಟಿ, ಬಸವಪ್ರಭು ಹೊಸಕೇರಿ, ಸತೀಶ ತುರಮರಿ, ಶಂಕರ ಹಲಗತ್ತಿ ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರಾದ ಡಾ. ಶೈಲಜಾ ಅಮರಶೆಟ್ಟಿ, ವೀರಣ್ಣ ಒಡ್ಡೀನ, ಗುರು ಹಿರೇಮಠ, ಡಾ. ಶ್ರೀಶೈಲ ಹುದ್ದಾರ, ಡಾ. ಜಿನದತ್ತ ಹಡಗಲಿ, ವಿಶ್ವೇಶ್ವರಿ ಬ. ಹಿರೇಮಠ, ಡಾ. ಧನವಂತ ಹಾಜವಗೋಳ ಮತ್ತು ಶಿವಾನಂದ ಭಾವಿಕಟ್ಟಿ, ಬಿ. ಎಲ್ ಪಾಟೀಲ, ಎಂ. ಎಂ. ಚಿಕ್ಕಮಠ, ಸಿಬ್ಬಂದಿ ವರ್ಗ ಮತ್ತಿತರರು ಪಾಲ್ಗೊಂಡಿದ್ದರು.

* = * = * = * =

## ಬೆಳಗಲ್ಲು ವೀರಣ್ಣ ಅವರಿಗೆ ನುಡಿನಮನ

ಬೆಳಗಲ್ಲು ವೀರಣ್ಣ ಮರೆಯಲಾಗದ ಮಾಣಿಕ್ಯ, ತಂದೆ ಬೆಳಗಲ್ಲು ಹನುಮಂತರಾಯರು ಒಬ್ಬ ಶ್ರೇಷ್ಠ ವಯೋಲಿನ ಕಲಾವಿದರಾಗಿದ್ದರು. ವೀರಣ್ಣನವರು ಮೂಲತಃ ಒಬ್ಬ ಅತ್ಯುತ್ತಮ ರಂಗಭೂಮಿಯ ನಟರಾಗಿದ್ದರು. ಅವರೊಬ್ಬ ಸ್ವಾಭಿಮಾನದ ಬದುಕನ್ನು ಬದುಕಿದವರು. ಆದರೆ ರಂಗಭೂಮಿಯಲ್ಲಿ ಜೀವನ ಕಟ್ಟಿಕೊಳ್ಳಲು ಸಾಧ್ಯವಾಗದೇ ಇದ್ದಾಗ, ಜೀವನೋಪಾಯಕ್ಕಾಗಿ ನನ್ನ ತಂದೆಯ ಬಳಿ ತೊಗಲು ಬೊಂಬೆ ಆಟ ಕಲಿತು, ಅದರಲ್ಲಿ ರಾಜ್ಯ, ರಾಷ್ಟ್ರ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ತೊಗಲು ಬೊಂಬೆ ಆಟ ಪ್ರದರ್ಶನ ಮಾಡುವ ಮೂಲಕ ಕಲೆಯ ಮಹತ್ವವನ್ನು

ಸಾರಿದರು ಮತ್ತು ಅದರಿಂದಲೇ ಜೀವನದ ಏಳ್ಗೆಯನ್ನು ಕಂಡರು ಎಂದು ಖ್ಯಾತ ಹಿಂದೂಸ್ಥಾನಿ ಗಾಯಕ ಪಂ. ಎಂ. ವೆಂಕಟೇಶಕುಮಾರ ಹೇಳಿದರು.

ಕರ್ನಾಟಕ ವಿದ್ಯಾವರ್ಧಕ ಸಂಘವು, ಶ್ರೀ ಕುಮಾರೇಶ್ವರ ಕಲ್ಚರಲ್ ಸೊಸೈಟಿ ಹಾಗೂ ಡಾ.ಪುಟ್ಟರಾಜ ಗವಾಯಿ ಪ್ರತಿಷ್ಠಾನ, ಧಾರವಾಡ ಇವರ ಸಂಯುಕ್ತಾಶ್ರಯದಲ್ಲಿ ಸಂಘದ ರಾ.ಹ.ದೇಶಪಾಂಡೆ ಸಭಾಭವನದಲ್ಲಿ ಏರ್ಪಡಿಸಿದ್ದ ಅಂತರಾಷ್ಟ್ರೀಯ ತೊಗಲು ಬೊಂಬೆ ಆಟದ ಕಲಾವಿದ "ನಾಡೋಜ ಶ್ರೀ ಬೆಳಗಲ್ಲು ವೀರಣ್ಣ ನುಡಿ–ನಮನ" ಕಾರ್ಯಕ್ರಮದಲ್ಲಿ ನುಡಿ ನಮನ ಸಲ್ಲಿಸುತ್ತಾ ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ಅವರು, ನನ್ನ ತಾಯಿಯ ಪ್ರೇರಣೆಯಂತೆ ನನ್ನನ್ನು ವೀರೇಶ್ವರ ಪುಣ್ಯಾಶ್ರಮಕ್ಕೆ ತಂದು ಸೇರಿಸುವಲ್ಲಿ ಸೋದರ ಮಾವನಾದ ಬೆಳಗಲ್ಲು ವೀರಣ್ಣನವರೇ ಕಾರಣರಾದರು. ಇಲ್ಲದೇ ಇದ್ದರೆ ನಾನೊಬ್ಬ ಹಿಂದೂಸ್ಥಾನಿ ಗಾಯಕನಾಗುತ್ತಿರಲಿಲ್ಲವೆಂದು ಹೇಳಿದರು.

ಡಾ.ವೀರಣ್ಣ ರಾಜೂರ ಮಾತನಾಡಿ, ಬೆಳಗಲ್ಲು ವೀರಣ್ಣ ಅವರು ಬಾಲ್ಯದಲ್ಲೇ ನಾಟಕದ ಗೀಳಿಗೆ ಬಿದ್ದವರು. ಪ್ರಮುಖ ಪಾತ್ರವಲ್ಲದಿದ್ದರೂ ತಮಗೆ ನೀಡಿದ ಪಾತ್ರಗಳ ಮೂಲಕ ಜನರ ಗಮನ ಸೆಳೆದವರು. ಹಾಸ್ಯ, ಸ್ತ್ರೀ, ಖಳನಾಯಕನ ಪಾತ್ರದಲ್ಲಿ ಜನಮೆಚ್ಚುಗೆ ಪಡೆದ ಅವರು ಗಾಯಕರೂ ಆಗಿದ್ದವರು. ವಿಜಯ ಸಾಸನೂರ ಅವರ ಅಣತಿಯಂತೆ ತೊಗಲು ಬೊಂಬೆ ಆಟದ ಬಗ್ಗೆ ಹೆಚ್ಚು ಗಮನ ನೀಡಿದ ಅವರು ಬಸವೇಶ್ವರ, ಬಾಪು ತೊಗಲ ಗೊಂಬೆಗಳ ಆಟಗಳ ಮೂಲಕ ಜನಪದ ಕಲೆಯನ್ನು ಹೆಚ್ಚು ಪ್ರಚಾರಕ್ಕೆ ತಂದರು ಎಂದರು.

ಡಾ. ಕೆ.ಆರ್. ದುರ್ಗಾದಾಸ ಮಾತನಾಡಿ, ವೀರಣ್ಣ ಅವರದು ಬಹುಮುಖ ಪ್ರತಿಭೆ. ಹಣಕ್ಕಾಗಿ ಕೆಲಸ ಮಾಡಿದವರಲ್ಲ. ಪ್ರಶಸ್ತಿಗೆ ಬೆನ್ನು ಬಿದ್ದವರಲ್ಲ. ಪ್ರಚಾರದ ಗೀಳು ಇದ್ದವರಲ್ಲ. ಸದಾ ಪ್ರಯೋಗಶೀಲರು. ತೊಂಬತ್ತರ ಇಳಿವಯಸ್ಸಿನಲ್ಲೂ ಹೊಸದನ್ನು ಕೊಡಬೇಕೆಂಬ ತುಡಿತ ಹೊಂದಿದವರು. ಅವರ ಪರಿಚಯದ ಪುಸ್ತಕವೊಂದು ಪ್ರಕಟವಾಗಬೇಕೆಂಬ ಸಲಹೆ ನೀಡಿದ ಅವರು ಅವಕಾಶ ಸಿಕ್ಕರೆ ಬರೆದು ಕೊಡುವ ಭರವಸೆ ನೀಡಿದರು.

ಆಕಾಶವಾಣಿಯ ನಿವೃತ್ತ ನಿಲಯ ನಿರ್ದೇಶಕ ಸಿ.ಯು. ಬೆಳ್ಳಕ್ಕಿ ಮಾತನಾಡುತ್ತಾ, ಶಿಷ್ಟ ಮಾತುಗಾರಿಕೆ, ಆಳವಾದ ಅಧ್ಯಯನ, ಕಂಚಿನ ಕಂಠದ ಹಾಡು ವೀರಣ್ಣನವರ ವೈಶಿಷ್ಟ್ಯವಾಗಿದ್ದಿತು. ನಾಟಕ, ಜಾನಪದ ಮತ್ತು ತೊಗಲು ಬೊಂಬೆಯಾಟವನ್ನು ಮೂರು ಜನ್ಮದಲ್ಲಿ ಮಾಡಬೇಕಿದಷ್ಟನ್ನು ಒಂದೇ ಜನ್ಮದಲ್ಲಿ ಮಾಡಿದ್ದಾರೆ. ಗೊಂಬೆಯಾಟದಲ್ಲಿ ಅವರ ಕೈಚಳಕ, ನೈಪುಣ್ಯತೆ ಅದ್ಭುತವಾಗಿದ್ದಿತು ಎಂದರು.

ನಟ, ನಿರ್ದೇಶಕ ಡಾ. ಶಶಿಧರ ನರೇಂದ್ರ ಮಾತನಾಡುತ್ತಾ, ಯಕ್ಷಗಾನ, ಬಯಲಾಟ, ರಂಗಭೂಮಿ ಹಾಗೂ ತೊಗಲುಬೊಂಬೆ ಶ್ರೇಷ್ಠ ಕಲಾವಿದರನ್ನು, ಮಾರ್ಗದರ್ಶಕರನ್ನು ನಾವಿಂದು ಕಳೆದುಕೊಳ್ಳುತ್ತಿರುವುದು ಬಹಳ ದುಃಖಕರವಾಗಿದೆ ಎಂದರು.

ಹಿರಿಯ ತೊಗಲುಗೊಂಬೆ ಕಲಾವಿದ, ನಟ, ನಿರ್ದೇಶಕ ಡಾ.ಪ್ರಕಾಶ ಗರೂಡ ಮಾತನಾಡುತ್ತ ವೃತ್ತಿ ರಂಗಭೂಮಿ ಹಾಗೂ ತೊಗಲುಗೊಂಬೆ ಆಟ ಎರಡೂ ಬಹಳ ದೊಡ್ಡ ಕಲೆಗಳಾಗಿದ್ದು, ಪ್ರಸ್ತುತ ಸಂದರ್ಭದಲ್ಲಿ ಇಂತಹ ಕಲೆಗಳನ್ನು ಮತ್ತು ಹಿರಿಯ ಕಲಾವಿದರನ್ನು ಕಳೆದುಕೊಳ್ಳುತ್ತಿರುವುದು ವಿಷಾದನೀಯವಾದುದು. ಬೆಳಗಲ್ಲು ವೀರಣ್ಣ ಅವರ ಮಾರ್ಗದರ್ಶನದಲ್ಲಿ ನಾನು ತೊಗಲುಬೊಂಬೆ ಆಟ ಕಲೆತು, ಕಲಾಪ್ರದರ್ಶನ ಮುಂದುವರೆಸುತ್ತಿದ್ದೇನೆ. ವೀರಣ್ಣನವರ ಸೃಜನಶೀಲತೆಯಿಂದ ಹಲವಾರು ಪೌರಾಣಿಕ ಕಥೆಗಳು ರಾಷ್ಟ್ರ–ಅಂತರಾಷ್ಟ್ರೀಯ ಮಟ್ಟದಲ್ಲಿ ತೊಗಲುಬೊಂಬೆಯಾಟದಲ್ಲಿ ಪ್ರದರ್ಶನ ಕಂಡವು ಎಂದರು.

ಕರ್ನಾಟಕ ವಿದ್ಯಾವರ್ಧಕ ಸಂಘದ ಪ್ರಧಾನ ಕಾರ್ಯದರ್ಶಿ ಶಂಕರ ಹಲಗತ್ತಿ ಮಾತನಾಡುತ್ತಾ, ಸಂಘವು ನಾಡಿನ ಕಲೆ, ಸಾಹಿತ್ಯ, ಸಂಸ್ಕೃತಿ, ನೆಲ, ಜಲ, ಭಾಷೆ ವಿಷಯಕ್ಕೆ ಸಂಬಂಧಿಸಿದಂತೆ ಸದಾ ಬೆನ್ನುಲುಬಾಗಿ ನಿಲ್ಲುತ್ತದೆ. ಈ ನಿಟ್ಟಿನಲ್ಲಿ ಬೆಳಗಲ್ಲು ವೀರಣ್ಣನವರ ಜೀವನ–ಸಾಧನೆ ಕುರಿತು ಪುಸ್ತಕ ಹೊರತರಲು ಸಿದ್ಧವಿದೆ ಎಂದರು.

ಆಕಾಶವಾಣಿ ನಿವೃತ್ತ ಕಾರ್ಯಕ್ರಮ ಅಧಿಕಾರಿ ಚನ್ನಪ್ಪ ಬೆಂಗೇರಿ ಮಾತನಾಡುತ್ತಾ, ಬೆಳಗಲ್ಲು ವೀರಣ್ಣ ಅವರು ಸ್ವಚ್ಛತಾ ಆಂದೋಲನ, ಜಲಜೀವನ ಮಿಶನ್ ನಂತಹ ಹಲವಾರು ಸರಕಾರದ ಮಹತ್ವದ ಯೋಜನೆಗಳನ್ನು

ತೊಗಲು ಬೊಂಬೆ ಆಟದ ಪ್ರದರ್ಶನದ ಮೂಲಕ ತೊಗಲುಬೊಂಬೆ ಜನಾಕರ್ಷಣೆಯಾಗುವಂತೆ ಮಾಡಿದವರು ಎಂದರು.

ರಂಗಭೂಮಿಯ ಕಲಾವಿದ ಕೊಟ್ರೇಶ್ ಅಂಗಡಿ ಮಾತನಾಡುತ್ತಾ, ರಂಗಭೂಮಿಯನ್ನು ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದೆತ್ತರಕ್ಕೇರಿಸಿದ ಧೀಮಂತ ನಟ ವೀರಣ್ಣನವರು. ಅವರು ತಮ್ಮೊಂದಿಗೆ ಒಂದೇ ನಾಟಕದಲ್ಲಿ ಪಾತ್ರದಾರಿಯಾಗಿದ್ದ ಸಂದರ್ಭದ ಕಠಿಣವಾದಂತಹ ಡೈಲಾಗ್‌ಗಳನ್ನು ನಿರರ್ಗಳವಾಗಿ ಹೇಳುವ ಛಾತಿ ವೀರಣ್ಣನವರಾಗಿದ್ದಿತು ಎಂದು ಸ್ಮರಿಸಿದರು.

ಹಿರಿಯ ಜಾನಪದ ಕಲಾವಿದ ಡಾ. ರಾಮು ಮೂಲಗಿ 'ಗೊಂಬೆ ಆಟ ನಿಲ್ಸ್ಯಾನ ನಮ್ಮಣ್ಣ, ವೀರಣ್ಣ' ಎಂಬ ಸ್ವರಚಿತ ಹಾಡು ಹಾಡುವ ಮೂಲಕ ಸ್ವರನಮನ ಸಲ್ಲಿಸಿದರು. ಪಂ. ಬಿ.ಎಸ್. ಮಠ ಅವರು ಮಾತನಾಡುತ್ತ ಅವರೊಬ್ಬ ಅತ್ಯುತ್ತಮ ಖಳನಾಯಕ, ಶಕುನಿ ಪಾತ್ರದ ಅಭಿನಯದಲ್ಲಿ ಮತ್ತು ಹಾಸ್ಯ ಪಾತ್ರಗಳಲ್ಲಿಯ ಅಭಿನಯದಲ್ಲಿ ಅತ್ಯಂತ ಪರಿಣಿತ ಕಲಾವಿದರಾಗಿದ್ದರು ಎಂದರು.

ಕ.ವಿ.ವ. ಸಂಘದ ಅಧ್ಯಕ್ಷ ಚಂದ್ರಕಾಂತ ಬೆಲ್ಲದ ಮಾತನಾಡಿ, ನಾಡು ಕಂಡ ಅತ್ಯಂತ ಪ್ರತಿಭಾವಂತ ಕಲಾವಿದನ ಅಕಾಲಿಕ ಅಗಲಿಕೆ ನಾಡಿಗೆ ತುಂಬಲಾರದ ಹಾನಿ. ಇಂತಹ ಪ್ರತಿಭಾವಂತ ಕಲಾವಿದನ ಫೋಟೋ ವಿದ್ಯಾವರ್ಧಕ ಸಂಘದಲ್ಲಿ ಇರಬೇಕು ಎಂಬ ಸಲಹೆ ನೀಡಿದರು.

## ಡಾ. ಗುರುಲಿಂಗ ಕಾಪಸೆ ಅವರಿಗೆ ನುಡಿನಮನ

ಜೀವನ ಹೇಗೆ ನಡೆಸಬೇಕು ಎಂಬುದಕ್ಕೆ ನಿದರ್ಶನವಾಗುವಂತೆ ದೇವರು ಕಾಪಸೆಯವರನ್ನು ಇಟ್ಟಿದ್ದರು. ಅಪಾರ ಪಾಂಡಿತ್ಯ ಹೊರಗಿಂದ ಪಡೆದು ಜ್ಞಾನವನ್ನು ಒಳಗಿನಿಂದ ಪಡೆದವರಾಗಿದ್ದರು. ಸಿದ್ಧವಂತರು, ತತ್ಪರರಾಗಿದ್ದರು, ಜ್ಞಾನವಂತಾರಾಗಿದ್ದರು. ಎಲ್ಲಾ ದೈವಿ ಸಂಪತ್ತ ಗುಣಗಳನ್ನು ಹೊಂದಿದವರು ಕಾಪಸೆಯವರು. ಜ್ಞಾನಿಗಳು, ಅನುಭಾವಿಗಳು, ಪಂಡಿತರಾಗಿ ನಮ್ಮ ನಡುವೆ ಇದ್ದರು ಎಂಬುದೇ ನಮ್ಮ ಸುದೈವ ಎಂದು ಜಿ.ಸಿ. ತಲ್ಲೂರ ಹೇಳಿದರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು, ೨೮-೩-೨೦೨೪ ರಂದು ನಾಡೋಜ ಡಾ. ಪಾಟೀಲ ಪುಟ್ಟಪ್ಪ ಸಭಾಭವನದಲ್ಲಿ ಆಯೋಜಿಸಿದ್ದ 'ಹಿರಿಯ ಸಾಹಿತಿ, ಅನುಭಾವಿಗಳು ಮತ್ತು ಕನ್ನಡ ಸಾಹಿತ್ಯ ಅಕಾಡೆಮಿಯ ಮಾಜಿ ಅಧ್ಯಕ್ಷ ಡಾ. ಗುರುಲಿಂಗ ಕಾಪಸೆ ಅವರಿಗೆ ನುಡಿ ನಮನದಲ್ಲಿ ಮಾತನಾಡುತ್ತಿದ್ದರು.

ನರಸಿಂಹ ಪರಾಂಜಪೆ ಕಾಪಸೆಯವರನ್ನು ಸ್ಮರಿಸುತ್ತಾ, ಅರಿವು ಅರಳಿ ಬಿಟ್ಟಿತ್ತು, ಸರಳ ಸಜ್ಜನಿಕೆಯ ಮೂರ್ತಿಯಾಗಿದ್ದ ಇವರು ಶಿಷ್ಯರಿಗೆ ಅಮೃತವನ್ನು ಉಣಿಸಿದ ಗುರುವಾಗಿದ್ದರು. ಅವರಿಗೆ ಅವರೇ ಪ್ರತಿಮೆಯಾಗಿದ್ದರು. ಜ್ಞಾನತೀರ್ಥ ಚಿಲುಮೆಯಾಗಿದ್ದರು ಎಂದರು.

ಶಾಮಸುಂದರ ಬಿದರಕುಂದಿ ಮಾತನಾಡುತ್ತಾ, ಕಾಪಸೆಯವರ ಜೀವನ ಸಂಕಲ್ಪದ ಜೀವನ. ಮಧುರಚೆನ್ನರು ಅವರ ಗುರುಗಳು. ನಲವತ್ತು ವರ್ಷಗಳ ಕಾಲ ಧಾರವಾಡದಲ್ಲಿ ನಮ್ಮ ನಡುವೆ ಇದ್ದುಕೊಂಡು ಪಾಂಡಿತ್ಯದ ಆಗರವಾಗಿದ್ದರು. ಅವರ ಮಾರ್ಗದರ್ಶನದಲ್ಲಿ ಪಿಎಚ್. ಡಿ ಮಾಡಿದೆ. ಅವರ ಮಾರ್ಗ ಅಲೌಕಿಕ ಮಾರ್ಗವಾಗಿತ್ತು. ಕನ್ನಡ ಅಧ್ಯಯನಕ್ಕೆ ಬಹುದೊಡ್ಡ ಕೊಡುಗೆ ನೀಡಿದರು. ವಿದ್ಯಾರ್ಥಿಗಳಿಗೆ ಹೇಗೆ ಪಾಠ ಮಾಡಬೇಕುಂಬುದರ ಬಗ್ಗೆ ಪ್ರಬಂಧಗಳನ್ನು ಬರೆದರು. ಮಧುರ ಚೆನ್ನರು ಇಟ್ಟ ಹೆಜ್ಜೆಯಲ್ಲಿಯೇ ಕಾಪಸೆಯವರು ನಡೆದರು ಎಂದರು.

ನಿಂಗಣ್ಣ ಕುಂಟಿ ಮಾತನಾಡುತ್ತಾ, ದೇವರ ಪೂಜೆ ಮಾಡುವುದಕ್ಕಿಂತ, ಗುಡಿಗೆ ಹೋಗುವುದಕ್ಕಿಂತ ಕಲಿಕೆಯಲ್ಲಿಯೇ ಮಕ್ಕಳನ್ನು ಮೂರ್ತಿಗಳನ್ನಾಗಿ ಮಾಡಿದರೆ ಸಾಕು ಎಂಬ ಉದಾಹರಣೆಯೊಂದಿಗೆ ಕಾಪಸೆಯವರು ಮಾಸ್ತರ ಆದವರು ಮಾದರಿಯಾಗಿರಬೇಕು ಎಂದು ಹೇಳಿದ್ದನ್ನು ಸ್ಮರಿಸಿಕೊಂಡರು.

ಎಸ್.ಜಿ. ಪಾಟೀಲ ನುಡಿನಮನ ಸಲ್ಲಿಸುತ್ತಾ ಕಾಪಸೆಯವರ ಪ್ರೀತಿ, ವಾತ್ಸಲ್ಯಕ್ಕೆ ಮಾರು ಹೋಗದವರೇ ಇಲ್ಲ. ಬಿಜಾಪೂರದ ಜ್ಞಾನಯೋಗಾಶ್ರಮದ ಮಲ್ಲಿಕಾರ್ಜುನ ಸ್ವಾಮಿಗಳ ಮಾರ್ಗದರ್ಶನದಲ್ಲಿ ನಡೆದರು ಎಂದರು.

ಸಿ.ಯು. ಬೆಳ್ಳಕ್ಕಿ ಮಾತನಾಡಿ, ಕನ್ನಡದಲ್ಲಿ ಐ.ಎ.ಎಸ್ ವಿಜಯಲಕ್ಷ್ಮಿ ಬೀದರಿ ಕಾಪಸೆಯರಲ್ಲಿ ಮೂರು ತಿಂಗಳು ತರಬೇತಿ ತೆಗೆದುಕೊಂಡರು. ಆದರ್ಶಕ್ಕೆ ಇನ್ನೊಂದು ಹೆಸರೇ ಕಾಪಸೆ. ಅವರು ಇಲ್ಲಿಯೂ ಶಾಂತರಾಗಿದ್ದರು. ಅಲ್ಲಿಯೂ ಶಾಂತರಾಗಿ ಇರುವವರು ಎಂದರು.

ಮೋಹನ ಲಿಂಬಿಕಾಯಿ ನುಡಿನಮನ ಸಲ್ಲಿಸುತ್ತಾ, ಕಾಪಸೆಯವರು ಸರಳ ಮತ್ತು ಮಾನವತಾವಾದಿ. ಇನ್ನೊಬ್ಬರ ಬಗ್ಗೆ ಅಪಾರ ಕಾಳಜಿ ಹೊಂದಿದವರು. ಎಂದೂ ಅವರು ಅಧ್ಯಯನ ಇಲ್ಲದೇ ಪಾಠ ಹೇಳಲು ಬರುತ್ತಿದ್ದಿಲ್ಲ. ಯಾವುದಕ್ಕೂ ಆಸೆಪಟ್ಟವರಲ್ಲ. ಇತಿಮಿತಿಯಲ್ಲಿ ಇರುತ್ತಿದ್ದರು ಎಂದರು.

ಸಿ.ಚನ್ನಬಸಪ್ಪ, ವೆಂಕಟೇಶ ಮಾಚಕನೂರ, ಪ್ರೊ. ಮಾಲತಿ ಪಟ್ಟಣಶೆಟ್ಟಿ, ಶ್ರೀನಿವಾಸ ವಾಡಪ್ಪಿ, ಕೋಚಿ ನುಡಿನಮನ ಸಲ್ಲಿಸಿ, ಮಾತನಾಡಿದರು. ಶಿ. ಮ. ರಾಚಯ್ಯನವರ ಕಾಪಸೆ ಅವರನ್ನು ಕುರಿತು ಸ್ವರಚಿತ ಕವನ ಓದಿದರು.

ಕಾಪಸೆಯವರ ದೇಹವನ್ನು ದಾನವಾಗಿ ಸ್ವೀಕರಿಸಿದ ವೈದ್ಯ ಡಾ. ಮಹಾಂತೇಶ ರಾಮಣ್ಣವರ ಕಾಪಸೆ ಅವರಿಗೆ ನುಡಿನಮನ ಸಲ್ಲಿಸಿ, ದೇಹದಾನ ಕುರಿತು ಜಾಗೃತಿ ನುಡಿಗಳನ್ನಾಡಿದರು.

ನುಡಿನಮನದಲ್ಲಿ ಚಂದ್ರಕಾಂತ ಬೆಲ್ಲದ, ಬಸವಪ್ರಭು ಹೊಸಕೇರಿ, ಶಂಕರ ಹಲಗತ್ತಿ, ಶಂಕರ ಕುಂಬಿ, ಡಾ. ಶೈಲಜಾ ಅಮರಶೆಟ್ಟಿ, ಡಾ. ಜಿನದತ್ತ ಹಡಗಲಿ. ಡಾ. ಮಹೇಶ ಹೊರಕೇರಿ, ಡಾ. ಧನವಂತ ಹಾಜವಗೋಳ, ಶಿವಾನಂದ ಭಾವಿಕಟ್ಟಿ, ಕೆ.ಎಚ್.ನಾಯಕ, ಅರವಿಂದ ಯಾಳಗಿ, ಬಿ.ಕೆ. ಹೊಂಗಲ, ಪ್ರಿಯದರ್ಶಿ ಕಣವಿ ಸೇರಿದಂತೆ ಕಾಪಸೆ ಪರಿವಾರದವರು ಭಾಗವಹಿಸಿದ್ದರು.

## ಸಂಘದ ಆಜೀವ ಸದಸ್ಯರ ಹಾಗೂ ಗಣ್ಯರ ನಿಧನಕ್ಕೆ ಕಂಬನಿ

ಶ್ರೀಮತಿ ಗಿರಿಜಾ ಸಿ. ಅಕ್ಕಿ, ಧಾರವಾಡ ,(ಸ.ಸಂ. ೧೭೬೮), ಶ್ರೀ ಶಾಂತಪ್ಪ ಬಸಪ್ಪ ಮತ್ತೂರ, ಧಾರವಾಡ (ಸ.ಸಂ. ೯೫೮), ಡಾ. ಬಿ.ಪಿ. ಪಾಟೀಲ, ಧಾರವಾಡ (ಸ.ಸಂ.೨೭೩), ಶ್ರೀ ಅಡಿವೆಪ್ಪ ಗುರಪ್ಪ ಸಬರದ(೬೯೫೧), ಶ್ರೀಮತಿ ಪಾರ್ವತಿದೇವಿ ಹೊ. ಮೊಗಲಿ(೧೬೮೨), ಶ್ರೀ ಬಿ.ಎಂ. ಅಮರಣ್ಣವರ(೯೭೦), ಶ್ರೀ ಚನ್ನಪ್ಪ ಪಂಚಲಿಂಗಪ್ಪ ಏಕಲಾಸಪೂರ(೫೯೦), ಶ್ರೀ ರಾಯನಗೌಡ ದ್ಯಾಮನಗೌಡ ಪಾಟೀಲ(೫೦೭೪), ಶ್ರೀ ಬಸವರಾಜ ಚನ್ನಬಸಪ್ಪ ಬಾರಿಮರದ(೭೪೪೧), ಶ್ರೀ ಶಂಕರಗೌಡಾ ಕೆಂಚನಗೌಡಾ ಪಾಟೀಲ, ಧಾರವಾಡ (೬೯೨), ಶ್ರೀ ದಯಾನಂದ ಗುರುಪುತ್ರಪ್ಪ ದೊಡವಾಡ, ಧಾರವಾಡ (೧೨೭೮), ಡಾ. (ಶ್ರೀಮತಿ) ಸುಲಭಾದತ್ತ ನೀರಲಗಿ , ಧಾರವಾಡ (೪೮೬೯), ಶ್ರೀ ಮುರಿಗೆಪ್ಪ ನೀಲಪ್ಪ ಶಿವಳ್ಳಿ, ಧಾರವಾಡ (೫೦೬೭), ಡಾ. ಕಮಲಾ ಹೆಮ್ಮಿಗೆ(೩೬೬೫), ಶ್ರೀ ವೀರಣ್ಣ ರಾಚನಗೌಡ ದೇಸಾಯಿ(೭೨೪), ಲೋಕಮಾನ್ಯ ಸಿದ್ಧಪ್ಪ ರಾಮದತ್ತ(೪೭೪೬), ಶ್ರೀ ಪ್ರಭಾಕರ ನಾಯಕ(೨೩೭), ಶ್ರೀ ಶಶಿಧರ ಪಾಟೀಲ(೧೬೯೫), ಶ್ರೀ ವಿರುಪಾಕ್ಷ ಚ. ಚಳಗೇರಿ(೨೭೫೭), ಡಾ ವಿಜಯಕುಮಾರ ಬೆಟಗಾರ (೪೪೮೧).

## ಕೃತಜ್ಞತೆಗಳು

ಕರ್ನಾಟಕ ವಿದ್ಯಾವರ್ಧಕ ಸಂಘಕ್ಕೆ ಅನುದಾನದ ಮೂಲಕ ನೆರವು ನೀಡುತ್ತಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕರ್ನಾಟಕ ಸರಕಾರ ಬೆಂಗಳೂರು ಅವರಿಗೂ ಮತ್ತು ಸಂಘದಲ್ಲಿ ದತ್ತಿ ಇರಿಸಿದ ಎಲ್ಲ ದತ್ತಿ ದಾನಿಗಳಿಗೂ ಹಾಗೂ ಸಂಘದ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಉಪನ್ಯಾಸ ನೀಡಿದ ವಿದ್ವಾಂಸರು, ಕವಿಗಳು, ಕಲಾವಿದರು, ಸಂಗೀತಗಾರರು, ಮಹಿಳಾ ಮಂಡಳಗಳು ಹಾಗೂ ಗ್ರಂಥ ಪುರಸ್ಕಾರ ಆಯ್ಕೆ ಸಮಿತಿಯಲ್ಲಿ ಮತ್ತು ಆಗಾಗ ಸಂಘದ ಸರ್ವತೋಮುಖ ಏಳ್ಗೆಯನ್ನು ಹಾರೈಸುವ ಸಮಸ್ತ ಆಜೀವ ಸದಸ್ಯರುಗಳಿಗೆ, ಸಂಘದ ಚುಟುವಟಿಕೆಗಳಲ್ಲಿ ವಿವಿಧ ರೀತಿಯಿಂದ ಪಾಲ್ಗೊಳ್ಳುತ್ತಿರುವ ಸಮಸ್ತ ಸಾರ್ವಜನಿಕರೆಲ್ಲರಿಗೂ ಕರ್ನಾಟಕ ವಿದ್ಯಾವರ್ಧಕ ಸಂಘವು ಕೃತಜ್ಞತೆ ಸಲ್ಲಿಸುತ್ತದೆ.

**ಶಂಕರ ಹಲಗತ್ತಿ**
ಪ್ರಧಾನ ಕಾರ್ಯದರ್ಶಿ
ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ

ಧಾರವಾಡ
೩೧-೩-೨೦೨೪

## ೬೮ ನೇ ಕನ್ನಡ ರಾಜ್ಯೋತ್ಸವ ಅಂಗವಾಗಿ

### ದಿನಾಂಕ: ೧-೧೧-೨೦೨೩ ರಿಂದ ಒಂದು ತಿಂಗಳ ಕಾರ್ಯಕ್ರಮ

*** ನಾಡ ಹಬ್ಬದ ತಿಂಗಳ ಕಾರ್ಯಕ್ರಮಕ್ಕೆ ಚಾಲನೆ**

ಕರ್ನಾಟಕ ಏಕೀಕರಣ ಸಂದರ್ಭದಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘದ ಕೊಡುಗೆ ಅಪಾರ. ಹೀಗಾಗಿ ಮುಂದಿನ ದಿನಗಳಲ್ಲಿ ಸಂಘದ ಬೆಳವಣಿಗೆ, ಅಭಿವೃದ್ಧಿಗೆ ಸರಕಾರ ಬದ್ಧವಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್ ಹೇಳಿದರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು, ದಿನಾಂಕ: ೧-೧೧-೨೦೨೩ ರಂದು ೬೮ನೇ ಕರ್ನಾಟಕ ರಾಜ್ಯೋತ್ಸವ ಅಂಗವಾಗಿ, 'ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ' 'ಕರ್ನಾಟಕ ಸಂಭ್ರಮ-೫೦' ಕನ್ನಡಾಂಬೆಗೆ ಗೌರವ ಸಮರ್ಪಣೆ, ನಾಡಿನ ಹೆಸರಾಂತ ಕವಿಗಳ ಗೀತೆಗಳ ಗಾಯನ, ಹಾಗೂ ಶಾಲಾ, ಕಾಲೇಜುಗಳ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ನಾಡ ಹಬ್ಬದ ತಿಂಗಳ ಕಾರ್ಯಕ್ರಮಗಳನ್ನು ಉದ್ಘಾಟಿಸಿ ಮಾತನಾಡಿದರು.

ಇಂದಿನ ಯುವ ಜನತೆ ಕನ್ನಡ ಭಾಷೆಯ ಬೆಳವಣಿಗೆಗೆ ಶ್ರಮಿಸಬೇಕು. ಕರ್ನಾಟಕ ವಿದ್ಯಾವರ್ಧಕ ಸಂಘ ವಿಭಿನ್ನ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಜನರಲ್ಲಿ ಕನ್ನಡ ಅಭಿಮಾನ ಮೂಡಿಸಬೇಕು. ಅದಕ್ಕೆ ಸರಕಾರದಿಂದ ಸೂಕ್ತ ಸೌಲಭ್ಯಗಳನ್ನು ಕಲ್ಪಿಸಲಾಗುವುದು. ಆಡಳಿತಾತ್ಮಕವಾಗಿ ಕನ್ನಡ ಭಾಷೆ ಬೆಳೆಸಲು ಮುಖ್ಯಮಂತ್ರಿಗಳು ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಆ ನಿಟ್ಟಿನಲ್ಲಿ ಪ್ರತಿಯೊಬ್ಬರೂ ಕನ್ನಡ ಭಾಷೆಯಲ್ಲಿ ವ್ಯವಹರಿಸಬೇಕು. ಮುಂದಿನ ದಿನಗಳಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘದ ಅಭಿವೃದ್ಧಿಗೆ ಸಹಕಾರ ನೀಡಲಾಗುವುದು ಎಂದರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಹಂಪಿ ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ. ಮಲ್ಲಿಕಾ ಘಂಟಿ ಮಾತನಾಡಿ, ಕನ್ನಡ, ಕರ್ನಾಟಕದ ಸೊಗಸನ್ನು ಉಳಿಸಿ, ಬೆಳೆಸುವ ಆರೋಗ್ಯವಂತ ಮನಸ್ಸನ್ನು ಯುವಜನರು ಬೆಳೆಸಿಕೊಳ್ಳಬೇಕು ಎಂದು ಆಶಯ ವ್ಯಕ್ತಪಡಿಸಿ, ಕನ್ನಡವನ್ನು ಉಳಿಸಿ, ಅದನ್ನು ಅನ್ನದ ಭಾಷೆಯಾಗಿ ಹೇಗೆ ಬೆಳೆಸಬೇಕೆನ್ನುವ ಕುರಿತು ಯುವಜನರ ಅಭಿಪ್ರಾಯವನ್ನು ಸಂಗ್ರಹಿಸಿ ಸರ್ಕಾರವು ಯೋಜನೆಗಳನ್ನು ರೂಪಿಸಬೇಕು.



ಕನ್ನಡ ದೀಪ ನಿರಂತರ ಪ್ರಜ್ವಲಿಸಲು ಏನು ಮಾಡಬೇಕು ಎಂಬ ನಿಟ್ಟಿನಲ್ಲಿ ಯುವ ಜನರು ಕಾರ್ಯಪ್ರವೃತರಾಗಬೇಕು ಎಂದು ಸಲಹೆ ನೀಡಿದರು.

ಕರ್ನಾಟಕದ ಏಕೀಕರಣಕ್ಕಾಗಿ ನಾಡಿನ ಕವಿಗಳು, ಸಾಹಿತಿಗಳು, ಪ್ರಜ್ಞಾವಂತರು ತ್ಯಾಗ ಮಾಡಿದ್ದಾರೆ. ಅವರ ಮಾತುಗಳು ಜನರನ್ನು ಬೆಸೆಯುವಂತಹ, ಸಮಾಜವನ್ನು ಒಗ್ಗೂಡಿಸುವಂತಹ, ಐಕ್ಯತೆಯನ್ನು ಸೇರಿಸುವಂತೆ ಮಹತ್ತರ ಕೆಲಸ ಮಾಡಿವೆ ಎಂಬುದನ್ನು ಮರೆಯಲಾಗದು ಎಂದರು.

ರಾ.ಹ.ದೇಶಪಾಂಡೆ ಪ್ರತಿಷ್ಠಾನ ಸ್ಥಾಪಿಸಿ ಅವರ ಹೆಸರನ್ನು ಶಾಶ್ವತವಾಗಿ ಉಳಿಸುವ ಕೆಲಸವನ್ನು ಯಾವ ಸರ್ಕಾರವೂ ಮಾಡಿಲ್ಲ. ಧಾರವಾಡದಲ್ಲಿ ಅವರ ಹೆಸರು ನಾಮಕರಣ ಮಾಡಬೇಕು ಅವರ ಹೆಸರಿನಲ್ಲಿ ಪ್ರತಿಷ್ಠಾನ ಸ್ಥಾಪಿಸಬೇಕು. ಪ್ರತಿಷ್ಠಾನದ ಮೂಲಕ ಕನ್ನಡದ ಕೆಲಸಗಳು ಆಗುವಂತೆ ಮಾಡಬೇಕು ಎಂದು ಮಲ್ಲಿಕಾ ಘಂಟಿ ಮನವಿ ಮಾಡಿದರು.

ರಾಜ್ಯೋತ್ಸವ ನಿಮಿತ್ತ ಧಾರವಾಡದ ಜಾನಪದ ಸಂಶೋಧನಾ ಕೇಂದ್ರದ ಸಂಗೀತ ಬಳಗದಿಂದ ನಾಡಿನ ಹೆಸರಾಂತ 'ಕವಿಗಳ ಗೀತಗಾಯನ' ಹಾಗೂ 'ಕರ್ನಾಟಕ ಸಂಭ್ರಮ-೫೦ ಕನ್ನಡಾಂಬೆಗೆ ಗೌರವ ಸಮರ್ಪಣೆ ಸಲ್ಲಿಸಲಾಯಿತು.

ಸಂಘದ ಅಧ್ಯಕ್ಷ ಚಂದ್ರಕಾಂತ ಬೆಲ್ಲದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಕಾರ್ಯಕ್ರಮಕ್ಕೂ ಮೊದಲು ಕರ್ನಾಟಕ ಕಾಲೇಜು ಆವರಣದಿಂದ ಕರ್ನಾಟಕ ವಿದ್ಯಾವರ್ಧಕ ಸಂಘದವರೆಗೆ ಅಲಂಕೃತ ಜೊಡೆತ್ತುಗಳ ಬಂಡಿಯಲ್ಲಿ ಭುವನೇಶ್ವರಿ ದೇವಿಯ ಭಾವಚಿತ್ರದ ಮೆರವಣಿಗೆ ಜರುಗಿತು.

ಸಂಘದ ಕಾರ್ಯಾಧ್ಯಕ್ಷ ಬಸವಪ್ರಭು ಹೊಸಕೇರಿ ಸ್ವಾಗತಿಸಿದರು. ಕಾರ್ಯಕಾರಿ ಸಮಿತಿ ಸದಸ್ಯ ಡಾ. ಶ್ರೀಶೈಲ ಹುದ್ದಾರ ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರಧಾನ ಕಾರ್ಯದರ್ಶಿ ಶಂಕರ ಹಲಗತ್ತಿ ನಿರೂಪಿಸಿದರು. ಗುರು ಹಿರೇಮಠ ವಂದಿಸಿದರು.

* ಕರ್ನಾಟಕ ವಿದ್ಯಾವರ್ಧಕ ಸಂಘವು, ೬೮ನೇ ಕರ್ನಾಟಕ ರಾಜ್ಯೋತ್ಸವ ನಿಮಿತ್ತ, 'ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ' 'ಕರ್ನಾಟಕ ಸಂಭ್ರಮ-೫೦' ರ ಅಂಗವಾಗಿ ದಿನಾಂಕ: ೨-೧೧-೨೦೨೩ ರಂದು ಬೆಳಿಗ್ಗೆ ೧೦-೩೦ ಗಂಟೆಗೆ ಸಂಘದ ನಾಡೋಜ ಡಾ. ಪಾಪು ಸಭಾಭವನದಲ್ಲಿ, ಕೆಎಲ್‌ಇ ಸಂಸ್ಥೆಯ ಶ್ರೀ ಮೃತ್ಯುಂಜಯ ಮಹಾವಿದ್ಯಾಲಯ, ಧಾರವಾಡ ಹಾಗೂ ಪ್ರಜೆಂಟೇಶನ್ ಪದವಿಪೂರ್ವ ಮಹಾವಿದ್ಯಾಲಯದ ವಿದ್ಯಾರ್ಥಿಗಳಿಗಾಗಿ, ಕನ್ನಡ ನಾಡು, ನುಡಿ ಗೀತೆಗಳು, ಕನ್ನಡ ಭಾಷೆಯ ಹಿರಿಮೆ, ಕನ್ನಡ ನಾಡು ಕಟ್ಟಿದ ಇತಿಹಾಸ ಹಾಗೆಯೇ ಕನ್ನಡ ಭಾಷೆಯ ಸ್ಥಿತಿ-ಗತಿ ಕುರಿತು ಕಾರ್ಯಕ್ರಮ ಆಯೋಜಿಸಿತ್ತು.

ಅತಿಥಿ ಉಪನ್ಯಾಸಕರಾಗಿ ಹುಬ್ಬಳ್ಳಿ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಹಿರಿಯ ಉಪನ್ಯಾಸಕ ಡಾ. ವಾಯ್. ಎಂ. ಭಜಂತ್ರಿ ಆಗಮಿಸಿದ್ದರು. ಅಧ್ಯಕ್ಷತೆಯನ್ನು ಕೆಎಲ್‌ಇ ಶ್ರೀ ಮೃತ್ಯುಂಜಯ ಕಾಲೇಜಿನ ಪ್ರಾಚಾರ್ಯ ಡಾ. ಎನ್. ಸಿ. ಪಾಟೀಲ ವಹಿಸಿದ್ದರು.

ಕ.ವಿ.ವ. ಸಂಘದ ಉಪಾಧ್ಯಕ್ಷೆ ಪ್ರೊ. ಮಾಲತಿ ಪಟ್ಟಣಶೆಟ್ಟಿ ಉಪಸ್ಥಿತರಿದ್ದರು. ಶಿಕ್ಷಣ ತಜ್ಞ ಧಾರವಾಡದ ಪ್ರಿ. ಶಿವಶಂಕರ ಹಿರೇಮಠ ಹಾಗೂ ಪ್ರಜಂಟೇಶನ್ ಪ.ಪೂ. ಕಾಲೇಜ್ ಪ್ರಾಚಾರ್ಯೆ ಬಿ. ಎಸ್. ಪ್ರೇಮಾ ಗೌರವ ಉಪಸ್ಥಿತರಿದ್ದರು.

ಕುಂದಗೋಳ ತಾಲೂಕಿನ ಹರ್ಲಾಪೂರ ಗ್ರಾಮದ ಯುವಜನ ಹಾಗೂ ಸಾಂಸ್ಕೃತಿಕ ಕೇಂದ್ರ ಕಲಾವಿದರಾದ ಎಸ್.ಎಸ್. ಹಿರೇಮಠ. ಈಶ್ವರಪ್ಪ ಅರಳಿ, ನಾಗರಾಜ ಗೌಡಣ್ಣವರ, ಶರೀಫ್ ದೊಡಮನಿ, ಮಲ್ಲಪ್ಪ ಮುಳಗುಂದ ತಂಡದವರಿಂದ ಸೊಗಸಾಗಿ ಕನ್ನಡ ನಾಡು, ನುಡಿ ಜಾಗೃತಿ ಗೀತಗಾಯನ ಜರುಗಿತು.

ಕಾರ್ಯಕ್ರಮಕ್ಕೂ ಮೊದಲು ಕೆಎಲ್‌ಇ ಸಂಸ್ಥೆಯ ಶ್ರೀ ಮೃತ್ಯುಂಜಯ ಮಹಾವಿದ್ಯಾಲಯ, ಧಾರವಾಡ ಹಾಗೂ ಪ್ರಜೆಂಟೇಶನ್ ಪದವಿಪೂರ್ವ ಮಹಾವಿದ್ಯಾಲಯದ ವಿದ್ಯಾರ್ಥಿಗಳು, ಶಿಕ್ಷಕರು, ಸಂಘದ ಸದಸ್ಯರು,



ಪದಾಧಿಕಾರಿಗಳಿಂದ ಕನ್ನಡ ಜಾಥಾ ಪ್ರಾರಂಭಗೊಂಡು ವಿವಿಧ ಕನ್ನಡ ಘೋಷಣೆಗಳೊಂದಿಗೆ ವಿವೇಕಾನಂದ ವೃತ್ತದ ಮೂಲಕ ಸಂಘದ ನಾಡೋಜ ಡಾ. ಪಾಟೀಲ ಪುಟ್ಟಪ್ಪ ಸಭಾಭವನದಲ್ಲಿ ಸಮಾವೇಶಗೊಂಡಿತು.

ಸಂಘದ ಕಾರ್ಯಾಧ್ಯಕ್ಷ ಬಸವಪ್ರಭು ಹೊಸಕೇರಿ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕಾರಿ ಸಮಿತಿ ಸದಸ್ಯ ಗುರು ಹಿರೇಮಠ ನಿರೂಪಿಸಿದರು.

* ಕರ್ನಾಟಕ ವಿದ್ಯಾವರ್ಧಕ ಸಂಘವು, ೬೮ನೇ ಕರ್ನಾಟಕ ರಾಜ್ಯೋತ್ಸವ ಅಂಗವಾಗಿ 'ಕರ್ನಾಟಕ ಸಂಭ್ರಮ–೫೦' ರ ನಿಮಿತ್ತ 'ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ' ಸರಣಿ ಕಾರ್ಯಕ್ರಮದಲ್ಲಿ ದಿನಾಂಕ: ೩–೧೧–೨೦೨೩ ರಂದು ಬೆಳಿಗ್ಗೆ ೧೦–೩೦ ಗಂಟೆಗೆ ಸಂಘದ ನಾಡೋಜ ಡಾ. ಪಾಪು ಸಭಾಭವನದಲ್ಲಿ, ಧಾರವಾಡದ ಅಂಜುಮನ್ ಪದವಿ ಮಹಾವಿದ್ಯಾಲಯ ಹಾಗೂ ಮಹೇಶ ಪಿ.ಯು. ಕಾಲೇಜಿನ ವಿದ್ಯಾರ್ಥಿಗಳಿಗಾಗಿ ಕನ್ನಡ ನಾಡು, ನುಡಿ ಗೀತೆಗಳು, ಕನ್ನಡ ಭಾಷೆಯ ಹಿರಿಮೆ, ಕನ್ನಡ ನಾಡು ಕಟ್ಟಿದ ಇತಿಹಾಸ, ಕನ್ನಡ ಭಾಷೆಯ ಸ್ಥಿತಿ–ಗತಿ ವಿಷಯ ಕುರಿತು ಕಾರ್ಯಕ್ರಮ ಆಯೋಜಿಸಿತ್ತು.

ಅತಿಥಿ ಉಪನ್ಯಾಸಕರಾಗಿ ಹಿರಿಯ ಸಾಹಿತಿ, ಧಾರವಾಡದ ಡಾ. ಸಂಗಮನಾಥ ಲೋಕಾಪುರ ಆಗಮಿಸಿದ್ದರು. ಅಧ್ಯಕ್ಷತೆಯನ್ನು ಅಂಜುಮನ್ ಪದವಿ ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ಎನ್. ಎಮ್. ಮಕಾನದಾರ ವಹಿಸಿದ್ದರು.

ಧಾರವಾಡದ ಮಹೇಶ ಪಿ.ಯು. ಕಾಲೇಜಿನ ಪ್ರಾಚಾರ್ಯ ಬಾಲಚಂದ್ರ ಕಾಮತ ಗೌರವ ಉಪಸ್ಥಿತರಿದ್ದರು.

ಕುಂದಗೋಳ ತಾಲೂಕಿನ ಹರ್ಲಾಪೂರ ಗ್ರಾಮದ ಯುವಜನ ಹಾಗೂ ಸಾಂಸ್ಕೃತಿಕ ಕೇಂದ್ರ ಕಲಾವಿದರಾದ ಎಸ್.ಎಸ್. ಹಿರೇಮಠ. ಈಶ್ವರಪ್ಪ ಅರಳಿ, ನಾಗರಾಜ ಗೌಡಣ್ಣವರ, ಶರೀಫ್ ದೊಡಮನಿ, ಮಲ್ಲಪ್ಪ ಮುಳಗುಂದ ತಂಡದವರಿಂದ ಸೊಗಸಾಗಿ ಕನ್ನಡ ನಾಡು, ನುಡಿ ಜಾಗೃತಿ ಗೀತಗಾಯನ ಜರುಗಿತು.

ಕಾರ್ಯಕ್ರಮಕ್ಕೂ ಮೊದಲು ಧಾರವಾಡ ಅಂಜುಮನ್ ಪದವಿ ಮಹಾವಿದ್ಯಾಲಯದ ಹಾಗೂ ಮಹೇಶ ಪಿ.ಯು. ಕಾಲೇಜಿನ ವಿದ್ಯಾರ್ಥಿಗಳು, ಶಿಕ್ಷಕರು, ಸಂಘದ ಸದಸ್ಯರು, ಪದಾಧಿಕಾರಿಗಳಿಂದ ಕನ್ನಡ ಜಾಥಾ

ಪ್ರಾರಂಭಗೊಂಡು ವಿವಿಧ ಕನ್ನಡ ಘೋಷಣೆಗಳೊಂದಿಗೆ ವಿವೇಕಾನಂದ ವೃತ್ತದ ಮೂಲಕ ಸಂಘದ ನಾಡೋಜ ಡಾ. ಪಾಟೀಲ ಪುಟ್ಟಪ್ಪ ಸಭಾಭವನಲ್ಲಿ ಸಮಾವೇಶಗೊಂಡಿತು.

ಸಂಘದ ಕಾರ್ಯಾಧ್ಯಕ್ಷ ಬಸವಪ್ರಭು ಹೊಸಕೇರಿ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕಾರಿ ಸಮಿತಿ ಸದಸ್ಯ ಗುರು ಹಿರೇಮಠ ನಿರೂಪಿಸಿದರು.

* ನಾವು ಕನ್ನಡಿಗರು ಸಧ್ಯ ಆತಂಕವನ್ನು ಎದುರಿಸುತ್ತಿದ್ದೇವೆ, ಕನ್ನಡ ನಾಡಿನ ಅಸ್ಮಿತೆ, ಶ್ರೀಮಂತಿಕೆ, ಗತವೈಭವ, ಕನ್ನಡ ಕಟ್ಟಲು ಶ್ರಮಿಸಿದ ಮಹಾನ್ ಚೇತನಗಳ ಕಾರ್ಯವನ್ನು ಸ್ಮರಿಸಿಕೊಳ್ಳಬೇಕಾಗಿದೆ. ಆ ದಿಶೆಯಲ್ಲಿ ಸಾಗುವ ಹೆಚ್ಚಿನ ಜವಾಬ್ದಾರಿ ಇಂದಿನ ಯುವ ಪೀಳಿಗೆಯ ಮೇಲಿದೆ. ನಮ್ಮ ಅಮೂಲ್ಯ ಕನ್ನಡ ಸಂಸ್ಕೃತಿ, ಪರಂಪರೆ ಅರಿಯಬೇಕಾಗಿದೆ ಅಂದಾಗ ಆತಂಕದಿಂದ ದೂರ ಸರಿಯಲು ಸಾಧ್ಯ ಎಂದು ಶಿಗ್ಗಾಂವಿಯ ಚನ್ನಪ್ಪ ಕುನ್ನೂರ ಪಿ.ಯು. ಕಾಲೇಜಿನ್ ಪ್ರಾಚಾರ್ಯ ಡಾ. ನಾಗರಾಜ ದ್ಯಾಮನಕೊಪ್ಪ ಹೇಳಿದರು.

ಕರ್ನಾಟಕ ವಿದ್ಯಾವರ್ಧಕ ಸಂಘವು, ೬೮ನೇ ಕರ್ನಾಟಕ ರಾಜ್ಯೋತ್ಸವ ಅಂಗವಾಗಿ 'ಕರ್ನಾಟಕ ಸಂಭ್ರಮ–೫೦'ರ ನಿಮಿತ್ತ 'ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ' ಸರಣಿ ಕಾರ್ಯಕ್ರಮದಲ್ಲಿ ದಿನಾಂಕ: ೪–೧೧–೨೦೨೩ ರಂದು ಬೆಳಿಗ್ಗೆ ೧೦–೩೦ ಗಂಟೆಗೆ ಸಂಘದ ನಾಡೋಜ ಡಾ. ಪಾಪು ಸಭಾಭವನದಲ್ಲಿ, ಧಾರವಾಡದ ಕೆ.ಇ. ಬೋರ್ಡ್ ಮಹಾವಿದ್ಯಾಲಯ ಹಾಗೂ ಬೆಸ್ಟ್ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅವರು ಉಪನ್ಯಾಸ ನೀಡಿ ಮಾತನಾಡುತ್ತಿದ್ದರು.

ಭಾರತಕ್ಕೆ ಸ್ವಾತಂತ್ರ್ಯ ಸಿಗುವ ಮುನ್ನ ೧೮ ಅರಸು ಮನೆತನಗಳು ಕರ್ನಾಟಕವನ್ನು ಆಳಿವೆ. ಆಗಿನ ಗತವೈಭವ ಹೆಮ್ಮೆ ಪಡುವಂತದ್ದು. ಕನ್ನಡಕ್ಕೆ ಎರಡು ಸಾವಿರ ವರ್ಷಗಳ ಇತಿಹಾಸವಿದೆ. ಅದಕ್ಕೆ ಹಲ್ಮಿಡಿ ಶಾಸನವೆ ಸಾಕ್ಷಿ. ಕನ್ನಡದ ಮೊಟ್ಟಮೊದಲ ಗ್ರಂಥ ಕವಿರಾಜ ಮಾರ್ಗ. ಶ್ರೀ ವಿಜಯ ಹೇಳಿದಂತೆ ಕಾವೇರಿಯಿಂದ ಗೋದಾವರಿಯವರೆಗೆ ಕನ್ನಡ ನಾಡು ಇತ್ತೆಂದು ಹೇಳಿದ್ದಾರೆ. ಆದರೆ ಈಗೇನಾಗಿದೆ ಎಂಬ ವಾಸ್ತವ ಪರಿಸ್ಥಿತಿಯನ್ನು ನೆನೆದು ಖೇದ ವ್ಯಕ್ತಪಡಿಸಿದರು.

ಗೊಟಗೇರಿ ಜಾನಪದ ವಿಶ್ವವಿದ್ಯಾಲಯದ ಅಧ್ಯಾಪಕ ಎಸ್. ನಾಗರಾಜ ಮಾತನಾಡಿ, ಧಾರವಾಡದ ಕೆ. ಇ. ಬೋರ್ಡಿನಲ್ಲಿ ಕಲಿಯುವ ವಿದ್ಯಾರ್ಥಿಗಳು ಪುಣ್ಯವಂತರು. ಅಂಥಾ ಶಕ್ತಿ ಅಲ್ಲಿನ ವಿದ್ಯಾ ಗುರುಗಳಲ್ಲಿದೆ. ಕರ್ನಾಟಕ ಸುವರ್ಣ ಸಂಭ್ರಮದಲ್ಲಿ ನಾಡಿನ ಹಿರಿಯ ಸಂಸ್ಥೆ ಕರ್ನಾಟಕ ವಿದ್ಯಾವರ್ಧಕ ಸಂಘವು ಕನ್ನಡ ನಾಡು, ನುಡಿ ಕುರಿತು ನವಂಬರ ಇಡೀ ತಿಂಗಳು ಕಾರ್ಯಕ್ರಮ ಹಮ್ಮಿಕೊಂಡಿದ್ದು ಶ್ಲಾಘನೀಯ ಎಂದರು.

ಗೌರವ ಉಪಸ್ಥಿತಿ ವಹಿಸಿದ್ದ ಮಕ್ಕಳ ಹಿರಿಯ ಸಾಹಿತಿ ನಿಂಗಣ್ಣ ಕುಂಟಿ, ಅನೇಕ ಕನ್ನಡ ಪದ್ಯಗಳನ್ನು ವಾಚಿಸಿ ವಿದ್ಯಾರ್ಥಿಗಳನ್ನು ರಂಜಿಸಿ ಕನ್ನಡದ ಕುರಿತು ಜಾಗೃತಿ ಮೂಡಿಸಿದರು.

ನೆಲದವ್ವ, ಹಡದವ್ವ, ವನದವ್ವ, ನುಡಿಯವ್ವ, ಜಲದವ್ವ ಇಂಥ ಐದು ಅವ್ವಗಳ ಕುರಿತಂತೆ ಅನೇಕ ವೈಚಾರಿಕ ಕನ್ನಡ, ನಾಡು, ನುಡಿ ಗೀತೆಗಳನ್ನು ಹರ್ಲಾಪುರದ ಶಂಭಯ್ಯ ಹಿರೇಮಠ ಹಾಗೂ ಅವರ ತಂಡದ ಬಸವರಾಜ ಕರಡಿ, ಜ್ಯೋತಿ ಯರಗಂಬಳಿಮಠ, ಮಲ್ಲೇಶ ಮುಳಗುಂದ, ಬಸವರಾಜ ಹಿರೇಮಠ ಅತ್ಯಂತ ಮನೋಜ್ಞವಾಗಿ ಹಾಡಿ ವಿದ್ಯಾರ್ಥಿಗಳನ್ನು ರಂಜಿಸಿ ಕನ್ನಡದ ಅರಿವು ಮೂಡಿಸಿದರು.

ಅಧ್ಯಕ್ಷತೆ ವಹಿಸಿದ್ದ ಕೆ. ಇ. ಬೋರ್ಡ ಕಾಲೇಜಿನ ಕನ್ನಡ ಉಪನ್ಯಾಸಕ ಬಸವರಾಜ ಉಡಿಕೇರಿ ಮಾತನಾಡಿ, ಕರ್ನಾಟಕ ಸುವರ್ಣ ಸಂಭ್ರಮದಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘ ಹಮ್ಮಿಕೊಂಡ ತಿಂಗಳ ವಿಶೇಷ ಉಪನ್ಯಾಸಗಳು ನಿಜಕ್ಕೂ ಸ್ತುತ್ಯಾರ್ಹ. ಕನ್ನಡ ನಾಡು, ನುಡಿ, ಸಂಸ್ಕೃತಿ ಪರಂಪರೆ, ನೆಲ, ಜಲ ಸಂರಕ್ಷಣೆ ಕುರಿತಂತೆ ಏಕೀಕರಣ ಹೋರಾಟದ ಮಹನೀಯರ ಕುರಿತು ಇಂದಿನ ಪೀಳಿಗೆಗೆ ಅರಿಯುವದು ಅಗತ್ಯ ಎಂದರು.

ಕಾರ್ಯಕ್ರಮದ ಪೂರ್ವದಲ್ಲಿ ಧಾರವಾಡದ ಕೆ.ಇ. ಬೋರ್ಡ್ ಮಹಾವಿದ್ಯಾಲಯ ಹಾಗೂ ಬೆಸ್ಟ್ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿಗಳು, ಶಿಕ್ಷಕರು, ಸಂಘದ ಸದಸ್ಯರು, ಪದಾಧಿಕಾರಿಗಳಿಂದ ಕನ್ನಡ ಜಾಥಾ ಪ್ರಾರಂಭಗೊಂಡು ವಿವಿಧ ಕನ್ನಡ ಘೋಷಣೆಗಳೊಂದಿಗೆ ವಿವೇಕಾನಂದ ವೃತ್ತದ ಮೂಲಕ ಸಂಘದ ನಾಡೋಜ ಡಾ. ಪಾಟೀಲ ಪುಟ್ಟಪ್ಪ ಸಭಾಭವನಲ್ಲಿ ಸಮಾವೇಶಗೊಂಡಿತು.

ಸಂಚಾಲಕರಾದ ಗುರು ಹಿರೇಮಠ ಸ್ವಾಗತಿಸಿ, ನಿರೂಪಿಸಿದರು. ಸಂಘದ ಕಾರ್ಯಾಧ್ಯಕ್ಷ ಬಸವಪ್ರಭು ಹೊಸಕೇರಿ, ಡಾ. ಶ್ರೀಶೈಲ ಹುದ್ದಾರ, ಕೆ.ಜಿ. ದೇವರಮನಿ ಮತ್ತು ಕೆ. ಇ. ಬೊರ್ಡ ಹಾಗೂ ಬೆಸ್ಟ್ ಪಿ.ಯು.ಕಾಲೇಜಿನ ಅಧ್ಯಾಪಕ ವೃಂದ ಮತ್ತು ಸಂಘದ ಸದಸ್ಯರು ಮತ್ತಿತರರು ಭಾಗವಹಿಸಿದ್ದರು.

* ಎರಡು ಸಾವಿರಕ್ಕೂ ಅಧಿಕ ವರ್ಷಗಳ ಪ್ರಾಚೀನತೆಯನ್ನು ಹೊಂದಿರುವ ಕನ್ನಡ ಭಾಷೆಗೆ ತನ್ನದೇ ಆದ ಸ್ಥಾನ, ಮಾನಗಳಿವೆ ಎಂದು ಜೆ.ಎಸ್.ಎಸ್. ಕಾಲೇಜಿನ ಪ್ರಾಧ್ಯಾಪಕ ಹಾಗೂ ಕ.ವಿ.ವ. ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಡಾ. ಜಿನದತ್ತ ಹಡಗಲಿ ಹೇಳಿದರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು, ೬೮ನೇ ಕರ್ನಾಟಕ ರಾಜ್ಯೋತ್ಸವ ಹಾಗೂ 'ಕರ್ನಾಟಕ ಸಂಭ್ರಮ-೫೦'ರ ನಿಮಿತ್ತ 'ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ' ಸರಣಿ ಕಾರ್ಯಕ್ರಮದ ಅಂಗವಾಗಿ ದಿನಾಂಕ: ೪-೧೧-೨೦೨೩ ರಂದು ಖಾನಾಪುರದ ಸರಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯದ ಸಹಯೋಗದಲ್ಲಿ ಕಾಲೇಜಿನ ಸಭಾಭವನದಲ್ಲಿ ಆಯೋಜಿಸಿದ್ದ 'ಕನ್ನಡ ನಾಡು-ನುಡಿ' ಕುರಿತು ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡುತ್ತಿದ್ದರು.

ಕ್ರಿ.ಶ. ೪೫೦ ಹಲ್ಮಿಡಿ ಶಾಸನದಿಂದ ಪ್ರಾರಂಭವಾದ ಕನ್ನಡ ಭಾಷೆಯ ರಚನೆ ಅದಕ್ಕಿಂತಲೂ ಪೂರ್ವದಲ್ಲಿಯೇ ಇತ್ತು ಎಂಬುದಕ್ಕೆ ಅನೇಕ ಉದಾಹರಣೆಗಳು ಸಿಗುತ್ತವೆ. ಕ್ರಿ.ಶ. ೭೦೦ ರ ಬದಾಮಿ ಶಾಸನ, ಅದೇ ಕಾಲಘಟ್ಟದ ಶ್ರವಣಬೆಳಗೊಳದ ಶಾಸನಗಳಲ್ಲಿ ಕನ್ನಡ ಭಾಷೆ ಬೆಳೆದು ಬಂದದ್ದನ್ನು ಹಾಗೆಯೇ ಕ್ರಿ.ಶ. ೮೫೦ ರ 'ಕವಿರಾಜಮಾರ್ಗ' ವಂತೂ ಕನ್ನಡ ನಾಡಿನ ಹಿರಿಮೆ, ಗರಿಮೆಯನ್ನು, ಕನ್ನಡ ನಾಡಿನ ವಿಸ್ತಾರವನ್ನು ಕುರಿತು ಸ್ಪಷ್ಟವಾದ ಚಿತ್ರಣವನ್ನು ಕೊಡುತ್ತದೆ,

ಹತ್ತನೇ ಶತಮಾನದ ಆದಿಕವಿ ಪಂಪ ಕನ್ನಡಕ್ಕೊಡೆಯನೋರ್ವನೆ ಸತ್ಕವಿ ಪಂಪನಾವಗಂ ಎಂಬ ಖ್ಯಾತಿಗೆ ಪಾತ್ರನಾದವನು. ಪುನರ್ಜನ್ಮ ಎನ್ನುವುದು ಇದ್ದರೆ, ನಾನು ಇದೇ ಕನ್ನಡ ನಾಡಿನಲ್ಲಿ ಅದೂ ಬನವಾಸಿ ಪ್ರದೇಶದಲ್ಲಿ ಹುಟ್ಟಿ ಬರುತ್ತೇನೆ ಎಂದು ಹೇಳಿದ್ದಲ್ಲದೆ, 'ಒಂದು ವೇಳೆ ಮನುಷ್ಯನಾಗಿ ಹುಟ್ಟಿಬರಲು ಆಗದೇ ಹೋದರೂ ಮರಿದುಂಬಿಯಾಗಿ ಇಲ್ಲವೇ ಕೋಗಿಲೆಯಾಗಿಯಾದರೂ ಹುಟ್ಟಿ ಬರುವೆ' ಎಂಬ ಇಚ್ಛೆಯನ್ನು ವ್ಯಕ್ತಪಡಿಸಿದ್ದಾನೆ.

'ಈಸ್ಟ್ ಇಂಡಿಯಾ ಕಂಪನಿಯ ಮನ್ರೋನಿಂದ ಹಿಡಿದುಕೊಂಡು ಡೆಪ್ಯೂಟಿ ಚನ್ನಬಸಪ್ಪ, ರಾ.ಹ. ದೇಶಪಾಂಡೆ, ಆಲೂರು ವೆಂಕಟರಾಯರು ಮೊದಲಾದ ಮಹನೀಯರ ಪರಿಶ್ರಮದಿಂದ, ಹೋರಾಟದ ಬಲದಿಂದ ಹತ್ತೊಂಬತ್ತು ತುಂಡುಗಳಾಗಿ ಹರಿದು ಹಂಚಿಹೋಗಿದ್ದ ಕರುನಾಡು ೧೯೫೬ ನವ್ಹಂಬರ ೧ ರಂದು ಕನ್ನಡ ನಾಡು ಅಸ್ತಿತ್ವಕ್ಕೆ ಬಂತು. ಅದು ಆಗ ಮೈಸೂರು ರಾಜ್ಯ ಎಂದು ಕರೆಯಲ್ಪಡುತ್ತಿತ್ತು. ಮುಂದೆ ೧೯೭೩ ನವ್ಹಂಬರ ೧ ರಂದು ದೇವರಾಜ ಅರಸು ಅವರು ಮುಖ್ಯಮಂತ್ರಿಯಾಗಿದ್ದಾಗ 'ಕರ್ನಾಟಕ ರಾಜ್ಯ' ಎಂದು ನಾಮಕರಣ ಘೋಷಿಸಿದರು. ಈ ಸಂದರ್ಭದಲ್ಲಿ ಅನೇಕ ಜನ ಕವಿಗಳು ತಮ್ಮ ಬೆಂಬಲ ಸೂಚಿಸಿ, ಕಾವ್ಯದ ಮೂಲಕ, ಗದ್ಯ ಸಾಹಿತ್ಯದ ಮೂಲಕ ಕನ್ನಡಿಗರನ್ನು ಒಗ್ಗೂಡಿಸುವ ಪ್ರಯತ್ನ ಮಾಡಿ, ಜನರಲ್ಲಿ ಜಾಗೃತಿ ಮೂಡಿಸಿದ್ದನ್ನು ನೆನಪಿಸಿಕೊಂಡು ಪ್ರಸ್ತಾಪಿಸಿದರು.

ಸಮಾರಂಭದ ಅತಿಥಿಗಳಾಗಿ ಉದ್ಘಾಟನೆ ಮಾಡಿದ ಕರ್ನಾಟಕ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಚಂದ್ರಕಾಂತ ಬೆಲ್ಲದ ಮಾತನಾಡಿ, ಕರ್ನಾಟಕ ವಿದ್ಯಾವರ್ಧಕ ಸಂಘ ನವ್ಹಂಬರ ತಿಂಗಳ ಪೂರ್ತಿಯಾಗಿ ಬೇರೆ ಬೇರೆ ಕಾಲೇಜುಗಳಲ್ಲಿ ಕನ್ನಡ ಜಾಗೃತಿಯ ಕಾರ್ಯಕ್ರಮಗಳನ್ನು ಆಯೋಜನೆ ಮಾಡುತ್ತಿದೆ. ಇದರ ಸದುಪಯೋಗವನ್ನು ವಿದ್ಯಾರ್ಥಿಗಳು ಮಾಡಿಕೊಂಡು ಎಲ್ಲರೂ ಕನ್ನಡ ಭಾಷೆಯ ಬಗ್ಗೆ, ನಾಡಿನ ಬಗ್ಗೆ ಅಭಿಮಾನವನ್ನು ಮೂಡಿಸಿಕೊಳ್ಳಬೇಕು ಎಂದು ಹೇಳಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಖಾನಾಪೂರ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಚಾರ್ಯ ಡಾ. ಡಿ. ಎಂ. ಜವಳಕರ ಮಾತನಾಡಿ, ಗಡಿನಾಡಿಗೆ ಬಂದು, ಕರ್ನಾಟಕ ವಿದ್ಯಾವರ್ಧಕ ಸಂಘ ಕನ್ನಡ ಭಾಷೆಯ ಬಗ್ಗೆ ಜಾಗೃತಿ ಮೂಡಿಸಿದ್ದು ಸಂತೋಷವನ್ನುಂಟು ಮಾಡಿದೆ. ಎಲ್ಲ ವಿದ್ಯಾರ್ಥಿಗಳು ಮಾತೃಭಾಷೆಯ ಅಭಿಮಾನವನ್ನು ಹೊಂದುವುದು ಇಂದಿನ ಅಗತ್ಯವಾಗಿದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಕರ್ನಾಟಕ ವಿದ್ಯಾವರ್ಧಕ ಸಂಘದ ಕೋಶಾಧ್ಯಕ್ಷ ಹಾಗೂ ಕಾರ್ಯಕ್ರಮ ಸಂಚಾಲಕ ಸತೀಶ ತುರಮರಿ, ಕರ್ನಾಟಕ ವಿದ್ಯಾವರ್ಧಕ ಸಂಘ ಬೆಳೆದು ಬಂದ ಬಗೆ ಹಾಗೂ ಅದರ ಕಾರ್ಯಚಟುವಟಿಕೆಗಳ ಕುರಿತು ವಿವರಿಸಿದರು.

ಸಮಾರಂಭದಲ್ಲಿ ತಾಲೂಕಾ ಕ.ಸಾ.ಪ. ಅಧ್ಯಕ್ಷ ಬಸವಪ್ರಭು ಹಿರೇಮಠ, ಕೋಶಾಧ್ಯಕ್ಷ ಪ್ರಭುದೇವ ಹಿರೇಮಠ, ಶ್ರೀಧರ ಗಣಾಚಾರಿ, ಸದಾನಂದ ಪಾಟೀಲ, ಈರಣ್ಣ ಬಡಿಗೇರ, ಉಮಾ ಜೋಡಳ್ಳಿ, ನಿಂಗಪ್ಪ ಮಂಡಿ ಮುಂತಾದವರು ಉಪಸ್ಥಿತರಿದ್ದರು.

ಕುಂದಗೋಳ ತಾಲೂಕಿನ ಹರ್ಲಾಪುರದ ಈಶ್ವರ ಅರಳಿ ಹಾಗೂ ತಂಡದವರು ಜಾನಪದ ಹಾಗೂ ನಾಡು, ನುಡಿ ಗೀತೆಗಳ ಮೂಲಕ ಮಕ್ಕಳನ್ನು ರಂಜಿಸಿ, ಕನ್ನಡ ಜಾಗೃತಿ ಮೂಡಿಸಿದರು.

ಡಿ. ಕೌಶಲ್ಯ ಸ್ವಾಗತಿಸಿದರು. ಅಡವೀಶ ಇಟಗಿ ನಿರೂಪಿಸಿದರು. ಪ್ರೊ. ಅಂಬರೀಶ ರೇವತಗಾಂವ ವಂದಿಸಿದರು.

* ಯಾವುದೇ ದೌರ್ಬಲ್ಯವನ್ನು ಸ್ವಲ್ಪ ಬದಲಾಯಿಸಿಕೊಂಡರೆ ನಮ್ಮೊಳಗಿನ ಸಾಮರ್ಥ್ಯ ನಿರೂಪಿಸಲು ಸಾಧ್ಯವಾಗುತ್ತದೆ ಎಂದು ಧಾರವಾಡ ಸರಕಾರಿ ಪದವಿ ಕಾಲೇಜಿನ ಹಿರಿಯ ಉಪನ್ಯಾಸಕಿ ಡಾ. ಪ್ರಜ್ಞಾ ಮತ್ತಿಹಳ್ಳಿ ಹೇಳಿದರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು, ೬೮ನೇ ಕರ್ನಾಟಕ ರಾಜ್ಯೋತ್ಸವ ಅಂಗವಾಗಿ 'ಕರ್ನಾಟಕ ಸಂಭ್ರಮ-೫೦'ರ ನಿಮಿತ್ತ 'ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ' ಸರಣಿ ಕಾರ್ಯಕ್ರಮದಲ್ಲಿ ದಿನಾಂಕ: ೬-೧೧-೨೦೨೩ ರಂದು ಬೆಳಿಗ್ಗೆ ೧೦-೩೦ ಗಂಟೆಗೆ ಸಂಘದ ನಾಡೋಜ ಡಾ. ಪಾಪು ಸಭಾಭವನದಲ್ಲಿ ಸಿಎಸ್‌ಐ ವಾಣಿಜ್ಯ ಮಹಾವಿದ್ಯಾಲಯ ಹಾಗೂ ಕ್ಲಾಸಿಕ್ ಪದವಿಪೂರ್ವ ವಿದ್ಯಾರ್ಥಿಗಳಿಗೆ ಅಂಯೋಜಿಸಿದ್ದ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿ ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ಅವರು, ಗಡಸು ಧ್ವನಿಯ ಖ್ಯಾತ ಹಾಡುಗಾರ್ತಿ ಉಷಾ ಉತ್ತಪ್ಪ ಹಾಗೂ ಲತಾ ಮಂಗೇಶ್ಕರ ಅವರನ್ನು ಜಗತ್ತು ಒಪ್ಪಿ ಶೆಲ್ಯೂಟ್ ಹೊಡೆಯಿತು. ಅಂಥ ಕಸುವು ಯಾವುದೇ ಭಾಷೆಯ ಶಕ್ತಿ ಆಗಿರುತ್ತದೆ. ಅದುವೇ ಕನ್ನಡ ಭಾಷೆಯನ್ನು ಸಿದ್ಧಿಸಿಕೊಳ್ಳುತ್ತೇವೆ. ಅನ್ಯಭಾಷೆಗಳನ್ನು ಸಹ ಪ್ರೀತಿಸಿ ನಿಭಾಯಿಸುವುದು ಮುಖ್ಯ. ಆದಿ-ಅನಾದಿ ಕಾಲದಿಂದಲೂ ಐತಿಹಾಸಿಕ ಚಾರಿತ್ರ್ಯದೊಂದಿಗೆ ವಚನಕಾರರೂ ಸಹ ಕಾಯಕ ಸೇರಿದಂತೆ ಮಾನವೀಯ ಮೌಲ್ಯ ಕನ್ನಡದ ಸಂಸ್ಕೃತಿಯಲ್ಲಿ ಅರ್ಥಪೂರ್ಣವಾಗಿ ತಿಳಿಸಿಕೊಟ್ಟಿದ್ದಾರೆ.

ಬದುಕಿನ ಆಶಯವನ್ನೆ ಬರೆಯುವುದೇ ಸಾಹಿತ್ಯ. ಆ ಕಾಲಘಟ್ಟದಲ್ಲಿ ಕುಲ ಕುಲವೆಂದು ಬಡೆದಾಡಿದ ಜನಾಂಗವನ್ನೇ ಮುಖ್ಯವಾಹಿನಿಗೆ ತರಲು ಹರಿಶ್ಚಂದ್ರ ಕಾವ್ಯದಲ್ಲಿ, ಅಂದಿನ ಕಾಲದಲ್ಲಿಯೂ ಕಂಡು ಬರುತ್ತದೆ. ಕುಮಾರವ್ಯಾಸ, ಪಾಂಡವರು ಮತ್ತು ಕೌರವರ ಯಶೋಗಾಥೆಯನ್ನು ಎಳೆ-ಎಳೆಯಾಗಿ ಬಿಚ್ಚಿಟ್ಟು ವಿಮರ್ಶಾತ್ಮಕವಾಗಿ ಪ್ರಸ್ತುತ ದಿನಗಳಲ್ಲಿಯೂ ಅದರ ಅವಶ್ಯಕತೆ ಕುರಿತಂತೆ ಡಾ. ಪ್ರಜ್ಞಾ ಮತ್ತಿಹಳ್ಳಿ ಹೇಳಿದರು.

ಗೌರವ ಅಧ್ಯಕ್ಷತೆ ವಹಿಸಿ ಡಾ. ಎಸ್.ವ್ಹಿ. ಹೆಗಡಾಳ ಮಾತನಾಡಿ, ಕನ್ನಡ ಸಂಸ್ಕೃತಿ ಪರಂಪರೆ ಉಳಿಸಿ ಬೆಳೆಸುವಲ್ಲಿ ಧಾರವಾಡ ವಿಶೇಷ ನೆಲ ಹೊಂದಿದೆ. ಎಲ್ಲಾ ವಿಷಯಗಳಲ್ಲೂ ಗಂಭೀರ ಚರ್ಚೆ, ಗೋಷ್ಠಿ, ಸಂಗೀತ ಇತ್ಯಾದಿಗಳು ವಿದ್ಯಾರ್ಥಿಗಳಿಗೆ ಸುಲಭವಾಗಿ ಸಿಗುತ್ತದೆ. ಅದರಲ್ಲೂ ಸಂಘದ ಕಾರ್ಯ ಚಟುವಟಿಕೆಗಳನ್ನು ಗಮನಿಸಿದರೆ ಇದು ಗಿನ್ನಿಸ್ ರಿಕಾರ್ಡ್ ಬುಕ್‌ನಲ್ಲಿ ದಾಖಲು ಆಗಬೇಕು. ಅಂಥ ಜನಪರ ಚಟುವಟಿಕೆಗಳಲ್ಲಿ ನಿರಂತರವಾಗಿ ಕರ್ನಾಟಕ ವಿದ್ಯಾವರ್ಧಕ ಸಂಘ ತೊಡಗಿಸಿಕೊಂಡಿದ್ದು ಶ್ಲಾಘನೀಯ ಎಂದರು.

ಸಿ.ಎಸ್.ಐ. ವಾಣಿಜ್ಯ ಮಹಾವಿದ್ಯಾಲಯದ ಪ್ರಾಚಾರ್ಯೆ ಡಾ. ಕಮಲಾ ಧವಳೆ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಕಲಾವಿದರಾದ ಬಸವರಾಜ ಶಿಗ್ಗಾಂವ, ಜ್ಯೋತಿ ಯರಗಂಬಳಿಮಠ, ಮಲ್ಲೇಶ ಮುಳಗುಂದ ಕನ್ನಡ ನಾಡು-ನುಡಿ ಸಂಸ್ಕೃತಿಯ ಗೀತ ಗಾಯನವನ್ನು ನಡೆಸಿಕೊಟ್ಟರು.

ಕಾರ್ಯಕ್ರಮದ ಪೂರ್ವದಲ್ಲಿ ಧಾರವಾಡದ ಸಿಎಸ್ಐ ವಾಣಿಜ್ಯ ಮಹಾವಿದ್ಯಾಲಯ ಹಾಗೂ ಕ್ಲಾಸಿಕ್ ಪದವಿಪೂರ್ವ ವಿದ್ಯಾರ್ಥಿಗಳು, ಶಿಕ್ಷಕರು, ಸಂಘದ ಸದಸ್ಯರು, ಪದಾಧಿಕಾರಿಗಳಿಂದ ಕನ್ನಡ ಜಾಥಾ ಪ್ರಾರಂಭಗೊಂಡು ವಿವಿಧ ಕನ್ನಡ ಘೋಷಣೆಗಳೊಂದಿಗೆ ವಿವೇಕಾನಂದ ವೃತ್ತದ ಮೂಲಕ ಸಂಘದ ನಾಡೋಜ ಡಾ. ಪಾಟೀಲ ಪುಟ್ಟಪ್ಪ ಸಭಾಭವನಲ್ಲಿ ಸಮಾವೇಶಗೊಂಡಿತು.

ಸಂಘದ ಪ್ರಧಾನ ಕಾರ್ಯದರ್ಶಿ ಶಂಕರ ಹಲಗತ್ತಿ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಸಂಚಾಲಕ ಗುರು ಹಿರೇಮಠ ನಿರೂಪಿಸಿ, ವಂದಿಸಿದರು.

* ಕರ್ನಾಟಕ ವಿದ್ಯಾವರ್ಧಕ ಸಂಘವು, ೬೮ನೇ ಕರ್ನಾಟಕ ರಾಜ್ಯೋತ್ಸವ ಅಂಗವಾಗಿ 'ಕರ್ನಾಟಕ ಸಂಭ್ರಮ–೫೦'ರ ನಿಮಿತ್ತ 'ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ' ಸರಣಿ ಕಾರ್ಯಕ್ರಮದಲ್ಲಿ ದಿನಾಂಕ: ೬–೧೧–೨೦೨೩ ರಂದು ಬೆಳಿಗ್ಗೆ ೧೦–೩೦ ಗಂಟೆಗೆ ಸರಕಾರಿ ಪ್ರಥಮ ದರ್ಜೆ ಕಾಲೇಜು, ಅಳ್ನಾವರದಲ್ಲಿ ನಾಡು–ನುಡಿ ಕುರಿತು ಉಪನ್ಯಾಸ ಕಾರ್ಯಕ್ರಮ ಆಯೋಜಿಸಿತ್ತು.

ಅತಿಥಿ ಉಪನ್ಯಾಸಕರಾಗಿ ಧಾರವಾಡ ಉಚ್ಚ ನ್ಯಾಯಾಲಯದ ಹಿರಿಯ ನ್ಯಾಯವಾದಿ ಕೆ. ಎಸ್. ಕೋರಿಶೆಟ್ಟರ ಆಗಮಿಸಿದ್ದರು. ಅಧ್ಯಕ್ಷತೆಯನ್ನು ಅಳ್ನಾವರ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ. ಪ್ರವೀಣ ಆನಂದಕಂದ ವಹಿಸಿದ್ದರು.

ಮುಖ್ಯ ಅತಿಥಿಗಳಾಗಿ ಕ.ವಿ.ವ. ಸಂಘದ ಅಧ್ಯಕ್ಷ ಚಂದ್ರಕಾಂತ ಬೆಲ್ಲದ ವಹಿಸಿದ್ದರು. ಹಳಿಯಾಳ ತಾಲೂಕಾ ಕಸಾಪ ಅಧ್ಯಕ್ಷೆ ಸುಮಾ ಅಂಗಡಿ, ಸಾಹಿತಿ ಧಾರವಾಡದ ಮಾರ್ತಾಂಡಪ್ಪ ಕತ್ತಿ, ಅಳ್ನಾವರ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥರಾದ ಪ್ರೊ. ಪಿ. ಬಿ. ಪೂಜಾರಿ, ಸಹಾಯಕ ಪ್ರಾಧ್ಯಾಪಕ ಪ್ರೊ. ಪಿ. ಆರ್. ನಾಗರಾಳ ಹಾಗೂ ಉಪನ್ಯಾಸಕ ಜಿ. ಎಸ್. ಕುರಿ ಆಗಮಿಸಿದ್ದರು.

* ಕನ್ನಡ ನಾಡು ಕನ್ನಡಿಗರ ಸ್ವಾಭಿಮಾನದ ಪ್ರತೀಕ. ನಾಡು–ನುಡಿಯ ರಕ್ಷಣೆಗಾಗಿ ನಾವೆಲ್ಲಾ ಸಂಕಲ್ಪ ಬಲದಿಂದ ಶಕ್ತಿಶಾಲಿಗಳಾಗಿ ದುಡಿಯಬೇಕು ಎಂದು ಕ.ವಿ.ವಿ. ಡಾ. ಆರ್.ಸಿ. ಹಿರೇಮಠ ಕನ್ನಡ ಅಧ್ಯಯನ ಪೀಠದ ಪ್ರಾಧ್ಯಾಪಕಿ ಡಾ. ಅನಸೂಯಾ ಕಾಂಬಳೆ ಹೇಳಿದರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು, ೬೮ನೇ ರಾಜ್ಯೋತ್ಸವ ಅಂಗವಾಗಿ 'ಕರ್ನಾಟಕ ಸಂಭ್ರಮ–೫೦'ರ ನಿಮಿತ್ತ ಹೆಸರಾಯಿತು ಕರ್ನಾಟಕ, ಉಸಿರಾಗಲಿ ಕನ್ನಡ' ಸರಣಿ ಕಾರ್ಯಕ್ರಮದಲ್ಲಿ ದಿನಾಂಕ: ೭–೧೧–೨೦೨೩ ರಂದು ಬೆಳಿಗ್ಗೆ ೧೦–೩೦ ಗಂಟೆಗೆ ಸಂಘದ ನಾಡೋಜ ಡಾ. ಪಾಪು ಸಭಾಭವನದಲ್ಲಿ ಕಿಟೆಲ್ ಮಹಾವಿದ್ಯಾಲಯ ಹಾಗೂ ಸೋನಿಯಾ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿ ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ಅವರು, ಭಾರತದ ಸ್ವಾತಂತ್ರ್ಯ ಹೋರಾಟ ಹಾಗೂ ಏಕೀಕರಣ ಇವೆರಡು ಕನ್ನಡಿಗರ ಜೀವನದಲ್ಲಿ ಅತ್ಯಂತ ಮಹತ್ವಪೂರ್ಣ ಘಟನೆಗಳಾಗಿವೆ. ಕರ್ನಾಟಕವು ಏಕೀಕರಣವಾಗಬೇಕೆಂಬ ಬೇಡಿಕೆ ಸ್ವಾತಂತ್ರ್ಯದ ಬೇಡಿಕೆಯಷ್ಟೇ ಹಳೆಯದು. ೧೯೫೬ರ ಮುಂಚೆ ಭಾರತದ ಭೂಪಟದಲ್ಲಿ ಕರ್ನಾಟಕ ಹೆಸರಿನ ರಾಜ್ಯವೇ ಇರಲಿಲ್ಲ.

ಪೊಟ್ಟಿ ಶ್ರೀರಾಮುಲು ಆಮರಣಾಂತ ಉಪವಾಸ ಮಾಡಿದ್ದರಿಂದ ಆಂಧ್ರಪ್ರದೇಶ ರಾಜ್ಯ ರಚನೆಯಾದಂತೆ, ಅದರಗುಂಚಿ ಶಂಕರಗೌಡ್ರು ೨೩ ದಿನ ಉಪವಾಸ ಮಾಡಿದ್ದು ಏಕೀಕರಣಕ್ಕೆ ದಾರಿದೀಪವಾಯಿತು. ಏಕೀಕರಣಕ್ಕಾಗಿ ಹೋರಾಡಿದ ಅನೇಕ ಹೋರಾಟಗಾರರ ತ್ಯಾಗ, ಸೇವೆ, ನಿಸ್ವಾರ್ಥ ಭಾವನೆ ಪ್ರತಿಯೊಬ್ಬ ಕನ್ನಡಿಗರು ಸ್ಮರಿಸಬೇಕು. ಎರಡು ಸಾವಿರ ವರ್ಷದ ಸುದೀರ್ಘ ಇತಿಹಾಸವಿರುವ ಕನ್ನಡ ಭಾಷೆ ಉಳಿವಿಗೆ ನಾವೆಲ್ಲಾ ಬದ್ಧರಾಗಬೇಕೆಂದು ಹೇಳಿದರು.

ಉಪಸ್ಥಿತರಿದ್ದ ಸಿ.ಎಸ್. ಪಾಟೀಲ ಮಾತನಾಡಿ, ಕನ್ನಡಿಗರು ಅಭಿಮಾನ ಶೂನ್ಯರಾಗದೇ ನಾಡು–ನುಡಿಯ ಬಗ್ಗೆ ಅಭಿಮಾನ ಮೂಡಿಸಿಕೊಳ್ಳಬೇಕು ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಕಿಟೆಲ್ ಕಾಲೇಜಿನ ಪ್ರಾಚಾರ್ಯೆ ಡಾ. ರೇಖಾ ಜೋಗುಳ ಮಾತನಾಡಿ, ಕನ್ನಡವು ಕೇವಲ ಭಾಷೆಯಲ್ಲ, ಅದು ನಮ್ಮ ಸಂಸ್ಕೃತಿ, ಕನ್ನಡಿಗರು ಪ್ರಜಾಕಲ್ಯಾಣದ ಉದಾತ್ತ ತತ್ವಗಳನ್ನು ಬಹು ಹಿಂದೆಯೇ ಅಳವಡಿಸಿಕೊಂಡಿದ್ದರು. ಕಾಲಚಕ್ರದ ಹೊಡೆತ ಲೆಕ್ಕಿಸದೇ ಕರ್ನಾಟಕವು ತನ್ನ ಸ್ವಂತಿಕೆಯನ್ನು ಉಳಿಸಿಕೊಂಡು ಬಂದಿರುವುದು ಅನನ್ಯವಾದದ್ದು ಎಂದರು.

ಹರ್ಲಾಪೂರ ಗ್ರಾಮದ ಸಾಂಸ್ಕೃತಿಕ ಕೇಂದ್ರದ ಕಲಾವಿದರಾದ ಎಸ್.ಎಸ್. ಹಿರೇಮಠ, ಈಶ್ವರ ಅರಳಿ, ಮಲ್ಲಪ್ಪ ಮುಳಗುಂದ, ಶರೀಫ್ ದೊಡಮನಿ, ನಾಗರಾಜ ಗೌಡಣ್ಣವರ ಕನ್ನಡ ನಾಡು–ನುಡಿ ಗೀತೆ ಪ್ರಸ್ತುತಪಡಿಸಿದರು.

ಕಾರ್ಯಕ್ರಮದ ಪೂರ್ವದಲ್ಲಿ ಧಾರವಾಡದ ಕಿಟೆಲ್ ಮಹಾವಿದ್ಯಾಲಯ ಹಾಗೂ ಸೋನಿಯಾ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿಗಳು, ಶಿಕ್ಷಕರು, ಸಂಘದ ಸದಸ್ಯರು, ಪದಾಧಿಕಾರಿಗಳಿಂದ ಕನ್ನಡ ಜಾಥಾ ಪ್ರಾರಂಭಗೊಂಡು ವಿವಿಧ ಕನ್ನಡ ಘೋಷಣೆಗಳೊಂದಿಗೆ ವಿವೇಕಾನಂದ ವೃತ್ತದ ಮೂಲಕ ಸಂಘದ ನಾಡೋಜ ಡಾ. ಪಾಟೀಲ ಪುಟ್ಟಪ್ಪ ಸಭಾಭವನದಲ್ಲಿ ಸಮಾವೇಶಗೊಂಡಿತು.

ಸತೀಶ ತುರಮರಿ ಸ್ವಾಗತಿಸಿದರು. ವೀರಣ್ಣ ಒಡ್ಡೀನ ಪ್ರಾಸ್ತಾವಿಕವಾಗಿ ಮಾತನಾಡಿ, ನಿರೂಪಿಸಿ, ವಂದಿಸಿದರು. ಕಿಟೆಲ್ ಕಾಲೇಜಿನ ಡಾ. ಎಸ್.ಬಿ. ನ್ಯಾಮತಿ, ಪ್ರೊ. ಅವಿನಾಶ, ಚನ್ನರಡ್ಡಿ, ಪ್ರೊ. ಶ್ರೀನಿವಾಸ ಪೂಜಾರ, ಸುಬ್ರಹ್ಮಣ್ಯ, ಪ್ರೊ. ಫಾತೀಮಾ ಸೇರಿದಂತೆ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

* ಜಾಗತೀಕರಣದ ಹಿನ್ನೆಲೆಯಲ್ಲಿ ಕನ್ನಡ ಭಾಷೆ ಹಾಗೂ ಸಂಸ್ಕೃತಿಗೆ ಉಳಿವಿನ ಸವಾಲುಗಳು ಎದುರಾಗುತ್ತಿದ್ದು ಕನ್ನಡಿಗರಿಗೆಲ್ಲ ವಿಷಾದನೀಯ ಸಂಗತಿಯಾಗಿದೆ ಎಂದು ಕ್ಷೇತ್ರ ಸಂಪನ್ಮೂಲ ವ್ಯಕ್ತಿ ಡಾ. ಬಾಳಪ್ಪ ಚಿನಗುಡಿ ಅಭಿಪ್ರಾಯಪಟ್ಟರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು, ೫೮ ನೇ ಕರ್ನಾಟಕ ರಾಜ್ಯೋತ್ಸವ ಅಂಗವಾಗಿ 'ಕರ್ನಾಟಕ ಸಂಭ್ರಮ–೫೦' ರ ನಿಮಿತ್ತ ಹೆಸರಾಯಿತು ಕರ್ನಾಟಕ, ಉಸಿರಾಗಲಿ ಕನ್ನಡ' ಸರಣಿ ಕಾರ್ಯಕ್ರಮದಲ್ಲಿ ದಿನಾಂಕ: ೮–೧೧–೨೦೨೩ ರಂದು ಬೆಳಿಗ್ಗೆ ೧೦–೩೦ ಗಂಟೆಗೆ ಸಂಘದ ನಾಡೋಜ ಡಾ. ಪಾಪು ಸಭಾಭವನದಲ್ಲಿ ಕೆ.ಇ. ಬೋರ್ಡ್ ಪದವಿ ಪೂರ್ವ ಮಹಾವಿದ್ಯಾಲಯ ಹಾಗೂ ಅಟಲ್ ಬಿಹಾರಿ ವಾಜಪೇಯಿ ಪದವಿಪೂರ್ವ ಮಹಾವಿದ್ಯಾಲಯ ವಿದ್ಯಾರ್ಥಿಗಳಿಗೆ ಅಯೋಜಿಸಿದ್ದ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿ ಮಾತನಾಡುತ್ತಿದ್ದರು.

ಜಾಗತೀಕರಣ ಹಾಗೂ ಉದಾರೀಕರಣದ ಹಿನ್ನೆಲೆಯಲ್ಲಿ ಮನುಷ್ಯನ ಜೀವನ ಇಂದು–ಯಾಂತ್ರಿಕರಣವಾಗುತ್ತಿದ್ದು ಸಮಯದ ಅಭಾವದಿಂದ ಜನರು ಸಾಹಿತ್ಯದ ಬಗ್ಗೆ ನಿರಾಸಕ್ತಿ ಹೊಂದಿದ್ದಾರೆ. ವೈಜ್ಞಾನಿಕ, ತಾಂತ್ರಿಕ ಅಂತರ್ಜಾಲದ ಮಾಹಿತಿ, ಕಂಪ್ಯೂಟರ ಶಿಕ್ಷಣವು ಕನ್ನಡ ಭಾಷಾ ಮಾಧ್ಯಮದಲ್ಲಿ ಪೂರೈಕೆಯಾದರೆ ಮಾತ್ರ ನಮ್ಮ ನಾಡಿನ ಭವ್ಯ ಸಂಸ್ಕೃತಿ, ಪರಂಪರೆ, ಭಾಷೆಯನ್ನು ಉಳಿಸಲು ಸಾಧ್ಯ. ಆಧುನೀಕರಣದ ನೆಪದಲ್ಲಿ ಮಾತೃಭಾಷೆ ಹಾಗೂ ನಾಡಿನ ಬಗ್ಗೆ ತಾತ್ಸಾರ ಭಾವನೆ ಸಲ್ಲದು.

ದ್ರಾವಿಡ ಭಾಷೆಗಳಲ್ಲೊಂದಾದ ಕನ್ನಡ ಭಾಷೆಗೆ ಸಾವಿರಾರು ವರ್ಷಗಳ ಗಟ್ಟಿ ಇತಿಹಾಸವಿದೆ. ಅದೊಂದು ಸತ್ವಶಾಲಿ ಭಾಷೆಯಾಗಿದೆ. ಕನ್ನಡ ನಾಡಿನಲ್ಲಿ ಕನ್ನಡಿಗರ ಉದಾತ್ತತೆ, ಕಲಿತನ ಹಿರಿಮೆ–ಗರಿಮೆಯ ಬಗ್ಗೆ ನಾನಾಕಡೆ ಅನೇಕ ಶಾಸನಗಳು ದೊರೆತಿದ್ದು ಶ್ಲಾಘನೀಯವಾಗಿದೆ. ಭಕ್ತಿಪಂಥದ ಪ್ರತಿಪಾದಕರು ದಾಸಶ್ರೇಷ್ಠರು ಸಂತರ ಪ್ರಭಾವದಿಂದ ಕನ್ನಡಿಗರು ಭಕ್ತಿ ಹಾಗೂ ಸಹನಶೀಲತೆ ಬೆಳೆಸಿಕೊಂಡು ಬಂದಿದ್ದಾರೆ ಹೊರತು ಸಂಕುಚಿತ ಭಾವನೆ ಬೆಳೆಸಿಕೊಳ್ಳಲಿಲ್ಲ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಮಕ್ಕಳ ಸಾಹಿತಿ ನಿಂಗಣ್ಣ ಕುಂಟಿ ಮಾತನಾಡಿ, ವಿದ್ಯಾರ್ಥಿಗಳಿಗೆ ಜೀವನದಲ್ಲಿ ಸಂಸ್ಕಾರ ಮುಖ್ಯ. ಈ ಸಂಸ್ಕಾರ ಬಲದಿಂದ ನಮ್ಮ ಸಂಸ್ಕೃತಿ ಭಾಷೆ, ಸಾಹಿತ್ಯವನ್ನು ಉಳಿಸಿಕೊಳ್ಳಲು ಸಾಧ್ಯ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಹಲಾಪೂರದ ಸಂಸ್ಕೃತಿ ಸಂಘದ ಸದಸ್ಯರು ನಾಡು–ನುಡಿಯ ಬಗ್ಗೆ ಜಾಗೃತಿ ಮೂಡಿಸುವ ಹಾಡು ಪ್ರಸ್ತುತಪಡಿಸಿದರು. ವೇದಿಕೆಯಲ್ಲಿ ಕೆ.ಇ. ಬೋರ್ಡ ಕಾಲೇಜಿನ ಉಪನ್ಯಾಸಕ ಎಚ್.ಬಿ. ಬ್ಯಾಡಗಿ ಇದ್ದರು.

ಕಾರ್ಯಕಾರಿ ಸಮಿತಿ ಸಮಿತಿ ಸದಸ್ಯ ಡಾ. ಧನವಂತ ಹಾಜವಗೋಳ ಸ್ವಾಗತಿಸಿ, ವಂದಿಸಿದರು. ವೀರಣ್ಣ ಒಡ್ಡೀನ ನಿರೂಪಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಕೆ.ಇ. ಬೋರ್ಡ ಕಾಲೇಜಿನ ಪ್ರಾಧ್ಯಾಪಕರು, ವಿದ್ಯಾರ್ಥಿಗಳು, ಸಿಬ್ಬಂದಿ ವರ್ಗದವರಿದ್ದರು.

* ಕನ್ನಡದ ನೆಲದ ಮುಂದಿನ ವಾರಸುದಾರರು ಇಂದಿನ ಯುವಕರು. ಅದಕ್ಕಾಗಿ ಯುವಕರು ಕರ್ನಾಟಕ ರೂಪಗೊಂಡ ಇತಿಹಾಸವನ್ನು ಓದಿ ತಿಳಿದುಕೊಂಡಾಗ ಮಾತ್ರ ನಿಜವಾದ ಕನ್ನಡದ ವಾರಸುದಾರರಾಗುತ್ತೀರಿ ಎಂದು ಚಂದ್ರಕಾಂತ ಬೆಲ್ಲದ ನುಡಿದರು.

ಕರ್ನಾಟಕ ವಿದ್ಯಾವರ್ಧಕ ಸಂಘವು, ದಾಂಡೇಲಿಯ ಬಂಗೂರನಗರ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯ ಹಾಗೂ ಕನ್ನಡ ವಿಭಾಗ, ಕಾಲೇಜು ಕನ್ನಡ ಸಂಘ, ಐಕ್ಯೂಎಸಿ ಸಹಯೋಗದಲ್ಲಿ ತಿಂಗಳ ಪೂರ್ಣ ನಾಡಹಬ್ಬ ಆಚರಣೆ ಅಂಗವಾಗಿ ಕರ್ನಾಟಕ–೫೦ 'ಹೆಸರಾಯಿತು–ಕರ್ನಾಟಕ ಉಸಿರಾಗಲಿ ಕನ್ನಡ ಧ್ಯೇಯ ವಾಕ್ಯದಡಿಯಲ್ಲಿ ಕಾಲೇಜು ವಿದ್ಯಾರ್ಥಿಗಳೊಂದಿಗೆ ಕನ್ನಡ ಪ್ರಜ್ಞೆ ಬೆಳೆಸುವ ಯೋಜನೆಯ ಅಂಗವಾಗಿ ದಿನಾಂಕ: ೮–೧೧–೨೦೨೩ ರಂದು ಬಂಗೂರನಗರ ಪದವಿ ಮಹಾವಿದ್ಯಾಲಯದ ರಂಗನಾಥ ಗ್ರಂಥಾಲಯ ಸಭಾಭವನದಲ್ಲಿ ಆಯೋಜಿಸಿದ್ದ 'ಉಪನ್ಯಾಸ, ಜನಪದ ಗೀತಗಾಯನ ಕಾರ್ಯಕ್ರಮ' ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ಅವರು, ಪ್ರತಿಯೊಬ್ಬನೂ ಮಾತೃಭಾಷೆಯನ್ನು ಗೌರವಿಸಬೇಕು, ಪ್ರೀತಿಸಬೇಕು ಮತ್ತು ಬೆಳೆಸಬೇಕು ಎಂದರು.

ಏಕೀಕರಣದ ನಂತರ ಕರ್ನಾಟಕ ವಿಷಯದ ಮೇಲೆ ರಂಜಾನ ದರ್ಗಾ ಮಾತನಾಡುತ್ತಾ, ಭಾರತದ ಭಾಷೆಗಳಲ್ಲಿ ಅತ್ಯಂತ ಸುಂದರ ಮತ್ತು ಸರಳ ಭಾಷೆ ಕನ್ನಡ. ಈ ಭಾಷೆಗೆ ಮಡಿವಂತಿಕೆ ಇಲ್ಲ. ಯಾವ ಭಾಷೆ ಮಡಿವಂತಿಕೆ ಮಾಡುತ್ತದೆ ಅದು ಬೆಳೆಯಲಾರದು. ಆದರೆ ಕನ್ನಡ ಭಾಷೆ, ಸಂಸ್ಕೃತ ಇಂಗ್ಲೀಷ, ಮರಾಠಿ ಭಾಷೆಗಳನ್ನು ಒಳಗೊಂಡು ಕನ್ನಡ ಭಾಷೆ ಬೆಳೆದು ನಿಂತಿದೆ.

ಕರ್ನಾಟಕ ಏಕೀಕರಣವಾಗಬೇಕಾದರೆ ಕರ್ನಾಟಕ ವಿದ್ಯಾವರ್ಧಕ ಸಂಘದ ಬಹುದೊಡ್ಡ ಕೊಡುಗೆ ಇದೆ. ಏಕೀಕರಣ ಮೊದಲು ಹಿಂದಿನ ಕನ್ನಡ ಮಾಸ್ತರರು ಪಂಪ ಭಾರತದಂತಹ ಹಳಗನ್ನಡ ಓದುತ್ತಿದ್ದರು. ಇಂದು ಹಳಗನ್ನಡ ಓದುವ ಆಸಕ್ತಿ ಕಳೆದುಕೊಂಡಿದ್ದಾರೆ. ನ್ಯಾಯಾಲಯಗಳಲ್ಲಿ ತಂತ್ರಜ್ಞಾನ ಮತ್ತು ವಿಜ್ಞಾನ ಕ್ಷೇತ್ರದಲ್ಲಿ ಕನ್ನಡ ಭಾಷೆಗೆ ಸಂಪೂರ್ಣ ಆದ್ಯತೆ ನೀಡಿ ಎಲ್ಲ ವಿಭಾಗದ ಓದುಗರಿಗೆ ಕನ್ನಡದಲ್ಲಿ ಅಧ್ಯಯನ ಮಾಡುವಂತಾಗಬೇಕು ಎಂದರು.

ಕನ್ನಡ ಪಾರಂಪರಿಕ ಚಿಂತನೆಯಲ್ಲಿ ಮನಷ್ಯ ಒಂದೇ ಕುಲ ಎಂದು ಹೇಳಿದರು. ಬಸವಣ್ಣನ ಶರಣರ ಕಾಲದಲ್ಲಿ ಎಲ್ಲರನ್ನೂ ಒಳಗೊಳ್ಳುವಿಕೆಯ ಸಂಸ್ಕೃತಿ ಇತ್ತು. ಇದು ಕನ್ನಡ ನಾಡಿನ ಸಂಸ್ಕೃತಿ. ನಮ್ಮ ಸಂಸ್ಕೃತಿ ಕನ್ನಡ ಸಂಸ್ಕೃತಿಯ ಪರಂಪರೆಯನ್ನು ಕುವೆಂಪು, ಬೇಂದ್ರೆಯಂತ ಸಾಹಿತಿಗಳು ಮುಂದುವರೆಸಿಕೊಂಡು ಬಂದರು. ಕನ್ನಡ ಭಾಷೆಗೂ ಒಂದು ಮಾರುಕಟ್ಟೆ ಬೆಲೆ ಇರಬೇಕು. ಆಗ ಕನ್ನಡ ಭಾಷೆಗೆ ಉದ್ಯೋಗ ಸೃಷ್ಟಿಯಾಗುತ್ತದೆ. ಯಾವ ಭಾಷೆಯೂ ಜಗಳಾಡುವುದಿಲ್ಲ. ಅವೆಲ್ಲವೂ ಕೊಡಕೊಳ್ಳುವಿಕೆಯಿಂದ ಬೆಳೆಯುತ್ತವೆ. ಉಳಿದ ಭಾಷೆಗಳನ್ನು ಕಲಿಯಿರಿ. ಆದರೆ ಕನ್ನಡ ಭಾಷೆ ಬಗ್ಗೆ ಪ್ರಧಾನ ಸ್ಥಾನ ನೀಡಿರಿ ಎಂದು ರಂಜಾನ ದರ್ಗಾ ಹೇಳಿದರು.

ಕ.ವಿ.ವ. ಸಂಘದ ಪ್ರಧಾನ ಕಾರ್ಯದರ್ಶಿ ಶಂಕರ ಹಲಗತ್ತಿ ಮಾತನಾಡಿ, ಏಕೀಕರಣ ಸುಮ್ಮನೆ ಬಂದಿಲ್ಲ. ತ್ಯಾಗ, ಬಲಿದಾನದಿಂದ ಬಂದದ್ದಾಗಿದೆ. ಬಳ್ಳಾರಿಯ ರಂಜಾನಸಾಬ್ ಫಿಂಜಾರರ ಬಲಿದಾನ ಹಾಗೂ ಅದರಗುಂಚಿ ಶಂಕರಗೌಡರ ಆಮರಣ ಉಪವಾಸ ಏಕೀಕರಣಕ್ಕೆ ದೊಡ್ಡ ಕೊಡುಗೆಯಾಗಿರುವುದನ್ನು ಯುವಕರು ಮನಗಾಣಬೇಕು. ಹಿರಿಯರು ಕಟ್ಟಿಕೊಟ್ಟ ಕನ್ನಡವನ್ನು ಉಳಿಸಿ, ಬೆಳೆಸಿಕೊಂಡು ಹೋಗುವುದು ಯುವ ಸಮುದಾಯದ ಜವಾಬ್ದಾರಿಯಾಗಿದೆ ಎಂದರು.

ಅತಿಥಿಯಾಗಿ ದಾಂಡೇಲಿ ಶಿಕ್ಷಣ ಸಂಸ್ಥೆಯ ಸಂಯೋಜಕ ಕೆ.ಜಿ. ಗಿರಿರಾಜ ಮಾತನಾಡಿದರು. ಡಾ. ರಾಮು ಮೂಲಗಿ ಜನಪದ ಗೀತೆಗಳನ್ನು ಹಾಡಿದರು. ಕಾಲೇಜಿನ ಪ್ರಾಚಾರ್ಯ ಬಿ.ಎಲ್. ಗುಂಡೂರ ಅಧ್ಯಕ್ಷತೆ ವಹಿಸಿಕೊಂಡಿದ್ದರು. ಕಾಲೇಜಿನ ಐಕ್ಯೂಎಸಿ ಸಂಯೋಜಕ ಡಾ. ಪಿ.ಎ. ಹೊಸಮನಿ ಉಪಸ್ಥಿತರಿದ್ದರು.

ಕನ್ನಡ ವಿಭಾಗದ ಮುಖ್ಯಸ್ಥ ಡಾ. ಎಸ್. ಎಸ್. ದೊಡಮನಿ ಸ್ವಾಗತಿಸಿ, ಮಾತನಾಡಿದರು. ಕಾರ್ಯಕ್ರಮದ ನಿರೂಪಣೆಯನ್ನು ನಿಶಾ ಬೆಳ್ಳಿಗಟ್ಟಿ, ದೃವಾ ಭಟ್ ನಡೆಸಿಕೊಟ್ಟರು. ಸತೀಶ ತುರಮರಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರಾರಂಭದಲ್ಲಿ ಕಾಲೇಜಿನ ಎಲ್ಲ ವಿದ್ಯಾರ್ಥಿಗಳು ಕುಂಭ ಮೇಳದೊಂದಿಗೆ ಅತಿಥಿಗಳನ್ನು ಭವ್ಯ ಮೆರವಣಿಗೆಯೊಂದಿಗೆ ಸ್ವಾಗತಿಸಿದರು.

* ಒಂದೇ ಒಂದೇ ಕರ್ನಾಟಕ ಒಂದೇ ಜಗದೇಳಿಗೆಯಾಗುವುದಿದೆ ಕರ್ನಾಟಕದಿಂದೆ ಎಂದು ದ.ರಾ. ಬೇಂದ್ರೆಯವರು ಈ ಹಾಡನ್ನು ಹಾಡಿದ್ದಾರೆ. ೫೦೦೦ ವರ್ಷಗಳ ಪ್ರಾಚೀನ ಇತಿಹಾಸ ಹೊಂದಿರುವ ನಮ್ಮ ದೇಶಕ್ಕೆ, ಕನ್ನಡಕ್ಕೆ ೧೫೦೦ ವರ್ಷಗಳ ಸಾಹಿತ್ಯಿಕ ಇತಿಹಾಸವಿದೆ. ಅನೇಕ ಕವಿಗಳು ಕನ್ನಡ ನಾಡು ಮತ್ತು ಭಾಷೆಯ ಹಿರಿಮೆಯ ಬಗ್ಗೆ ಹೇಳಿದ್ದಾರೆ. ಮುಂಬರುವ ದಿನಗಳಲ್ಲಿ ಕನ್ನಡವನ್ನು ಉಳಿಸಿಕೊಳ್ಳಬೇಕಾದದ್ದು ಇಂದಿನ ಜನಾಂಗದ ಅಗತ್ಯವಾಗಿದೆ. ಕನ್ನಡ ಮಾತು ತಲೆಎತ್ತುವ ಬಗೆ ಹೇಗೆ, ಜಗತ್ತಿನ ಉದ್ಧಾರಕ್ಕೆ ಕನ್ನಡದ ಕೊಡುಗೆ ಏನು ಎಂಬ ಚಿಂತನೆಯಾಗಬೇಕಾಗಿದೆ ಎಂದು ಉಪನ್ಯಾಸಕ ರಂಗನಾಥ ಕಂಟನಕುಂಟೆ ಹೇಳಿದರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು, ೬೮ನೇ ಕರ್ನಾಟಕ ರಾಜ್ಯೋತ್ಸವ ಅಂಗವಾಗಿ 'ಕರ್ನಾಟಕ ಸಂಭ್ರಮ-೫೦' ರ ನಿಮಿತ್ತ ಹೆಸರಾಯಿತು ಕರ್ನಾಟಕ, ಉಸಿರಾಗಲಿ ಕನ್ನಡ' ಸರಣಿ ಕಾರ್ಯಕ್ರಮದಲ್ಲಿ ದಿನಾಂಕ: ೯-೧೧-೨೦೨೩ ರಂದು ಬೆಳಿಗ್ಗೆ ೧೦-೩೦ ಗಂಟೆಗೆ ಸಂಘದ ನಾಡೋಜ ಡಾ. ಪಾಪು ಸಭಾಭವನದಲ್ಲಿ ಜೆಎಸ್‌ಎಸ್ ಬನಶಂಕರಿ ಕಲಾ, ವಾಣಿಜ್ಯ ಮತ್ತು ಶಾಂತಿಕುಮಾರ ಗುಬ್ಬಿ ವಿಜ್ಞಾನ ಮಹಾವಿದ್ಯಾಲಯ ಹಾಗೂ ಸುವರ್ಣ ಮಹಾವಿದ್ಯಾಲಯದ ವಿದ್ಯಾರ್ಥಿಗಳಿಗಾಗಿ ಅಯೋಜಿಸಿದ್ದ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿ ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ಅವರು, ಪ್ರಾಚೀನತೆ ಬಗ್ಗೆ ನಮಗೆ ಅಭಿಮಾನವಿರಬೇಕು. ಕನ್ನಡ ಉಳಿಸುವ ಕೆಲಸ ಕನ್ನಡಿಗರಾದ ನಾವೇ ಮಾಡಬೇಕು. ಕನ್ನಡ ಭವಿಷ್ಯದ ಕುರಿತು ಚಿಂತನ-ಮಂಥನವಾಗಬೇಕು. ಹೊರದೇಶಗಳಿಗೆ ಕನ್ನಡ ಜ್ಞಾನದ ಮೂಲಕ ಏನು ಕೊಟ್ಟಿದ್ದೇವೆ. ಜ್ಞಾನದಿಂದ ಕನ್ನಡದ ಗೌರವಕ್ಕೆ ಬೆಲೆಯುಂಟು. ಹಿಂದಿನ ಕಾಲಘಟ್ಟದ ಸಾಹಿತ್ಯವನ್ನು ಅಧ್ಯಯನ ಮಾಡಲು ನಾವು ಹಿಂದೇಟು ಹಾಕುತ್ತಿದ್ದೇವೆ. ಬಳಕೆಯಲ್ಲಿ ಇಲ್ಲದ ಭಾಷೆಗಳು ಶೀಘ್ರವಾಗಿ ನಶಿಸಿ ಹೋಗುತ್ತವೆ. ಕನ್ನಡದ ಪರವಾಗಿ ಕೆಲಸ ಮಾಡುವ ಪ್ರವೃತ್ತಿ ಬೆಳೆಯದಿರುವುದು ಖೇದದ ಸಂಗತಿ. ಬದಲಾಗುತ್ತಿರುವ ನಗರಗಳಲ್ಲಿ ಅಡುಗೆ ಮನೆ, ಮಕ್ಕಳ ಆಟ ಮತ್ತು ದಿನನಿತ್ಯದ ಬದುಕಿನಲ್ಲಿ ಕನ್ನಡ ಭಾಷೆಯ ಬಳಕೆ ಕಡಿಮೆಯಾಗಿ ಅನ್ಯ ಭಾಷೆಯ ಸವಾರಿ ನಡೆದಿದೆ. ಎಂದ ಅವರು ಜ್ಞಾನ, ವೈಚಾರಿಕತೆ, ನಿರ್ದಿಷ್ಠ ಗುರಿಯ ಹಿನ್ನೆಲೆಯಲ್ಲಿ ಕನ್ನಡವನ್ನು ಕಟ್ಟಬೇಕಾಗಿದೆ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿ ಜೆ.ಎಸ್.ಎಸ್. ಮಹಾವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥ ಡಾ. ಜಿನದತ್ತ ಹಡಗಲಿ ಕನ್ನಡ ನಾಡು-ನುಡಿಯ ಬಗ್ಗೆ ಮಾತನಾಡಿದರು. ಸುವರ್ಣ ಪಿ.ಯು. ಕಾಲೇಜಿನ ಪ್ರಾಚಾರ್ಯೆ ಶ್ರೀಮತಿ ಸಾವಿತ್ರಿ ಬೆಣ್ಣಿ ವೇದಿಕೆ ಮೇಲೆ ಉಪಸ್ಥಿತರಿದ್ದರು.

ಕುಂದಗೋಳ ತಾಲೂಕಿನ ಹರ್ಲಾಪೂರ ಗ್ರಾಮದ ಯುವಜನ ಹಾಗೂ ಸಾಂಸ್ಕೃತಿಕ ಕೇಂದ್ರ ಕಲಾವಿದರಾದ ಎಸ್.ಎಸ್. ಹಿರೇಮಠ, ಈಶ್ವರ ಅರಳಿ, ಶರೀಫ್ ದೊಡಮನಿ, ನಾಗರಾಜ ಗೌಡಣ್ಣವರ ನಾಡು-ನುಡಿ ಗೀತೆಗಳನ್ನು ಪ್ರಸ್ತುತಪಡಿಸಿದರು.

ಕಾರ್ಯಕ್ರಮದ ಪೂರ್ವದಲ್ಲಿ ಧಾರವಾಡದ ಜೆಎಸ್‌ಎಸ್ ಬನಶಂಕರಿ ಕಲಾ, ವಾಣಿಜ್ಯ ಮತ್ತು ಶಾಂತಿಕುಮಾರ ಗುಬ್ಬಿ ವಿಜ್ಞಾನ ಮಹಾವಿದ್ಯಾಲಯ ಹಾಗೂ ಸುವರ್ಣ ಮಹಾವಿದ್ಯಾಲಯದ ವಿದ್ಯಾರ್ಥಿಗಳು, ಶಿಕ್ಷಕರು, ಸಂಘದ ಸದಸ್ಯರು, ಪದಾಧಿಕಾರಿಗಳಿಂದ ಕನ್ನಡ ಜಾಥಾ ಪ್ರಾರಂಭಗೊಂಡು ವಿವಿಧ ಕನ್ನಡ ಘೋಷಣೆಗಳೊಂದಿಗೆ ವಿವೇಕಾನಂದ ವೃತ್ತದ ಮೂಲಕ ಸಂಘದ ನಾಡೋಜ ಡಾ. ಪಾಟೀಲ ಪುಟ್ಟಪ್ಪ ಸಭಾಭವನದಲ್ಲಿ ಸಮಾವೇಶಗೊಂಡಿತು.

ವೀರಣ್ಣ ಒಡ್ಡೀನ ಕಾರ್ಯಕ್ರಮ ನಿರೂಪಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಶಿವಾನಂದ ಭಾವಿಕಟ್ಟಿ ವಂದಿಸಿದರು.

*       ಮಕ್ಕಳಲ್ಲಿ ಅಡಗಿರುವ ಅದ್ಭುತ ಕಲೆ ಬೆಳಕಿಗೆ ಬರುವುದೇ ಅವರಿಗೆ ವೇದಿಕೆ ಅವಕಾಶ ಸಿಕ್ಕಾಗ ಮಾತ್ರ, ಅದಕ್ಕಾಗಿ ಮಕ್ಕಳಿಗೆ ಹೆಚ್ಚು ಹೆಚ್ಚು ವೇದಿಕೆಗಳನ್ನು ಸೃಷ್ಟಿಮಾಡಿ ದೊರಕುವಂತೆ ಮಾಡಬೇಕೆಂದು ಮಕ್ಕಳ ಹಿರಿಯ ಕವಿ ನಿಂಗಣ್ಣ ಕುಂಟಿ ನುಡಿದರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು ದಿನಾಂಕ: ೧೦-೧೧-೨೦೨೩ ರಂದು ಬೆಳಿಗ್ಗೆ ೧೦ ಗಂಟೆಗೆ ಸಂಘದ ಶ್ರೀ ರಾ.ಹ. ದೇಶಪಾಂಡೆ ಸಭಾಭವನದಲ್ಲಿ ಆಯೋಜಿಸಿರುವ ಮಕ್ಕಳ ರಾಜ್ಯೋತ್ಸವ, ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ಚರಂತಯ್ಯ ಬಿ. ಹಿರೇಮಠ, ಹರ್ಲಾಪುರ ಅವರ ಗೋಮುಖ ಮೂಖ ರೇಖೆಗಳು, ಪೆನ್ & ಇಂಕ್ ಮಿಡಿಯಾ ಚಿತ್ರಕಲಾ ಪ್ರದರ್ಶನ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಮುಂದುವರೆದು ಮಾತನಾಡಿದ ಅವರು, ಕರ್ನಾಟಕ ವಿದ್ಯಾವರ್ಧಕ ಸಂಘವು ರಾಜ್ಯೋತ್ಸವ ಸಂಭ್ರಮವನ್ನು ಮಕ್ಕಳೂ ಅನುಭವಿಸುವಂತೆ ಮಾಡಿದ್ದು ಮಾದರಿಯ ನಡೆಯಾಗಿದೆ. ಮಕ್ಕಳಿಂದ ನೃತ್ಯ, ಸಂಗೀತ, ಯಕ್ಷಗಾನ, ಕಥಾ ವಿಮರ್ಶೆ ಹೀಗೆ ಭಿನ್ನವಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ಅಭಿನಂದನೀಯ ಎಂದರು.

ಮುಖ್ಯ ಅತಿಥಿಗಳಾಗಿ ಮಕ್ಕಳ ಸಾಹಿತಿ ಆನಂದ ಪಾಟೀಲ ಮಾತನಾಡಿ, ಈ ನೆಲದ ಜೀವ ತಂತು ಕೃಷಿ. ಕೃಷಿಯ ಜೀವ ತಂತು ಗೋವು. ಆ ಗೋವಿನ ವಿರಾಟ ಸ್ವರೂಪವನ್ನು ಕಲೆಯ ಮೂಲಕ ಹರ್ಲಾಪುರ ಗ್ರಾಮದ ಚರಂತಯ್ಯ ಬಿ. ಹಿರೇಮಠ ತೆರೆದಿಟ್ಟಿದ್ದಾರೆ. ಕಲಾ ವಿಮರ್ಶಕರು ಇಂಥವುಗಳ ಕುರಿತು ಬರೆದು, ಮಾತನಾಡಿ ಕಲಾ ಪ್ರತಿಭೆಗಳಿಗೆ ಪ್ರೋತ್ಸಾಹ ಹಾಗೂ ಮಾರ್ಗದರ್ಶನ ನೀಡಬೇಕು ಎಂದರು.

ಮುಂದುವರೆದು ಮಾತನಾಡಿದ ಅವರು, ಹಿರೇಮಠರು ಕುಂಚವನ್ನು, ಬಣ್ಣವನ್ನು ಬಳಸದೇ ಕೇವಲ ಪೆನ್ ಮತ್ತು ಇಂಕಿನಿಂದ ರಚಿಸಿದ ಮೂವತ್ತು ಕಲಾಕೃತಿಗಳು ಗೋವಿನ ಹಿರಿಮೆಯನ್ನು, ಅದರ ನೋವನ್ನು ತೆರೆದಿಟ್ಟ ಪರಿ ಆಶ್ಚರ್ಯಗೊಳಿಸುತ್ತದೆ. ಇಲ್ಲಿ ತಾಳ್ಮೆ ಮತ್ತು ಏಕಾಗ್ರತೆ ಫಲವಾಗಿ ಉತ್ಕೃಷ್ಟ ಕಲಾಕೃತಿಗಳು ಮೂಡಿಬಂದಿವೆ. 'ಅಬಸ್ಟ್ರಾಕ್ಟ್' ಕಲೆಯ ಮಾದರಿಯಾಗಿದ್ದು ಪ್ರತಿಯೊಂದು ಕಲೆಯ ಹಲವು ಯೋಚನೆಗಳನ್ನು ನೋಡುಗರಲ್ಲಿ ಹುಟ್ಟುಹಾಕುತ್ತವೆ ಎಂದರು.

ಅಧ್ಯಕ್ಷತೆ ವಹಿಸಿದ್ದ ನಿವೃತ್ತ ಗ್ರಂಥಪಾಲಕ ಜಿ. ಬಿ. ಹೊಂಬಳ ಮಾತನಾಡಿ, ಕಲಾಕೃತಿಗಳು ಅತ್ಯುತ್ತಮವಾಗಿ ಮೂಡಿಬಂದಿವೆ. ಭವಿಷ್ಯದಲ್ಲಿ ಭರವಸೆ ಮೂಡಿಸುವಂತಿವೆ ಎಂದು ಅಭಿಪ್ರಾಯ ವ್ಯಕ್ತಪಡಿಸಿ, ಪ್ರತಿ ಮಗುವಿಗೂ ನೋಟಬುಕ್, ಪೆನ್, ಪ್ಯಾಡು ನೀಡಿ ಮಕ್ಕಳ ಪ್ರತಿಭೆಯನ್ನು ಪ್ರೋತ್ಸಾಹಿಸಿದರು.

ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಧಾರವಾಡದ ಕುಮಾರಿ ಸಹಸ್ರ ಕೊಂಬಳಿ, ಸೀತಾರವಾದನ. ಬೆಟ್ಟದೂರ ಹಾಗೂ ನವಲಗುಂದ ಕಿತ್ತೂರ ರಾಣಿ ಚೆನ್ನಮ್ಮ ವಸತಿಶಾಲೆ ಮಕ್ಕಳು ಹಾಗೂ ಹುಬ್ಬಳ್ಳಿಯ ಕು. ರೇವತಿ ಅನಿಲಕುಮಾರ ಇವರು ಸುಗಮ ಸಂಗೀತ. ಕು. ಸಾತ್ವಿಕ ಗುರುಬಸವ ಮಹಾಮನೆ ವಾಯೋಲಿನ ವಾದನವನ್ನು ಸುಶ್ರಾವ್ಯವಾಗಿ ನಡೆಸಿಕೊಟ್ಟರು.

ಕು. ಶಮಂತಕ ಗೋಪಿಕೃಷ್ಣ ಯಕ್ಷಗಾನ, ಹುಬ್ಬಳ್ಳಿಯ ಕು. ಸಹನಾ ಕಂಕ್ರಿ, ಭರತನಾಟ್ಯ ಪ್ರದರ್ಶಿಸಿ ಸಭಿಕರ ಮನಗೆದ್ದರು. ಧಾರವಾಡದ ನಿವೇದಿತಾ, ವನಿತಾ, ಆರ್.ಎಲ್.ಎಸ್. ಗುಬ್ಬಚ್ಚಿಗೂಡು ಶಾಲೆಯ ಮಕ್ಕಳು ಹಾಗೂ ಸರಕಾರಿ ಶಾಲೆ ಕೆಲಗೇರಿ, ಹಾಗೂ ಹಂಗರಕಿ ಮಕ್ಕಳು ಕಥಾ ಪುಸ್ತಕಗಳ ವಿಮರ್ಶೆ ನಡಿಸಿಕೊಟ್ಟರು. ಶಂಕರ ಹಲಗತ್ತಿ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರಮಿಳಾ ಜಕ್ಕಣ್ಣವರ ಕಾರ್ಯಕ್ರಮ ನಡೆಸಿಕೊಟ್ಟರು.

*       ಬೆನಗಲ್ ಶ್ಯಾಮರಾವ್ ೧೯೦೩ ರಲ್ಲಿ ಕರ್ನಾಟಕ ಏಕೀಕರಣ ಕುರಿತು ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ಮೊಟ್ಟ ಮೊದಲು ಭಾಷಣ ಮಾಡುವ ಮೂಲಕ ಏಕೀಕರಣದ ಮೊದಲ ಧ್ವನಿ ಸಂಘವು ಎತ್ತಿತ್ತು ಎಂದು ಪ್ರಾಚಾರ್ಯ ಡಾ. ಎಂ. ಡಿ. ಒಕ್ಕುಂದ ಹೇಳಿದರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು, ೫೮ನೇ ರಾಜ್ಯೋತ್ಸವ 'ಕರ್ನಾಟಕ ಸಂಭ್ರಮ-೫೦' ರ ನಿಮಿತ್ತ ಹೆಸರಾಯಿತು ಕರ್ನಾಟಕ, ಉಸಿರಾಗಲಿ ಕನ್ನಡ' ಸರಣಿ ಕಾರ್ಯಕ್ರಮದಲ್ಲಿ ದಿನಾಂಕ: ೧೦-೧೧-೨೦೨೩ ರಂದು ಬೆಳಿಗ್ಗೆ ೧೦-೩೦ ಗಂಟೆಗೆ ಸಂಘದ ನಾಡೋಜ ಡಾ. ಪಾಪು ಸಭಾಭವನದಲ್ಲಿ

ಸರಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯ ಹಾಗೂ ಎಂ ಫಾವರ್ ಪದವಿಪೂರ್ವ ಕಾಲೇಜು ವಿದ್ಯಾರ್ಥಿಗಳಿಗೆ ಅಯೋಜಿಸಿದ್ದ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿ ಮಾತನಾಡುತ್ತಿದ್ದರು.

ಕರ್ನಾಟಕ ವಿದ್ಯಾವರ್ಧಕ ಸಂಘವು ೧೯೦೭ ರಲ್ಲಿ ಪ್ರಕಟಿಸಿದ ವಾಗ್ಭೂಷಣ ಪತ್ರಿಕೆಯಲ್ಲಿ ಆಲೂರ ವೆಂಕಟರಾವ್ ಅವರು ಏಕೀಕರಣ ಕುರಿತು ಮೊಟ್ಟಮೊದಲು ಲೇಖನ ಬರೆದ ಹೆಗ್ಗಳಿಕೆ ಅವರದಾಗಿದೆ. ಕುವೆಂಪು ಅವರು ಮೈಸೂರು ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದಾಗ ಕರ್ನಾಟಕದಲ್ಲಿ ಕನ್ನಡ ಆಡಳಿತ ಭಾಷೆಯಾಗಬೇಕೆಂದು ಠರಾವು ಮಾಡಿದ್ದರೆಂದು ಸ್ಮರಿಸಿಕೊಂಡರು.

ಭಾಷೆ ಅಂದರೆ ಬದುಕು, ಬದುಕು ಭಾವನೆಯಿಂದ ಕೂಡಿರುತ್ತದೆ. ಕುವೆಂಪು ಅವರು ಹೇಳಿದ ಹಾಗೆ ಸತ್ತಂತಿಹರನು ಬಡಿದೆಬ್ಬಿಸು ಈ ಹಾಡು ಕನ್ನಡಿಗರಲ್ಲಿ ಸ್ವಾಭಿಮಾನವನ್ನು ಬಡಿದೆಬ್ಬಿಸಿ ಜಾಗೃತಿ ಮೂಡಿಸಿತು. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಶಾಂತಕವಿಗಳು, ಸಿದ್ದಯ್ಯ ಪುರಾಣಿಕ, ಜಿ. ಪಿ. ರಾಜರತ್ನಂ, ದ.ರಾ. ಬೇಂದ್ರೆ ಮುಂತಾದ ಮಹಾನುಭಾವರು ಏಕೀಕರಣದ ಮೂಲಕ ಕರ್ನಾಟಕ ಕಟ್ಟುವ ಧ್ಯೇಯೋದ್ದೇಶಗಳ ಮೂಲ ಅಂಶಗಳನ್ನು ಎಳೆ ಎಳೆಯಾಗಿ ಡಾ. ಎಂ. ಡಿ. ಒಕ್ಕುಂದ ಐತಿಹಾಸಿಕ ದಾಖಲೆಗಳನ್ನು ಉದಾಹರಿಸಿ ಬಿಚ್ಚಿಟ್ಟರು.

ಅಧ್ಯಕ್ಷತೆ ವಹಿಸಿದ್ದ ನಳಿನಿ ಬೆಂಗೇರಿ ಮಾತನಾಡಿ, ಇಂಗ್ಲೀಷ ಸಂಪರ್ಕ ಭಾಷೆಯಾದರೆ ಕನ್ನಡ ಹೃದಯದ ಭಾಷೆಯಾಗಿದೆ. ಸುಂದರ ಭಾಷೆಯಾಗಿ ಕನ್ನಡದ ಹೆಮ್ಮೆ ಕುರಿತು ಸಾಧಕರು ಸಾಧಿಸಿದ ಯಶೋಗಾಥೆಯನ್ನು ಕೊಂಡಾಡಿ, ಇತಿಹಾಸ ತಜ್ಞ ಪಾಲ್ಕಿವಾಲಾರ ಮಾತನ್ನು ಉಲ್ಲೇಖಿಸಿ 'ನಮ್ಮ ಬೆನ್ನಿನ ಮೇಲೆ ಚಿನ್ನದ ಹೊರೆಯಿದೆ. ಅದರಲ್ಲಿ ಕಲೆ, ಸಾಹಿತ್ಯ, ಸಂಗೀತ, ಸಂಸ್ಕೃತಿ ಅಡಗಿದೆ, ಇದನ್ನು ಬಿಟ್ಟು ಪ್ರಜ್ಞೆ ಇಲ್ಲದೆ ತಲೆಎತ್ತಿ ಸಾಗುತಿದೆ ಕತ್ತೆಯಂತೆ ಭಾರತೀಯರ ಸ್ಥಿತಿ–ಗತಿ ಆಗಿದೆ' ಎಂಬುದನ್ನು ವಿವರಿಸಿ, ಕನ್ನಡ ನಾಡಿನ ಸಂಸ್ಕೃತಿ–ಪರಂಪರೆಯ ಶ್ರೀಮಂತ ಇತಿಹಾಸವನ್ನು ತಿಳಿಸಿದರು.

ಕರ್ನಾಟಕದಲ್ಲಿರುವ ಪ್ರತಿಯೊಬ್ಬರಿಗೂ ಕನ್ನಡದ ಬಗ್ಗೆ ಹೆಮ್ಮೆ ಇರಬೇಕು. ಸರಕಾರಿ ಶಾಲೆಗಳನ್ನು ಉನ್ನತೀಕರಿಸಿದರೆ ಕನ್ನಡ ಕಲಿಯಲು ಮಕ್ಕಳಿಗೆ ಅನುಕೂಲವಾಗುತ್ತದೆ. ಆ ನಿಟ್ಟಿನಲ್ಲಿ ಸರಕಾರ ಕಾರ್ಯೋನ್ಮುಖವಾಗಬೇಕೆಂದರು.

ನಂತರ ವಿದ್ಯಾರ್ಥಿಗಳೊಂದಿಗೆ ಸಂವಾದ ಜರುಗಿತು. ಮಾರುತಿ ಗುಡದಪ್ಪನವರ ಹಾಗೂ ಅನ್ನಪೂರ್ಣಾ ಜಯಕ್ಕನವರ ಪ್ರಾರ್ಥಿಸಿದರು.

ಅರಂಭದಲ್ಲಿ ಹರ್ಲಾಪೂರ ಗ್ರಾಮದ ಸಾಂಸ್ಕೃತಿಕ ಕೇಂದ್ರದ ಕಲಾವಿದರಾದ ಎಸ್.ಎಸ್. ಹಿರೇಮಠ, ಈಶ್ವರ ಅರಳಿ, ಮಲ್ಲಪ್ಪ ಮುಳಗುಂದ, ಶರೀಫ್ ದೊಡಮನಿ, ನಾಗರಾಜ ಗೌಡಣ್ಣವರ ಕನ್ನಡ ನಾಡು–ನುಡಿ ಗೀತೆ ಪ್ರಸ್ತುತಪಡಿಸಿದರು.

ಕಾರ್ಯಕ್ರಮದ ಪೂರ್ವದಲ್ಲಿ ಧಾರವಾಡದ ಸರಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯ ಹಾಗೂ ಎಂ ಫಾವರ್ ಪದವಿಪೂರ್ವ ಕಾಲೇಜು ವಿದ್ಯಾರ್ಥಿಗಳು, ಶಿಕ್ಷಕರು, ಸಂಘದ ಸದಸ್ಯರು, ಪದಾಧಿಕಾರಿಗಳಿಂದ ಕನ್ನಡ ಜಾಥಾ ಪ್ರಾರಂಭಗೊಂಡು ವಿವಿಧ ಕನ್ನಡ ಘೋಷಣೆಗಳೊಂದಿಗೆ ವಿವೇಕಾನಂದ ವೃತ್ತದ ಮೂಲಕ ಸಂಘದ ನಾಡೋಜ ಡಾ. ಪಾಟೀಲ ಪುಟ್ಟಪ್ಪ ಸಭಾಭವನಲ್ಲಿ ಸಮಾವೇಶಗೊಂಡಿತು.

ವೀರಣ್ಣ ಒಡ್ಡೀನ ಸ್ವಾಗತಿಸಿದರು. ಶಂಕರ ಹಲಗತ್ತಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಂಚಾಲಕ ಗುರು ಹಿರೇಮಠ ಕಾರ್ಯಕ್ರಮ ನಿರೂಪಿಸಿದರು. ಶಂಕರ ಕುಂಬಿ ವಂದಿಸಿದರು.

* ಇಂದು ನಮಗೆ ಕನ್ನಡ ನಾಡಿನ ಬಗ್ಗೆ ಸ್ವಾಭಿಮಾನ ಅಸಡ್ಡೆ ಹೆಚ್ಚಾಗಿದೆ. ಬೇರೆ ಭಾಷೆಯ ವ್ಯಾಮೋಹ ಹೆಚ್ಚಾಗಿದ್ದರೂ ನಾವು ನಮ್ಮತನ ಬಿಟ್ಟು ಕೊಡಬಾರದು. ಏಕೀಕರಣವೆಂದರೆ ಆಲೂರ ವೆಂಕಟರಾಯರು, ರಾ.ಹ. ದೇಶಪಾಂಡೆಯವರು ನೆನಪಾಗುತ್ತಾರೆ. ಎಂದು ಧಾರವಾಡದ ವಿದ್ಯಾರಣ್ಯ ಸಂಯುಕ್ತ ಪದವಿ ಪೂರ್ವ ಮಹಾವಿದ್ಯಾಲಯದ ಪ್ರಾಚಾರ್ಯೆ ಡಾ. ಶರಣಮ್ಮ ಗೋರೆಬಾಳ ಹೇಳಿದರು.

ಕರ್ನಾಟಕ ವಿದ್ಯಾವರ್ಧಕ ಸಂಘವು, ೬೮ ನೇ ಕರ್ನಾಟಕ ರಾಜ್ಯೋತ್ಸವ ಅಂಗವಾಗಿ 'ಕರ್ನಾಟಕ ಸಂಭ್ರಮ-೫೦'ರ ನಿಮಿತ್ತ ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ' ಸರಣಿ ಕಾರ್ಯಕ್ರಮದಲ್ಲಿ ದಿನಾಂಕ: ೧೧-೧೧-೨೦೨೩ ರಂದು ಬೆಳಿಗ್ಗೆ ೧೦-೩೦ ಗಂಟೆಗೆ ಸಂಘದ ನಾಡೋಜ ಡಾ. ಪಾಪು ಸಭಾಭವನದಲ್ಲಿ ಮರಾಠಾ ವಿದ್ಯಾಪ್ರಸಾರಕ ಮಂಡಳಿಯ ಶಿಕ್ಷಣ ಸಂಸ್ಥೆಯ, ಛತ್ರಪತಿ ಶಿವಾಜಿ ಮಹಾವಿದ್ಯಾಲಯ ಹಾಗೂ ಕೆಪಿಎಸ್‌ಇ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿಗಳಿಗೆ ಅಯೋಜಿಸಿದ್ದ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿ ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ಅವರು, ಸ್ವಾತಂತ್ರ್ಯ ದೊರಕುವ ಮುನ್ನ ಅನೇಕ ಸಂಸ್ಥಾನಗಳಲ್ಲಿ ಕರ್ನಾಟಕ ಚದುರಿ ಹೋಗಿತ್ತು. ಆಡಳಿತ ಭಾಷೆ ಕನ್ನಡೇತರವಾಗಿದ್ದವು. ಬೇರೆ ಬೇರೆ ಪ್ರಾಂತ, ಬಾಷೆಗಳಿದ್ದವು. ಅಂದಿನ ಮಹನೀಯರು ಏಕೀಕರಣಕ್ಕಾಗಿ ಯೋಚಿಸಬೇಕಾಯಿತು.

ಕಬ್ಬು, ಬಾಳೆಹಣ್ಣು ಸುಲಿದಷ್ಟು ಕನ್ನಡ ಭಾಷೆ ಸುಲಭ ಆಗಿದೆ ಸರಳವಾಗಿದೆ. ಅದರ ಸೌಂದರ್ಯ, ಸಂಸ್ಕೃತಿ, ಪರಂಪರೆ ಅನೇಕಾನೇಕ ಕವಿಗಳು ಶತಶತಮಾನಗಳಿಂದ ಹೇಳುತ್ತಾ ಬಂದಿದ್ದಾರೆ. ಮಹಾಭಾರತದ ಭೀಷ್ಮ ಪರ್ವದಲ್ಲಿ ಕರಿನಾಡು, ಕರುನಾಡು, ಕುಂತಳಿನಾಡು ಎಂದು ಈ ಕರ್ನಾಟಕಕ್ಕೆ ಹೆಸರಿತ್ತು ಎಂದು ತಿಳಿದು ಬರುತ್ತದೆ. ಇಂಥ ಹಿನ್ನೆಲೆಯಲ್ಲಿಯೇ 'ಕರ್ನಾಟಕ' ಎಂದು ನಾಮಕರಣ ಕರ್ನಾಟಕ ವಿದ್ಯಾವರ್ಧಕ ಸಂಘದ ಸಂಸ್ಥಾಪಕರಾದ ರಾ.ಹ. ದೇಶಪಾಂಡೆ ಅಂಥ ಮಹನೀಯರ ದೂರದೃಷ್ಟಿಯೇ ಕಾರಣವಾಗಿತ್ತು ಎಂದು ಡಾ. ಶರಣಮ್ಮ ಗೋರೆಬಾಳ  ವಿದ್ಯಾರ್ಥಿಗಳೊಂದಿಗೆ ಹಂಚಿಕೊಂಡರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಇಂಡೋ ಪೋರ್ಚಗೀಸ್ ನಿರ್ದೇಶಕ ಡಾ. ಅರವಿಂದ ಯಾಳಗಿ, ಹತ್ತು ವರ್ಷದ ಯುರೋಪ ಒಳಗಡೆ ಅಥವಾ ಹೊರನಾಡಿನಲ್ಲಿ ಪಾಶ್ಚಿಮಾತ್ಯ ಚಿಂತಕರು ಕನ್ನಡದ ಹಿರಿಮೆ ಕುರಿತು ಕೊಂಡಾಡಿದ್ದಾರೆ. ೨ನೇ ಶತಮಾನದಲ್ಲಿ ಕನ್ನಡದ ಹಿರಿಮೆ, ಗರಿಮೆ ಡಾ. ಫಾದರ್ ಹ್ಯಾರಸ್, ಮಲ್ಲೇಶ. ಡಾ. ಲ್ಯಾಕಿಸ್ ಜ್ಯಾಂಗ್, ೩೮ ಶಬ್ದಗಳು ಕಂಡು ಬಂದಿವೆ ಎಂದು ಈಜಿಪ್ತ್ ಪ್ರವಾಸದಲ್ಲಿರುವ ಸಂಶೋಧಕರು ದಾಖಲಿಸಿದ್ದಾರೆಂದು ತಿಳಿಸಿದರು.

ಅಲೆಗ್ಸಾಂಡರನ ಕಾಲದಲ್ಲಿ ೧ ಲಕ್ಷ ೩೮ ಸಾವಿರ ಪುಸ್ತಕಗಳು ಗ್ರಂಥಾಲಯದಲ್ಲಿ ಲಭ್ಯವಿದ್ದವು. ಯುದ್ಧ ಕಾಲದಲ್ಲಿ ಅವೆಲ್ಲ ಭಸ್ಮವಾದವು. ಅನೇಕ ಸುಟ್ಟು ಹೋದ ಅರೆಬೆಂದ ಪುಸ್ತಕ ಪುಟಗಳು ಕಂಡು ಬರುತ್ತವೆ. ಅವುಗಳಲ್ಲಿ ಅನೇಕ ಕನ್ನಡ ಶಬ್ದಗಳು ಕಂಡು ಬಂದಿವೆ. ಅಂಥ ಶಬ್ದಗಳನ್ನು ಪ್ರಾಣಿಯ ಚರ್ಮದಿಂದ ಮಾಡಿದ ಪೇಪರ ಮೂಲಕ ಆ ಶಬ್ದಗಳು ಅಲೆಗ್ಸಾಂಡ್ರಿಯನ್ ಮ್ಯೂಸಿಯಂನಲ್ಲಿ ನೋಡಬಹುದು ಎಂದ ಅವರು ಕನ್ನಡದ ದರ್ಶನ ವಿಶ್ವದಾದ್ಯಂತ ಪಸರಿಸಿದ ವ್ಯಾಟಿಕನ್ ಅರಮನೆಗೆ ಹೋದರೆ ಕ್ಯಾಥೋಲಿಕ್ ಧರ್ಮದ ಪೋಪ್, ಬಸವಣ್ಣನ ಮೂರ್ತಿಯನ್ನೂ ಸಹ ನೋಡಬಹುದು ಎಂದರು.

ವೇದಿಕೆ ಮೇಲೆ ಶಿವಾಜಿ ಪದವಿಪೂರ್ವ ಕಾಲೇಜಿನ ವಾಣಿಜ್ಯ ವಿಭಾಗದ ಉಪನ್ಯಾಸಕಿ ಸುನೀತಾ ನವಲೆ, ಸಂಚಾಲಕ ಡಾ. ಶ್ರೀಶೈಲ ಹುದ್ದಾರ ಹಾಗೂ ಕೆ.ಪಿ.ಇ.ಎಸ್. ಪದವಿಪೂರ್ವ ಕಾಲೇಜಿನ ಪ್ರಾಚಾರ್ಯ ಅಜ್ಜಪ್ಪ ಶಲವಡಿ ಇದ್ದರು.

ಆರಂಭದಲ್ಲಿ ಹರ್ಲಾಪೂರ ಗ್ರಾಮದ ಸಾಂಸ್ಕೃತಿಕ ಕೇಂದ್ರದ ಕಲಾವಿದರಾದ ಎಸ್.ಎಸ್. ಹಿರೇಮಠ, ಈಶ್ವರ ಅರಳಿ, ಮಲ್ಲಪ್ಪ ಮುಳಗುಂದ, ಶರೀಫ್ ದೊಡಮನಿ, ನಾಗರಾಜ ಗೌಡಣ್ಣವರ ಕನ್ನಡ ನಾಡು-ನುಡಿ ಗೀತೆ ಪ್ರಸ್ತುತಪಡಿಸಿದರು. ಡಾ. ಶ್ರೀಶೈಲ ಹುದ್ದಾರ ಅವರು ಸಹ ಹಾಡಿ ವಿದ್ಯಾರ್ಥಿಗಳನ್ನು ರಂಜಿಸಿದರು.

ಕಾರ್ಯಕ್ರಮದ ಪೂರ್ವದಲ್ಲಿ ಧಾರವಾಡದ ಮರಾಠಾ ವಿದ್ಯಾಪ್ರಸಾರಕ ಮಂಡಳಿಯ ಶಿಕ್ಷಣ ಸಂಸ್ಥೆಯ, ಛತ್ರಪತಿ ಶಿವಾಜಿ ಮಹಾವಿದ್ಯಾಲಯ ಹಾಗೂ ಕೆಪಿಎಸ್‌ಇ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿಗಳು, ಶಿಕ್ಷಕರು, ಸಂಘದ ಪದಾಧಿಕಾರಿಗಳಿಂದ, ಸದಸ್ಯರಿಂದ ಕನ್ನಡ ಜಾಥಾ ಪ್ರಾರಂಭಗೊಂಡು ವಿವಿಧ ಕನ್ನಡ ಘೋಷಣೆಗಳೊಂದಿಗೆ ವಿವೇಕಾನಂದ ವೃತ್ತದ ಮೂಲಕ ಸಂಘದ ನಾಡೋಜ ಡಾ. ಪಾಟೀಲ ಪುಟ್ಟಪ್ಪ ಸಭಾಭವನದಲ್ಲಿ ಸಮಾವೇಶಗೊಂಡಿತು.

ಸತೀಶ ತುರಮರಿ ಸ್ವಾಗತಿಸಿದರು. ಸಂಚಾಲಕ ಗುರು ಹಿರೇಮಠ ಪ್ರಾಸ್ತಾವಿಕವಾಗಿ ಮಾತನಾಡಿ, ನಿರೂಪಿಸಿ, ವಂದಿಸಿದರು.

* ಕನ್ನಡವೆಂದರೆ ಬರೀ ನುಡಿಯಲ್ಲ. ಅದು ಕನ್ನಡದ ಪ್ರೇಮ, ಸ್ನೇಹ. ಕನ್ನಡಿಗರ ಸ್ವಾಭಿಮಾನ ಮಡುಗಟ್ಟುವುದೇ ಕನ್ನಡದ ಅಸ್ಮಿತೆ ಎಂದು ಡಾ. ದ್ರಾಕ್ಷಾಯಣಿ ಉಡಿಕೇರಿ ಹೇಳಿದರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು, ೬೮ನೇ ಕರ್ನಾಟಕ ರಾಜ್ಯೋತ್ಸವ ಅಂಗವಾಗಿ 'ಕರ್ನಾಟಕ ಸಂಭ್ರಮ–೫೦'ರ ನಿಮಿತ್ತ 'ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ' ಸರಣಿ ಕಾರ್ಯಕ್ರಮದಲ್ಲಿ ದಿನಾಂಕ: ೧೫–೧೧–೨೦೨೩ ರಂದು ಬೆಳಿಗ್ಗೆ ೧೦–೩೦ ಗಂಟೆಗೆ ಸಂಘದ ನಾಡೋಜ ಡಾ. ಪಾಪು ಸಭಾಭವನದಲ್ಲಿ ಸರಕಾರಿ ಮಹಿಳಾ ಮಹಾವಿದ್ಯಾಲಯ ಹಾಗೂ ಜಿಗಳೂರು ಮಹಿಳಾ ಕಾಲೇಜು ಹಾಗೂ ಅಂಜುಮನ್ ಕಾಲೇಜಿನ ವಿದ್ಯಾರ್ಥಿಗಳಿಗಾಗಿ ಅಯೋಜಿಸಿದ್ದ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿ ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ಅವರು, ಕನ್ನಡದ ಆದಿಕವಿ ಪಂಪ, ಗದುಗಿನ ವೀರನಾರಾಯಣನ ಭಕ್ತಿ, ಕುಮಾರವ್ಯಾಸನ  ಕಾವ್ಯ ಆಲಿಸುವುದೇ ಪ್ರಮುಖವಾಗಿದೆ. ಇಲ್ಲಿ ಧುಮ್ಮಿಕ್ಕಿ ಹರಿಯುವ ನದಿಗಳು, ಜೋಗ ಜಲಪಾತಗಳು, ಪ್ರಕೃತಿ ಸೊಬಗು, ಇಲ್ಲಿನ ಹಕ್ಕಿಗಳ ಕಲರವ ನೆನೆಯುವುದೇ ಕರ್ನಾಟಕದ ಕನ್ನಡ ನಾಡಿನ ಹಿರಿಮೆ ಎಂದರು.

ಭಾರತ ಮಾತೆಯ ಜನನಿ ಕರ್ನಾಟಕ. ಅಂಥಾ ಹೆತ್ತ ತಾಯಿಯನ್ನು ಮರೆಯಬಾರದು. ಅದಕ್ಕೊಂದು ಭಾವವಿದೆ.  ಕರ್ಣ ಎಂದರೆ ಹಿತವಾದ ಭಾಷೆ. ಕರುನಾಡು ಕಪ್ಪು ನೆಲ ಇರುವುದರಿಂದ ಕರುನಾಡು ಎಂದು ಕರೆಯುತ್ತಾರೆ. ಅದಕ್ಕಿಂತ ಪೂರ್ವದಲ್ಲೂ ರಾಮಾಯಣ ಮತ್ತು ಮಹಾಭಾರತದಲ್ಲಿ ಕರ್ನಾಟಕ ಇತ್ತು. ವೇದಗಳ ಕಾಲದಲ್ಲೂ ಕರ್ನಾಟಕದ ಪ್ರಸ್ತಾಪವಿದೆ ಎಂದು ಶಂಬಾ ಜೋಶಿ ಹೇಳಿರುವುದನ್ನು ಸ್ಮರಿಸಿದರು.

ಹರಪ್ಪಾ ಮೆಹಂಜೋದಾರ ನಾಗರಿಕತೆಯಿಂದಲೂ ಕರ್ಣಾಟಕ ಪ್ರಾಚೀನ ಕಾಲದಲ್ಲಿತ್ತು. ಮೌರ್ಯರು, ಗಂಗರು, ವಿಜಯನಗರದ ಅರಸರು, ಕದಂಬರು, ಮೈಸೂರು ಒಡೆಯರ ಅರಸರುಗಳು ರಾಷ್ಟ್ರಕೂಟರ ಹಾಗೂ ಚಾಲುಕ್ಯರ ಕಾಲದಲ್ಲೂ  ಕರ್ನಾಟಕವು ಕಾವೇರಿಯಿಂದ–ಗೋದಾವರಿವರೆಗೆ ಹಬ್ಬಿತ್ತು.

ಬ್ರಿಟಿಷರು ತಮ್ಮ ಆಳ್ವಿಕೆಗಾಗಿ ಕರ್ನಾಟಕವನ್ನು ಮೈಸೂರು ಕರ್ನಾಟಕ, ಮುಂಬೈ ಕರ್ನಾಟಕ, ಹೈದ್ರಾಬಾದ ಕರ್ನಾಟಕ, ಮದ್ರಾಸ್ ಕರ್ನಾಟಕ, ಕೊಡಗು ಕರ್ನಾಟಕ ಎಂದು ಐದು ವಿಭಾಗಗಳನ್ನಾಗಿ ಮಾಡಿ ಒಡೆದಾಳುವ ನೀತಿ ಅನುಸರಿಸಿದ್ದರ  ಕುರಿತು ವಿವರಿಸಿದರು. ಕರ್ನಾಟಕವನ್ನು ಒಂದು ಗೂಡಿಸಲು ಕರ್ನಾಟಕ ಕುಲಪುರೋಹಿತ ಆಲೂರ ವೆಂಕಟರಾಯರು ಮುನ್ನುಡಿ ಬರೆದರು ಎಂದು ಡಾ. ದ್ರಾಕ್ಷಾಯಿಣಿ ಉಡಿಕೇರಿ ಹೇಳಿದರು.

ವೇದಿಕೆ ಮೇಲೆ ಜಿಗಳೂರು ಮಹಿಳಾ ಕಾಲೇಜಿನ ಅಧ್ಯಾಪಕರುಗಳಾದ ಶಕುಂತಲಾ ಬಿರಾದಾರ, ಶುಭಾ ಹೆಗಡೆ, ವಿಶಾಲ ಕರಿಕಟ್ಟಿ, ಅಂಜುಮನ್ ಪ.ಪೂ. ಕಾಲೇಜಿನ ಆರ್. ಎಮ್. ಮುಲ್ಲಾ ಹಾಗೂ ಶಿವಾಜಿ. ಪ.ಪೂ. ಕಾಲೇಜಿನ ರವೀಂದ್ರ ದೇಸಾಯಿ, ಧವಳೆ ಉಪಸ್ಥಿತರಿದ್ದರು.

ಕಾರ್ಯಕ್ರಮದ ಪೂರ್ವದಲ್ಲಿ ಧಾರವಾಡದ ಮರಾಠಾ ವಿದ್ಯಾಪ್ರಸಾರಕ ಮಂಡಳಿಯ ಶಿಕ್ಷಣ ಸಂಸ್ಥೆಯ, ಛತ್ರಪತಿ ಶಿವಾಜಿ ಮಹಾವಿದ್ಯಾಲಯ ಹಾಗೂ ಕೆಪಿಎಸ್‌ಇ ಪದವಿಪೂರ್ವ ಕಾಲೇಜು ಹಾಗೂ ಅಂಜುಮನ್ ಕಾಲೇಜಿನ ವಿದ್ಯಾರ್ಥಿಗಳು, ಶಿಕ್ಷಕರು, ಸಂಘದ ಪದಾಧಿಕಾರಿಗಳಿಂದ, ಸದಸ್ಯರಿಂದ ಕನ್ನಡ ಜಾಥಾ ಪ್ರಾರಂಭಗೊಂಡು ವಿವಿಧ ಕನ್ನಡ ಘೋಷಣೆಗಳೊಂದಿಗೆ ವಿವೇಕಾನಂದ ವೃತ್ತದ ಮೂಲಕ ಸಂಘದ ನಾಡೋಜ ಡಾ. ಪಾಟೀಲ ಪುಟ್ಟಪ್ಪ ಸಭಾಭವನಲ್ಲಿ ಸಮಾವೇಶಗೊಂಡಿತು.

ಸಂಘದ ಪ್ರಧಾನ ಕಾರ್ಯದರ್ಶಿ ಶಂಕರ ಹಲಗತ್ತಿ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ತಿಂಗಳ ಕಾರ್ಯಕ್ರಮ ಸಂಚಾಲಕ ಗುರು ಹಿರೇಮಠ ನಿರೂಪಿಸಿ ವಂದಿಸಿದರು. ಅಂಜುಮನ್ ಪ.ಪೂ. ಕಾಲೇಜಿನ ವಿದ್ಯಾರ್ಥಿನಿಯರಾದ ಶೃತಿ ಬಂಗಾರಿ, ಶೋಭಾ ಸಂಭಾವಿ, ಜನ್ನತ, ರಾಧಿಕಾ, ತನ್ವಿಲ್, ಅಶ್ವಿನಿ, ಸಾನಿಯಾ ನದಾಫ್ ಅವರು ಪ್ರಾರ್ಥಿಸಿದರು.

* ಕರ್ನಾಟಕ ಪ್ರದೇಶ ಇತಿಹಾಸ ಪೂರ್ವದಿಂದಲೂ ಅಸ್ತಿತ್ವದಲ್ಲಿತ್ತು. ಅಂದಿನ ಜನ ಗುಹೆಗಳಲ್ಲಿ ವಾಸವಾಗಿ ಜೀವನ ನಡೆಸುತ್ತಿದ್ದರು. ಜೀವನ ವಿಕಾಸ ಆದ ನಂತರ ಮೌರ್ಯರು, ಶಾತವಾಹನರು, ಪಲ್ಲವರು ಆಳ್ವಿಕೆ ಮಾಡಿದರೆಂದು ಡಾ. ಧನವಂತ ಹಾಜವಗೋಳ ಹೇಳಿದರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು, ೬೮ನೇ ಕರ್ನಾಟಕ ರಾಜ್ಯೋತ್ಸವ ಅಂಗವಾಗಿ 'ಕರ್ನಾಟಕ ಸಂಭ್ರಮ-೫೦'ರ ನಿಮಿತ್ತ 'ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ' ಸರಣಿ ಕಾರ್ಯಕ್ರಮದಲ್ಲಿ ದಿನಾಂಕ: ೧೬-೧೧-೨೦೨೩ ರಂದು ಬೆಳಿಗ್ಗೆ ೧೦-೩೦ ಗಂಟೆಗೆ ಸಂಘದ ನಾಡೋಜ ಡಾ. ಪಾಪು ಸಭಾಭವನದಲ್ಲಿ ಜೆ.ಎಸ್.ಎಸ್. ಎಸ್.ಎಂ. ಐ.ಯು.ಜಿ.ಪಿ.ಜಿ ಮಹಾವಿದ್ಯಾಲಯದ ವಿದ್ಯಾರ್ಥಿಗಳಿಗೆ ಹಾಗೂ ತಿಮ್ಮನಗೌಡ ಪ್ರಿಸಂ ಪ.ಪೂ ಕಾಲೇಜಿನ ವಿದ್ಯಾರ್ಥಿಗಳಿಗೆ ಅಯೋಜಿಸಿದ್ದ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿ ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ಅವರು, ಕರ್ನಾಟಕದ ಕನ್ನಡ ಪ್ರದೇಶವನ್ನು ಆಳಿದ ಕದಂಬರು ಮೊಟ್ಟಮೊದಲು ಒಂದು ಸಂಸ್ಕೃತಿಯನ್ನು ಹುಟ್ಟುಹಾಕಿದರು. ಕ್ರಿ.ಶ. ೪೫೦ರ ಹೊತ್ತಿಗೆ ಲಿಖಿತವಾದ ಪ್ರಥಮ ಶಾಸನ ಹೆಲ್ಮಿಡಿ ಶಾಸನವು ಐತಿಹಾಸಿಕ ದಾಖಲಾಗಿದೆ.

ದಕ್ಷಿಣ ಕರ್ನಾಟಕ ಆಳಿದವರು ಗಂಗರು ಇವರ ಸರಿಸಮಾನಾಗಿ ಬಾದಾಮಿ ಚಾಲುಕ್ಯರು ಬಾದಾಮಿಯನ್ನು ರಾಜಧಾನಿಯನ್ನಾಗಿ ಮಾಡಿದ್ದರು. ಎರಡನೇ ಅರಿಕೇಸರಿ ಎಲಿಫೆಂಟಾ ದ್ವೀಪದವರೆಗೆ ರಾಜ್ಯವನ್ನು ವಿಸ್ತಾರ ಪಡೆದುಕೊಂಡಿತ್ತು. ಆಗ ಮರಾಠಾ ರಾಜ್ಯವೇ ಇರಲಿಲ್ಲ ಎಂದು ಅನೇಕ ದಾಖಲೆಗಳಿಂದ ತಿಳಿದು ಬರುತ್ತದೆ.

ವಿಜಯನಗರ ಸಾಮ್ರಾಜ್ಯವನ್ನು ಹುಕ್ಕ-ಬುಕ್ಕರು ಸ್ಥಾಪನೆ ಮಾಡಿ ನೇರವಾಗಿ ಕನ್ನಡ ಭಾಷೆ, ನಾಡನ್ನ ಉಳಿಸುವಲ್ಲಿ ಶ್ರಮಿಸಿದರು. ಅವರ ನಂತರ ಮೈಸೂರ ಅರಸರ ಮೇಲೆ ರಾಜ್ಯಭಾರ ಬೀಳುತ್ತದೆ. ಅಷ್ಟರಲ್ಲಿ ಈಸ್ಟ್ ಇಂಡಿಯಾ ಕಂಪನಿ ಅನೇಕ ಹೊಸ ಯೋಜನೆಗಳೊಂದಿಗೆ ಜಾರಿಗೆ ತಂದು ನಮ್ಮ ಮೇಲೆ ಇಂಗ್ಲೀಷ ಹೇರಿಕೆ ಹೆಚ್ಚಾಯ್ತು ಎಂದರು. ನಂತರ ವಿದ್ಯಾರ್ಥಿಗಳೊಂದಿಗೆ ಸಂವಾದ ಜರುಗಿತು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಜೆ.ಎಸ್.ಎಸ್. ಕಾಲೇಜು ವಾಣಿಜ್ಯ ಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಡಾ. ರೋನಿಯಲ್ ಮನೋಹರ, ಫರ್ಡಿನಾಂಡ ಕಿಟೆಲ್‌ರು ಬರೆದು ಶಬ್ದಕೋಶ ರಚಿಸಿದ ಹೆಗ್ಗಳಿಕೆಯಲ್ಲಿ ಅವರ ಮಾತೃಭಾಷೆ ಇಂಗ್ಲೀಷ ಆಗಿದ್ದರೂ ಕನ್ನಡ ಕಲಿತು ಕನ್ನಡದಲ್ಲಿಯೇ ಅವಿಶ್ರಾಂತ ಶ್ರಮಿಸಿ, ಕನ್ನಡದಲ್ಲಿಯೇ ಸಾಧಿಸಿದ ಸಾಧಕರು ಎಂದು ಅವರನ್ನು ಸ್ಮರಿಸಿ ಭಾಷೆ ಬಗೆಗೆ ಅನೇಕ ವಿಚಾರಗಳನ್ನು ತಿಳಿಸಿಕೊಟ್ಟರು. ಕ.ವಿ.ವ ಸಂಘವು ರಾಜ್ಯೋತ್ಸವ ಅಂಗವಾಗಿ ಯುವಜನರಲ್ಲಿ ಕನ್ನಡ ಪ್ರಜ್ಞೆ ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದು ಶ್ಲಾಘನೀಯ ಎಂದರು.

ಹರ್ಲಾಪೂರ ಗ್ರಾಮದ ಸಾಂಸ್ಕೃತಿಕ ಕೇಂದ್ರದ ಕಲಾವಿದರಾದ ಈಶ್ವರ ಅರಳಿ, ಶರೀಫ್ ದೊಡಮನಿ, ನಾಗರಾಜ ಗೌಡಣ್ಣವರ ಕನ್ನಡ ನಾಡು-ನುಡಿ ಗೀತೆ ಪ್ರಸ್ತುತಪಡಿಸಿದರು.

ಕಾರ್ಯಕ್ರಮದ ಪೂರ್ವದಲ್ಲಿ ಧಾರವಾಡದ ಜೆ.ಎಸ್.ಎಸ್. ಎಸ್.ಎಂ. ಐ.ಯು.ಜಿ.ಪಿ.ಜಿ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಹಾಗೂ ತಿಮ್ಮನಗೌಡ ಪ್ರಿಸಂ ಪ.ಪೂ ಕಾಲೇಜಿನ ವಿದ್ಯಾರ್ಥಿಗಳು, ಶಿಕ್ಷಕರು, ಸಂಘದ ಸದಸ್ಯರು, ಪದಾಧಿಕಾರಿಗಳಿಂದ ಕನ್ನಡ ಜಾಥಾ ಪ್ರಾರಂಭಗೊಂಡು ವಿವಿಧ ಕನ್ನಡ ಘೋಷಣೆಗಳೊಂದಿಗೆ ವಿವೇಕಾನಂದ ವೃತ್ತದ ಮೂಲಕ ಸಂಘದ ನಾಡೋಜ ಡಾ. ಪಾಟೀಲ ಪುಟ್ಟಪ್ಪ ಸಭಾಭವನಲ್ಲಿ ಸಮಾವೇಶಗೊಂಡಿತು.

ವೇದಿಕೆ ಮೇಲೆ ಪ್ರಿಸಂ ಕಾಲೇಜಿನ ಅಧ್ಯಾಪಕರುಗಳಾದ ಶಿವಾನಂದ, ಪ್ರೀತಿ ಗೊಬ್ಬಾಣಿ ಉಪಸ್ಥಿತರಿದ್ದರು. ಶಂಕರ ಕುಂಬಿ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಗುರು ಹಿರೇಮಠ ನಿರೂಪಿಸಿ, ವಂದಿಸಿದರು.

* ಕನ್ನಡದ ಲಿಪಿ, ಭಾಷೆ, ಕನ್ನಡಕ್ಕಿರುವ ಪರಂಪರೆ, ಸೂಕ್ಷ್ಮವಾಗಿ ಅವಲೋಕಿಸಿದಾಗ ಎಂಥವರನ್ನು ಮಂತ್ರಮುಗ್ಧರನ್ನಾಗಿಸುತ್ತದೆ ಎಂದು ಸಾಹಿತಿ ಎ.ಎ. ದರ್ಗಾ ಹೇಳಿದರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು, ೬೮ನೇ ಕರ್ನಾಟಕ ರಾಜ್ಯೋತ್ಸವ ಅಂಗವಾಗಿ 'ಕರ್ನಾಟಕ ಸಂಭ್ರಮ-೫೦'ರ ನಿಮಿತ್ತ 'ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ' ಸರಣಿ ಕಾರ್ಯಕ್ರಮದಲ್ಲಿ ದಿನಾಂಕ: ೧೭-೧೧-೨೦೨೩ ರಂದು ಬೆಳಿಗ್ಗೆ ೧೦-೩೦ ಗಂಟೆಗೆ ಸಂಘದ ನಾಡೋಜ ಡಾ. ಪಾಪು ಸಭಾಭವನದಲ್ಲಿ ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಯ ವಿದ್ಯಾರ್ಥಿಗಳಿಗೆ ಅಯೋಜಿಸಿದ್ದ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿ ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ದರ್ಗಾ ಅವರು, ಕನ್ನಡ ಹೇಗೆ ಹುಟ್ಟಿತು, ಅಕ್ಷರವನ್ನು ಬರೆದವರು ಯಾರು ಎಂದು ಪ್ರಶ್ನೆ ಉದ್ಭವವಾದಾಗ ನಮಗೆ ೩ನೇ ಶತಮಾನದಿಂದಲೂ ಮೌರ್ಯರ ಕಾಲದಲ್ಲಿ ಬ್ರಾಹ್ಮಿ ಲಿಪಿ, ಪ್ರಾಕೃತ ಲಿಪಿಯೊಂದಿಗೆ ಪುನ್ನಾಟ ಒಂದು ಮನೆತನವಿತ್ತು. ಇವರೇ ಕನ್ನಡದ ಮೂದಲಿಗರು ಎಂದು ಮಾರ್ಮಿಕವಾಗಿ ನುಡಿದರು.

ಕನ್ನಡದ ಪ್ರಪ್ರಥಮ ರಾಜ ಮನೆತನ ಎಂದರೆ ಕದಂಬರು. ಇವರು ನಾಲ್ಕನೇಯ ಶತಮಾನದಲ್ಲಿ ಕಾಣಸಿಗುತ್ತಾರೆ. ಪುನ್ನಾಟರೊಂದಿಗೆ ವೈವಾಹಿಕ ಸಂಬಂಧ ಬೆಳೆಸುತ್ತಾರೆ. ಪ್ರಾಕೃತಕ ಭಾಷೆಯೊಂದಿಗೆ ಸಂಸ್ಕೃತ, ಬ್ರಾಹ್ಮಿ ಲಿಪಿಯೊಂದಿಗೆ ಬೆರೆಸುತ್ತಾರೆ. ಆಗ ಸಂಸ್ಕೃತ ಭಾಷೆ ಮುನ್ನಲೆಗೆ ಬಂತು. ಅಲ್ಲಿಂದಲೇ ಲಿಪಿ ವಿಕಾಸವಾಗಿ ಕನ್ನಡ ಭಾಷೆ ಲಿಪಿ ವಿಭಿನ್ನ ರೀತಿಯ 'ತಲೆಪಟ್ಟಿ' ಸ್ವರೂಪ ಪಡೆಯಿತು.

ತಾಡೋಲೆ, ಶಿಲೆ, ಮರದ ತೊಟ್ಟಿಗೆಗಳ ಮೇಲೆ ಅಂದಿನ ಜನ ಬರೆಯುತ್ತಿದ್ದರು. ಆ ಕಾಲ ಘಟ್ಟದ ಶಾಸನಗಳಾದ ಚಂದವಳ್ಳಿ ಶಾಸನ, ಮಳವಳ್ಳಿಯ ಶಾಸನದೊಂದಿಗೆ ಕನ್ನಡದ ಪ್ರಪ್ರಥಮ ಶಾಸನ, ಬೇಲೂರಿನ ಹಲ್ಮಿಡಿ ಶಾಸನ ಸಿಕ್ಕಿತೆಂದು ಅನೇಕ ಐತಿಹ್ಯಗಳಿಂದ ತಿಳಿದು ಬರುತ್ತದೆ ಎಂದು ದರ್ಗಾ ಅವರು ಎಳೆ ಎಳೆಯಾಗಿ ಬಿಚ್ಚಿಟ್ಟರು.

ಅಧ್ಯಕ್ಷತೆ ವಹಿಸಿ ಹಿರಿಯ ರಂಗಕರ್ಮಿ ಸಿ. ಬಸಲಿಂಗಯ್ಯ ಮಾತನಾಡಿ, ಕನ್ನಡ ನಾಡು, ನುಡಿಯಲ್ಲಿ ಕರ್ನಾಟಕದ ಏಕೀಕರಣಕ್ಕೆ ಹೋರಾಡಿದವರ ಕುರಿತು ದೀರ್ಘವಾಗಿ ಹೇಳಿದರು. ನಮ್ಮ ಕನ್ನಡದ ಮೇಲೆ ನಿರಂತರ ಅಭಿಮಾನವಿರಬೇಕು. ಭಾಷಾ ಬಳಕೆಯಲ್ಲಿ ಕನ್ನಡದ ಪದಗಳನ್ನು ಹೆಚ್ಚಿಗೆ ಬಳಸಿದರೆ ಬದುಕು ಸಾರ್ಥಕವಾಗುತ್ತದೆ ಎಂದು ಹೇಳುತ್ತಾ ಕ.ವಿ.ವ.ಸಂಘದ  ಕಾರ್ಯಗಳನ್ನು ಶ್ಲಾಘಿಸಿದರು.

ವಿದ್ಯಾರ್ಥಿಗಳಾದ ಪ್ರೇರಣಾ ಹಿರೇಮಠ, ಯಶೋಧಾ ಹೂಗಾರ, ಅರ್ಚನಾ, ಅನನ್ಯಾ ನವಲೂರ ನಾಡು–ನುಡಿ ಗೀತೆಗಳನ್ನು ಹಾಡಿದರು. ಶಂಕರ ಹಲಗತ್ತಿ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಸಂಚಾಲಕ ಗುರು ಹಿರೇಮಠ ನಿರೂಪಿಸಿ, ವಂದಿಸಿದರು.

ವೇದಿಕೆಯಲ್ಲಿ ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಯ ಅಧ್ಯಾಪಕಿ ವಿಜಯಲಕ್ಷ್ಮಿ ಮಲ್ಲಾಡಿ, ಕಲಾವಿದೆ ಸವಿತಾ ಪಾಟೀಲ ರಾಜುಗೌಡ ಪಾಟೀಲ, ಆಸ್ಮಾ, ಅರುಣ ಗಂಜಿಗಟ್ಟಿ, ಮಂಜುನಾಥ ಮಣ್ಣೂರ, ಅಯ್ಯಪ್ಪಯ್ಯ ಹಲಗಲಿಮಠ ಹಾಜರಿದ್ದರು.

*      ಕನ್ನಡ ನುಡಿ, ಕನ್ನಡ ಕಾವ್ಯರ್ಷಿಗಳ ಕೈಗನ್ನಡಿ. ಕವಿಕಾವ್ಯ ಸೃಷ್ಟಿಗೆ ಹೊನ್ನುಡಿ. ಕನ್ನಡಿಗರಾದ ನಮಗೆ ಚೈತನ್ಯ ಉಂಟು ಮಾಡುವಂತಹ ಸುಮಧುರವಾಣಿ ಎಂದು ಕ.ವಿ.ವ. ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ವೀರಣ್ಣ ಒಡ್ಡೀನ ಅಭಿಪ್ರಾಯಪಟ್ಟರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು, ೬೮ನೇ ಕರ್ನಾಟಕ ರಾಜ್ಯೋತ್ಸವ ಅಂಗವಾಗಿ 'ಕರ್ನಾಟಕ ಸಂಭ್ರಮ–೫೦'ರ ನಿಮಿತ್ತ 'ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ' ಸರಣಿ ಕಾರ್ಯಕ್ರಮದಲ್ಲಿ ದಿನಾಂಕ: ೧೮–೧೧–೨೦೨೩ ರಂದು ಬೆಳಿಗ್ಗೆ ೧೦–೩೦ ಗಂಟೆಗೆ ಸಂಘದ ನಾಡೋಜ ಡಾ. ಪಾಪು ಸಭಾಭವನದಲ್ಲಿ ವಾಯ್. ಬಿ. ಅಣ್ಣಿಗೇರಿ ಪ.ಪೂ. ಕಾಲೇಜಿನ ವಿದ್ಯಾರ್ಥಿಗಳಿಗೆ ಅಯೋಜಿಸಿದ್ದ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿ ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ಅವರು, ಕರ್ನಾಟಕವು ಇಡೀ ಭಾರತದಲ್ಲೇ ವೈಚಾರಿಕ ಕ್ರಾಂತಿ ಮೆರೆದ ನಾಡಾಗಿದೆ. ಕನ್ನಡಿಗರು ಶಿಷ್ಟ ಜನಪ್ರಿಯರು, ಕೆಟ್ಟಜನ ವರ್ಜಿತರಾಗಿದ್ದಾರೆ. ಕನ್ನಡಿಗರಲ್ಲಿರುವ ಸಹನೆ, ವಿಶಾಲ ಮನೋಭಾವ ಪ್ರಜಾ ಕಲ್ಯಾಣದ ಉದಾತ್ತ ಭಾವನೆಗಳೆಲ್ಲ ಕನ್ನಡಿಗರೆಲ್ಲರ ದೈನಂದಿನ ಜೀವನ ಕ್ರಮವಾಗಿದ್ದವು. ಮೂಲತಃ ದ್ರಾವಿಡ ಭಾಷೆಗೆ ಸೇರಿದ ಕನ್ನಡ ಭಾಷೆ  ಕನ್ನಡಿಗರಾಡುವ ಕಸ್ತೂರಿ. ಈ ಕನ್ನಡ ಭಾಷೆಗೆ ಎರಡು ಸಾವಿರ ವರ್ಷಗಳ ಬಹುಗಟ್ಟಿಯಾದ ಇತಿಹಾಸವಿದೆ. ಕನ್ನಡ ಭಾಷೆ ಎಂದೆಂದಿಗೂ ಅಳಿಯಲಾರದ ಭಾಷೆಯಾಗಿದೆ. ಕನ್ನಡ ಕೇವಲ ಮನರಂಜನೆಗಾಗಿ ಸೃಷ್ಟಿಯಾದುದಲ್ಲ. ಅದು ಜನತೆಯ ಕಲ್ಯಾಣಕ್ಕಾಗಿ, ನೀತಿಧರ್ಮ ಸ್ಥಾಪನೆಗಾಗಿ ನಿರ್ಮಿತವಾಗಿದೆ.

ಕರ್ನಾಟಕವು ಇಡೀ ದೇಶದಲ್ಲಿಯೇ ಹಲವು ವಿಚಾರಗಳಲ್ಲಿ ಮುಂಚೂಣಿಯಲ್ಲಿದೆ. ಹಲವು ಪ್ರಥಮಗಳನ್ನು ಸಾಧಿಸಿದ ಕೀರ್ತಿ ಈ ನಾಡಿಗಿದೆ. ಬಹಳ ಹಿಂದಿನ ಕಾಲದಿಂದಲೂ ಕರ್ನಾಟಕವು ಜಾತಿಯ ಸಾಮರಸ್ಯ ಉಳಿಸಿಕೊಂಡು ಬಂದಿದೆ. ಕರ್ನಾಟಕವು ಹಲವು ತತ್ವಮತಗಳ ಸಂಗಮವಾಗಿದೆ. ಇಂತಹ ನಾಡನ್ನು ಅನೇಕ ಕವಿಗಳು, ದಾಸಶ್ರೇಷ್ಠರು, ದಾರ್ಶನಿಕರು ತಾಯ್ನುಡಿ ಕನ್ನಡವನ್ನು, ಈ ನಾಡನ್ನು ಮುಕ್ತ ಕಂಠದಿಂದ ಹೊಗಳಿದ್ದು ಶ್ಲಾಘನೀಯ. ಇಂತಹ ಪರಾಂಪರಾಗತ ಕನ್ನಡ ಕಸ್ತೂರಿಯನ್ನು ಉಳಿಸಿ, ಬೆಳೆಸುವುದು ಕನ್ನಡಿಗರ ಆದ್ಯ ಕರ್ತವ್ಯವಾಗಿದೆ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಎಸ್. ಎಸ್. ಹಿರೇಮಠ ಮಾತನಾಡಿ, ಕನ್ನಡಿಗರು ಅಭಿಮಾನ ಶೂನ್ಯರಾಗಬಾರದು. ಭಾಷೆ, ಸಂಸ್ಕೃತಿಯ ಬಗ್ಗೆ ಪ್ರತಿಯೊಬ್ಬ ವಿದ್ಯಾರ್ಥಿಗಳು ಅಭಿಮಾನ ಪಡಬೇಕು. ಕನ್ನಡ ಭಾಷೆ ಕೇವಲ ಭಾಷೆ ಅಲ್ಲ, ನಮ್ಮ ಸಂಸ್ಕೃತಿ ಹಾಗೂ ಭಾವನೆಯ ಪ್ರತೀಕವೂ ಆಗಿದೆ ಎಂದು ಹೇಳಿದರು.

ಹರ್ಲಾಪುರದ ಸಾಂಸ್ಕೃತಿಕ ಕೇಂದ್ರದ ಕಲಾವಿದರಾದ ಈಶ್ವರ ಅರಳಿ, ಶರೀಫ್ ದೊಡಮನಿ, ನಾಗರಾಜ ಹಾಗೂ ಸಂಗಡಿಗರು ಕನ್ನಡ ನಾಡು, ನುಡಿಯ ಗೀತೆ ಪ್ರಸ್ತುತಪಡಿಸಿದರು.

ಕಾರ್ಯಕ್ರಮದ ಪೂರ್ವದಲ್ಲಿ ಧಾರವಾಡದ ವಾಯ್. ಬಿ. ಅಣ್ಣಿಗೇರಿ ಪ. ಪೂ. ಕಾಲೇಜಿನ ವಿದ್ಯಾರ್ಥಿಗಳು, ಶಿಕ್ಷಕರು, ಸಂಘದ ಸದಸ್ಯರು, ಪದಾಧಿಕಾರಿಗಳಿಂದ ಕನ್ನಡ ಜಾಥಾ ಪ್ರಾರಂಭಗೊಂಡು ವಿವಿಧ ಕನ್ನಡ ಘೋಷಣೆಗಳೊಂದಿಗೆ ವಿವೇಕಾನಂದ ವೃತ್ತದ ಮೂಲಕ ಸಂಘದ ನಾಡೋಜ ಡಾ. ಪಾಟೀಲ ಪುಟ್ಟಪ್ಪ ಸಭಾಭವನಲ್ಲಿ ಸಮಾವೇಶಗೊಂಡಿತು.

ವೇದಿಕೆಯಲ್ಲಿ ಕ.ವಿ.ವ.ಸಂಘದ ಕೋಶಾಧ್ಯಕ್ಷ ಸತೀಶ ತುರಮರಿ ಹಾಗೂ ವಾಯ್. ಬಿ. ಅಣ್ಣಿಗೇರಿ ಪ.ಪೂ. ಮಹಾವಿದ್ಯಾಲಯದ ಪ್ರಾಚಾರ್ಯ ಓಂಕಾರ ಹೆಗಡೆ, ಉಪನ್ಯಾಸಕರಾದ ಸುಮಿತ್ರಾ ತುರಾಯಿ, ರೂಪಾ ಬಿ. ಸಿ. ಇದ್ದರು. ಕ.ವಿ.ವ.ಸಂಘದ ಪ್ರಧಾನ ಕಾರ್ಯದರ್ಶಿ ಶಂಕರ ಹಲಗತ್ತಿ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು.

* ಕನ್ನಡವನ್ನೇ ಉಸಿರಾಗಿಸಿಕೊಂಡು ಬದುಕಿದ ಹಿಂದಿನ ಹಿರಿಯರ ತ್ಯಾಗ ಮತ್ತು ಶ್ರಮದಿಂದ ಇಂದು ಕನ್ನಡಿಗರು ಒಂದಾಗಿ ಬಾಳುವಂತೆ ಕರ್ನಾಟಕ ರಾಜ್ಯ ನಿರ್ಮಾಣ ಆಗಿದೆ ಎಂದು ಶಿ.ಮ. ರಾಚಯ್ಯನವರ ನುಡಿದರು. ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು, ಕರ್ನಾಟಕ–೫೦ ಸಂಭ್ರಮದ ಅಂಗವಾಗಿ ದಿನಾಂಕ: ೧೯–೭–೨೦೨೩ ರಂದು ಸಂಜೆ ೫–೩೦ ರಂದು ಸಂಘದ ನಾಡೋಜ ಡಾ. ಪಾಪು ಸಭಾಭವನದಲ್ಲಿ ಆಯೋಜಿಸಿದ್ದ ಪ್ರಭು ಕುಂದರಗಿ ಹಾಗೂ ಸಂಗಡಿಗರಿಂದ ಜಾನಪದ ಹಾಡುಗಾರಿಕೆ ಹಾಗೂ ಕಲಾವಿದ ಪ್ರಭು ಕುಂದರಗಿ ಅವರಿಗೆ 'ಜನಪದ ಸಿರಿ' ಸನ್ಮಾನ ಸಮಾರಂಭದಲ್ಲಿ ಮಾತನಾಡಿ, ಇಂದಿನ ಯುವ ಪೀಳಿಗೆ ನಾಡಿನ ನೆಲ, ಜಲ, ಭಾಷೆಯ ಬಗ್ಗೆ ಗಂಭೀರವಾಗಿ ತಿಳಿದುಕೊಳ್ಳಬೇಕು. ಅಂದಾಗ ಮಾತ್ರ ನಾಡು, ನುಡಿ ಬಗ್ಗೆ ಹೆಮ್ಮೆ ಮೂಡಲು ಸಾಧ್ಯ ಎಂದರು.

ಸಂಘದ 'ಜನಪದ ಸಿರಿ' ಸನ್ಮಾನ ಸ್ವೀಕರಿಸಿ ಮಾತನಾಡಿದ ಪ್ರಭು ಕುಂದರಗಿ, ಗ್ರಾಮೀಣ ಯುವಕರು ಇಂದಿಗೂ ಜನಪದ ಉಳಿವಿನ ಬಗ್ಗೆ ಕಾಳಜಿ ಹೊಂದಿದ್ದಾರೆ. ಅಂತೆಯೇ ಪ್ರತಿ ಹಳ್ಳಿಯಲ್ಲಿ ಜನಪದ ಕಲೆ ಜೀವಂತವಾಗಿವೆ. ಅದಕ್ಕಾಗಿ ಶ್ರಮಿಸುವವರನ್ನು ಸಂಘ ಗುರುತಿಸಿ ಸನ್ಮಾನಿಸುತ್ತಿರುವುದು ಅಭಿನಂದನೀಯ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿಕೊಂಡು ಮಾತನಾಡಿದ ಸತೀಶ ತುರಮರಿ, ಜನಪದ ಕಲಾವಿದರು ಯಾರೂ ಶ್ರೀಮಂತರಲ್ಲ. ಅವರಲ್ಲಿ ಕಲೆಯ ಬದ್ಧತೆ ಮಾತ್ರ ಇರುವುದರಿಂದ ಜನಪದ ಕಲೆಯನ್ನು ಅಪ್ಪಿಕೊಂಡು ಪೋಷಿಸುತ್ತಿದ್ದಾರೆ ಎಂದರು.

ಶಂಕರ ಹಲಗತ್ತಿ ಕಾರ್ಯಕ್ರಮ ನಡೆಸಿಕೊಟ್ಟರು. ಪ್ರಭು ಕುಂದರಗಿ, ಪ್ರಿಯಾಂಕಾ ಕುಂದರಗಿ ಜನಪದ ಗೀತೆಗಳ ಕಾರ್ಯಕ್ರಮ ನಡೆಸಿಕೊಟ್ಟರು. ಮೌನೇಶ ಬಡಿಗೇರ ಡ್ರಮ್ ಪ್ಯಾಡ ನುಡಿಸಿದರು. ಇದೇ ಕಾಲಕ್ಕೆ ಎಫ್.ಬಿ. ಕಣವಿ, ಶಿವಾನಂದ ಅಮರಶೆಟ್ಟಿ ಕನ್ನಡ ನಾಡು ನುಡಿ ಗೀತೆಗಳನ್ನು ಹಾಡಿದರು.

* ಕರ್ನಾಟಕ ವಿದ್ಯಾವರ್ಧಕ ಸಂಘವು, ೬೮ನೇ ಕರ್ನಾಟಕ ರಾಜ್ಯೋತ್ಸವ ಅಂಗವಾಗಿ 'ಕರ್ನಾಟಕ ಸಂಭ್ರಮ–೫೦'ರ ನಿಮಿತ್ತ 'ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ' ಸರಣಿ ಕಾರ್ಯಕ್ರಮದಲ್ಲಿ ದಿನಾಂಕ:

೨೦-೧೧-೨೦೨೩ ರಂದು ಬೆಳಿಗ್ಗೆ ೧೦-೩೦ ಗಂಟೆಗೆ ಸಂಘದ ನಾಡೋಜ ಡಾ. ಪಾಪು ಸಭಾಭವನದಲ್ಲಿ ಶಾರದಾ ಪದವಿ ಪೂರ್ವ ಕಾಲೇಜು ಹಾಗೂ ನಿಡವಣಿ ಕಾಮರ್ಸ್ ಕಾಲೇಜಿನ ವಿದ್ಯಾರ್ಥಿಗಳಿಗೆ ಕನ್ನಡ ನಾಡು, ನುಡಿ ಕುರಿತು ಉಪನ್ಯಾಸ ಕಾರ್ಯಕ್ರಮ ಆಯೋಜಿಸಿತ್ತು.

ಅತಿಥಿ ಉಪನ್ಯಾಸಕರಾಗಿ ಧಾರವಾಡ ಜೆ.ಎಸ್.ಎಸ್. ಮಹಾವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಜಿನದತ್ತ ಹಡಗಲಿ ಆಗಮಿಸಿದ್ದರು. ಅಧ್ಯಕ್ಷತೆಯನ್ನು ಡಿ. ಎಂ. ನಿಡವಣಿ, ವಿಶ್ರಾಂತ ಪ್ರಾದೇಶಿಕ ಜಂಟಿ ನಿರ್ದೇಶಕರು, ಧಾರವಾಡ ಅವರು ವಹಿಸಿದ್ದರು.

ಕ.ವಿ.ವ.ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಡಾ. ಶ್ರೀಶೈಲ ಹುದ್ದಾರ ಉಪಸ್ಥಿತರಿದ್ದರು. ಸಾಹಿತಿ ಧಾರವಾಡದ ಇಂದಿರಾ ಪ್ರಸಾದ ಹಾಗೂ ಕಾಮರ್ಸ್ ಕಾಲೇಜಿನ ಪ್ರಾಚಾರ್ಯರಾದ ಪ್ರಭಾ ನಿಡವಣಿ ಹಾಗೂ ಶಾರದಾ ಪ.ಪೂ. ಕಾಲೇಜಿನ ಪ್ರಾಚಾರ್ಯರು ಗೌರವ ಉಪಸ್ಥಿತರಿದ್ದರು.

* ಕರ್ನಾಟಕ ವಿದ್ಯಾವರ್ಧಕ ಸಂಘವು, ೬೮ನೇ ಕರ್ನಾಟಕ ರಾಜ್ಯೋತ್ಸವ 'ಕರ್ನಾಟಕ ಸಂಭ್ರಮ-೫೦' ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ ನಾಡ ಹಬ್ಬದ ತಿಂಗಳ ಕಾರ್ಯಕ್ರಮದ ಅಂಗವಾಗಿ ದಿನಾಂಕ ೨೦-೧೧-೨೦೨೩ ರಂದು ಸಂಜೆ ೫-೩೦ ಗಂಟೆಗೆ, ಸಂಘದ ನಾಡೋಜ ಡಾ. ಪಾಟೀಲ ಪುಟ್ಟಪ್ಪ ಸಭಾಭವನದಲ್ಲಿ ನರಗುಂದ ತಾಲೂಕ ಕೊಣ್ಣೂರಿನ ಜೈ ಕಿಸಾನ ಕಲಾ ತಂಡ ಅವರಿಂದ ಸಾಂಸ್ಕೃತಿಕ ಕಾರ್ಯಕ್ರಮ ಏರ್ಪಡಿಸಿತ್ತು.

ಕೊಣ್ಣೂರಿನ ಉದ್ಯಮಿ ಶಿವಾನಂದ ಚ. ಶೇಬಣ್ಣವರ ಮುಖ್ಯ ಅತಿಥಿಯಾಗಿ ಆಗಮಿಸಿದ್ದರು. ಕ.ವಿ.ವ. ಸಂಘದ ಅಧ್ಯಕ್ಷ ಚಂದ್ರಕಾಂತ ಬೆಲ್ಲದ ಅಧ್ಯಕ್ಷತೆ ವಹಿಸಿದ್ದರು.

ನರಗುಂದ ತಾಲೂಕ ಕೊಣ್ಣೂರಿನ ಜಾನಪದ ಕಲಾವಿದ ರುದ್ರಪ್ಪ ಬ. ಜಿನಿವಾಲರ ಅವರಿಗೆ 'ಜನಪದ ಸಿರಿ' ಪ್ರಶಸ್ತಿ ನೀಡಿ ಗೌರವ ಸನ್ಮಾನ ಮಾಡಿ ಗೌರವಿಸಲಾಯಿತು.

* ಭಾರತೀಯ ಸಂಸ್ಕೃತಿಯಲ್ಲಿ ಸಿಂಧೂ ನಾಗರಿಕತೆಯ ಮೂಲವನ್ನು ಅವಲೋಕಿಸಿದಾಗ ನಮಗೆ ಹರಪ್ಪಾ ಮತ್ತು ಮೆಹಂಜೋದಾರ ನಾಗರಿಕತೆಗಳ ಸಂಸ್ಕೃತಿ ಕಂಡು ಬರುತ್ತದೆ. ನಮ್ಮ ನಾಡಿಗೆ ೭ ಸಾವಿರ ವರ್ಷಗಳ ಇತಿಹಾಸವಿದೆ. ಆದ್ದರಿಂದ ನಮ್ಮ ನಾಡಿನ ಸಂಸ್ಕೃತಿ ಅಲ್ಲಿಂದಲೇ ಗೋಚರವಾಗಲು ಸಂಶೋಧಕರಾದ ಡಾ. ಫಾದರ ಹೆರಸ್ ಅವರು ಕೊಟ್ಟ ಅನೇಕ ಸಾಕ್ಷಾಧಾರಗಳಿಂದ ತಿಳಿದು ಬರುತ್ತದೆ ಎಂದು ಉಪನ್ಯಾಸ ಡಾ. ಶಿವಾನಂದ ಟವಳಿ ಹೇಳಿದರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು, ೬೮ನೇ ಕರ್ನಾಟಕ ರಾಜ್ಯೋತ್ಸವ ಅಂಗವಾಗಿ 'ಕರ್ನಾಟಕ ಸಂಭ್ರಮ-೫೦'ರ ನಿಮಿತ್ತ 'ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ' ಸರಣಿ ಕಾರ್ಯಕ್ರಮದಲ್ಲಿ ದಿನಾಂಕ: ೨೧-೧೧-೨೦೨೩ ರಂದು ಬೆಳಿಗ್ಗೆ ೧೦-೩೦ ಗಂಟೆಗೆ ಸಂಘದ ನಾಡೋಜ ಡಾ. ಪಾಪು ಸಭಾಭವನದಲ್ಲಿ ಆರ್.ಎಲ್.ಎಸ್. ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿಗಳಿಗೆ ಅಯೋಜಿಸಿದ್ದ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿ ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ಅವರು, ಕಿ.ಶ. ಪೂರ್ವ ಕಾಲ ಹಾಗೂ ರಾಮಾಯಣ, ಮಹಾಭಾರತದಿಂದಲೂ ಕನ್ನಡ, ನಾಡು, ನುಡಿ ಇತ್ತು. ಕರ್ನಾಟಕ ಎಂಬ ಪದದ ಮೂಲ ಹುಡುಕುತ್ತಾ ಹೋದರೆ ಅದು ಉದ್ಭವವಾಗಿದ್ದು ಉತ್ತರ ಕರ್ನಾಟಕದಿಂದಲೇ ಎಂದು ಹೇಳಬಹುದು ಎಂದು ಅಭಿಪ್ರಾಯಪಟ್ಟರು.

ಕನ್ನಡದ ಪ್ರಪ್ರಥಮ ಲಿಖಿತ ಪದ ಸಿಕ್ಕಿದ್ದು ಅಶೋಕನ ಕಾಲದಲ್ಲಿ. ಇಸಲ್ ಪದದಿಂದ ಕೂಡಿದ ಬ್ರಹ್ಮಗಿರಿ ಶಾಸನದಿಂದ ಲಭಿಸಿತು. ಕಾವೇರಿಯಿಂದ ಗೋದಾವರೆಗೆ ಹರಡಿದ ನಾಡು ಕನ್ನಡ ನಾಡು. ಶ್ರೀ ವಿಜಯ ವಿರಚಿತ 'ಕವಿರಾಜ ಮಾರ್ಗ' ಗ್ರಂಥದಿಂದ ತಿಳಿದು ಬರುತ್ತದೆ ಎಂದು ಡಾ. ಶಿವಾನಂದ ಟವಳಿ ಎಳೆ ಎಳೆಯಾಗಿ ೧ನೆ ಶತಮಾನದಿಂದ ನಡೆದು ಬಂದ ಕನ್ನಡದ ಆ ಕಾಲ ಘಟ್ಟವನ್ನು ಸ್ಮರಿಸಿ ಹೇಳುತ್ತಿದ್ದರು.

ಎಲ್ಲ ರಾಜ ವಂಶಸ್ಥರ ಪ್ರಸ್ತಾಪ ಮಾಡಿದ ಅವರು ಕನ್ನಡ ನಾಡು ಕಟ್ಟುವಲ್ಲಿ ಸಾಕಷ್ಟು ಕೆಲಸ ಮೂಡಿವೆ. ದಖ್ಖನ್ ಪ್ರಾಂತದಲ್ಲಿ ಬ್ರಿಟಿಷರು ಕರ್ನಾಟಕ ಪ್ರಾಂತ ಎಂದು ನಕ್ಷೆಯಲ್ಲಿ ದಾಖಲಿಸಿರುತ್ತಾರೆ. ಪ್ರಾಂತಗಳ ಏಕೀಕರಣಕ್ಕೆ

ಹೋರಾಡಿದ ಮಹನೀಯರನ್ನು ಸೇರಿದಂತೆ ಮುಖ್ಯವಾಗಿ ಫೈಲ್ವಾನ್ ರಮಜಾನಸಾಬ್ ಪಿಂಜಾರ ಹುತಾತ್ಮರಾದವರು ಏಕೈಕ ವ್ಯಕ್ತಿ ಎಂಬುದನ್ನು ಮರೆಯುವಂತಿಲ್ಲ ಎಂಬುದನ್ನು ಡಾ. ಶಿವಾನಂದ ಟವಳಿ ಹೇಳಿದರು.

ವೇದಿಕೆ ಮೇಲೆ ಸರಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಪ್ರಾಚಾರ್ಯ ಎಸ್.ಎಸ್. ಅಂಗಡಿ, ಎಂ.ಬಿ. ಕೋಟೂರ, ಡಾ. ಎಸ್.ಎಸ್. ಭಗವತಿ, ಆರ್. ಬಿ. ಸೋನೆಬಾನ್. ಡಾ. ರಶ್ಮಿ ತುರಮರಿ, ಗಿರೀಜಾ ಮೂಲಿಮನಿ, ಜ್ಯೋತಿ ಕಾಡದೇವರಮಠ, ಇತರೆ ಪ್ರಾಧ್ಯಾಪಕ ವೃಂದದವರು ಉಪಸ್ಥಿತರಿದ್ದರು.

ಹರ್ಲಾಪುರದ ಸಾಂಸ್ಕೃತಿಕ ಕೇಂದ್ರದ ಕಲಾವಿದರಾದ ಈಶ್ವರ ಅರಳಿ, ಶರೀಫ್ ದೊಡಮನಿ, ನಾಗರಾಜ ಹಾಗೂ ಸಂಗಡಿಗರು ಕನ್ನಡ ನಾಡು, ನುಡಿಯ ಗೀತೆ ಸಂಬಂಧಿಸಿದಂತೆ ಹಲವಾರು ಕನ್ನಡ ಜಾಗೃತಿ ಗೀತೆಗಳನ್ನು ಹಾಡಿ ರಂಜಿಸಿದರು. ಶಂಕರ ಹಲಗತ್ತಿ ಅವರು ಕೂಡಾ ಹಾಡುಗಳನ್ನು ಹಾಡಿ ಮಕ್ಕಳನ್ನು ರಂಜಿಸಿದರು.

ಕಾರ್ಯಕ್ರಮದ ಪೂರ್ವದಲ್ಲಿ ಧಾರವಾಡದ ಆರ್.ಎಲ್.ಎಸ್. ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿಗಳು, ಶಿಕ್ಷಕರು, ಸಂಘದ ಸದಸ್ಯರು, ಪದಾಧಿಕಾರಿಗಳಿಂದ ಕನ್ನಡ ಜಾಥಾ ಪ್ರಾರಂಭಗೊಂಡು ವಿವಿಧ ಕನ್ನಡ ಘೋಷಣೆಗಳೊಂದಿಗೆ ವಿವೇಕಾನಂದ ವೃತ್ತದ ಮೂಲಕ ಸಂಘದ ನಾಡೋಜ ಡಾ. ಪಾಟೀಲ ಪುಟ್ಟಪ್ಪ ಸಭಾಭವನಲ್ಲಿ ಸಮಾವೇಶಗೊಂಡಿತು.

ವೀರಣ್ಣ ಒಡ್ಡೀನ ಸ್ವಾಗತಿಸಿದರು. ಶಂಕರ ಹಲಗತ್ತಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಂಚಾಲಕ ಗುರು ಹಿರೇಮಠ ನಿರೂಪಿಸಿ, ವಂದಿಸಿದರು.

ಸ್ಥಳೀಯ ಆರ್.ಎಲ್.ಎಸ್. ಪಿ.ಯು. ಕಾಲೇಜಿನ ೩೫೦ಕ್ಕೂ ಹೆಚ್ಚು ವಿದ್ಯಾರ್ಥಿಗಳು ಸೇರಿದಂತೆ ಸರಕಾರಿ ಮಹಿಳಾ ಕಾಲೇಜಿನ ಪದವಿ ವಿದ್ಯಾರ್ಥಿನಿಯರು ೧೭೫ ಕ್ಕೂ ಹೆಚ್ಚು ಜನ ವಿದ್ಯಾರ್ಥಿಗಳು ಭಾಗವಹಿಸಿದ್ದರು.

* ಕರ್ನಾಟಕ ವಿದ್ಯಾವರ್ಧಕ ಸಂಘವು, ೬೮ ನೇ ಕರ್ನಾಟಕ ರಾಜ್ಯೋತ್ಸವ 'ಕರ್ನಾಟಕ ಸಂಭ್ರಮ-೫೦'ರ ನಾಡ ಹಬ್ಬದ ತಿಂಗಳ ಕಾರ್ಯಕ್ರಮದ ಅಂಗವಾಗಿ ದಿ: ೨೧-೧೧-೨೦೨೩ ರಂದು ಸಂಜೆ ೫-೩೦ ಗಂಟೆಗೆ, ಸಂಘದ ನಾಡೋಜ ಡಾ. ಪಾಟೀಲ ಪುಟ್ಟಪ್ಪ ಸಭಾಭವನದಲ್ಲಿ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ 'ಜನಪದ ಸಿರಿ' ಗೌರವ ಸನ್ಮಾನ ಕಾರ್ಯಕ್ರಮ ಆಯೋಜಿಸಿತ್ತು.

ಮುಖ್ಯ ಅತಿಥಿಯಾಗಿ ಸಮಾಜ ಸೇವಕ ಧಾರವಾಡದ ಶ್ರೀಶೈಲ ಭಾವಿಕಟ್ಟಿ ಆಗಮಿಸಿದ್ದರು. ಅಧ್ಯಕ್ಷತೆಯನ್ನು ಕ.ವಿ.ವ. ಸಂಘದ ಅಧ್ಯಕ್ಷ ಚಂದ್ರಕಾಂತ ಬೆಲ್ಲದ ಅಧ್ಯಕ್ಷತೆ ವಹಿಸಿದ್ದರು.

ಕುಂದಗೋಳ ತಾಲೂಕಿನ, ಹರ್ಲಾಪುರದ ಜಾನಪದ ಕಲಾವಿದ ನಾಗರಾಜ ಗೌಡಣ್ಣವರ ಅವರಿಗೆ 'ಜನಪದ ಸಿರಿ' ಪ್ರಶಸ್ತಿ ನೀಡಿ ಗೌರವ ಸನ್ಮಾನ ಮಾಡಿ ಗೌರವಿಸಲಾಯಿತು.

ಮಂಜುನಾಥ ಕೊಣ್ಣೂರ ಹಾಗೂ ಸಂಗಡಿಗರು ಸುಗಮ ಸಂಗೀತ ಮತ್ತು ಡಾ. ಪುಟ್ಟರಾಜ ಭಜಂತ್ರಿ ಹಾಗೂ ಸಂಗಡಿಗರು ಶಹನಾಯಿ ವಾದನ ಹಾಗೂ ವಿರೇಶ ಅಕ್ಕಿ ಹಾಗೂ ಸಂಗಡಿಗರು ಸುಗಮ ಸಂಗೀತ ತಬಲಾ, ಸೋಲೋ ಕಾರ್ಯಕ್ರಮಗಳನ್ನು ಸೊಗಸಾಗಿ ನಡೆಸಿಕೊಟ್ಟರು.

* ಕನ್ನಡ ನಾಡಿನಲ್ಲಿ ಭದ್ರವಾದ ಬುನಾದಿ ಕಟ್ಟಬೇಕಾಗಿದೆ. ನಮ್ಮ ಇತಿಹಾಸದೊಂದಿಗೆ ಸದೃಢರಾಗಬೇಕಾಗಿದೆ. ಯುವಕರೇ ಭವಿಷ್ಯದ ಶಕ್ತಿ ಚಿಲುಮೆ ಆಗಿದ್ದರಿಂದ ಕನ್ನಡ ಕಟ್ಟುವ ಕೆಲಸ ಆಗಬೇಕಿದೆ ಎಂದು ಡಾ. ವೈ. ಎಂ. ಯಾಕೊಳ್ಳಿ ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು, ೬೮ನೇ ಕರ್ನಾಟಕ ರಾಜ್ಯೋತ್ಸವ ಅಂಗವಾಗಿ 'ಕರ್ನಾಟಕ ಸಂಭ್ರಮ-೫೦'ರ ನಿಮಿತ್ತ 'ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ' ಸರಣಿ ಕಾರ್ಯಕ್ರಮದಲ್ಲಿ ದಿನಾಂಕ: ೨೨-೧೧-೨೦೨೩ ರಂದು ಬೆಳಿಗ್ಗೆ ೧೦-೩೦ ಗಂಟೆಗೆ ಸಂಘದ ನಾಡೋಜ ಡಾ. ಪಾಪು ಸಭಾಭವನದಲ್ಲಿ ಬಸವರಡ್ಡಿ ಹಾಗೂ ಅರ್ಜುನ ಪದವಿ ಪೂರ್ವ ಕಾಲೇಜುಗಳ ವಿದ್ಯಾರ್ಥಿಗಳಿಗೆ ಅಯೋಜಿಸಿದ್ದ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿ ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡುತ್ತಾ ಕರ್ನಾಟಕದ ಗತ ವೈಭವದ ಇತಿಹಾಸ ಅರಿಯುವುದು ಮುಖ್ಯವಾಗಿದೆ. ಒಂದು ಕಾಲದಲ್ಲಿ ದಕ್ಷಿಣ ಭಾರತವನ್ನು ಆಳಿದ ಇತಿಹಾಸ ನಮ್ಮದಾಗಿದೆ. ಕಂತು, ಕಂತಾಗಿ ತಾಯಿ ತನ್ನನ್ನು ಕಳೆದುಕೊಳ್ಳುತ್ತಿದ್ದಾಳೆ ಎಂದು ಹೇಳಿದ ಕನ್ನಡದ ಕಣ್ವ ಹಿರೇಮಗಳೂರ ಕಣ್ಣನ್ ಅವರ ಮಾತನ್ನ ನೆನೆಯಬೇಕಾಗಿದೆ. ನಮಗೀಗ ಉಳಿದಿರುವುದು ಕಾವೇರಿಯಿಂದ ಕಾರಂಜಿವರೆಗೆ ಎಂದರು.

ಪ್ರಪಂಚದಲ್ಲಿ ಎಲ್ಲಾ ಭಾಷೆಗಳನ್ನು ಕೂಲಂಕುಷವಾಗಿ ಗಮನಿಸಿದಾಗ ೧೪ ನೇ ಶತಮಾನದಲ್ಲಿ 'ಚಾಸರ್' ಎಂಬ ಇಂಗ್ಲೀಷ ಕವಿಯಿಂದ ಇಂಗ್ಲೀಷ ಕಾವ್ಯ ಹುಟ್ಟಿತು. ವರ್ತಮಾನದಲ್ಲಿ ವ್ಯಾಪಿಸಿದೆ. ಅದಕ್ಕೆ ಪ್ರಾಚೀನ ಇತಿಹಾಸವಿಲ್ಲ. ಆದರೆ ಕನ್ನಡಕ್ಕಿದೆ ಎಂದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಬಸವರಡ್ಡಿ ಪಿ.ಯು. ಕಾಲೇಜಿನ ಪ್ರಾಚಾರ್ಯ ವಾಯ್. ಎಂ. ಗಡೆಣ್ಣವರ ಬ್ರಿಟಿಷ್ ಆಳ್ವಿಕೆ ನಂತರ ಇಂಗ್ಲೀಷ ಭಾಷೆ ಪ್ರಚಾರಕ್ಕೆ ಬಂತು. ಭಾಷಾವಾರು ಪ್ರಾಂತದಲ್ಲಿ ಆಂಧ್ರ ಪ್ರದೇಶದಲ್ಲಿ ಆಮರಣ ಉಪವಾಸ ಕುಳಿತ ವ್ಯಕ್ತಿ ಹುತಾತ್ಮರಾಗಿದ್ದನ್ನು ಕಂಡು ಅಂದಿನ ಜವಾಹರಲಾಲ ನೆಹರು ವಿಶೇಷ ಕಮೀಟಿ ಮಾಡಿದರು ಎಂದು ಹಳೆಯ ಐತಿಹಾಸಿಕ ಘಟನೆಗಳನ್ನು ಸ್ಮರಿಸಿದರು. ಸುವರ್ಣ ಸಂಭ್ರಮ ಕರ್ನಾಟಕ ೫೦ರ ರಾಜ್ಯೋತ್ಸವದ ಆಚರಣೆಯಲ್ಲಿ ಕನ್ನಡ ಭಾಷೆಯ ಹಿರಿಮೆ ಗರಿಮೆ ಮಹತ್ವ ಕುರಿತು ವಿವರಿಸುತ್ತಾ, ಇಂದಿನ ಯುವ ಪೀಳಿಗೆಯ ಮೇಲೆ ಸಾಕಷ್ಟು ಜವಾಬ್ದಾರಿ ಇದೆ ಎಂದು ಹೇಳಿದರು.

ವೇದಿಕೆ ಮೇಲೆ ಸಂಘದ ಹಿಂದಿನ ಉಪಾಧ್ಯಕ್ಷ ಹಾಗೂ ಮಕ್ಕಳ ಸಾಹಿತಿ ನಿಂಗಣ್ಣ ಕುಂಟಿ, ಅರ್ಜುನ ಪಿ.ಯು. ಕಾಲೇಜಿನ ಪ್ರಾಚಾರ್ಯ ಸಂತೋಷ ಹಂಚಾಟೆ ಉಪಸ್ಥಿತರಿದ್ದರು.

ಹರ್ಲಾಪುರದ ಸಾಂಸ್ಕೃತಿಕ ಕೇಂದ್ರದ ಕಲಾವಿದರಾದ ಶಂಭಯ್ಯ ಹಿರೇಮಠ, ಈಶ್ವರ ಅರಳಿ, ಶರೀಫ್ ದೊಡಮನಿ, ನಾಗರಾಜ ಗೌಡಣ್ಣವರ ಕನ್ನಡ ನಾಡು, ನುಡಿಯ ಗೀತೆ ಸಂಬಂಧಿಸಿದಂತೆ ಹಲವಾರು ಕನ್ನಡ ಜಾಗೃತಿ ಗೀತೆಗಳನ್ನು ಹಾಡಿ ರಂಜಿಸಿ, ಮಂತ್ರಮುಗ್ಧರನ್ನಾಗಿಸಿದರು.

ಕಾರ್ಯಕ್ರಮದ ಪೂರ್ವದಲ್ಲಿ ಧಾರವಾಡದ ಬಸವರಡ್ಡಿ ಹಾಗೂ ಅರ್ಜುನ ಪದವಿ ಪೂರ್ವ ಕಾಲೇಜುಗಳ ವಿದ್ಯಾರ್ಥಿಗಳು, ಶಿಕ್ಷಕರು, ಸಂಘದ ಸದಸ್ಯರು, ಪದಾಧಿಕಾರಿಗಳಿಂದ ಕನ್ನಡ ಜಾಥಾ ಪ್ರಾರಂಭಗೊಂಡು ವಿವಿಧ ಕನ್ನಡ ಘೋಷಣೆಗಳೊಂದಿಗೆ ವಿವೇಕಾನಂದ ವೃತ್ತದ ಮೂಲಕ ಸಂಘದ ನಾಡೋಜ ಡಾ. ಪಾಟೀಲ ಪುಟ್ಟಪ್ಪ ಸಭಾಭವನಲ್ಲಿ ಸಮಾವೇಶಗೊಂಡಿತು.

ಶಂಕರ ಹಲಗತ್ತಿ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಗುರು ಹಿರೇಮಠ ನಿರೂಪಿಸಿದರು. ಸತೀಶ ತುರಮರಿ ವಂದಿಸಿದರು.

* ಕರ್ನಾಟಕ ವಿದ್ಯಾವರ್ಧಕ ಸಂಘ, ಕನ್ನಡ ನಾಡು ನುಡಿ ರಕ್ಷಣೆಗೆ ಹುಟ್ಟಿದಂಥ ಸಂಸ್ಥೆ. ನಮ್ಮ ನಾಡಿನ ಹೆಸರಾಂತ ಗಾಯಕರು ಕಲಾವಿದರು, ಸಾಹಿತಿಗಳನ್ನು ಬೆಳೆಸಿದಂಥ ಸಂಸ್ಥೆ. ಕರ್ನಾಟಕ ಏಕೀಕರಣ ಚಳುವಳಿ ಮಾಡಿದಂಥ ಸಂಸ್ಥೆ ಎಂದು ಧಾರವಾಡದ ಸ್ವರ ಮಾಧುರ್ಯ ಸಾಂಸ್ಕೃತಿಕ ಸಂಸ್ಥೆಯ ಅಧ್ಯಕ್ಷ ಮಲ್ಲಿಕಾರ್ಜುನ ಕೋಟೂರ ಹೇಳಿದರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು ೬೮ನೇ ಕರ್ನಾಟಕ ರಾಜ್ಯೋತ್ಸವ, ಕರ್ನಾಟಕ ಸಂಭ್ರಮ-೫೦, 'ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ' ನಾಡ ಹಬ್ಬದ ತಿಂಗಳ ಕಾರ್ಯಕ್ರಮ ಅಂಗವಾಗಿ ದಿನಾಂಕ: ೨೨-೧೧-೨೦೨೩ ರಂದು ವೀಣಾ ಅನಂತ ಪತ್ತಾರ ಹಾಗೂ ಸಂಗಡಿಗರಿಂದ 'ಕನ್ನಡ ನಾಡ ಗೀತೆಗಳ ಕರೋಕೆ' ಸಾಂಸ್ಕೃತಿಕ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಮಾತನಾಡುತ್ತಿದ್ದರು.

ಮುಂದುವರೆದು ಕರ್ನಾಟಕ ವಿದ್ಯಾವರ್ಧಕ ಸಂಘ ಎಲ್ಲ ಕಲಾವಿದರಿಗೂ ಅವಕಾಶವನ್ನು ನೀಡುತ್ತಾ ಬಂದಿದೆ. ವರ್ಷಕ್ಕೆ ಸುಮಾರು ಎರಡನೂರಕ್ಕೂ ಹೆಚ್ಚು ಕಾರ್ಯಕ್ರಮ ಮಾಡುವಂಥ ಸಂಸ್ಥೆ. ಇಂದು ಕರೋಕೆ ಸಂಗೀತಕ್ಕೆ ಅವಕಾಶ ನೀಡಿದ್ದು ಬಹಳ ಸಂತೋಷ ಎನಿಸಿದೆ. ಕರೋಕೆ ಸಂಗೀತವನ್ನು ಯಾರು ಬೇಕಾದರು ಮನೆಯಲ್ಲಿಯೇ ಇದ್ದುಕೊಂಡು ಹಾಡಬಹುದು. ಮೂಲ ಗಾಯಕರು ಯಾವ ದಾಟಿಯಲ್ಲಿ ಹಾಡಿದ್ದಾರೆ ಅದೇ

ದಾಟಿಯಲ್ಲಿ ಹಾಡಲು ಪ್ರಯತ್ನಿಸಬಹುದು. ವೀಣಾ ಪತ್ತಾರ ಅವರು ಒಬ್ಬ ಶ್ರೇಷ್ಠ ಗಾಯಕಿ. ಅವರ ಹತ್ತಾರು ಕಾರ್ಯಕ್ರಮಗಳಲ್ಲಿ ನಾನು ಭಾಗವಹಿಸಿದ್ದೇನೆ. ಅವರು ಹೀಗೆ ಇನ್ನೂ ಉಚ್ಚ ಮಟ್ಟದಲ್ಲಿ ಬೆಳೆಯಲಿ ಎಂದರು. ಇಂದು ಗೌರವ ಸನ್ಮಾನವನ್ನು ಪಡೆಯುವ ಶರೀಫ್ ದೊಡಮನಿ ಶ್ರೇಷ್ಠ ಜಾನಪದ ಗಾಯಕರು ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿ ಶಂಕರ ಹಲಗತ್ತಿ ಮಾತನಾಡುತ್ತಾ, ಇಂದು ಹಾಡುಗಾರಿಕೆಯ ಕಲೆ ವಿಸ್ತೃತವಾಗಿ ಬೆಳೆಯುತ್ತಿದೆ. ಕರೋಕೆ ವ್ಯವಸ್ಥೆಯಲ್ಲಿ ಹಾಡುವವರಿಗೆ ಸಹಜವಾಗಿ ಸಂಗೀತದ ತಿಳುವಳಿಕೆ ಹೆಚ್ಚಾಗುತ್ತದೆ. ಇದರೊಂದಿಗೆ ಅವರಲ್ಲಿ ಭಾಷಾ ಶುದ್ಧತೆ ಹೆಚ್ಚುತ್ತದೆ. ನಾಡಿನ ಕವಿತೆಗಳ ರಚನಾಕಾರರ ಹೆಸರುಗಳು ಹೆಚ್ಚು ಹೆಚ್ಚು ಪ್ರಚಾರಕ್ಕೆ ತಂದು ಕೊಡುತ್ತದೆ. ಇದೊಂದು ಒಳ್ಳೆಯ ಬೆಳವಣಿಗೆ ಎಂದರು.

ಕುಂದಗೋಳ ತಾಲೂಕಿನ ಯರಿನಾರಾಯಣಪುರದ ಜಾನಪದ ಕಲಾವಿದ ಶರೀಫ ದೊಡಮನಿ ಅವರಿಗೆ 'ಜನಪದ ಸಿರಿ' ಪ್ರಶಸ್ತಿ ನೀಡಿ ಗೌರವ ಸನ್ಮಾನ ಮಾಡಲಾಯಿತು. ಹರ್ಲಾಪೂರ ತಂಡದವರು ಜಾನಪದ ಗೀತೆಗಳನ್ನು ಪ್ರಸ್ತುತಪಡಿಸಿದರು.

ನಂತರ ಶ್ರೀಮತಿ ವೀಣಾ ಅನಂತ ಪತ್ತಾರ ಹಾಗೂ ಸಂಗಡಿಗರಿಂದ ಕನ್ನಡ ನಾಡ ಗೀತೆಗಳ ಕರೋಕೆ ಕಾರ್ಯಕ್ರಮ ಸೊಗಸಾಗಿ ಜರುಗಿ, ನೆರೆದ ಸಭಿಕರನ್ನು ರಂಜಿಸಿತು.

* ಕರ್ನಾಟಕವು ಸಾಂಸ್ಕೃತಿಕವಾಗಿ ವಿಶ್ವಮಾನ್ಯತೆ ಪಡೆದ ರಾಜ್ಯವಾಗಿದೆ. ಅದು ಸಹಸ್ರಾರು ವರ್ಷಗಳಿಂದ ತನ್ನದೇ ಆದ ಸ್ವಂತಿಕೆ ಉಳಿಸಿಕೊಂಡು ಬಂದದ್ದು ವೈಭವದ ಪರಾಕಾಷ್ಠತೆಗೆ ಸಾಕ್ಷಿಯಾಗಿದೆ ಎಂದು ಧಾರವಾಡದ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಧ್ಯಾಪಕ ಡಾ. ಗಿರೀಶ ದೇಸೂರ ಅಭಿಪ್ರಾಯಪಟ್ಟರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು, ೬೮ನೇ ಕರ್ನಾಟಕ ರಾಜ್ಯೋತ್ಸವ ಅಂಗವಾಗಿ 'ಕರ್ನಾಟಕ ಸಂಭ್ರಮ-೫೦'ರ ನಿಮಿತ್ತ 'ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ' ಸರಣಿ ಕಾರ್ಯಕ್ರಮದಲ್ಲಿ ದಿನಾಂಕ: ೨೩-೧೧-೨೦೨೩ ರಂದು ಬೆಳಿಗ್ಗೆ ೧೦-೩೦ ಗಂಟೆಗೆ ಸಂಘದ ನಾಡೋಜ ಡಾ. ಪಾಪು ಸಭಾಭವನದಲ್ಲಿ ಅಂಜುಮನ್ ಪದವಿಪೂರ್ವ ಮಹಾವಿದ್ಯಾಲಯ ಹಾಗೂ ಎಲ್‌ಇಎಸ್ ಕಲಾ ಕಾಲೇಜಿನ ವಿದ್ಯಾರ್ಥಿಗಳಿಗೆ ಅಯೋಜಿಸಿದ್ದ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿ ಮಾತನಾಡುತ್ತಿದ್ದರು.

ಕರ್ನಾಟಕದ ಸಾಂಸ್ಕೃತಿಕ ಪರಂಪರೆ ಉಜ್ವಲವಾದದ್ದು, ನಾಡಿನಲ್ಲಿ ಅನೇಕ ವೈವಿಧ್ಯತೆಗಳಿದ್ದರೂ ಕನ್ನಡಿಗರು ಬಹುಕಾಲದಿಂದ ಉದಾರತೆ, ಕಲಿತನ, ತ್ಯಾಗ ಧರ್ಮಸಮನ್ವಯತೆ, ಆದರ್ಶ ಗುಣಸ್ವಭಾವವನ್ನು ಬೆಳೆಸಿಕೊಂಡು ಬಂದದ್ದನ್ನು ಬಾದಾಮಿಯ ಕಪ್ಪೆ ಅರಭಟ್ಟನ ಶಾಸನ, ಹಲ್ಮಿಡಿ ಶಾಸನ ಮತ್ತು ವಿಜಯನಗರದ ಶಾಸನಗಳಿಂದ ತಿಳಿದು ಬರುತ್ತದೆ. ಕನ್ನಡ ಸಾಹಿತ್ಯ ಉಜ್ವಲ ಸಾಹಿತ್ಯವಾಗಿದ್ದು ಕನ್ನಡಪರ ಕಾಳಜಿಯನ್ನು ಹೊಂದಿದೆ. ಅದರಲ್ಲೂ ವಚನ ಸಾಹಿತ್ಯವು ವಿಶ್ವಸಾಹಿತ್ಯಕ್ಕೆ ಶ್ರೇಷ್ಠ ಕೊಡುಗೆ ನೀಡಿದೆ. ಶರಣರು ಜನವಾಣಿಯನ್ನು ದೇವವಾಣಿಯನ್ನಾಗಿ ಮಾಡಿದ್ದು ಉತ್ಕೃಷ್ಟತೆಗೆ ಸಾಕ್ಷಿಯಾಗಿದೆ.

ಆಂಧ್ರ ಪ್ರತ್ಯೇಕ ರಾಜ್ಯ ರಚನೆಗಾಗಿ ಪೊಟ್ಟಿ ಶ್ರೀರಾಮಲು ಉಪವಾಸ ಮಾಡಿ ಮರಣ ಹೊಂದಿದಾಗ, ಕರ್ನಾಟಕದಲ್ಲಿ ಅದರಗುಂಚಿ ಶಂಕರಗೌಡರು ೨೩ ದಿನಗಳ ಕಾಲ ಉಪವಾಸ ಮಾಡಿ ಏಕೀಕರಣದ ಬಿಸಿ ಮುಟ್ಟಿಸಿದ್ದರು. ಕೇಂದ್ರ ಸರಕಾರ ೧೯೫೩ ರಲ್ಲಿ ರಾಜ್ಯ ಪುನರ್ವಿಂಗಡನಾ ಸಮಿತಿ ರಚಿಸಿತು. ಸಮಿತಿ ನೀಡಿದ ವರದಿ ಆಧಾರದ ಮೇಲೆ ೧೯೫೬ ನವಂಬರ್ ೧ ರಂದು ವಿಶಾಲ ಮೈಸೂರ ರಾಜ್ಯ ರಚನೆಯಾಯಿತು, ಈ ಮೈಸೂರ ರಾಜ್ಯ ಎಂಬುದು ಆಲೂರ ವೆಂಕಟರಾಯರು ಹಾಗೂ ಅನೇಕ ಹೋರಾಟಗಾರರಿಗೆ ಸಂತಸ ತಂದಿದ್ದರೂ ನೋವಿನ ಸಂಗತಿಯಾಗಿತ್ತು. ೧೯೭೩ ನವಂಬರ ೧ ರಂದು ಕರ್ನಾಟಕ ಎಂದು ರಾಜ್ಯಕ್ಕೆ ನಾಮಕರಣವಾಯಿತು. ಸುವರ್ಣ ಸಂಭ್ರಮದ ಈ ಸಂದರ್ಭದಲ್ಲಿ ಕನ್ನಡದ ವಾರಸುದಾರರಾದ ತಾವು ಭಾಷೆ, ಸಂಸ್ಕೃತಿಯ ಬಗ್ಗೆ ಅಭಿಮಾನ ತಾಳಬೇಕೆಂದರು.

ಅಧ್ಯಕ್ಷತೆ ವಹಿಸಿದ್ದ ಎಲ್.ಇ.ಎ ಪದವಿಪೂರ್ವ ಕಾಲೇಜಿನ ರಾಜೇಂದ್ರಕುಮಾರ ಹಾಗೂ ವೇದಿಕೆಯಲ್ಲಿ ಉಪಸ್ಥಿತರಿದ್ದ ಸಂಘದ ಪ್ರಧಾನ ಕಾರ್ಯದರ್ಶಿ ಶಂಕರ ಹಲಗತ್ತಿ, ಜಿ. ಜಿ. ಬೆಟಗೇರಿ ಮಾತನಾಡಿದರು.

ಹರ್ಲಾಪುರದ ಯುವಜನ ಹಾಗೂ ಸಾಂಸ್ಕೃತಿಕ ಸಂಘದವರು ನಾಡು, ನುಡಿಯ ಬಗ್ಗೆ ಜಾಗೃತಿಗೀತೆಗಳನ್ನು ಪ್ರಸ್ತುತಪಡಿಸಿ ವಿದ್ಯಾರ್ಥಿಗಳಲ್ಲಿ ಕನ್ನಡದ ಕೆಚ್ಚು ಹೆಚ್ಚುವಲ್ಲಿ ಯಶಸ್ವಿಯಾದರು.

ಕಾರ್ಯಕ್ರಮದ ಪೂರ್ವದಲ್ಲಿ ಧಾರವಾಡದ ಅಂಜುಮನ್ ಪದವಿಪೂರ್ವ ಮಹಾವಿದ್ಯಾಲಯ ಹಾಗೂ ಎಲ್‌ಇಎಸ್ ಕಲಾ ಕಾಲೇಜಿನ ವಿದ್ಯಾರ್ಥಿಗಳು, ಶಿಕ್ಷಕರು, ಸಂಘದ ಸದಸ್ಯರು, ಪದಾಧಿಕಾರಿಗಳಿಂದ ಕನ್ನಡ ಜಾಥಾ ಪ್ರಾರಂಭಗೊಂಡು ವಿವಿಧ ಕನ್ನಡ ಘೋಷಣೆಗಳೊಂದಿಗೆ ವಿವೇಕಾನಂದ ವೃತ್ತದ ಮೂಲಕ ಸಂಘದ ನಾಡೋಜ ಡಾ. ಪಾಟೀಲ ಪುಟ್ಟಪ್ಪ ಸಭಾಭವನದಲ್ಲಿ ಸಮಾವೇಶಗೊಂಡಿತು.

ಗುರು ಹಿರೇಮಠ ಸ್ವಾಗತಿಸಿ ಪ್ರಾಸ್ತಾವಿಸಿದರು. ವೀರಣ್ಣ ಒಡ್ಡೀನ ನಿರೂಪಿಸಿದರು. ಶ್ರೀಶೈಲಗೌಡ ಕಮತರ ವಂದಿಸಿದರು. ವಿದ್ಯಾರ್ಥಿಗಳೊಂದಿಗೆ ನಾಡು–ನುಡಿ ಬಗ್ಗೆ ಸಂವಾದ ಜರುಗಿತು.

* ಭಾಷೆ ಮನುಷ್ಯನ ಬದುಕಿಗೆ ಬೆಳಕು. ಮಾನವನ ಬದುಕಿಗೆ ಭಾಷೆ ಉಸಿರಿನಷ್ಟೇ ಸಹಜವಾದದ್ದು ಎಂದು ಡಾ. ದ. ರಾ. ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್ ಅಧ್ಯಕ್ಷ ಡಾ. ಡಿ. ಎಂ. ಹಿರೇಮಠ ಅಭಿಪ್ರಾಯಪಟ್ಟರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು, ೬೮ನೇ ಕರ್ನಾಟಕ ರಾಜ್ಯೋತ್ಸವ ಅಂಗವಾಗಿ 'ಕರ್ನಾಟಕ ಸಂಭ್ರಮ–೫೦'ರ ನಿಮಿತ್ತ 'ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ' ಸರಣಿ ಕಾರ್ಯಕ್ರಮದಲ್ಲಿ ದಿನಾಂಕ: ೨೪–೧೧–೨೦೨೩ ರಂದು ಬೆಳಿಗ್ಗೆ ೧೦–೩೦ ಗಂಟೆಗೆ ಸಂಘದ ನಾಡೋಜ ಡಾ. ಪಾಪು ಸಭಾಭವನದಲ್ಲಿ ವಿದ್ಯಾರಣ್ಯ ಪದವಿ ಪೂರ್ವ ಕಾಲೇಜಿನ ಹಾಗೂ ಎನ್.ಪಿ.ಎಸ್.ಎಸ್. ಕಾಲೇಜಿನ ವಿದ್ಯಾರ್ಥಿಗಳಿಗೆ ಅಯೋಜಿಸಿದ್ದ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿ ಮಾತನಾಡುತ್ತಿದ್ದರು.

ಕವಿರಾಜಮಾರ್ಗದ ಕರ್ತೃ ಶ್ರೀವಿಜಯನು ಕನ್ನಡ ನಾಡು ಕಾವೇರಿಯಿಂದ, ಗೋದಾವರಿಯವರೆಗೂ ವಿಸ್ತಾರವಾಗಿತ್ತು ಎಂದು ಹೇಳಿ, ಇಲ್ಲಿ ತಿರುಳಗನ್ನಡ ಭಾಷೆ ಪ್ರಚಲಿತವಿತ್ತು. ಆ ಕನ್ನಡಿಗರು ಉತ್ತಮರು, ಸಂದರ್ಭ ಅರಿತು ಮಾತನಾಡುವವರು, ಬೇರೆಯವರ ಮಾತನ್ನು ಗ್ರಹಿಸಬಲ್ಲವರು, ಮಾತಿನಲ್ಲಿ, ತಮ್ಮ ನಡೆ–ನುಡಿಯಲ್ಲಿ ಚತುರರು, ವಿದ್ಯಾವಂತರು, ಸಾಮಾನ್ಯರೂ ಸಹ ಕಾವ್ಯ ಪ್ರಯೋಗಿಸಬಲ್ಲವರಾಗಿದ್ದರು ಎಂದು ರಮ್ಯವಾಗಿ ವರ್ಣಿಸಿದ್ದಾನೆ. ಕವಿರಾಜ ಮಾರ್ಗ ಸಾಂಸ್ಕೃತಿಕವಾಗಿ ಒಂದು ಮೇರು ಕೃತಿಯಾಗಿದೆ.

ಇಂತಹ ಕನ್ನಡ ನಾಡಿನಲ್ಲಿ ಗಂಗ, ಕದಂಬ, ರಾಷ್ಟ್ರಕೂಟ, ಚಾಲುಕ್ಯ, ಹೊಯ್ಸಳ ರಾಜಮನೆತನಗಳ ಸುದೀರ್ಘ ಪರಂಪರೆ ಇತ್ತು. ಆದಿಕವಿ ಪಂಪನೂ ಸಹ ಬನವಾಸಿಯನ್ನು ಮುಕ್ತಕಂಠದಿಂದ ಹೊಗಳಿದ್ದಾನೆ. ಕನ್ನಡಿಗರು ತ್ಯಾಗ, ಭೋಗ, ಜ್ಞಾನ, ಗಾನ, ಅತಿಥಿ ಸತ್ಕಾರ, ಅವರಾಡುವ ಸವಿಮಾತುಗಳ ಬಗ್ಗೆ ಮನಮೋಹಕವಾಗಿ ವರ್ಣಿಸಿದ್ದಾನೆ. ಮರುಜನ್ಮದಲ್ಲಿ ನಾನು ಮನುಷ್ಯನಾಗಿ ಹುಟ್ಟದಿದ್ದರೂ ಕೋಗಿಲೆಯಾಗಿ, ದುಂಬಿಯಾಗಿ ಬನವಾಸಿಯಲ್ಲಿ ಹುಟ್ಟಿ ಬರಬೇಕೆಂದು ಬಯಕೆಯನ್ನು ವ್ಯಕ್ತಪಡಿಸಿದ್ದು ಬನವಾಸಿಯ ಹಿರಿಮೆಗೆ ಸಾಕ್ಷಿಯಾಗಿದೆ. ಭವಿಷ್ಯದ ಸತ್ಪ್ರಜೆಗಳಾದ ವಿದ್ಯಾರ್ಥಿಗಳಾದ ತಾವು ನಾಡು, ನುಡಿ, ಸಂಸ್ಕೃತಿಯ ಏಳ್ಗೆಗಾಗಿ ಶಕ್ತಿಶಾಲಿಯಾಗಿ ದುಡಿಯಬೇಕು. ಆಂಗ್ಲ ಭಾಷಾ ವ್ಯಾಮೋಹದ ಭರದಲ್ಲಿ ಕನ್ನಡ ಮರೆಯಬಾರದು ಎಂದು ಹೇಳಿದರು.

ಡೈಟ್‌ನ ನಿವೃತ್ತ ಉಪನ್ಯಾಸಕರಾದ ಕೆ. ಜಿ. ದೇವರಮನಿ ಅವರು ಕರ್ನಾಟಕದ ಸಮಗ್ರ ಮಾಹಿತಿ ಅಂಕಿ, ಅಂಶಗಳ ಮೂಲಕ ತಿಳಿಸಿದರು. ಅಧ್ಯಕ್ಷತೆ ವಹಿಸಿದ್ದ ವಿದ್ಯಾರಣ್ಯ ಕಾಲೇಜಿನ ಉಪನ್ಯಾಸಕ ರಮೇಶ ಮಾಂಗ ಮಾತನಾಡಿ, ಕ.ವಿ.ವ.ಸಂಘವು ೧೩೪ ವರ್ಷಗಳಿಂದ ನಿರಂತರವಾಗಿ ಕನ್ನಡದ ಬಗ್ಗೆ ಜಾಗೃತಿ ಹಾಗೂ ಅರಿವು ಮೂಡಿಸುತ್ತಿರುವುದು ಶ್ಲಾಘನೀಯ. ತಿಂಗಳ ಕಾರ್ಯಕ್ರಮವು ಅಭಿನಂದನೀಯ ಎಂದರು.

ಹರ್ಲಾಪುರದ ಯುವಜನ ಹಾಗೂ ಸಾಂಸ್ಕೃತಿಕ ಸಂಘದವರು ನಾಡು, ನುಡಿಯ ಬಗ್ಗೆ ಜಾಗೃತಿ ಗೀತೆಗಳನ್ನು ಪ್ರಸ್ತುತಪಡಿಸಿ ವಿದ್ಯಾರ್ಥಿಗಳಲ್ಲಿ ಕನ್ನಡದ ಕೆಚ್ಚು ಹೆಚ್ಚುವಲ್ಲಿ ಯಶಸ್ವಿಯಾದರು.

ಕಾರ್ಯಕ್ರಮದ ಪೂರ್ವದಲ್ಲಿ ಧಾರವಾಡದ ವಿದ್ಯಾರಣ್ಯ ಪದವಿ ಪೂರ್ವ ಕಾಲೇಜಿನ ಹಾಗೂ ಎನ್.ಪಿ.ಎಸ್.ಎಸ್. ಕಾಲೇಜಿನ ವಿದ್ಯಾರ್ಥಿಗಳು, ಶಿಕ್ಷಕರು, ಸಂಘದ ಸದಸ್ಯರು, ಪದಾಧಿಕಾರಿಗಳಿಂದ ಕನ್ನಡ

ಜಾಥಾ ಪ್ರಾರಂಭಗೊಂಡು ವಿವಿಧ ಕನ್ನಡ ಘೋಷಣೆಗಳೊಂದಿಗೆ ವಿವೇಕಾನಂದ ವೃತ್ತದ ಮೂಲಕ ಸಂಘದ ನಾಡೋಜ ಡಾ. ಪಾಟೀಲ ಪುಟ್ಟಪ್ಪ ಸಭಾಭವನಲ್ಲಿ ಸಮಾವೇಶಗೊಂಡಿತು.

ವೇದಿಕೆಯಲ್ಲಿ ಉಪನ್ಯಾಸಕಿ ರಕ್ಷಿತಾ ಇದ್ದರು. ಕ.ವಿ.ವ.ಸಂಘದ ಕೋಶಾಧ್ಯಕ್ಷರಾದ ಸತೀಶ ತುರಮರಿ ಸ್ವಾಗತಿಸಿ, ಪ್ರಾಸ್ತಾವಿಸಿದರು. ಕಾರ್ಯಕಾರಿ ಸಮಿತಿ ಸದಸ್ಯ ವೀರಣ್ಣ ಒಡ್ಡೀನ ನಿರೂಪಿಸಿದರು.

* ಕರ್ನಾಟಕ ವಿದ್ಯಾವರ್ಧಕ ಸಂಘವು, ೬೮ನೇ ಕರ್ನಾಟಕ ರಾಜ್ಯೋತ್ಸವ ಅಂಗವಾಗಿ 'ಕರ್ನಾಟಕ ಸಂಭ್ರಮ–೫೦'ರ ನಿಮಿತ್ತ 'ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ' ಸರಣಿ ಕಾರ್ಯಕ್ರಮದಲ್ಲಿ ದಿನಾಂಕ: ೨೪–೧೧–೨೦೨೩ ರಂದು ಸಂಜೆ ೫–೩೦ ಗಂಟೆಗೆ ಸಂಘದ ನಾಡೋಜ ಡಾ. ಪಾಪು ಸಭಾಭವನದಲ್ಲಿ ಸಾಂಸ್ಕೃತಿಕ ಕಾರ್‍ಯಕ್ರಮಗಳು ಹಾಗೂ 'ಜನಪದ ಸಿರಿ' ಪ್ರಶಸ್ತಿ ನೀಡಿ ಗೌರವ ಸನ್ಮಾನ ಕಾರ್ಯಕ್ರಮ ಆಯೋಜಿಸಿತ್ತು.

ಶಾರದಾ ಗೀಗೀಪದ ತಂಡ, ನಾಯಕನ ಹೂಲಿಕಟ್ಟಿ ಇವರಿಂದ ಜಾನಪದ ಗೀತೆ ಮತ್ತು ಶ್ರೀಮತಿ ಸುಮಾ ಹೆಗಡೆ, ಭಾರತಿ ನೃತ್ಯ ಕಲಾ ಕೇಂದ್ರ ಸಮಿತಿ ಯಲ್ಲಾಪುರ (ಉ.ಕ) ಹಾಗೂ ಶ್ರೀಮತಿ ಅಂಕಿತಾ ರಾವ್, ವಿಶ್ವಾಂಬರಿ ನೃತ್ಯ ಮತ್ತು ಸಾಂಸ್ಕೃತಿಕ ಸಂಸ್ಥೆ, ಧಾರವಾಡ ಇವರಿಂದ ನೃತ್ಯ ಪ್ರದರ್ಶನ ಜರುಗಿದವು.

ಶ್ರೀಮತಿ ಲಕ್ಷ್ಮೀಬಾಯಿ ಹರಿಜನ, ಜಾನಪದ ಕಲಾವಿದರು, ಸಾ: ನಾಯಕನ ಹೂಲಿಕಟ್ಟಿ ತಾ: ಧಾರವಾಡ ಇವರಿಗೆ ಜನಪದ ಸಿರಿ ಗೌರವ ಸನ್ಮಾನ ಮಾಡಿ ಗೌರವಿಸಲಾಯಿತು.

* ಕನ್ನಡಿಗರು ದೊಡ್ಡ ಉದಾರಿಗಳು. ಕನ್ನಡಕ್ಕಾಗಿ ಅಡಿಪಾಯ ಹಾಕಿದ ಸ್ಥಳವೇ ಧಾರವಾಡ. ಮರಾಠಿ ಮಾತೃಭಾಷೆಯಲ್ಲಿ ಕಲಿತ್ತಿದ್ದ ಜಯದೇವಿತಾಯಿ ಲಿಗಾಡೆ ಕನ್ನಡದಲ್ಲಿಯೇ ಪ್ರಥಮ ಶಾಲೆ ತೆರೆದ ಹೆಗ್ಗಳಿಕೆ ಅವರದ್ದಾಗಿದೆ ಎಂದು ಜೆ.ಎಸ್.ಎಸ್. ಕಾಲೇಜಿನ ಉಪನ್ಯಾಸಕ ಮೃತ್ಯುಂಜಯ ವಸ್ತ್ರದ ಹೇಳಿದರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು, ೬೮ನೇ ಕರ್ನಾಟಕ ರಾಜ್ಯೋತ್ಸವ ಅಂಗವಾಗಿ 'ಕರ್ನಾಟಕ ಸಂಭ್ರಮ–೫೦'ರ ನಿಮಿತ್ತ 'ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ' ಸರಣಿ ಕಾರ್ಯಕ್ರಮದಲ್ಲಿ ದಿನಾಂಕ: ೨೫–೧೧–೨೦೨೩ ರಂದು ಬೆಳಿಗ್ಗೆ ೧೦–೩೦ ಗಂಟೆಗೆ ಸಂಘದ ನಾಡೋಜ ಡಾ. ಪಾಪು ಸಭಾಭವನದಲ್ಲಿ ಸಿದ್ಧರಾಮೇಶ್ವರ ಮಾರ್ಗದರ್ಶಿ ಬಿಎಡ್ ಕಾಲೇಜ್ ಹಾಗೂ ಕ.ವಿ.ವಿ. ಬಿಎಡ್ ಕಾಲೇಜ್ ವಿದ್ಯಾರ್ಥಿಗಳಿಗೆ ಅಯೋಜಿಸಿದ್ದ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿ ಮಾತನಾಡುತ್ತಿದ್ದರು.

ಭಾರತ ಸ್ವಾತಂತ್ರ್ಯ ಹೋರಾಟ ಮತ್ತು ಕರ್ನಾಟಕ ಏಕೀಕರಣ ಸಂದರ್ಭದಲ್ಲಿ ದುಡಿದ ಮಹಿಳೆಯರ ಕೊಡುಗೆ ಅಪಾರವಿದೆ. ಜಯದೇವಿತಾಯಿ ಲಿಗಾಡೆ, ಬಳ್ಳಾರಿ ಸಿದ್ದಮ್ಮ, ಮೀರಾಬಾಯಿ, ಮೇಲುಕೋಟೆ ಸುಹಾಸಿನಿ ಭಂಡಾರಿ, ಆಶಾತಾಯಿ ಅವರಂತಹ ಅನೇಕರು ಇದ್ದಾರೆ. ಹುಬ್ಬಳ್ಳಿಯ ಗೋಪಾಲಕೃಷ್ಣ ಜೋಶಿ, ಜಾನಪದ ಗಾರುಡಿಗ ಹುಕ್ಕೇರಿ ಬಾಳಪ್ಪ, ಏಣಗಿ ಬಾಳಪ್ಪ ಸೇರಿದಂತೆ ಗಾನಯೋಗಿ ಪಂಚಾಕ್ಷರಿ ಗವಾಯಿಗಳು, ಪುಟ್ಟರಾಜ ಗವಾಯಿಗಳು, ಹಾನಗಲ್ ಕುಮಾರ ಶಿವಯೋಗಿಗಳಂತಹ ಶರಣರಲ್ಲಿಯೂ ಕನ್ನಡ ಅಭಿಮಾನದಿಂದ ಜನರಲ್ಲಿ ಕನ್ನಡ ಪ್ರೀತಿ ಹೆಚ್ಚಿಸಿದವರು ಎಂದು ವಸ್ತ್ರದ ಹೇಳಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ನ್ಯಾಯವಾದಿ ಶಿವಾನಂದ ಭಾವಿಕಟ್ಟಿ, ಮೌಲ್ಯವಿಲ್ಲದ ಶಿಕ್ಷಣಕ್ಕೆ ಅರ್ಥವಿಲ್ಲ. ಮೌಲ್ಯಗಳನ್ನು ಉಳಿಸಿ, ಬೆಳೆಸುವಲ್ಲಿ ಇಂದಿನ ವಿದ್ಯಾರ್ಥಿಗಳು ತಾಯಿಯನ್ನು ಪ್ರೀತಿಸುವ ಹಾಗೆ ನಾಡು, ನುಡಿ, ಭಾಷೆ, ನೆಲ, ಜಲ ಪ್ರೀತಿಸಬೇಕು ಹೀಗೆ ಪ್ರೀತಿ ಬರಬೇಕೆಂದರೆ ನಾಡು ಕಟ್ಟಿದವರ ಬಗ್ಗೆ ತಿಳಿದುಕೊಳ್ಳಬೇಕು ಎಂದರು.

ಹರ್ಲಾಪುರದ ಈಶ್ವರ ಅರಳಿ ಹಾಗೂ ಸಂಗಡಿಗರಿಂದ ನಾಡು, ನುಡಿ ಗೀತಗಾಯನ ಜರುಗಿತು. ವೇದಿಕೆಯಲ್ಲಿ ಎಲ್.ಇ.ಎ. ಕಾಲೇಜಿನ ಗುರುಮಾತೆ ಪ್ರತಿಭಾ ಪಾಟೀಲ, ಮಂಜುಳಾ ಹನಸಿ ಉಪಸ್ಥಿತರಿದ್ದರು. ಗುರು ಹಿರೇಮಠ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿ, ನಿರೂಪಿಸಿದರು, ಶಂಕರ ಹಲಗತ್ತಿ ವಂದಿಸಿದರು.

*	ಕರ್ನಾಟಕ ವಿದ್ಯಾವರ್ಧಕ ಸಂಘವು, ೬೮ನೇ ಕರ್ನಾಟಕ ರಾಜ್ಯೋತ್ಸವ ನಿಮಿತ್ತ, 'ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ' 'ಕರ್ನಾಟಕ ಸಂಭ್ರಮ–೫೦' ರ ಅಂಗವಾಗಿ ದಿನಾಂಕ: ೨೭–೧೧–೨೦೨೩ ರಂದು ಬೆಳಿಗ್ಗೆ ೧೦–೩೦ ಗಂಟೆಗೆ ಸಂಘದ ನಾಡೋಜ ಡಾ. ಪಾಮು ಸಭಾಭವನದಲ್ಲಿ, ಕಿಟೆಲ್ ವಿಜ್ಞಾನ ಪದವಿಪೂರ್ವ ಕಾಲೇಜು ಹಾಗೂ ಕೆ.ಯು.ಡಿ. ಪಬ್ಲಿಕ್ ಕಾಲೇಜಿನ ವಿದ್ಯಾರ್ಥಿಗಳಿಗಾಗಿ, ಕನ್ನಡ ನಾಡು, ನುಡಿ ಗೀತೆಗಳು, ಕನ್ನಡ ಭಾಷೆಯ ಹಿರಿಮೆ, ಕನ್ನಡ ನಾಡು ಕಟ್ಟಿದ ಇತಿಹಾಸ ಹಾಗೆಯೇ ಕನ್ನಡ ಭಾಷೆಯ ಸ್ಥಿತಿ–ಗತಿ ಕುರಿತು ಕಾರ್ಯಕ್ರಮ ಆಯೋಜಿಸಿತ್ತು.

ಅತಿಥಿ ಉಪನ್ಯಾಸಕರಾಗಿ, ಉಪನ್ಯಾಸಕ ಧಾರವಾಡದ ಡಾ. ಶೇಖರ ಸಜ್ಜನ ಆಗಮಿಸಿದ್ದರು. ಅಧ್ಯಕ್ಷತೆಯನ್ನು ಕಿಟೆಲ್ ವಿಜ್ಞಾನ ಪಿ.ಯು. ಕಾಲೇಜಿನ ಪ್ರಾಚಾರ್ಯ ಎಸ್.ಎಸ್. ನಂದಿಕೇಶ್ವರ ವಹಿಸಿದ್ದರು.

ಕ.ವಿ.ವ. ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಡಾ. ಮಹೇಶ ಹೊರಕೇರಿ ಉಪಸ್ಥಿತರಿದ್ದರು. ಸಮಾಜ ಸೇವಕ ಧಾರವಾಡದ ನಾಗರಾಜ ಪಟ್ಟಣಶೆಟ್ಟಿ ಮತ್ತು ನಿವೃತ್ತ ಜಿಲ್ಲಾ ಗ್ರಂಥಾಲಯಾಧಿಕಾರಿ ಜಿ. ಬಿ. ಹೊಂಬಳ ಗೌರವ ಉಪಸ್ಥಿತರಿದ್ದರು.

ಕುಂದಗೋಳ ತಾಲೂಕಿನ ಹರ್ಲಾಪೂರ ಗ್ರಾಮದ ಯುವಜನ ಹಾಗೂ ಸಾಂಸ್ಕೃತಿಕ ಕೇಂದ್ರ ಕಲಾವಿದರಾದ ಎಸ್.ಎಸ್. ಹಿರೇಮಠ. ಈಶ್ವರಪ್ಪ ಅರಳಿ, ನಾಗರಾಜ ಗೌಡಣ್ಣವರ, ಶರೀಫ್ ದೊಡಮನಿ, ಮಲ್ಲಪ್ಪ ಮುಳಗುಂದ ತಂಡದವರಿಂದ ಸೊಗಸಾಗಿ ಕನ್ನಡ ನಾಡು, ನುಡಿ ಜಾಗೃತಿ ಗೀತಗಾಯನ ಜರುಗಿತು.

ಕಾರ್ಯಕ್ರಮದ ಪೂರ್ವದಲ್ಲಿ ಕಿಟೆಲ್ ವಿಜ್ಞಾನ ಪದವಿಪೂರ್ವ ಕಾಲೇಜು ಹಾಗೂ ಕೆ.ಯು.ಡಿ. ಪಬ್ಲಿಕ್ ಕಾಲೇಜಿನ ವಿದ್ಯಾರ್ಥಿಗಳು, ಶಿಕ್ಷಕರು, ಸಂಘದ ಸದಸ್ಯರು, ಪದಾಧಿಕಾರಿಗಳಿಂದ ಕನ್ನಡ ಜಾಥಾ ಪ್ರಾರಂಭಗೊಂಡು ವಿವಿಧ ಕನ್ನಡ ಘೋಷಣೆಗಳೊಂದಿಗೆ ವಿವೇಕಾನಂದ ವೃತ್ತದ ಮೂಲಕ ಸಂಘದ ನಾಡೋಜ ಡಾ. ಪಾಟೀಲ ಪುಟ್ಟಪ್ಪ ಸಭಾಭವನಲ್ಲಿ ಸಮಾವೇಶಗೊಂಡಿತು.

*	ರಾಜ್ಯ ಹೀಗಿರಬೇಕು, ರಾಜ್ಯದ ಭೂಪಟ ಹೀಗೆಯೇ ಹೊಂದಿರಬೇಕು. ಅಂಥ ಕನಸು ಕಟ್ಟಿಕೊಂಡ ಅನೇಕ ಧೀಮಂತರು ತಮ್ಮ ಜೀವನವನ್ನೇ ಮುಡುಪಾಗಿಟ್ಟ ಸ್ಥಳವೇ ಕರ್ನಾಟಕ ವಿದ್ಯಾವರ್ಧಕ ಸಂಘದ ನೆಲವಾಗಿದೆ ಎಂದು ಸಾಹಿತಿ ಚನ್ನಪ್ಪ ಅಂಗಡಿ ಹೇಳಿದರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು, ೬೮ನೇ ಕರ್ನಾಟಕ ರಾಜ್ಯೋತ್ಸವ ಅಂಗವಾಗಿ 'ಕರ್ನಾಟಕ ಸಂಭ್ರಮ–೫೦'ರ ನಿಮಿತ್ತ 'ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ' ಸರಣಿ ಕಾರ್ಯಕ್ರಮದಲ್ಲಿ ದಿನಾಂಕ: ೨೮–೧೧–೨೦೨೩ ರಂದು ಬೆಳಿಗ್ಗೆ ೧೦–೩೦ ಗಂಟೆಗೆ ಸಂಘದ ನಾಡೋಜ ಡಾ. ಪಾಮು ಸಭಾಭವನದಲ್ಲಿ ಸರಕಾರಿ ಪದವಿಪೂರ್ವ ಕಾಲೇಜು ಹಾಗೂ ಛತ್ರಪತಿ ಶಿವಾಜಿ ಪದವಿಪೂರ್ವ ಕಾಲೇಜು ವಿದ್ಯಾರ್ಥಿಗಳಿಗೆ ಅಯೋಜಿಸಿದ್ದ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿ ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ಅವರು, ಸ್ವಾತಂತ್ರ್ಯದ ಹೋರಾಟ, ಕರ್ನಾಟಕದ ಏಕೀಕರಣದಲ್ಲಿ ದಯನೀಯವಾಗಿ ದುಡಿದ ಅನೇಕರಲ್ಲಿ ಅಂದಾನೆಪ್ಪ ದೊಡ್ಡಮೇಟಿ, ಅದರಗುಂಚಿ ಶಂಕರಗೌಡರು ಸೇರಿದಂತೆ ಆಲೂರ ವೆಂಕಟರಾಯರು, ಡೆಪ್ಯೂಟಿ ಚೆನ್ನಬಸಪ್ಪನವರು, ರೊದ್ದ ಶ್ರೀನಿವಾಸರಾಯರ ಕೊಡುಗೆ ನಮ್ಮ ನಾಡಿನ ಸೇವೆಯಲ್ಲಿ ಅಭೂತಪೂರ್ವವಾಗಿದೆ.

ಕನ್ನಡದ ದೀಪ ಹಚ್ಚಿದ ಡಿ.ಎಸ್. ಕರ್ಕಿ ಅವರು ಹೇಳಿದಂತೆ ದೀಪದಿಂದ ದೀಪ ಹಚ್ಚಿ ಕನ್ನಡದ ದೀಪಗಳು ಭವಿಷ್ಯದ ದಿನಗಳಲ್ಲಿ ತಾವಾಗಬೇಕೆಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು. ೧೯೧೧ ರಲ್ಲಿ ಬಿ.ಎಂ. ಶ್ರೀಕಂಠಯ್ಯನವರು ಕನ್ನಡ ಸಾಹಿತ್ಯ ಲೋಕಕ್ಕೆ ಹೊಸ ದಿಕ್ಕನ್ನು ತೋರಿಸಿದರು. ನಮ್ಮ ನಡುವಿನ ಅಂಧಕಾರ ಹೋಗಲಾಡಿಸುವಲ್ಲಿ ಗೀತೆಯ ಮೂಲಕ ಆಧುನಿಕ ಸ್ಪರ್ಶ ನೀಡಿ, ಈ ವಿದ್ಯಾವರ್ಧಕ ಸಂಘದಲ್ಲಿ ಜಾಗೃತಿ, ಭಾಷಣ, ಮಾತು, ಮಂಥನದೊಂದಿಗೆ 'ಕನ್ನಡ ಮಾತು ತಲೆ ಎತ್ತುವ ಬಗೆ' ಶತಮಾನದ ಹಿಂದೆಯೇ ನುಡಿದದ್ದನ್ನು ಸ್ಮರಿಸಿ, ಬೆಳೆಸಿ, ಉಳಿಸುವ ಕನ್ನಡ ಭಾಷಾ ಮಾಧ್ಯಮ ನಮ್ಮ ಆದ್ಯ ಕರ್ತವ್ಯ.

ಪ್ರತಿಭೆ ಎಲ್ಲರಲ್ಲಿಯೂ ಇದೆ. ನಿರಂತರ ಓದು, ನಾಡಿಗೆ ನೀಡಿದ ಮಹನೀಯರ ಕುರಿತು ಸ್ಮರಿಸಿಕೊಂಡು ಖ್ಯಾತ ಕವಿಗಳಾದ ಚೆನ್ನವೀರ ಕಣವಿ, ಕುವೆಂಪುರವರು ರಚಿಸಿದ ಅನೇಕ ಕವಿತೆಗಳನ್ನು ವಿಮರ್ಶೆ ಮೂಲಕ ಭಾಷೆ, ನೆಲ, ಜಲ ಸ್ವರ್ಗಕ್ಕೆ ಸಮಾನವಾಗಿದೆ ಎಂದರು. ಸಿದ್ಧಾಂತವನ್ನು ಪ್ರತಿಪಾದನೆ ಮಾಡುವವರು, ಮಾಡುವವರಿಗೆ ಮಾರ್ಕ್ಸವಾದಿ ಎಂದು ಕರೆಯುತ್ತಾರೆ. ಹೀಗಂತ ಹೇಳಿದವರು ಕಾರ್ಲ್ಸಮಾರ್ಕ ಹೆಸರನ್ನು ಮರೆಯುವಂತಿಲ್ಲ. ಮಹಾತ್ಮಾಗಾಂಧಿ ಅವರ ಆತ್ಮಚರಿತ್ರೆ ಸತ್ಯಾನ್ವೇಷಣೆ ಓದಿದರೆ ಅವರ ಚರಿತ್ರೆ ತಿಳಿದು ಬರುತ್ತದೆ. ದಕ್ಷಿಣ ಆಫ್ರಿಕಾದಲ್ಲಿಯೇ ಅವರ ಹೋರಾಟ ಆರಂಭವಾಯಿತು. ರಸ್ಕಿನ್ ಬಾಂಡ್ ಬರೆದ 'ಅನ್ ಟು ದಿ ಲಾಸ್ಟ್' ಪುಸ್ತಕವನ್ನು ಗಾಂಧೀಜಿಗೆ ಅವರ ಗೆಳೆಯ ಕಾಣಿಕೆಯಾಗಿ ಕೊಟ್ಟಿದ್ದನ್ನು ಪೂರ್ಣ ಓದಿ ಮುಗಿಸಿದರು. ಗಾಂಧೀಜಿ ಅವರಲ್ಲಿಯ ಮೂರು ಅಂಶಗಳು ಅವರನ್ನು ತೀವ್ರವಾಗಿ ಸೆಳೆದವು.

ಸಮಾನತೆ, ಕಪ್ಪು ಜನಾಂಗದ ಸಲುವಾಗಿ ಹೋರಾಟ, ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ಬೀಜಾಂಕುರವಾಯಿತು. ಅನೇಕ ಅಂಶಗಳನ್ನು ಗಾಂಧೀಜಿಯವರಿಗೆ ಅಸ್ಥೆ ವಹಿಸಿತು. ಗೀಕರ ನಾಟಕಗಳಲ್ಲಿ ಕನ್ನಡದ ಶಬ್ದಗಳಿವೆ. ಬಂಗಾಳದ ಸೇನ್ ದೊರೆಗಳು ಕರ್ನಾಟಕದಿಂದ ಹೋಗಿ ಆಳಿದವರು ಎಂದು ಚನ್ನಪ್ಪ ಅಂಗಡಿ ತಿಳಿಸಿದರು.

ಗೌರವ ಉಪಸ್ಥಿತರಿದ್ದ ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವರ ಆಪ್ತಕಾರ್ಯದರ್ಶಿ ಸುರೇಶ ಕುಂದಣ್ಣವರ ಮಾತನಾಡಿ, ಸಚಿವರಾದ ಸಂತೋಷ ಲಾಡ ಅವರು ನಿರಂತರ ಕ್ರೀಯಾಶೀಲರಾಗಿದ್ದಾರೆ. ಇಂದಿನ ವಿದ್ಯಾರ್ಥಿಗಳಿಗೆ, ರಾಜಕಾರಣಿಗಳಿಗೆ ರೋಲ್ ಮಾಡೆಲ್ ಆಗಿದ್ದಾರೆ. ಅಂಥ ಅಪರೂಪದ ಅಪೂರ್ವ ಸಚಿವರನ್ನು ಪಡೆದ ಧಾರವಾಡದ ಹೆಗ್ಗಳಿಕೆ ಆಗಿದೆ. ಒತ್ತಡದ ಮಧ್ಯೆ ದೈಹಿಕ ಸಾಮರ್ಥ್ಯದಿಂದ ಕನ್ನಡ ನಾಡಿಗೆ ಅನನ್ಯ ಸೇವೆ ಸಲ್ಲಿಸುತ್ತಿರುವ ಲಾಡ್ ಅವರ ವ್ಯಕ್ತಿತ್ವ ಗುಣಗಾನ ಮಾಡಿದರು. ಧಾರವಾಡದಲ್ಲಿ ಕಲಿಯುವ ವಿದ್ಯಾರ್ಥಿಗಳಿಗೆ ಸಮಾಜ ಬಗ್ಗೆ ಕೊಡುಗೆ ನೀಡಬೇಕಾದರೆ ಸ್ಪರ್ಧೆ ಮುಖ್ಯ. ಸ್ಪರ್ಧೆಯಲ್ಲಿ ಯಶಸ್ವಿ ಆಗಬೇಕು. ಜೊತೆಗೆ ನಾಡು, ನುಡಿ, ಸಂಸ್ಕೃತಿ ಪರಂಪರೆಯೊಂದಿಗೆ ಇತಿಹಾಸ, ಗತವೈಭವವನ್ನು ಮತ್ತು ಕನ್ನಡದ ಅರಿವು ನಮ್ಮೊಳಗೆ ದೀಪ ಹಚ್ಚಬೇಕಾಗಿದೆ ಎಂದು ಸುರೇಶ ಕುಂದಣ್ಣವರ ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಸಿ.ವ್ಹಿ. ರಾಮನ್ ಪ.ಪೂ. ಕಾಲೇಜಿನ ಪ್ರಾಚಾರ್ಯೆ ಶ್ರೀಮತಿ ಅನುರಾಧಾ ಆರಾಧ್ಯಮಠ, ಕನ್ನಡ ಭಾಷೆ, ಪರಂಪರೆ ಉಳಿಸಿ ಬೆಳೆಸುವಲ್ಲಿ ಇಂದಿನ ವಿದ್ಯಾರ್ಥಿಗಳ ಆದ್ಯ ಕರ್ತವ್ಯ. ಕ.ವಿ.ವ. ಸಂಘದ ತಿಂಗಳ ಸರಣಿ ಉಪನ್ಯಾಸ ಹಮ್ಮಿಕೊಂಡಿರುವುದು ಶ್ಲಾಘನೀಯ. ಶಿಕ್ಷಕರಾದವರು ಮನಸ್ಸಿಗೆ ಬೇಜಾರಿಲ್ಲದೇ ವಿದ್ಯಾರ್ಥಿಗಳಿಗೆ ಜ್ಞಾನದ ದಾಹವನ್ನು ತುಂಬಿಸುವವರೇ ಶಿಕ್ಷಣ, ಶಿಕ್ಷಕರ ಜವಾಬ್ದಾರಿ. ಅಂದ ಮೇಲೆ ಶಿಕ್ಷಕರು ನಿರಂತರ ಸೇವೆ ಮಾಡುತ್ತಿದ್ದಾರೆ. ಹರಿಶ್ಚಂದ್ರ ಸತ್ಯ ಮತ್ತು ಇತಿಹಾಸ ಪ್ರಸಿದ್ಧ ವ್ಯಕ್ತಿ. ಇಂದಿನ ಆಧುನಿಕ ದಿನಗಳಲ್ಲಿ ಕ್ಷಣ ಕ್ಷಣಕ್ಕೂ ಸತ್ಯ ಬದಲಾವಣೆ ಆಗುತ್ತೆ. ಹೆಣಗಳ ಕಾಯುವ ಕೆಲಸ ಹರಿಶ್ಚಂದ್ರನ ಕೆಲಸವಾಗಿತ್ತು. ಅದರ ಸಂಪೂರ್ಣ ಕಥೆಯ ವಿವರಣೆ ಅನುರಾಧಾ ನೀಡಿದರು.

ಹರ್ಲಾಪುರದ ತಂಡದವರಿಂದ ನಾಡು, ನುಡಿ ಗೀತಗಾಯನ ಜರುಗಿತು. ವೇದಿಕೆ ಮೇಲೆ ಚಂದ್ರಕಾಂತ ಬೆಲ್ಲದ, ಸತೀಶ ತುರಮರಿ, ಶಂಕರ ಕುಂಬಿ ಉಪಸ್ಥಿತರಿದ್ದರು.

ಕಾರ್ಯಕ್ರಮದ ಪೂರ್ವದಲ್ಲಿ ಧಾರವಾಡದ ಸರಕಾರಿ ಪದವಿಪೂರ್ವ ಕಾಲೇಜು ಹಾಗೂ ಛತ್ರಪತಿ ಶಿವಾಜಿ ಪದವಿಪೂರ್ವ ಕಾಲೇಜು ವಿದ್ಯಾರ್ಥಿಗಳು, ಶಿಕ್ಷಕರು, ಸಂಘದ ಸದಸ್ಯರು, ಪದಾಧಿಕಾರಿಗಳಿಂದ ಕನ್ನಡ ಜಾಥಾ ಪ್ರಾರಂಭಗೊಂಡು ವಿವಿಧ ಕನ್ನಡ ಘೋಷಣೆಗಳೊಂದಿಗೆ ವಿವೇಕಾನಂದ ವೃತ್ತದ ಮೂಲಕ ಸಂಘದ ನಾಡೋಜ ಡಾ. ಪಾಟೀಲ ಪುಟ್ಟಪ್ಪ ಸಭಾಭವನದಲ್ಲಿ ಸಮಾವೇಶಗೊಂಡಿತು.

ವೀರಣ್ಣ ಒಡ್ಡೀನ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಂಚಾಲಕ ಗುರು ಹಿರೇಮಠ ನಿರೂಪಿಸಿದರು, ಶಂಕರ ಹಲಗತ್ತಿ ವಂದಿಸಿದರು. ಪ.ಪೂ. ಕಾಲೇಜಿನ ೪೫೦ಕ್ಕೂ ಹೆಚ್ಚು ವಿದ್ಯಾರ್ಥಿಗಳು ಕಾರ್‍ಕ್ರಮದಲ್ಲಿ ಭಾಗವಹಿಸಿದ್ದರು.

* = * = * = *

# ೧೦ ದಿನಗಳ ನಾಟಕೋತ್ಸವ

## ರಂಗಚಿಂತನೆ, ನಾಟಕ ಪ್ರದರ್ಶನ ಹಾಗೂ ರಂಗ ಕಲಾ ಸನ್ಮಾನ

ದಿನಾಂಕ: ೫ ರಿಂದ ೧೨ ನವಂಬರ ೨೦೨೩ ಮತ್ತು ೧೬, ೧೭ ನವಂಬರ ೨೦೨೩ ರವರೆಗೆ

ಧಾರವಾಡ ಹಲವು ಕಲೆಗಳನ್ನು ಪ್ರೋತ್ಸಾಹಿಸುವ ಮತ್ತು ಪೋಷಿಸುವ ಕಾರ್ಯವನ್ನು ಕರ್ನಾಟಕ ವಿದ್ಯಾವರ್ಧಕ ಸಂಘದ ಮುಂದಾಳತ್ವದಲ್ಲಿ ಇಂದಿಗೂ ಮಾಡುತ್ತಾ ಬಂದಿದೆ ಎಂದು ಕರ್ನಾಟಕ ನಾಟಕ ಅಕಾಡೆಮಿಯ ಮಾಜಿ ಅಧ್ಯಕ್ಷ ವಿಜಯಪುರದ ಎಲ್.ಬಿ. ಶೇಖ್ ಹೇಳಿದರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು, ೬೮ನೇ ಕರ್ನಾಟಕ ರಾಜ್ಯೋತ್ಸವ ನಿಮಿತ್ತ 'ಕರ್ನಾಟಕ ೫೦ರ ಸಂಭ್ರಮ' ನಾಡ ಹಬ್ಬದ ತಿಂಗಳ ಕಾರ್ಯಕ್ರಮದ ಅಂಗವಾಗಿ ಸಂಘದ ನಾಡೋಜ ಡಾ. ಪಾಟೀಲ ಪುಟ್ಟಪ್ಪ ಸಭಾಭವನದಲ್ಲಿ  ಆಯೋಜಿಸಿದ್ದ ಹತ್ತು ದಿನಗಳ ನಾಟಕೋತ್ಸ ಪ್ರದರ್ಶನಕ್ಕೆ ಚಾಲನೆ ನೀಡಿ ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ಅವರು, ಇಂಥ ಸಂಘವು ಕರ್ನಾಟಕ ಪದವು ಅಮೂರ್ತದಲ್ಲಿ ಇದ್ದದ್ದನ್ನು ಮೂರ್ತರೂಪಕ್ಕೆ ತಂದ ಕರ್ನಾಟಕ ವಿದ್ಯಾವರ್ಧಕ ಸಂಘವನ್ನು, ಕರ್ನಾಟಕ–೫೦ ಸ್ಮರಿಸುವ ಸಂದರ್ಭದಲ್ಲಿ ಸರಕಾರ ಮರೆತಿದ್ದು ವಿಷಾದದ ಸಂಗತಿ. ಈ ಹಿಂದೆ ಈ ಸಂಸ್ಥೆಗೆ ಪ್ರಶಸ್ತಿ ನೀಡಿದ್ದರೂ ವಿಶೇಷ ಪ್ರಶಸ್ತಿಯೊಂದಿಗೆ ಗೌರವ ನೀಡುವ ಕಾರ್ಯವನ್ನು ಮಾಡದೇ ಇರುವ ತಪ್ಪನ್ನು ಸರಿಪಡಿಸಿ ಗೌರವ ನೀಡುವ ಮೂಲಕ ಸರಕಾರ ತನ್ನ ಹಿರಿಮೆಯನ್ನು ಹೆಚ್ಚಿಸಿಕೊಳ್ಳುವಂತಾಗಲಿ.

ವೃತ್ತಿರಂಗಭೂಮಿ ಕರ್ನಾಟಕ ಏಕೀಕರಣಕ್ಕೆ ಅಮೂಲ್ಯ ಕೊಡುಗೆ ನೀಡಿದ್ದನ್ನು ಯಾರೂ ಮರೆಯಬಾರದು. ಇದರ ಪುನರುಜ್ಜೀವನಕ್ಕಾಗಿ ಮಾನ್ಯ ಸಿದ್ಧರಾಮಯ್ಯನವರು ಹಿಂದಿನ ಅವಧಿಯಲ್ಲಿ ಮುಖ್ಯಮಂತ್ರಿಗಳಾದಾಗ ವೃತ್ತಿ ರಂಗಭೂಮಿ ಅಧ್ಯಯನ ಹಾಗೂ ಕಲಾವಿದರಿಗೆ ತರಬೇತಿ ನೀಡಲು ವೃತ್ತಿರಂಗಭೂಮಿ ರಂಗಾಯಣ ಹುಟ್ಟುಹಾಕಿದರು. ಆದರೆ ಇಂದು ಹಾಸಿಕೊಂಡು ಹೊದ್ದು ಮಲಗುವಂತೆ ಅದನ್ನು ಜವಾಬ್ದಾರಿ ನಿರ್ವಹಿಸಿದವರು ಮಾಡಿದ್ದಾರೆ. ಸರಕಾರ ಅದರ ಬಗ್ಗೆ ಕಾಳಜಿ ವಹಿಸಿದರೆ ವೃತ್ತಿರಂಗಭೂಮಿಗೆ ಎದುರಾಗುತ್ತಿರುವ ಕಲಾವಿದರ ಕೊರತೆಯನ್ನು ನೀಗಿಸಿ ವೃತ್ತಿರಂಗಭೂಮಿಗೆ ಚೈತನ್ಯ ನೀಡಲು ಸಾಧ್ಯ.



ಕಲಾವಿದರಿಗೆ ನೀಡುವ ಎರಡು ಸಾವಿರ ಮಾಶಾಸನ ನಾಲ್ಕ ತಿಂಗಳಿಗೊಮ್ಮೆ ನೀಡುತ್ತಿರುವುದು ಸರಕಾರಕ್ಕೆ ಶೋಭೆ ತರುವಂಥದ್ದಲ್ಲ. ಕಲಾವಿದರು ಗೌರವದಿಂದ ಬದುಕುವಂತೆ ನೋಡಿಕೊಳ್ಳುವ ಜವಾಬ್ದಾರಿ ಸರಕಾರ ಮತ್ತು ಮತ್ತು ಸಮಾಜದ್ದಾಗಿದೆ ಎಂದ ಶೇಖ ಮಾಸ್ತರ ಸಂಘದ ಈ ಹತ್ತು ದಿನಗಳ ನಾಟಕದ ಯೋಜನೆಯನ್ನು ಮುಕ್ತಕಂಠದಿಂದ ಶ್ಲಾಘಿಸಿದರು.

ಬೆಳಗಾವಿ ವಿಶ್ರಾಂತ ಪ್ರಾಧ್ಯಾಪಕ ಡಾ. ರಾಮಕೃಷ್ಣ ಮರಾಠೆ 'ಸಮಕಾಲೀನ ಸಂದರ್ಭದಲ್ಲಿ ಕನ್ನಡ ವೃತ್ತಿ ರಂಗಭೂಮಿ' ಕುರಿತು ರಂಗ ಚಿಂತನೆ ಮಾಡುತ್ತಾ, ಕರ್ನಾಟಕ ರಂಗಭೂಮಿಗೆ ಕಲಾವಿದರಿಲ್ಲ, ನಾಟಕವಿಲ್ಲ, ಹಾಡು ಇಲ್ಲಿ ಇಲ್ಲ ಎಂದು ಅನ್ನುವಾಗ ಶಾಂತಕವಿಗಳ ಪ್ರಯತ್ನದಿಂದ ಮರಾಠಿ ನಾಟಕಗಳ ಮೂಲಕ ನಡೆದ ದಾಳಿಯನ್ನು ಈ ನೆಲದಲ್ಲಿ  ಶಾಂತಕವಿಗಳು ಕನ್ನಡ ನಾಟಕ ಬರೆಯುವುದರ ಮೂಲಕ, ನಾಟಕ ಆಡುವ ಮೂಲಕ ಕಂಪನಿ ನಾಟಕ ತಂಡ ಕಟ್ಟುವ ಮೂಲಕ ಪ್ರತಿದಾಳಿಯಾಗಿ ಮಾಡಿ ತೋರಿಸಿದರು. ಒಂದು ರಾತ್ರಿ ಕಳೆದರೆ ಸಾಕು ಇಹಪರದ ಅರಿವು, ಅಧ್ಯಾತ್ಮದ ಸಂಸ್ಕಾರ ಸಿಗುವುದು ಎಂದು ಶಾಂತಕವಿಗಳು ಅಂದರು. ಇದು ನಮ್ಮ ಧಾರವಾಡ ಸೀಮೆಯ ಜನರ ರಂಗ ಮಿಮಾಂಸೆಯಾಗಿದೆ. ಶಾಂತಕವಿಗಳು ಕಾಲಿಗೆ ಗೆಜ್ಜೆ ಕಟ್ಟಿಕೊಂಡು ನಾಟಕ ಕಂಪನಿಗಳಿಗೆ ನಾಂದಿ ಹಾಡಿದರು.

ಚುರಮರಿ ಶೇಷಗಿರಿಯವರು ಶಾಕುಂತಲಾ ನಾಟಕ ರಚಿಸಿದರು. ಮುದವೀಡು ಕೃಷ್ಣರಾಯರ ರಂಗಭೂಮಿಯ ಹವ್ಯಾಸಿರಂಗ ತಂಡ 'ಭರತ ಕಲೋದ್ಧಾರಕ ಸಂಗೀತ ನಾಟಕ ಸಂಘ' ಮೊಟ್ಟಮೊದಲು ಪ್ರಾರಂಭವಾಯಿತು. ಶ್ರೀರಂಗರ ಮೊದಲ ನಾಟಕ 'ಉದರ ವೈರಾಗ್ಯ' ಆಡಿಸಿದರು. ಧಾರವಾಡ ವಿಜಯ ಟಾಕೀಜ್ ಮತ್ತು 'ಕನ್ನಡ ಅಮೇಚುವರ ನಾಟಕ ಸಂಘ' ಹುಟ್ಟು ಹಾಕುತ್ತಾರೆ.

ಬೇಂದ್ರೆಯವರ 'ಸಾಯುವ ಆಟ' ಮೊದಲ ಅಸಂಗತ ನಾಟಕವನ್ನು ರಂಗಕ್ಕೆ ತಂದರು. ಇಂಥ ಹಿರಿಯರು ಕನ್ನಡ ರಂಗಭೂಮಿಯನ್ನು ಶ್ರೀಮಂತಗೊಳಿಸಿದರು. ಇಂದು ವೃತ್ತಿರಂಗಭೂಮಿಯು ಕಲಾವಿದರ ಕೊರತೆ ಅನುಭವಿಸುತ್ತಿದೆ. ಹಿಂದೆ, ಕಲಾವಿದರಿದ್ದರೂ ಪ್ರೇಕ್ಷಕರ ಕೊರತೆ ಇತ್ತು. ಇಂದು ಪ್ರೇಕ್ಷಕರಿದ್ದಾರೆ, ಕಲಾವಿದರಿಲ್ಲದ್ದನ್ನು ವೃತಿರಂಗಭೂಮಿ ಎದುರಿಸುತ್ತಿದೆ. ಹೊಸ ನಾಟಕಗಳಿಲ್ಲದೆ ಹಳೆ ನಾಟಕಗಳಲ್ಲಿಯೇ ವೃತ್ತಿರಂಗಭೂಮಿ ನಿಂತಿವೆ.



ವೃತ್ತಿರಂಗಭೂಮಿಗೆ ಅಧ್ಯಯನ ತರಬೇತಿಗಾಗಿ ರಂಗಾಯಣ ಪ್ರಾರಂಭಿಸಿದರು. ಆದರೆ ಅದು ಮಾಡಬೇಕಾದ ಕೆಲಸ ಮಾಡಲಿಲ್ಲ ಎನ್ನುವುದು ನೋವಿನ ಸಂಗತಿ ಎಂದರು.

ಸಂಘದ ಅಧ್ಯಕ್ಷ ಚಂದ್ರಕಾಂತ ಬೆಲ್ಲದ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಡಾ. ಧನವಂತ ಹಾಜವಗೋಳ ವೇದಿಕೆ ಮೇಲೆ ಉಪಸ್ಥಿತರಿದ್ದರು.

ಹಿರೇಹರಕುಣಿಯ ರಂಗಭೂಮಿ ಕಲಾವಿದ ಮಂಜುನಾಥಗೌಡ ಪಾಟೀಲ ಅವರನ್ನು ರಂಗ ಕಲಾ ಸನ್ಮಾನ ಮಾಡಿ ಗೌರವಿಸಲಾಯಿತು. ಪ್ರಾರಂಭದಲ್ಲಿ ಡಾ. ಗುರುಬಸವ ಮಹಾಮನೆ ಅವರಿಂದ ಸುಗಮ ಸಂಗೀತ ಕಾರ್ಯಕ್ರಮ ಜರುಗಿತು. ಅಲ್ಲಮಪ್ರಭು ಕಡಕೋಳ ತಬಲಾ ಸಾಥ್ ನೀಡಿದರು.

ಶಂಕರ ಹಲಗತ್ತಿ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ವಿಶ್ವೇಶ್ವರಿ ಬ. ಹಿರೇಮಠ ನಿರೂಪಿಸಿದರು. ಡಾ. ಮಹೇಶ ಹೊರಕೇರಿ ವಂದಿಸಿದರು.

ನಂತರ ಬಸವರಾಜ ಮ. ಕರಿಮಲ್ಲಣ್ಣವರ ನಿರ್ದೇಶನದ ದೊಡ್ಡಾಟ–'ಲಂಕಾದಹನ' ಹಿರೇಕುಣಿಯ ಬಸವೇಶ್ವರ ದೊಡ್ಡಾಟ ಸಂಘ ಅಮೋಘವಾಗಿ ಪ್ರದರ್ಶನ ನೀಡಿ, ಪ್ರೇಕ್ಷಕರ ಮನಗೆದ್ದರು.

* ಕರ್ನಾಟಕ ವಿದ್ಯಾವರ್ಧಕ ಸಂಘವು, ೬೮ನೇ ಕರ್ನಾಟಕ ರಾಜ್ಯೋತ್ಸವ ನಿಮಿತ್ತ 'ಕರ್ನಾಟಕ ೫೦ರ ಸಂಭ್ರಮ' ನಾಡ ಹಬ್ಬದ ತಿಂಗಳ ಕಾರ್ಯಕ್ರಮದ ಅಂಗವಾಗಿ ಆಯೋಜಿಸಿದ್ದ ಹತ್ತು ದಿನಗಳ ನಾಟಕೋತ್ಸದ ಎರಡನೇ ದಿನ ದಿನಾಂಕ: ೬–೧೧–೨೦೨೩ ರಂದು ರಂಗ ಚಿಂತನೆ, ರಂಗಕಲಾ ಸನ್ಮಾನ ಹಾಗೂ ನಾಟಕ ಪ್ರದರ್ಶನ ಜರುಗಿತು.

ಸಂಘದ ಕಾರ್ಯಾಧ್ಯಕ್ಷ ಬಸವಪ್ರಭು ಹೊಸಕೇರಿ ಅಧ್ಯಕ್ಷತೆ ವಹಿಸಿದ್ದರು. ಧಾರವಾಡ ಆಕಾಶವಾಣಿ ಕಾರ್ಯ ನಿರ್ವಾಹಕ ಡಾ. ಶಶಿಧರ ನರೇಂದ್ರ 'ಬಾನುಲಿ ನಾಟಕಗಳು' ವಿಷಯ ಕುರಿತು ರಂಗಚಿಂತನೆ ನಡೆಸಿಕೊಟ್ಟರು.

ಹುಬ್ಬಳ್ಳಿಯ ರಂಗಭೂಮಿ ಕಲಾವಿದ ಪ್ರಕಾಶ ಭೀಮರಾವ ಧುಳೆ ಅವರಿಗೆ ರಂಗ ಕಲಾ ಸನ್ಮಾನ ಮಾಡಿ ಗೌರವಿಸಲಾಯಿತು. ಪ್ರಾರಂಭದಲ್ಲಿ ನೂರಜಾನ ನದಾಫ್ ಮತ್ತು ಮೊಹಶಿನ್ ಅವರಿಂದ ಸೀತಾರ ವಾದನ ಕಾರ್ಯಕ್ರಮ ಜರುಗಿತು.

ನಂತರ ಪಿ. ಲಂಕೇಶ ರಚನೆಯ, ಪ್ರಶಾಂತ ಹಿರೇಮಠ ಸಂಗೀತದಲ್ಲಿ, ನಂದಿನಿ ಕೆ. ಆರ್. ರಂಗರೂಪ ಮತ್ತು ನಿರ್ದೇಶನದ 'ಮುಟ್ಟಿಸಿಕೊಂಡವರು' ನಾಟಕವನ್ನು ಮೈಸೂರು ರಂಗಾಯಣದ ರೆಪರ್ಟರಿ ಕಲಾವಿದರು ಅಮೋಘವಾಗಿ ಪ್ರದರ್ಶನ ನೀಡಿ, ಪ್ರೇಕ್ಷಕರ ಮನಗೆದ್ದರು.

* ಕರ್ನಾಟಕ ವಿದ್ಯಾವರ್ಧಕ ಸಂಘವು, ೬೮ನೇ ಕರ್ನಾಟಕ ರಾಜ್ಯೋತ್ಸವ ನಿಮಿತ್ತ 'ಕರ್ನಾಟಕ ೫೦ರ ಸಂಭ್ರಮ' ನಾಡ ಹಬ್ಬದ ತಿಂಗಳ ಕಾರ್ಯಕ್ರಮದ ಅಂಗವಾಗಿ ಆಯೋಜಿಸಿದ್ದ ಹತ್ತು ದಿನಗಳ ನಾಟಕೋತ್ಸದ ಮೂರನೇ ದಿನ ದಿನಾಂಕ: ೭–೧೧–೨೦೨೩ ರಂದು ರಂಗ ಚಿಂತನೆ, ರಂಗಕಲಾ ಸನ್ಮಾನ ಹಾಗೂ ನಾಟಕ ಪ್ರದರ್ಶನ ಜರುಗಿತು.

ಕ.ವಿ.ವ.ಸಂಘದ ಗೌರವ ಉಪಾಧ್ಯಕ್ಷ ಡಾ. ಆನಂದ ಪಾಂಡುರಂಗಿ ಅಧ್ಯಕ್ಷತೆ ವಹಿಸಿದ್ದರು. ಚಿಕ್ಕೋಡಿಯ ವಿಶ್ರಾಂತ ಪ್ರಾಧ್ಯಾಪಕ ಡಾ. ಸುಖದೇವ ಪಾನಬುಡೆ 'ಕನ್ನಡ ರಂಗಭೂಮಿಗೆ ಚಂದ್ರಶೇಖರ ಕಂಬಾರರ ಕೊಡುಗೆ' ವಿಷಯ ಕುರಿತು ರಂಗಚಿಂತನೆ ನಡೆಸಿಕೊಟ್ಟರು.

ಹುಬ್ಬಳ್ಳಿಯ ರಂಗಭೂಮಿ ಕಲಾವಿದೆ ಶ್ರೀಮತಿ ಮೀನಾಕ್ಷಿ ಬೈಲಹೊಂಗಲ ಅವರಿಗೆ ರಂಗ ಕಲಾ ಸನ್ಮಾನ ಮಾಡಿ ಗೌರವಿಸಲಾಯಿತು. ಪ್ರಾರಂಭದಲ್ಲಿ ಡಾ. ವೀಣಾ ಬಡಿಗೇರ ಅವರಿಂದ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ ಜರುಗಿತು.

ನಂತರ ಡಾ. ಎಚ್.ಎಸ್. ಶಿವಪ್ರಕಾಶ್ ರಚನೆಯ, ಬಿ.ಆರ್. ವೆಂಕಟರಮಣ ಐತಾಳ ನಿರ್ದೇಶನದ 'ಕಸಂದ್ರ ಮತ್ತು ಸತಿ' ನಾಟಕವನ್ನು ಮೈಸೂರು ರಂಗಾಯಣದ ರೆಪರ್ಟರಿ ಕಲಾವಿದರು ಅಮೋಘವಾಗಿ ಪ್ರದರ್ಶನ ನೀಡಿ, ಪ್ರೇಕ್ಷಕರ ಮನಗೆದ್ದರು.



*   ಕರ್ನಾಟಕ ವಿದ್ಯಾವರ್ಧಕ ಸಂಘವು, ೬೮ನೇ ಕರ್ನಾಟಕ ರಾಜ್ಯೋತ್ಸವ ನಿಮಿತ್ತ 'ಕರ್ನಾಟಕ ೫೦ರ ಸಂಭ್ರಮ' ನಾಡ ಹಬ್ಬದ ತಿಂಗಳ ಕಾರ್ಯಕ್ರಮದ ಅಂಗವಾಗಿ ಆಯೋಜಿಸಿದ್ದ ಹತ್ತು ದಿನಗಳ ನಾಟಕೋತ್ಸದ ನಾಲ್ಕನೇ ದಿನ ದಿನಾಂಕ: ೮–೧೧–೨೦೨೩ ರಂದು ರಂಗ ಚಿಂತನೆ, ರಂಗಕಲಾ ಸನ್ಮಾನ ಹಾಗೂ ನಾಟಕ ಪ್ರದರ್ಶನ ಜರುಗಿತು.

ಸಮಾಜ ಸೇವಕ ಧಾರವಾಡದ ರಾಮಚಂದ್ರ ಧೋಂಗಡೆ ಅಧ್ಯಕ್ಷತೆ ವಹಿಸಿದ್ದರು. ಬೆಳಗಾವಿಯ ವಿಶ್ರಾಂತ ಪ್ರಾಚಾರ್ಯ ಡಾ. ಎಚ್.ಆಯ್. ತಿಮ್ಮಾಪೂರ 'ಉತ್ತರ ಕರ್ನಾಟಕದ ಸಣ್ಣಾಟಗಳು' ವಿಷಯ ಕುರಿತು ರಂಗಚಿಂತನೆ ನಡೆಸಿಕೊಟ್ಟರು.

ಹುಬ್ಬಳ್ಳಿಯ ವೃತ್ತಿಭೂಮಿ ಕಲಾವಿದೆ ನಾಗೇಶ ಮೈಸೂರು ಅವರಿಗೆ ರಂಗ ಕಲಾ ಸನ್ಮಾನ ಮಾಡಿ ಗೌರವಿಸಲಾಯಿತು. ಪ್ರಾರಂಭದಲ್ಲಿ ಶ್ರೀಮತಿ ಸುಪ್ರಿಯಾ ಭಟ್ ಅವರಿಂದ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ ಜರುಗಿತು.

ನಂತರ ಎಚ್. ಎನ್. ಹೂಗಾರ ರಚನೆಯ, ಮಹಾದೇವ ಹೊಸೂರ ನಿರ್ದೇಶನದ 'ಕೊರವಂಜಿ' ನಾಟಕವನ್ನು ಗದುಗಿನ ಶ್ರೀ ಕುಮಾರೇಶ್ವರ ಕೃಪಾಪೋಷಿತ ಪಂಚಾಕ್ಷರಿ ಗವಾಯಿಗಳ ನಾಟ್ಯ ಸಂಘದ ಕಲಾವಿದರು ಅಮೋಘವಾಗಿ ಪ್ರದರ್ಶನ ನೀಡಿ, ಪ್ರೇಕ್ಷಕರ ಮನಗೆದ್ದರು.

*   ಹಲವಾರು ಪ್ರಭೇದಗಳನ್ನು ಹೊಂದಿರುವ ಜನಪದ ಸಾಹಿತ್ಯ ಮಹಿಷಿಕ, ರಟ್ಟಿಕ, ಭಾಗಮಂಡಲಗಳೆಂದು ಗುರುತಿಸಲಾಗಿದ್ದು, ಇದರಲ್ಲಿ ಬೆದಂಡೆ (ಕಂದವೃತ್ತ) ಚೆತ್ತಾಣ (ಹೆಣ್ಣುಮಕ್ಕಳ ಹಾಡು) ಗಳೆಂಬ ಪ್ರಭೇದಗಳಲ್ಲಿ ಅನೇಕ ಹಾಡುಗಳನ್ನು ಜನಪದರು ಕಟ್ಟಿಕೊಟ್ಟಿದ್ದಾರೆ ಎಂದು ಗದಗದ ವಿಶ್ರಾಂತ ಪ್ರಾಧ್ಯಾಪಕ ಡಾ. ಸಿದ್ಧಣ್ಣ ಜಕಬಾಳ ಹೇಳಿದರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು, ೬೮ನೇ ಕರ್ನಾಟಕ ರಾಜ್ಯೋತ್ಸವ ನಿಮಿತ್ತ 'ಕರ್ನಾಟಕ ೫೦ರ ಸಂಭ್ರಮ' ನಾಡ ಹಬ್ಬದ ತಿಂಗಳ ಕಾರ್ಯಕ್ರಮದ ಅಂಗವಾಗಿ ಆಯೋಜಿಸಿದ್ದ ಹತ್ತು ದಿನಗಳ ನಾಟಕೋತ್ಸದ ಐದನೇ ದಿನ ದಿನಾಂಕ: ೯–೧೧–೨೦೨೩ ರಂದು 'ಜನಪದ ರಂಗಭೂಮಿ' ವಿಷಯ ಕುರಿತು ರಂಗ ಚಿಂತನೆ ಮಾಡಿ ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ಅವರು, ರಂಗೇಳಬೇಕು ಎಂಬ ಭಾವದಲ್ಲಿಯೇ ಜನಪದ ರಂಗಭೂಮಿಯ ಅಸ್ತಿತ್ವ ಅಡಗಿದೆ. ನಮ್ಮ ಕನ್ನಡ ಭಾಷೆಯಲ್ಲಿಯೇ ನಮ್ಮತನವನ್ನು ನಾವು ಹುಡುಕಿಕೊಳ್ಳುವುದು ಮುಖ್ಯವಾಗಿದೆ.

ಹೊಸತನವನ್ನು ಇಂದಿನ ರಂಗಭೂಮಿಯಲ್ಲಿ ತರುವುದು ಅಗತ್ಯವಿದೆ ಎಂದು ಹೇಳಿ ದೊಡ್ಡಾಟದ ಆಲಾಪಗಳನ್ನು ಪ್ರಸ್ತುತಪಡಿಸಿದರು.

ಅಧ್ಯಕ್ಷತೆ ವಹಿಸಿ, ಕ.ವಿ.ವ. ಸಂಘದ ಗೌರವ ಉಪಾಧ್ಯಕ್ಷ ಪಂ. ಎಂ. ವೆಂಕಟೇಶಕುಮಾರ ಮಾತನಾಡಿ, ಜಾನಪದ ಧಾಟಿ ಹೇಗಿರಬೇಕೋ ಹಾಗೆ ಇದ್ದಾಗಲೇ ಅದಕ್ಕೊಂದು ಗೌರವ ಬರುತ್ತದೆ. ಧಾರವಾಡ ಮತ್ತು ಮೈಸೂರು ಈ ಪರಂಪರೆಯನ್ನು ಉಳಿಸಿಕೊಂಡು ಬಂದಿವೆ. ಯಾವುದೇ ಕಲಾವಿದನಿಗೆ ಧ್ವನಿ ಬೇಕು. ಧ್ವನಿಗೆ ತಕ್ಕ ಭಾವ ಬೇಕು. ಜೊತೆಗೆ ಸಾಹಿತ್ಯಿಕ ಜ್ಞಾನವಿರಬೇಕು ಅಂದಾಗ ಅದಕ್ಕೆ ಬೆಲೆ, ಗೌರವ ಇರುತ್ತದೆ. ಹಿಂದಿನ ಕಾಲದ ನಾಟಕ ಮತ್ತು ಸಿನೆಮಾಗಳಲ್ಲಿ ಧಮನಭೋದನೆ, ಸಂಸ್ಕಾರ ಸಾರುವ ಅಂಶಗಳಿರುತ್ತಿದ್ದವು. ಇವತ್ತು ಕಾಲಮಾನ ಸಂಪೂರ್ಣ ಬದಲಾಗಿದೆ. ಇವತ್ತಿನ ಮಕ್ಕಳಿಗೆ ಸಂಸ್ಕಾರದ ಅಗತ್ಯವಿದೆ ಎಂದರು.

ಮಲ್ಲಮ್ಮನ ಬೆಳವಡಿಯ ರಂಗಭೂಮಿ ಕಲಾವಿದ ಪ್ರಕಾಶ ಹುಂಬಿ ಅವರನ್ನು ರಂಗ ಕಲಾ ಸನ್ಮಾನ ಮಾಡಿ ಗೌರವಿಸಲಾಯಿತು. ಪ್ರಾರಂಭದಲ್ಲಿ ಶ್ರೀಮತಿ ಸವಿತಾ ಕುಲಕರ್ಣಿ ಸುಗಮ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು. ಇವರಿಗೆ ತಬಲಾ ಸಾಥ್ ಡಾ. ಅನಿಲ ಮೇತ್ರಿ ಹಾಗೂ ಡಾ. ಪರಶುರಾಮ ಕಟ್ಟಿಸಂಗಾವಿ ಹಾರ್ಮೋನಿಯಂ ಸಾಥ್ ನೀಡಿದರು. ವೇದಿಕೆ ಮೇಲೆ ಶಂಕರ ಕುಂಬಿ ಉಪಸ್ಥಿತರಿದ್ದರು.

ಡಾ. ಧನವಂತ ಹಾಜವಗೋಳ ಸ್ವಾಗತಿಸಿದರು. ಡಾ. ಜಿನದತ್ತ ಹಡಗಲಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಡಾ. ಮಹೇಶ ಹೊರಕೇರಿ ಕಾರ್ಯಕ್ರಮ ನಿರೂಪಿಸಿದರು. ವಿಶ್ವೇಶ್ವರಿ ಬ. ಹಿರೇಮಠ ವಂದಿಸಿದರು.

ಹೆಲನ್ ಮೈಸೂರು ನಿರ್ದೇಶನದ 'ಎಲ್ಲರಂತಲ್ಲ ನಾ ಅವ್ವ' ನಾಟಕವನ್ನು ಕರ್ನಾಟಕ ನಾಟಕ ಜಾನಪದ ಕಲಾವಿದರ ಅಭಿವೃದ್ಧಿ ಸಂಘ, ಹುಬ್ಬಳ್ಳಿ ಸೊಗಸಾಗಿ ಪ್ರಸ್ತುತಪಡಿಸಿದರು.

* ಕರ್ನಾಟಕ ವಿದ್ಯಾವರ್ಧಕ ಸಂಘವು, ೬೮ನೇ ಕರ್ನಾಟಕ ರಾಜ್ಯೋತ್ಸವ ನಿಮಿತ್ತ 'ಕರ್ನಾಟಕ ೫೦ರ ಸಂಭ್ರಮ' ನಾಡ ಹಬ್ಬದ ತಿಂಗಳ ಕಾರ್ಯಕ್ರಮದ ಅಂಗವಾಗಿ ಆಯೋಜಿಸಿದ್ದ ಹತ್ತು ದಿನಗಳ ನಾಟಕೋತ್ಸದ ಆರನೇ ದಿನ ದಿನಾಂಕ: ೧೦-೧೧-೨೦೨೩ ರಂದು ರಂಗ ಚಿಂತನೆ, ರಂಗಕಲಾ ಸನ್ಮಾನ ಹಾಗೂ ನಾಟಕ ಪ್ರದರ್ಶನ ಜರುಗಿತು.



ಮಕ್ಕಳ ಸಾಹಿತಿ ನಿಂಗಣ್ಣ ಕುಂಟಿ (ಇಟಗಿ) ಅಧ್ಯಕ್ಷತೆ ವಹಿಸಿದ್ದರು. ಗದುಗಿನ ವಿಶ್ರಾಂತ ಪ್ರಾಧ್ಯಾಪಕ ಡಾ. ಶಕುಂತಲಾ ಸಿಂಧೂರ 'ಹವ್ಯಾಸಿ ರಂಗಭೂಮಿ' ವಿಷಯ ಕುರಿತು ರಂಗಚಿಂತನೆ ನಡೆಸಿಕೊಟ್ಟರು.

ಧಾರವಾಡದ ರಂಗಭೂಮಿ ಕಲಾವಿದ ಜಯವಂತ ಗಾಮನಗಟ್ಟಿ ಅವರಿಗೆ ರಂಗ ಕಲಾ ಸನ್ಮಾನ ಮಾಡಿ ಗೌರವಿಸಲಾಯಿತು. ಪ್ರಾರಂಭದಲ್ಲಿ ಶ್ರೀಮತಿ ಅನ್ನಪೂರ್ಣಮ್ಮ ಇಂಗಳಗಿ ಅವರಿಂದ ಜಾನಪದ, ಸುಗಮ ಸಂಗೀತ ಕಾರ್ಯಕ್ರಮ ಜರುಗಿತು.

ನಂತರ ಶೃತಿ ಹುರಳಿಕೊಪ್ಪ ನಿರ್ದೇಶನದ 'ಅನುಭವ ಮಂಟಪ' ಹಾಗೂ ಡಾ. ಲಿಂಗರಾಜ ರಾಮಾಪೂರ ರಚನೆಯ, ಸಿಕಂದರ ದಂಡಿನ ನಿರ್ದೇಶನದ 'ನೀರ್ ಬಾರ್' ನಾಟಕವನ್ನು ರಂಗ ಸಾಮ್ರಾಟ ಅಭಿನಯ ಶಾಲೆ, ಧಾರವಾಡ ಕಲಾವಿದರು ಸೊಗಸಾಗಿ ಪ್ರಸ್ತುತಪಡಿಸಿ ಪ್ರೇಕ್ಷಕರ ಮನಗೆದ್ದರು.



* ಎಪ್ಪತ್ತರ ದಶಕದಲ್ಲಿ ಜನ್ಮತಾಳಿದ ಬೀದಿ ನಾಟಕಗಳು ದಿನನಿತ್ಯ ಸಮಾಜ ವ್ಯವಸ್ಥೆಯಲ್ಲಿ ನಡೆಯುವ ಕೋಮುಗಲಭೆ, ವರದಕ್ಷಿಣೆಯ ಸಾವು, ಅನಕ್ಷರಸ್ಥರ ಶೋಷಣೆ ಮೊದಲಾದ ಸಾಮಾಜಿಕ ಕಳಕಳಿಯನ್ನು ಹೊತ್ತು ಚಳುವಳಿಯ ರೂಪಗಳಾಗಿ ಹುಟ್ಟಿಕೊಂಡಿರುವಂತವು ಎಂದು ಬಳ್ಳಾರಿ ವಿಜಯನಗರ ಕೃಷ್ಣದೇವರಾಯ ವಿಶ್ವವಿದ್ಯಾಲಯದ ನಾಟಕ ವಿಭಾಗದ ಸಹಾಯಕ ಉಪನ್ಯಾಸಕಿ ಡಾ. ಸಹನಾ ಪಿಂಜಾರ ಹೇಳಿದರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು, ೬೮ನೇ ಕರ್ನಾಟಕ ರಾಜ್ಯೋತ್ಸವ ನಿಮಿತ್ತ 'ಕರ್ನಾಟಕ ೫೦ರ ಸಂಭ್ರಮ' ನಾಡ ಹಬ್ಬದ ತಿಂಗಳ ಕಾರ್ಯಕ್ರಮದ ಅಂಗವಾಗಿ ಆಯೋಜಿಸಿದ್ದ ಹತ್ತು ದಿನಗಳ ನಾಟಕೋತ್ಸದ ಏಳನೇ ದಿನ ದಿನಾಂಕ: ೧೧-೧೧-೨೦೨೩ ರಂದು 'ಬೀದಿ ನಾಟಕಗಳ ಅಳಿವು-ಉಳಿವು' ವಿಷಯ ಕುರಿತು ರಂಗ ಚಿಂತನೆ ಮಾಡಿ ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ಅವರು, ಬದ್ಧತೆಯಿಂದ ಹುಟ್ಟಿಕೊಂಡ ನಾಟಕಗಳು ಬೀದಿ ನಾಟಕಗಳು. ಅವತ್ತು ಸಾಮಾಜಿಕ ಕಳಕಳಿ ಬೀದಿ ನಾಟಕಗಳಲ್ಲಿ ಇರುತ್ತಿತ್ತು. ಇವತ್ತು ಹಣಕ್ಕಾಗಿ ಬೀದಿ ನಾಟಕಗಳು

ಪ್ರದರ್ಶನಗೊಳ್ಳುತ್ತಿರುವುದು ಖೇದದ ಸಂಗತಿಯಾಗಿದೆ. ಸಾಮಾಜಿಕ ಸಮಸ್ಯೆಯನ್ನು ಕುರಿತು ಮಾತು, ಮಾತುಗಳಲ್ಲಿಯೇ ಹುಟ್ಟಿಕೊಳ್ಳುತ್ತಿದ್ದ ಬೀದಿ ನಾಟಕಗಳಿಗೆ ಸಿದ್ದವಾದ ಗ್ರಾಂಥಿಕ ಸಾಹಿತ್ಯ (ಸ್ಕ್ರಿಪ್ಟ್‌ಗಳು) ಇರುವುದಿಲ್ಲ. ಆಡು ಮಾತುಗಳಲ್ಲಿಯೇ ೧೫-೨೦ ನಿಮಿಷಗಳಲ್ಲಿ ನಾಟಕಗಳು ಪ್ರದರ್ಶನಗೊಂಡು ಸಂಬಂಧಪಟ್ಟ ಹಾಡುಗಳ ಮುಖಾಂತರವಾಗಿ ಜನರಲ್ಲಿ ಜಾಗೃತಿಯನ್ನು ಮೂಡಿಸುವ ಸಂದರ್ಭ, ಸನ್ನಿವೇಶಗಳು ಇರುತ್ತವೆ. ಇಂತಹ ನಾಟಕಗಳಿಗೆ ವೇದಿಕೆಗಳನ್ನು ಶಾಲಾ, ಕಾಲೇಜುಗಳಲ್ಲಿ ಕಲ್ಪಿಸಿ ಪ್ರಚಾರ ಮಾಡಬೇಕಾದ ಅಗತ್ಯವಿದೆ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಕ.ವಿ.ವ.ಸಂಘದ ಪ್ರಧಾನ ಕಾರ್ಯದರ್ಶಿ ಶಂಕರ ಹಲಗತ್ತಿ, ಬೀದಿ ನಾಟಕಗಳು ಪ್ರಭುತ್ವ ಮತ್ತು ರಾಜಕಾರಣ ವ್ಯವಸ್ಥೆ ವಿರುದ್ಧ ಹುಟ್ಟಿಕೊಂಡು ಸಾಮಾಜಿಕ ಕಳಕಳಿಯೊಂದಿಗೆ ಜನರ ಮನಸಿನಲ್ಲಿ ಬದಲಾವಣೆಯ ಗಾಳಿಯನ್ನು ಬೀಸುವ ಪ್ರಯತ್ನ ಮಾಡುತ್ತಾ ಬಂದಿವೆ. ಮುಂಬರುವ ದಿನಗಳಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘದಿಂದ ಬೀದಿ ನಾಟಕಗಳ ಪ್ರದರ್ಶನಕ್ಕೆ ಅವಕಾಶವನ್ನು ಕಲ್ಪಿಸಲಾಗುವುದು ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು.

ಕಲಘಟಗಿಯ ರಂಗಭೂಮಿ ಕಲಾವಿದ ಹನುಮಂತಪ್ಪ ಸುಣಗದ ಅವರನ್ನು ರಂಗ ಕಲಾ ಸನ್ಮಾನ ಮಾಡಿ ಗೌರವಿಸಲಾಯಿತು. ಪ್ರಾರಂಭದಲ್ಲಿ ಸುನಿಲ ಕಾಂಬಳೆ ಹಿಂದೂಸ್ತಾನಿ ಮತ್ತು ವಚನ ಗಾಯನ ಕಾರ್ಯಕ್ರಮ ನಡೆಸಿಕೊಟ್ಟರು. ಇವರಿಗೆ ಅಲ್ಲಮಪ್ರಭು ಕಡಕೋಳ ಮತ್ತು ಎಸ್. ಈ. ಚಿಕ್ಕನಗೌಡರ ತಬಲಾ ಸಾಥ್ ನೀಡಿದರು.

ಶಂಕರ ಕುಂಬಿ ಸ್ವಾಗತಿಸಿದರು. ವಿಶ್ವೇಶ್ವರಿ ಹಿರೇಮಠ ಪ್ರಾಸ್ತಾವಿಕವಾಗಿ ಮಾತನಾಡಿದರು. ಡಾ. ಜಿನದತ್ತ ಹಡಗಲಿ ನಿರೂಪಿಸಿದರು. ವೀರಣ್ಣ ಒಡ್ಡೀನ ವಂದಿಸಿದರು.

ನಂತರ ಕೆ. ಪಿ. ಲಕ್ಷ್ಮಣ ನಿರ್ದೇಶನದ 'ಡಕ್ಲಕಥಾ ದೇವಿಕಾವ್ಯ' ನಾಟಕವನ್ನು ಜಂಗಮ ಕಲೆಕ್ಟಿವ್, ಬೆಂಗಳೂರು ತಂಡದವರು ಸೊಗಸಾಗಿ ಪ್ರದರ್ಶಿಸಿ, ಸಭಿಕರ ಮನಗೆದ್ದರು.

* ಕರ್ನಾಟಕ ವಿದ್ಯಾವರ್ಧಕ ಸಂಘವು, ೬೮ನೇ ಕರ್ನಾಟಕ ರಾಜ್ಯೋತ್ಸವ ನಿಮಿತ್ತ 'ಕರ್ನಾಟಕ ೫೦ರ ಸಂಭ್ರಮ' ನಾಡ ಹಬ್ಬದ ತಿಂಗಳ ಕಾರ್ಯಕ್ರಮದ ಅಂಗವಾಗಿ ಆಯೋಜಿಸಿದ್ದ ಹತ್ತು ದಿನಗಳ ನಾಟಕೋತ್ಸದ ಎಂಟನೇ ದಿನ ದಿನಾಂಕ: ೧೨-೧೧-೨೦೨೩ ರಂದು ರಂಗ ಚಿಂತನೆ, ರಂಗಕಲಾ ಸನ್ಮಾನ ಹಾಗೂ ನಾಟಕ ಪ್ರದರ್ಶನ ಜರುಗಿತು.

ರಾಯಚೂರು ಆಕಾಶವಾಣಿಯ ವಿಶ್ರಾಂತ ಕಾರ್ಯಕ್ರಮ ಮುಖ್ಯಸ್ಥರಾದ ಡಾ. ಬಿ. ಎಂ. ಶರಭೇಂದ್ರಸ್ವಾಮಿ 'ಗಿರೀಶ ಕಾರ್ನಾಡರ ನಾಟಕಗಳಲ್ಲಿ ಪರಂಪರೆ ಮತ್ತು ಆಧುನಿಕತೆ' ವಿಷಯ ಕುರಿತು ರಂಗಚಿಂತನೆ ನಡೆಸಿಕೊಟ್ಟರು.

ಧಾರವಾಡ ಆಕಾಶವಾಣಿಯ ವಿಶ್ರಾಂತ ನಿಲಯ ನಿರ್ದೇಶಕ ಸಿ. ಯು. ಬೆಳ್ಳಕ್ಕಿ ಅಧ್ಯಕ್ಷತೆ ವಹಿಸಿದ್ದರು. ಅತಿಥಿಗಳಾಗಿ ಎಸ್.ಡಿ.ಎಂ. ವೈದ್ಯಕೀಯ ವಿಶ್ವವಿದ್ಯಾಲಯ, ಸತ್ತೂರ ಧಾರವಾಡದ ಕುಲಪತಿಗಳಾದ ಡಾ. ನಿರಂಜನಕುಮಾರ ಹಾಗೂ ಧಾರವಾಡ ಜನತಾ ಶಿಕ್ಷಣ ಸಮಿತಿಯ ಕಾರ್ಯದರ್ಶಿಗಳಾದ ಡಾ. ಅಜಿತ ಪ್ರಸಾದ ಆಗಮಿಸಿದ್ದರು.

ರಂಗಭೂಮಿ ಕಲಾವಿದ ಧಾರವಾಡ ಪ್ರಕಾಶ ಮಾಳಗಿ ಅವರಿಗೆ ರಂಗ ಕಲಾ ಸನ್ಮಾನ ಮಾಡಿ ಗೌರವಿಸಲಾಯಿತು. ಪ್ರಾರಂಭದಲ್ಲಿ ಆನಂದ ಪಾಟೀಲ ಅವರಿಂದ ಹಿಂದೂಸ್ತಾನಿ ಮತ್ತು ಸುಗಮ ಸಂಗೀತ ಕಾರ್ಯಕ್ರಮ ಜರುಗಿತು.

ನಂತರ ನಾಡೋಜ ಡಾ. ಹಂಪನಾ ರಚನೆಯ, ಡಾ. ನಾ. ದಾಮೋದರ ಶೆಟ್ಟಿ ರಂಗರೂಪದ, ಡಾ. ಜೀವನರಾಮ ಸುಳ್ಯ ವಿನ್ಯಾಸ/ನಿರ್ದೇಶನದ 'ಚಾರುವಸಂತ' ನಾಟಕವನ್ನು ಮೂಡಬಿದಿರೆ ಆಳ್ವಾಸ್ ರಂಗ ಅಧ್ಯಯನ ಸಂಸ್ಥೆಯ ಕಲಾವಿದರು ಪ್ರದರ್ಶನ ನೀಡಿ, ತಮ್ಮ ಮನೋಜ್ಞ ಅಭಿನಯದಿಂದ ಪ್ರೇಕ್ಷಕರ ಮನಗೆದ್ದರು.

* ಕನ್ನಡ ರಂಗಭೂಮಿ ಜಾನಪದ, ವೃತ್ತಿ ಹಾಗೂ ವಿಲಾಸಿ ರಂಗಭೂಮಿಗಳಾಗಿ ಟಿಸಿಲೊಡೆದು ಬೆಳೆದು ಬಂದಿದ್ದನ್ನು ಕಾಣುತ್ತೇವೆಂದು ಹಿರಿಯ ರಂಗಕರ್ಮಿ ಬಸವರಾಜ ಬೆಂಗೇರಿ ಹೇಳಿದರು. ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು ೬೮ನೇ ಕರ್ನಾಟಕ ರಾಜ್ಯೋತ್ಸವ ನಿಮಿತ್ತ, 'ಕರ್ನಾಟಕ ೫೦ ರ ಸಂಭ್ರಮ' ನಾಡಹಬ್ಬ

ತಿಂಗಳ ಕಾರ್ಯಕ್ರಮದ ಅಂಗವಾಗಿ ಆಯೋಜಿಸಿದ್ದ ಹತ್ತು ದಿನಗಳ ನಾಟಕೋತ್ಸವದ ಒಂಭತ್ತನೇ ದಿನ ದಿನಾಂಕ: ೧೬-೧೧-೨೦೨೩ ರಂದು 'ಕನ್ನಡ ರಂಗಭೂಮಿ ಕಲಾವಿದರು' ವಿಷಯದ ಮೇಲೆ ರಂಗ ಚಿಂತನೆ ಮಾಡಿ ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ಅವರು, ಗ್ರಾಮೀಣ ಪ್ರದೇಶದಲ್ಲಿ ವರ್ಷಕ್ಕೊಂದು ಸಾರಿ ಊರ ಗ್ರಾಮದೇವತೆಯ ಜಾತ್ರೆಯ ಸಂದರ್ಭದಲ್ಲಿ ಊರಿನ ಕಲಾವಿದರೆಲ್ಲ ಸೇರಿ ನಾಟಕ ಆಡುತ್ತಿದ್ದರು. ಇದು ಬಹಳಷ್ಟು ಗ್ರಾಮಗಳಲ್ಲಿ ನಡೆದುಬಂದ ಸಂಪ್ರದಾಯ. ಇದನ್ನೇ ಜಾನಪದ ರಂಗಭೂಮಿ ಎಂದು ಕರೆದರೆ, ರಂಗಭೂಮಿಯನ್ನೇ ವೃತ್ತಿಯನ್ನಾಗಿ ಮಾಡಿಕೊಂಡು ಜೀವನ ನಿರ್ವಹಣೆಯನ್ನು ಮಾಡುತ್ತಾ ಬಂದ ಅನೇಕ ಕಲಾವಿದರು ಕಂಪನಿಗಳನ್ನು ಕಟ್ಟಿಕೊಂಡು ನಾಟಕಗಳನ್ನು ಪ್ರದರ್ಶನ ಮಾಡುತ್ತಾ ಬಂದಿರುವುದನ್ನು ಕಾಣುತ್ತೇವೆ. ಅನೇಕ ಜನ ಸಾಹಿತಿಗಳು ಈ ರಂಗಭೂಮಿಗಾಗಿ ಸಾಹಿತ್ಯವನ್ನು ರಚಿಸಿಕೊಟ್ಟಿರುವುದು ಗಮನಾರ್ಹ. ಶಾಂತಕವಿಗಳು 'ಉಷಾಹರಣ' ನಾಟಕವನ್ನು ರಚಿಸಿದರೆ ಅನೇಕ ಜನ ಪಾತ್ರಧಾರಿಗಳು ಪ್ರಮುಖವಾಗಿ ಬಸವರಾಜ ಮನ್ಸೂರ, ನಾಟ್ಯಭೂಷಣ ಡಾ. ಏಣಗಿ ಬಾಳಪ್ಪನವರು, ಯಳಿವಾಳ ಸಿದ್ದಯ್ಯಸ್ವಾಮಿಗಳು, ಹಂದಿಗನೂರ ಸಿದ್ದರಾಮಯ್ಯ, ಸವಾಯಿ ಗಂಧರ್ವರು, ನಟರತ್ನ ಚಿಂದೋಡಿ ವೀರಪ್ಪ, ಅಬ್ದುಲ್‌ಸಾಬ್ ಅಣ್ಣಿಗೇರಿ, ಎಂ.ಎಸ್. ಕೊಟ್ರೇಶ್, ಪಂಚಾಕ್ಷರಿ ಮತ್ತಿಗಟ್ಟಿ, ಅರ್ಜುನಸಾ ನಾಕೋಡ, ಗುಬ್ಬಿ ವೀರಣ್ಣ ಹಾಗೂ ಮಾಸ್ಟರ್ ಹಿರಣ್ಣಯ್ಯ ಇವರೆಲ್ಲ ನಾಟಕದಲ್ಲಿ ಬರುವ ಪಾತ್ರಗಳಿಗೆ ಜೀವ ತುಂಬಿ ನಾಟಕಗಳು ಪ್ರೇಕ್ಷಕರ ಮನದಲ್ಲಿ ಉಳಿಯುವಂತೆ ಮಾಡಿದ ಮಹಾನ್ ಕಲಾವಿದರಾಗಿದ್ದಾರೆ.

ಹವ್ಯಾಸಿ ರಂಗಭೂಮಿಗೆ ಬಂದಾಗ ಕುವೆಂಪು, ಬೇಂದ್ರೆ, ಕಾರ್ನಾಡ, ಕಾರಂತ, ಸಿದ್ಧಲಿಂಗ ಪಟ್ಟಣಶೆಟ್ಟಿ, ಚಂಪಾ, ಲಂಕೇಶ ಮೊದಲಾದ ಮಹನೀಯರು ಹವ್ಯಾಸಿ ರಂಗಭೂಮಿಗಾಗಿ ರಂಗಸಾಹಿತ್ಯವನ್ನು ಒದಗಿಸಿದರು. ಜೊತೆಗೆ ಕರ್ನಾಟಕ ಶೆಕ್ಸಪಿಯರ್, ಕಂದಗಲ್ಲ ಹನುಮಂತರಾಯರು, ಹಾವೇರಿ ಬಸವಲಿಂಗ ಶಾಸ್ತ್ರಿಗಳು, ನಲವಡಿ ಶ್ರೀಕಂಠಶಾಸ್ತ್ರಿಗಳು, ಪುಟ್ಟರಾಜ ಗವಾಯಿಗಳು, ಪಿ. ಬಿ. ಧುತ್ತರಗಿ, ಎಚ್. ಎನ್. ಹೂಗಾರ, ಎನ್. ಬಸವರಾಜ ಮುಂತಾದವರು ಕೂಡ ವೃತ್ತಿ ರಂಗಭೂಮಿಯನ್ನು ಆರಾಧಿಸಿ ಬೆಳೆಸಿದ ಕಲಾವಿದರಾಗಿದ್ದರು ಎಂದ ಅವರು ಮೊನಚಾದ ವಿಡಂಬನೆಯೊಂದಿಗೆ ಸಾಮಾಜಿಕ ಕಳಕಳಿಯನ್ನು ಹೊಂದಿದ ನಾಟಕಗಳು ಪ್ರೇಕ್ಷಕರ ಮನವನ್ನು ಗೆಲ್ಲುವಲ್ಲಿ ಯಶಸ್ಸನ್ನು ಕಾಣುತ್ತಿದ್ದವು ಎಂದು ಬಸವರಾಜ ಬೆಂಗೇರಿ ಅಭಿಪ್ರಾಯ ವ್ಯಕ್ತಪಡಿಸಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಶ್ರೀನಿವಾಸ ವಾಡಪ್ಪಿ, ವೃತ್ತಿರಂಗಭೂಮಿಯ ಜೊತೆಯಲ್ಲಿ ಜನ್ಮತಾಳಿದ ಹವ್ಯಾಸಿ ರಂಗಭೂಮಿ ಮರಾಠಿಗರ ಪ್ರಭಾವದಿಂದ ಬೆಳಕು ಕಂಡದ್ದಲ್ಲ, ನಮ್ಮಲ್ಲಿಯ ಸಣ್ಣಾಟ, ದೊಡ್ಡಾಟ, ಬಯಲಾಟ, ಯಕ್ಷಗಾನ್ ಇವುಗಳನ್ನು ಬಳಸಿಕೊಂಡು, ಬೆಳೆಸಿಕೊಂಡು ಮರಾಠಿ ರಂಗಭೂಮಿ ಬೆಳೆದು ಕರ್ನಾಟಕಕ್ಕೆ ಬಂದಿತು. ಶ್ರೀರಂಗರು, ಕಾರಂತರು, ಟಿ.ಪಿ. ಕೈಲಾಸಂ ಅವರು ಹವ್ಯಾಸಿ ರಂಗಭೂಮಿಯ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸಿದರು ಎಂದರು.

ಬೈಲಹೊಂಗಲದ ರಂಗಭೂಮಿ ಕಲಾವಿದೆ ಮಲ್ಲವ್ವ ಮ್ಯಾಗೇರಿ ಅವರನ್ನು ರಂಗ ಕಲಾ ಸನ್ಮಾನ ಮಾಡಿ ಗೌರವಿಸಲಾಯಿತು. ಪ್ರಾರಂಭದಲ್ಲಿ ಹನುಮಂತ ಪಾದಗಟ್ಟಿ ಅವರಿಂದ ತತ್ವಪದ ಮತ್ತು ನಾಡು-ನುಡಿ ಗೀತೆಗಳ ಕಾರ್ಯಕ್ರಮ ನಡೆಸಿಕೊಟ್ಟರು. ಇವರಿಗೆ ಅನಿಲ ಮೇತ್ರಿ ತಬಲಾ ಸಾಥ್ ನೀಡಿದರು. ವಿಶ್ವೇಶ್ವರಿ ಹಿರೇಮಠ ಸ್ವಾಗತಿಸಿದರು. ಡಾ. ಜಿನದತ್ತ ಹಡಗಲಿ ನಿರೂಪಿಸಿದರು. ಡಾ. ಧನವಂತ ಹಾಜವಗೋಳ ವಂದಿಸಿದರು.

ಕೆ. ಪಿ. ಪೂರ್ಣಚಂದ್ರ ತೇಜಸ್ವಿ ರಚನೆಯ 'ಕೃಷ್ಣೇಗೌಡನ ಆನೆ' ನಾಟಕವನ್ನು ಕರಿಯಪ್ಪ ಕವಲೂರ ನಿರ್ದೇಶನದಲ್ಲಿ ರಂಗಧಾರ ರೆಪರ್ಟರಿ, ಕೊಪ್ಪಳ ಹಾಗೂ ಕಲ್ಪುರ ಸಾಂಸ್ಕೃತಿಕ ಕಲಾ ಸಂಘ, ಕಲ್ಲೂರ ಪ್ರದರ್ಶಿಸಿ, ಸಭಿಕರ ಮನಗೆದ್ದಿತು.

* ಕರ್ನಾಟಕ ವಿದ್ಯಾವರ್ಧಕ ಸಂಘವು ೬೮ನೇ ಕರ್ನಾಟಕ ರಾಜ್ಯೋತ್ಸವ ನಿಮಿತ್ತ, 'ಕರ್ನಾಟಕ ೫೦ರ ಸಂಭ್ರಮ' ನಾಡ ಹಬ್ಬದ ತಿಂಗಳ ಕಾರ್ಯಕ್ರಮದ ಅಂಗವಾಗಿ ಆಯೋಜಿಸಿದ್ದ ಹತ್ತು ದಿನಗಳ ನಾಟಕೋತ್ಸವ ಸಮಾರೋಪ ಸಮಾರಂಭ ದಿನಾಂಕ: ೧೭-೧೧-೨೦೨೩ ರಂದು ಜರುಗಿತು.

ಸಹಾಯಕ ಪ್ರಾಧ್ಯಾಪಕಿ ಡಾ. ಪತ್ರೆಮ್ಮ ಕೆ. ಧಾರವಾಡ ಅವರು 'ಕನ್ನಡ ನಾಟಕಕ್ಕೆ ಮಹಿಳೆಯರ ಕೊಡುಗೆ' ವಿಷಯ ಕುರಿತು ರಂಗಚಿಂತನೆ ನಡೆಸಿಕೊಟ್ಟರು.

ರಂಗಕರ್ಮಿ ಬೆಂಗಳೂರಿನ ಸಿ. ಬಸವಲಿಂಗಯ್ಯ ಸಮಾರೋಪ ನುಡಿಗಳನ್ನಾಡಿದರು. ಕ.ವಿ.ವ. ಸಂಘದ ಉಪಾಧ್ಯಕ್ಷರಾದ ಪ್ರೊ. ಮಾಲತಿ ಪಟ್ಟಣಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು.

ರಂಗಭೂಮಿ ಕಲಾವಿದೆ ಹುಬ್ಬಳ್ಳಿಯ ಶ್ರೀಮತಿ ಭಾರತಿ ಡಾವಣಗೇರಿ ಅವರಿಗೆ ರಂಗ ಕಲಾ ಸನ್ಮಾನ ಮಾಡಿ ಗೌರವಿಸಲಾಯಿತು. ಪ್ರಾರಂಭದಲ್ಲಿ ಶ್ರೀಮತಿ ವೀಣಾ ಶಿವಾನಂದ ದಂಡಾವತಿಮಠ ಅವರಿಂದ 'ವಾಯಲಿನ ವಾದನ' ಜರುಗಿತು.

ನಂತರ ಡಾ. ಚಂದ್ರಶೇಖರ ಕಂಬಾರ ರಚನೆಯ, ವೀರೇಶ ರಾಯಚೂರ ನಿರ್ದೇಶನದ 'ಬೆಪ್ಪುತಕ್ಕಡಿ ಬೋಳೆಶಂಕರ' ನಾಟಕವನ್ನು ರಂಗಧಾರ ರೆಪರ್ಟರಿ, ಕೊಪ್ಪಳ ಹಾಗೂ ಕಲ್ಲುರ ಸಾಂಸ್ಕೃತಿಕ ಕಲಾ ಸಂಘ, ಕಲ್ಲೂರು ಕಲಾವಿದರು ಪ್ರದರ್ಶನ ನೀಡಿ, ತಮ್ಮ ಮನೋಜ್ಞ ಅಭಿನಯದಿಂದ ಪ್ರೇಕ್ಷಕರ ಮನಗೆದ್ದರು.

## ನಾಡ ಹಬ್ಬದ ತಿಂಗಳ ಕಾರ್ಯಕ್ರಮಗಳ ಸಮಾರೋಪ

ಕನ್ನಡಿಗರ ಶಕ್ತಿ ಕೇಂದ್ರವಾದ ಕರ್ನಾಟಕ ವಿದ್ಯಾವರ್ಧಕ ಸಂಘವು ಈ ನಾಡಿನ ಭವ್ಯ ಸಂಸ್ಕೃತಿ ಮತ್ತು ಪರಂಪರೆಯ ಸಂವರ್ಧನೆಗಾಗಿ ನಿರಂತರವಾಗಿ ೧೩೪ ವರ್ಷಗಳಿಂದ ಸಾರ್ಥಕ ಸೇವೆಗೈಯುತ್ತಿರುವುದು ಕನ್ನಡಿಗರಾದ ನಮಗೆಲ್ಲಾ ಹೆಮ್ಮೆ ಮತ್ತು ಅಭಿಮಾನದ ಸಂಗತಿಯಾಗಿದೆ ಎಂದು ಚಿಂತಕರಾದ ಡಾ. ಲೋಹಿತ ನಾಯ್ಕರ ಹೇಳಿದರು.

೬೮ನೇ ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ, 'ಕರ್ನಾಟಕ ಸಂಭ್ರಮ-೫೦' ನಿಮಿತ್ತ ಹೆಸರಾಯಿತು ಕರ್ನಾಟಕ, ಉಸಿರಾಗಲಿ ಕನ್ನಡ' ನಾಡ ಹಬ್ಬದ ತಿಂಗಳ ಕಾರ್ಯಕ್ರಮಗಳ ಸಮಾರೋಪ, ಜತ್ತ ತಾಲೂಕಿನ ವಜ್ರವಾಡದ ಗಡಿ ಕನ್ನಡ ಶಾಲೆಗೆ ಸಂಘದ ಪರವಾಗಿ ನೆರವು ನೀಡುವ ಕಾರ್ಯಕ್ರಮದ ಅತಿಥಿಯಾಗಿ ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ಅವರು, ಕರ್ನಾಟಕ ವಿದ್ಯಾವರ್ಧಕ ಸಂಘಕ್ಕೆ ಸುಧೀರ್ಘವಾದಂತ ಇತಿಹಾಸವಿದ್ದು, ಕನ್ನಡಿಗರ ಹೃದಯದಲ್ಲಿ ಕನ್ನಡತ್ವದ ಬಗ್ಗೆ ಅಭಿಮಾನ ಹಾಗೂ ಜಾಗೃತಿ ಮೂಡಿಸುತ್ತಿದೆ. ವಿದ್ಯಾರ್ಥಿಗಳು ವಿದ್ಯಾರ್ಥಿ ದೆಸೆಯಿಂದಲೇ ನಾಡು-ನುಡಿ ಕುರಿತು ಅಭಿಮಾನವನ್ನ ಹೆಚ್ಚಿಸಿಕೊಳ್ಳಬೇಕು. ಈ ವರ್ಷದ ನಾಡ ಹಬ್ಬದ ತಿಂಗಳ ಕಾರ್ಯಕ್ರಮದಲ್ಲಿ ವೈವಿಧ್ಯಮಯ ಕಾರ್ಯಕ್ರಮಗಳ ಜೊತೆಗೆ ಸುಮಾರು ೨೫೦೦೦ ಪದವಿ ಮತ್ತು ಪದವಿ ಪೂರ್ವ ವಿದ್ಯಾರ್ಥಿಗಳಿಗಾಗಿ ಕರ್ನಾಟಕದ ಭವ್ಯ ಇತಿಹಾಸ ಸಾರುವ ವಿಶೇಷ ಉಪನ್ಯಾಸಗಳನ್ನು ಏರ್ಪಡಿಸಿದ್ದು ದಾಖಲೆ ನಿರ್ಮಿಸಿದೆ. ಎಲ್ಲ ಕಾರ್ಯಕ್ರಮಗಳ ಹಿಂದೆ ಸಂಘದ ಪದಾಧಿಕಾರಿಗಳ ಹಾಗೂ ಸಿಬ್ಬಂದಿಗಳ ಶ್ರಮ ಅಧಿಕವಾಗಿದೆ ಎಂದು ಶ್ಲಾಘಿಸಿದರು.

ಅಧ್ಯಕ್ಷತೆ ವಹಿಸಿ ಕ.ವಿ.ವ. ಸಂಘದ ಅಧ್ಯಕ್ಷ ಚಂದ್ರಕಾಂತ ಬೆಲ್ಲದ ಮಾತನಾಡಿ, ನಾಡಹಬ್ಬದ ತಿಂಗಳ ಕಾರ್ಯಕ್ರಮವು ಎಲ್ಲರ ಮೆಚ್ಚುಗೆಗೆ ಪಾತ್ರವಾದ ಕಾರ್ಯಕ್ರಮವಾಗಿದೆ. ಯುವಕರಿಗೆ, ಮಕ್ಕಳಿಗೆ ನಮ್ಮ ಸಂಸ್ಕೃತಿ ಮತ್ತು ಪರಂಪರೆಯನ್ನು ಬಿಂಬಿಸುವ ಕಾರ್ಯಕ್ರಮಗಳು ಮನೋಜ್ಞವಾಗಿ ಮೂಡಿಬಂದವು. ಬರಲಿರುವ ದಿನಗಳಲ್ಲಿ ಇಡೀ ರಾಜ್ಯಾದ್ಯಂತ ಕರ್ನಾಟಕ ಸುವರ್ಣ ಸಂಭ್ರಮದ ಅಂಗವಾಗಿ ವೈವಿಧ್ಯಮಯ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವ ಯೋಜನೆಗಳನ್ನು ರೂಪಿಸಲಾಗಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ವಜ್ರವಾಡದ ಗಡಿಕನ್ನಡ ಶಾಲೆಗೆ ಕ.ವಿ.ವ. ಸಂಘದ ಪರವಾಗಿ ನೆರವು ನೀಡಲಾಯಿತು. ಜನಮೆಚ್ಚುಗೆ ಪಡೆದ ಮೂರು ನಾಟಕಗಳಿಗೆ ಪ್ರಕಾಶ ಮುಳಗುಂದ ನಗದು ಬಹುಮಾನ ನೀಡಿ, ಕಲಾವಿದರನ್ನು ಪ್ರೋತ್ಸಾಹಿಸಿದರು.

ವಜ್ರವಾಡದ ಗಡಿ ಕನ್ನಡ ಶಾಲೆಯ ಮುಖ್ಯಾಧ್ಯಾಪಕರಾದ ವೀರನಗೌಡ ಪಾಟೀಲ ಸಂಘದ ನೆರವು ಸ್ವೀಕರಿಸಿ, ಈ ನೆರವನ್ನು ಅತ್ಯಂತ ಪ್ರಾಮಾಣಿಕತೆಯಿಂದ ಉಪಯೋಗಿಸಲಾಗುವುದು ಎಂದು ಹೇಳಿದರು.



ಈ ಸಂದರ್ಭದಲ್ಲಿ ನಾಡ ಹಬ್ಬದ ತಿಂಗಳ ಕಾರ್ಯಕ್ರಮಕ್ಕೆ ಸಹಕರಿಸಿದ ೩೫ ಪದವಿ ಮತ್ತು ಪದವಿ ಪೂರ್ವ ಕಾಲೇಜುಗಳ ಪರವಾಗಿ ಆಯಾ ಕಾಲೇಜಿನ ಪ್ರಾಚಾರ್ಯರಿಗೆ ಕ.ವಿ.ವ. ಸಂಘದ ಪರವಾಗಿ ಸ್ಮರಣಿಕೆ ನೀಡಿ ಗೌರವಿಸಲಾಯಿತು.

ವೇದಿಕೆಯಲ್ಲಿ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ ಉಪನ್ಯಾಸ ಕಾರ್ಯಕ್ರಮದ ಸಂಚಾಲಕತ್ವ ವಹಿಸಿದ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ಗುರು ಹಿರೇಮಠ ಹಾಗೂ ಡಾ. ಶ್ರೀಶೈಲ ಹುದ್ದಾರ ಇದ್ದರು. ಪ್ರಾರಂಭದಲ್ಲಿ ಹರ್ಲಾಪುರದ ಶಂಭಯ್ಯ ಹಿರೇಮಠ ಹಾಗೂ ಸಂಗಡಿಗರಿಂದ ನಾಡು, ನುಡಿ ಗೀತಗಾಯನ ಜರುಗಿತು.

ಶಂಕರ ಹಲಗತ್ತಿ ಸ್ವಾಗತಿಸಿದರು. ಬಸವಪ್ರಭು ಹೊಸಕೇರಿ ಪ್ರಾಸ್ತಾವಿಕವಾಗಿ ಮಾತನಾಡಿದರು. ವೀರಣ್ಣ ಒಡ್ಡೀನ ವಂದಿಸಿದರು.

* = * = * = *

## ಸಂಘದ ಪದಾಧಿಕಾರಿಗಳು

| | | |
|---|---|---|
| ಅಧ್ಯಕ್ಷರು | : | ಶ್ರೀ ಚಂದ್ರಕಾಂತ ಗುರಪ್ಪ ಬೆಲ್ಲದ |
| ಉಪಾಧ್ಯಕ್ಷರು | : | ಪ್ರೊ. ಮಾಲತಿ ಪಟ್ಟಣಶೆಟ್ಟಿ |
| ಗೌರವ ಉಪಾಧ್ಯಕ್ಷರು | : | ಪದ್ಮಶ್ರೀ ಡಾ. ವಿಜಯ ಸಂಕೇಶ್ವರ |
| | | ಪದ್ಮಶ್ರೀ ಡಾ. ಎಂ. ವೆಂಕಟೇಶಕುಮಾರ |
| | | ಶ್ರೀಮತಿ ಭಾನು ಮುಸ್ತಾಕ್ |
| | | ಡಾ. ಆನಂದ ಪಾಂಡುರಂಗಿ |
| | | ಡಾ. ಎಚ್.ಎಸ್. ಶಿವಪ್ರಕಾಶ |
| ಕಾರ್ಯಾಧ್ಯಕ್ಷರು | : | ಶ್ರೀ ಬಸವಪ್ರಭು ಹೊಸಕೇರಿ |
| ಕೋಶಾಧ್ಯಕ್ಷರು | : | ಶ್ರೀ ಶಿವಾನಂದ ಭಾವಿಕಟ್ಟಿ ದಿ: ೨೯-೭-೨೦೨೩ ರವರೆಗೆ |
| | : | ಡಾ. ಶೈಲಜಾ ತ. ಅಮರಶೆಟ್ಟಿ, ಹಂಗಾಮಿ ಕೋಶಾಧ್ಯಕ್ಷರು |
| | : | ದಿ: ೨೯-೭-೨೦೨೩ ರಿಂದ ೧೦-೮-೨೦೨೩ ರವರೆಗೆ |
| | : | ಶ್ರೀ ಸತೀಶ ಗಂ. ತುರಮರಿ ದಿ: ೧೦-೮-೨೦೨೩ ರಿಂದ |
| ಪ್ರಧಾನ ಕಾರ್ಯದರ್ಶಿ | : | ಶ್ರೀ ಶಂಕರ ಹಲಗತ್ತಿ |
| ಸಹ ಕಾರ್ಯದರ್ಶಿ | : | ಶ್ರೀ ಶಂಕರ ಕುಂಬಿ |
| ಕಾರ್ಯಕಾರಿ ಸಮಿತಿ ಸದಸ್ಯರು: | : | ಡಾ. ಸಂಜೀವ ಕುಲಕರ್ಣಿ |
| | | ಡಾ. ಶೈಲಜಾ ತ. ಅಮರಶೆಟ್ಟಿ |
| | | ಶ್ರೀ ವೀರಣ್ಣ ಒಡ್ಡೀನ |
| | | ಶ್ರೀ ಗುರು ಹಿರೇಮಠ |
| | | ಡಾ. ಶ್ರೀಶೈಲ ಹುದ್ದಾರ |
| | | ಡಾ. ಮಹೇಶ ಧ. ಹೊರಕೇರಿ |
| | | ಡಾ. ಜಿನದತ್ತ ಅ. ಹಡಗಲಿ |
| | | ಶ್ರೀಮತಿ ವಿಶ್ವೇಶ್ವರಿ ಬ. ಹಿರೇಮಠ |
| | | ಡಾ. ಧನವಂತ ಹಾಜವಗೋಳ |
| | | ಹಾಗೂ |
| | | ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು |
| | | (ಸರಕಾರದ ಪ್ರತಿನಿಧಿ) |

## ಸಂಘದ ಉಪ ಸಮಿತಿಗಳು

| ಮಂಟಪಗಳು | | ಸಂಚಾಲಕರು |
|---|---|---|
| ಸಾಹಿತ್ಯ ಮಂಟಪ | * | ಡಾ. ಸಂಜೀವ ಕುಲಕರ್ಣಿ |
| ಮಹಿಳಾ ಮಂಟಪ | * | ಡಾ. ಶೈಲಜಾ ತ. ಅಮರಶೆಟ್ಟಿ |
| ಶಿಕ್ಷಣ ಮಂಟಪ | * | ಶ್ರೀ ವೀರಣ್ಣ ಒಡ್ಡೀನ |
| ಕಾನೂನು ಮಂಟಪ | * | ಶ್ರೀ ಗುರು ಹಿರೇಮಠ |
| ಜಾನಪದ ಮಂಟಪ | * | ಡಾ. ಶ್ರೀಶೈಲ ಹುದ್ದಾರ |
| ಯುವಜನ ಮಂಟಪ | * | ಡಾ. ಮಹೇಶ ಧ. ಹೊರಕೇರಿ |
| ವಿಜ್ಞಾನ ಮಂಟಪ | * | ಡಾ. ಜಿನದತ್ತ ಹಡಗಲಿ |
| ಮಹಿಳಾ ಮಂಟಪ | * | ಶ್ರೀಮತಿ ವಿಶ್ವೇಶ್ವರಿ ಬ. ಹಿರೇಮಠ |
| ಮಕ್ಕಳ ಮಂಟಪ | * | ಡಾ. ಧನವಂತ ಹಾಜವಗೋಳ |

## ಸಂಘದ ಸಿಬ್ಬಂದಿ ವರ್ಗ

| | |
|---|---|
| ಶಿ.ಮ. ರಾಚಯ್ಯನವರ | ಗೌರವ ವ್ಯವಸ್ಥಾಪಕರು |
| ನಿಂ. ಶಿ. ಕಾಶಪ್ಪನವರ | ಗೌರವ ಅಧೀಕ್ಷಕರು |
| ಎಸ್. ಆಯ್. ಭಾವಿಕಟ್ಟಿ | ಅಧೀಕ್ಷಕರು |
| ಆರ್. ಬಿ. ಪಟ್ಟಣಶೆಟ್ಟಿ | ಸಹಾಯಕ ಗ್ರಂಥಪಾಲಕ |
| ಶ್ರೀಕಾಂತ ವ್ಹಿ. ಪರ್ವತದೇವರಮಠ | ಪ್ರಥಮ ದರ್ಜೆ ಸಹಾಯಕ |
| ಆನಂದೀಶ್ವರ ಶೇ. ಗೋಣೆಪ್ಪನವರ | ಕಂಪ್ಯೂಟರ ಆಪರೇಟರ |
| ರವಿ ಕುಬಸದ | ಲೆಕ್ಕಪತ್ರ ಸಹಾಯಕ |
| ಶರಣರಾಜ ಬ. ಯರೇಶಿಮಿ | ಎಲೆಕ್ಟ್ರೀಶಿಯನ್ |
| ಮಹೇಶ ಗುರುಪುತ್ರನವರ | ಅಟೆಂಡರ್ |
| ರವಿ ನೀ. ಮೇಟಿ | ಸಭಾಭವನ ಅಟೆಂಡರ |
| ಶೇಖಯ್ಯ ಚಂ. ರಾಚಯ್ಯನವರ | ಗ್ರಂಥಾಲಯ ಅಟೆಂಡರ |
| ರಾಘವೇಂದ್ರ ತೇರದಾಳ | ಸಿಪಾಯಿ |
| ನಾಗರಾಜ ಸವದತ್ತಿ | ಸಿಪಾಯಿ |
| ಕುಮಾರ ಹರವಿ | ರಾತ್ರಿ ಕಾವಲುಗಾರ |